ಮಂಗಳೂರು
ರಾಷ್ಟ್ರ ಜಾಗೃತಿಯ ದೈನಿಕ
ಬುಧವಾರ, 25 ಫೆಬ್ರವರಿ 2026
ಸಂಪುಟ 47, ಸಂಚಿಕೆ 328 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸಮಾಜದ ಏಕತೆಗಾಗಿ ಯುಸಿಸಿ ಜಾರಿ ಆಗಲಿ: ಭಾಗ್ವತ್ | ೦೨
ಕೇರಳ ಇನ್ನು ಕೇರಳಂ | ೦೨
ಇಂದಿನಿಂದ ಮೋದಿ ಇಸ್ರೇಲ್ ಪ್ರವಾಸ | ೦೨

ಸ್ವಯಂಚಾಲಿತ ಮ್ಯುಟೇಶನ್‌ಗೆ ಸಚಿವ ಕೃಷ್ಣ ಬೈರೇಗೌಡ ಚಾಲನೆ

ಮನೆಯಲ್ಲೇ ಕುಳಿತು ಖಾತೆ ಬದಲಿಸಿಕೊಳ್ಳಿ

ಬೆಂಗಳೂರು: ಸ್ವಯಂಚಾಲಿತ ಮ್ಯುಟೇಶನ್‌ಗೆ ಚಾಲನೆ ನೀಡುವ ಮೂಲಕ ಜನಪರ ಮತ್ತು ಸರಳ ಆಡಳಿತವನ್ನು ಸಾರ್ವಜನಿಕರ ಮನೆ ಬಾಗಿಲಿಗೇ ತಲುಪಿಸಬೇಕು ಎಂಬ ಸರ್ಕಾರದ ಉದ್ದೇಶ ಈಡೇರಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಭಿಪ್ರಾಯಪಟ್ಟರು.

ವಿಕಾಸಸೌಧದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಸ್ವಯಂಚಾಲಿತ ಮ್ಯುಟೇಶನ್‌ಗೆ ಚಾಲನೆ ನೀಡಿದ ಅವರು, ಕಂದಾಯ ಇಲಾಖೆಯನ್ನು ಜನಪರಗೊಳಿಸಬೇಕು. ಆಡಳಿತದಲ್ಲಿ ಸುಧಾರಣೆ ಮತ್ತು ಸರಳೀಕರಣಗೊಳಿಸಬೇಕು ಎಂಬ ನಿಟ್ಟಿನಲ್ಲಿ ಕಳೆದ ಎರಡೂವರೆ ವರ್ಷದಿಂದ ಹಲವು ಬದಲಾವಣೆ ತರಲಾಗಿದೆ ಎಂದರು.

ಸ್ವಯಂಚಾಲಿತ ಮ್ಯುಟೇಶನ್ ಸೇವೆಯನ್ನು ಒಂದು ತಿಂಗಳಿನಿಂದ ಮಂಡ್ಯದಲ್ಲಿ ಅನುಷ್ಠಾನಗೊಳಿಸಿ ಸಾಧಕ ಬಾಧಕ ಪರಿಶೀಲಿಸಿ ಇಂದಿನಿಂದ ಶೇ.98ರಷ್ಟು ಎಲ್ಲಾ ಖಾತೆ ಬದಲಾವಣೆಗಳೂ ಸ್ವಯಂಚಾಲಿತಗೊಳ್ಳಲು ಮುಂದಡಿಯಿಟ್ಟಿದ್ದೇವೆ. ಖಾತೆ ಬದಲಾವಣೆ ಕಂದಾಯ ಇಲಾಖೆಯ ಮೂಲ ಜವಾಬ್ದಾರಿಗಳಲ್ಲೊಂದು. ಪ್ರಸ್ತುತ ಸ್ವಯಂಚಾಲಿತ ಮ್ಯುಟೇಶನ್‌ಗೆ ಚಾಲನೆ ನೀಡಲಾಗಿದ್ದು, ಈ ಎಲ್ಲಾ ಸಮಸ್ಯೆಗಳಿಗೂ ಶಾಶ್ವತ ಪರಿಹಾರ ನೀಡಿದಂತಾಗಿದೆ. ಇನ್ನು ಮುಂದೆ ಜನಸಾಮಾನ್ಯರು ಖಾತೆ ಬದಲಾವಣೆಗಾಗಿ ಸರ್ಕಾರಿ ಕಚೇರಿಗೆ ಅಲೆಯುವಂತಿಲ್ಲ. ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಆನ್‌ಲೈನ್‌ನಲ್ಲೇ ತಮ್ಮ ಖಾತೆ ಬದಲಾವಣೆ ಕೆಲಸಗಳನ್ನು ನಿರ್ವಹಿಸಬಹುದು ಎಂದು ವಿವರಿಸಿದರು.

ಖಾತೆ ಬದಲಾವಣೆ ಹೇಗೆ?: ನೋಂದಣಿಯೇತರವಾಗಿ ಖಾತೆ ಬದಲಾವಣೆಗೆ ಮನವಿ ಬಂದಂತಹ ಪ್ರಕರಣಗಳಿಗೆ 15 ದಿನ ನೋಟೀಸ್ ಅವಧಿ ಇದ್ದು, ತಕರಾರು ಸಲ್ಲಿಸಬಹುದಾಗಿದೆ. ತಕರಾರು ಇಲ್ಲದಿದ್ದರೆ 16ನೇ ದಿನ ಸ್ವಯಂಚಾಲಿತವಾಗಿ ಖಾತೆ ಬದಲಾವಣೆಯಾಗಲಿದೆ ಎಂದು ತಿಳಿಸಿದರು. 2024ರ ಏಪ್ರಿಲ್ 1ರಿಂದ 2026ರ ಫೆಬ್ರವರಿ 20ರವರೆಗಿನ ಅವಧಿಯಲ್ಲಿ 35,11,987 ಖಾತೆ ಬದಲಾವಣೆಯನ್ನು ಸ್ವಯಂಚಾಲಿತವಾಗಿ ಮಾಡಿದ್ದರೆ, ಕೇವಲ 5207 ಪ್ರಕರಣಗಳಲ್ಲಿ ಮಾತ್ರ ತಕರಾರು ದಾಖಲಾಗಿವೆ. ಅಂದರೆ ನಾವು ಒಟ್ಟು ಮ್ಯುಟೇಶನ್ ಶೇ.98ರಷ್ಟು ಸ್ವಯಂ ಚಾಲಿತವಾಗಿ ಖಾತೆ ಬದಲಾವಣೆ ಮಾಡಿದಂತಾಗಿದೆ. ತಕರಾರು ದಾಖಲಿಸಿದ ಪ್ರಕರಣಗಳನ್ನೂ 60 ದಿನಗಳಲ್ಲಿ ಇತ್ಯರ್ಥಗೊಳಿಸಿ ಆದೇಶ ಹೊರಡಿಸುತ್ತಿದ್ದೇವೆ ಎಂದು ಹೇಳಿದರು.



ಪಹಣಿ ಜತೆ ಆಧಾರ್ ಜೋಡಿಸಿ

ನಕಲಿ ವಹಿವಾಟು ತಪ್ಪಿಸಿ ಆಸ್ತಿ ಮಾಲೀಕತ್ವವನ್ನು ಮತ್ತಷ್ಟು ಸುಭದ್ರಗೊಳಿಸಲು ಸಾರ್ವಜನಿಕರು ತಮ್ಮ ಪಹಣಿಯ ಜತೆಗೆ ಆಧಾರ್ ಜೋಡಣೆಗೊಳಿಸಬೇಕು. ಪಹಣಿಯ ಜತೆಗೆ ಆಧಾರ್ ಜೋಡಣೆಯಾದರೆ ಪಹಣಿಯಲ್ಲಿ ಏನೇ ಬದಲಾವಣೆ ಆದರೂ ಆ ಸಂದೇಶವನ್ನು ಆಸ್ತಿ ಮಾಲೀಕರ ಮೊಬೈಲ್‌ಗೆ ಕಳುಹಿಸಲಾಗುತ್ತದೆ. ಆಗ ಆಸ್ತಿ ಮಾಲೀಕರ ಗಮನಕ್ಕೆ ಬಾರದೆ ನಡೆಯುವ ಖಾತೆ ಬದಲಾವಣೆ ಅಥವಾ ಮಾರಾಟವನ್ನು ತಡೆಯಬಹುದು. ಈ ಮೂಲಕ ಆಸ್ತಿ ಮಾಲೀಕತ್ವಕ್ಕೆ ಖಾತರಿ ಪಡೆಯಬಹುದು. ಆಧಾರ್ ಜೋಡಣೆ ಮಾಡದಿದ್ದರೆ ಆಸ್ತಿ ಮಾಲೀಕರ ಗಮನಕ್ಕೆ ಬಾರದೆ ಖಾತೆ ಬದಲಾವಣೆ ಆಗುವಂತಹ ಅಪರೂಪದ ಸಾಧ್ಯತೆಗಳಿವೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

> ಆನ್‌ಲೈನ್ ಮೂಲಕ ಖಾತೆ ಬದಲಾವಣೆಗೆ ಮನವಿ ಸಲ್ಲಿಸಿದರೆ 7 ದಿನ ನೋಟಿಸ್ ಅವಧಿ ಇರುತ್ತದೆ. ಈ ಅವಧಿಯಲ್ಲಿ ಯಾರು ಬೇಕಾದರೂ ಭೂಮಿ ತಂತ್ರಾಂಶದ ಮೂಲಕ ತಕರಾರು ಸಲ್ಲಿಸಬಹುದು. ಯಾರೂ ತಕರಾರು ಸಲ್ಲಿಸದಿದ್ದರೆ ಎಂಟನೇ ದಿನ ಸ್ವಯಂಚಾಲಿತವಾಗಿ ಖಾತೆ ಬದಲಾವಣೆ ಯಾಗುತ್ತದೆ.
>
> ■ ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಹುದ್ದೆ ಭರ್ತಿ ಹೋರಾಟ

ಧಾರವಾಡ: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಲಕ್ಷಾಂತರ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಮಂಗಳವಾರ ಬಿಜೆಪಿ ಮತ್ತು ವಿದ್ಯಾರ್ಥಿ ಸಂಘಟನೆಗಳು ನಡೆಸಿದ ಬೃಹತ್ ಪ್ರತಿಭಟನೆ ನಗರದಲ್ಲಿ ಕೆಲ ಕಾಲ ಉದ್ವಿಗ್ನ ಸ್ಥಿತಿಗೆ ಕಾರಣವಾಯಿತು. ಪೊಲೀಸರು ಹೋರಾಟದ ನೇತೃತ್ವ ವಹಿಸಿದ್ದ ವಿದ್ಯಾರ್ಥಿ ಮುಖಂಡರನ್ನು ಬಂಧಿಸಿ, ಬಿಡುಗಡೆಗೊಳಿಸಿದ್ದಾರೆ.

ವಿವರ ಪುಟ ೨

ಕಿರುಸುದ್ದಿ

ಅಪಘಾತದ ಗಾಯಾಳು ಮೃತ್ಯು

ಸುಳ್ಯ: ಸುಳ್ಯ ಪುತ್ತೂರು ರಾಷ್ಟ್ರೀಯ ಹೆದ್ದಾರಿಯ ಬೊಳುಬೈಲು ಎಂಬಲ್ಲಿ ಫೆ.21ರ ಶನಿವಾರ ಸಂಭವಿಸಿದ್ದ ಕಾರು ಅಪಘಾತದಲ್ಲಿ ಗಂಭೀರ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ಚಾಲಕ ಕುಕ್ಕೆ ವಸಂತ್ ಯಾನೆ ಚಂದ್ರಶೇಖರ ಎಂಬವರು ಮೃತಪಟ್ಟ ಘಟನೆ ಸೋಮವಾರ ನಡೆದಿದೆ. ಮೃತ ವ್ಯಕ್ತಿಯು ಕುಕ್ಕೆ ವಸಂತ್ ಯಾನೆ ಚಂದ್ರಶೇಖರ ಮೂಲತಃ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯವರಾಗಿದ್ದು, ಹಲವಾರು ವರ್ಷಗಳಿಂದ ಸುಳ್ಯದಲ್ಲಿ ಆಟೋ, ಟಾಟಾ ಏಸ್ ಗೂಡ್ಸ್ ವಾಹನದ ಚಾಲಕ ಮಾಲಕರಾಗಿ ದುಡಿಯುತ್ತಿದ್ದರು. ಅವರು ಜಯನಗರ ಎಂಬಲ್ಲಿ ನೂತನವಾಗಿ ಮನೆ ನಿರ್ಮಿಸುತ್ತಿದ್ದು ಮನೆಯ ಕಾಮಗಾರಿ ಅಂತಿಮ ಹಂತದಲ್ಲಿ ನಡೆಯುತ್ತಿತ್ತು. ಏಪ್ರಿಲ್ ತಿಂಗಳಿನಲ್ಲಿ ಗೃಹ ಪ್ರವೇಶ ಕಾರ್ಯಕ್ರಮಕ್ಕೆ ಸಿದ್ಧತೆಯ ಹಿನ್ನಲೆಯಲ್ಲಿ ಬಟ್ಟೆ ಖರೀದಿಸಲು ಕುಟುಂಬ ಸಮೇತರಾಗಿ ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿತ್ತು. ಈ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವಸಂತ್ ಅವರು ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ರಾತ್ರಿ ಕೊನೆಯುಸಿರೆಳೆದರು. ಅಪಘಾತದಲ್ಲಿ ಗಾಯಗೊಂಡಿರುವ ಅವರ ಪತ್ನಿ ಮತ್ತು ಮಕ್ಕಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಸಂತ ಅವರ ಮೃತದೇಹವನ್ನು ಹುಟ್ಟೂರಾದ ತೀರ್ಥ ಹಳ್ಳಿಗೆ ಸಾಗಿಸಲಾಗಿದ್ದು ಅಲ್ಲಿ ವಿಧಿವಿಧಾನಗಳು ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದೆ. ಅಪಘಾತ ನಡೆಸಿದ ಕಾರು ಚಾಲಕ ಪೇರಾಲು ಉದ್ದಂತಡ್ಕ ಮಂಜುನಾಥ್ ವಿರುದ್ಧ ಸುಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಯುವತಿ ನಾಪತ್ತೆ

ಉಡುಪಿ: ಕಾಪು ತಾಲೂಕು ಕಟಪಾಡಿ ಏಣಗುಡ್ಡೆಯ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದ, ನಗರದ ಕಾಲೇಜೊಂದರಲ್ಲಿ ದ್ವಿತೀಯ ಪಿಯುಸಿ ವ್ಯಾಸಾಂಗ ಮಾಡುತ್ತಿದ್ದ ಮೂಲತಃ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ದೀಪ ಸುರೇಶ ಲಮಾಣಿ (20) ಎನ್ನುವ ಯುವತಿಯು ಫೆಬ್ರವರಿ 20 ರಂದು ಕಾಲೇಜಿಗೆ ರಜೆ ಮಾಡಿ ಮನೆಯಿಂದ ಹೊರ ಹೋದವರು ವಾಪಸು ಮನೆಗೆ ಬಾರದೆ ನಾಪತ್ತೆಯಾಗಿರುತ್ತಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ದೂ.ಸಂ: 0820-2526709/2526444, ಕಾರ್ಕಳ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರ ಕಚೇರಿ ದೂ.ಸಂ: 08258-231333, ಕಾಪು ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿ ದೂ.ಸಂ: 0820-2572333, ಮೊಬೈಲ್: 9480805431, ಕಾಪು ಪೊಲೀಸ್ ಠಾಣೆ ಪೊಲೀಸ್ ಉಪ ನಿರೀಕ್ಷಕರ ಕಚೇರಿ ದೂ.ಸಂ: 0820-2551033, ಮೊಬೈಲ್: 9480805449 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕಾಪು ಪೊಲೀಸ್ ಠಾಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.



ಕಾರ್ಕಳ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಸಿಗುವುದೇ 'ಹೊಸ ಯೋಜನೆ'ಗಳ ಗ್ಯಾರಂಟಿ?

ಇಂದು ಸಿಎಂ ಮೇಲಿದೆ ನಿರೀಕ್ಷೆಗಳ ನೋಟ

ಗಣೇಶ್ ನಾಯಕ್, ಸಾಣೂರು

ಕಾರ್ಕಳ: ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಕಾರ್ಕಳಕ್ಕೆ ಮೊದಲ ಬಾರಿಗೆ ಆಗಮಿಸುತ್ತಿದ್ದಾರೆ. ಇನ್ನೂ ಸಾಕಾರಗೊಳ್ಳದ ಕಾರ್ಕಳದ ಮಹಾಜನತೆ ಬೇಡಿಕೆ ಬೆಟ್ಟದಷ್ಟಿದೆ. ಕಾರ್ಕಳದಲ್ಲಿ ಮುಂದಿನ ವರ್ಷ 2027 ರಲ್ಲಿ ಐತಿಹಾಸಿಕ ಶ್ರೀ ಬಾಹುಬಲಿ ಮಹಾಮಸ್ತಕಾಭಿಷೇಕ ನಡೆಯಲಿದ್ದು, ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ಸಮಿತಿಯ ಕಾರ್ಯಾಧ್ಯಕ್ಷ ಮತ್ತು ಡಿಸಿಸಿ ಬ್ಯಾಂಕಿನ ಅಧ್ಯಕ್ಷ ಹಾಗೂ ಶ್ರೀ ಜೈನಧರ್ಮ ಜೀರ್ಣೋದ್ಧಾರಕ ಸಂಘದ ಕಾರ್ಯಾಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಅವರು ಜೈನ ಸಮಾಜದ ವತಿಯಿಂದ ಸರ್ಕಾರಕ್ಕೆ 80 ಕೋಟಿ ರೂ.ಗಳ ಅನುದಾನಕ್ಕಾಗಿ ಈಗಾಗಲೇ ಮನವಿ ಸಲ್ಲಿಸಿದ್ದಾರೆ.

- ಉಡುಪಿ ಜಿಲ್ಲೆಗೆ ಕಾರ್ಕಳ ಕೇಂದ್ರೀಕೃತವಾಗಿ ಸುಸಜ್ಜಿತ ಮೆಡಿಕಲ್ ಕಾಲೇಜು ನಿರ್ಮಾಣ ಕಾರ್ಕಳ ತಾಲೂಕಿಗೊಂದು ಐ ಟಿ ಪಾರ್ಕ್ ನಿರ್ಮಾಣ ಮಾಡಬೇಕು
- ತಾಲೂಕಿನ ಬೈಲೂರಿನ ಉಮಿಕಲ್ ಬೆಟ್ಟದಲ್ಲಿರುವ ಪರಶುರಾಮ ಥೀಮ್ ಪಾರ್ಕ್ ಪುನರ್ ನಿರ್ಮಾಣವಾಗಲಿ
- ತಾಲೂಕಿನ ನಿಟ್ಟೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಜವಳಿ ಪಾರ್ಕ್ ನಿರ್ಮಾಣ ಆರಂಭವಾಗಲಿ
- ಕಾರ್ಕಳ ನಗರಕ್ಕೆ ಒಂದು ಸುಸಜ್ಜಿತ ಬಸ್ಸು ತಂಗುನಿಲ್ದಾಣದ ಅವಶ್ಯಕತೆ ಇದೆ.
- ಕಾರ್ಕಳದ ಪ್ರಮುಖ ರಸ್ತೆಗಳಿಗೆ ಡಾಮಾರೀಕರಣಕ್ಕಾಗಿ ಕೂಡಲೇ ಅನುದಾನ ಬಿಡುಗಡೆ



ಶಿಥಿಲ ಅವಸ್ಥೆಯಲ್ಲಿರುವ ಪುರಸಭೆ ಕಟ್ಟಡ



ಕೆಎಸ್ಆರ್‌ಟಿಸಿ ಬಸ್ಸು ನಿಲ್ದಾಣವಿಲ್ಲದೆ ಸಾರ್ವಜನಿಕರಿಗೆ ತೊಂದರೆ

ತಾಲೂಕಿನ ವ್ಯಾಪ್ತಿಯಲ್ಲಿ ಶೈಕ್ಷಣಿಕ ಸಂಸ್ಥೆಗಳು, ಪ್ರವಾಸಿ ತಾಣಗಳನ್ನು ಹೊಂದಿರುವ ಕಾರ್ಕಳ ತಾಲೂಕಿಗೆ ರಾಜ್ಯ, ದೇಶ, ವಿದೇಶದಿಂದ ಜನರು ಆಗಮಿಸುತ್ತಿದ್ದಾರೆ.
ರಾಜ್ಯದ ಪ್ರಮುಖ ಪ್ರವಾಸಿ ಕ್ಷೇತ್ರ ಕಾರ್ಕಳವು ಒಂದು, ಜೈನ ಕಾಶಿ ಎಂದೇ ಕರೆಯಲಾಗುವ ಕಾರ್ಕಳ ತಾಲೂಕು ಇದಾಗಿದು, ದೇಶಾದ್ಯಂತ ಪ್ರಸಿದ್ಧಿ ಪಡೆದಿರುವ ಯಾತ್ರಾ ಸ್ಥಳ ಧರ್ಮಸ್ಥಳ, ಉಡುಪಿ ಸೇರಿದಂತೆ ಶೃಂಗೇರಿ- ಹೊರನಾಡು- ಕೊಲ್ಲೂರು ಭಾಗಗಳಿಗೆ ಈ ಬಸ್ ನಿಲ್ದಾಣಕ್ಕೆ ಪ್ರತಿ ದಿನವೂ ನೂರಕ್ಕು ಹೆಚ್ಚು ಬಸ್‌ಗಳು ಬಂದು ಹೋಗುತ್ತವೆ. ಆದರೆ, ಕಾರ್ಕಳದಲ್ಲಿ ಬಸ್ ನಿಲ್ದಾಣವಿಲ್ಲದೆ ಸಾರ್ವಜನಿಕರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ.

ಮುಖ್ಯಮಂತ್ರಿಗಳಿಂದ ಲೋಕಾರ್ಪಣೆಗೆ ಸಿದ್ಧಗೊಂಡಿದೆ ಕಾರ್ಕಳದ ಡಾ.ಬಿ. ಆರ್. ಅಂಬೇಡ್ಕರ್ ಭವನ

ಕಾರ್ಕಳ : ಹಿಂದುಳಿದ ವರ್ಗಗಳ ಅನುಕೂಲಕ್ಕಾಗಿ ಕಾರ್ಕಳ ಶಾಸಕರು ಮಾಜಿ ಸಚಿವರಾದ ವಿ. ಸುನಿಲ್ ಕುಮಾರ್ ಅವರ ಮಹತ್ವಾಕಾಂಕ್ಷೆಯ ಯೋಜನೆಯಾದ ಡಾ. ಬಿ. ಆರ್. ಅಂಬೇಡ್ಕರ್ ಭವನ ಲೋಕಾರ್ಪಣೆಗೆ ಸಿದ್ಧವಾಗಿದೆ. ಇಂದು (ಫೆ.25) ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯರವರಿಂದ ಲೋಕಾರ್ಪಣೆಗೊಳ್ಳಲಿದೆ.
ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಂದಿನ ಸಮಾಜ ಕಲ್ಯಾಣ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿಯವರ ವಿಶೇಷ ಸಹಕಾರದಿಂದ ಸುನಿಲ್ ಕುಮಾರ್ ರವರ ಸ್ವರ್ಣ ಕಾರ್ಕಳದ ಕನಸಿನ ಭಾಗವಾಗಿ, ದೂರದೃಷ್ಟಿತ್ವ ಹಾಗೂ ವಿಶೇಷ ಪ್ರಯತ್ನದ ಫಲವಾಗಿ ಸುಮಾರು 6 ಕೋಟಿ ರೂಪಾಯಿ ವೆಚ್ಚದಲ್ಲಿ ಭವ್ಯವಾದ ಸುಸಜ್ಜಿತ ಭವನಕ್ಕೆ ಅಂದು ಪಕ್ಷ ಭೇಧ ಮರೆತು ಸಮುದಾಯದ ಸುಮಾರು 3000 ಕ್ಕೂ ಅಧಿಕ ಜನರ ಉಪಸ್ಥಿತಿಯಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಕಾಮಗಾರಿ ಆರಂಭಿಸಿದ್ದರು. ಇದರ ಫಲವಾಗಿ ಜನತೆಯ ಉಪಯೋಗಕ್ಕೆ ಸುಂದರವಾದ ಸಭಾ ಭವನ ನಿರ್ಮಾಣಗೊಂಡಿದೆ.
ತಾಲೂಕು ಕೇಂದ್ರಗಳಲ್ಲಿ ಇಷ್ಟು ದೊಡ್ಡ ಮೊತ್ತದ ಹಾಗೂ ಭವ್ಯವಾದ ಅಂಬೇಡ್ಕರ್ ಭವನ ನಿರ್ಮಾಣ ಆಗಿರುವುದು ಕಾರ್ಕಳದಲ್ಲಿ ಮಾತ್ರ ಎಂಬುವುದು ಅತ್ಯಂತ ಹೆಮ್ಮೆಯ ವಿಚಾರ. ಈ ಭವನದಲ್ಲಿ ವಿಶಾಲವಾದ ಸಭಾ ಭವನ, ಊಟದ ಹಾಲ್, 10 ವಿಶ್ರಾಂತಿ ಕೊಠಡಿಗಳನ್ನು ಒಳಗೊಂಡಿದೆ ಇಂತಹ ಯೋಜನೆಯನ್ನು ಜನತೆಗೆ ಒದಗಿಸಿದ ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್‌ರಿಗೆ ಹಾಗೂ ಅಂದಿನ ಸಮಾಜ ಕಲ್ಯಾಣ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಕಾರ್ಕಳ ವಿಧಾನಸಭಾ ಕ್ಷೇತ್ರದ ಎಸ್.ಸಿ ಮೋರ್ಚಾ ವತಿಯಿಂದ ಈ ಸಂಧರ್ಭದಲ್ಲಿ ಧನ್ಯವಾದಗಳನ್ನು ಸಲ್ಲಿಸುತ್ತೇವೆ ಎಂದು ಉಡುಪಿ ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸ ಕಾರ್ಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಡಾ. ಅಂಬೇಡ್ಕರ್ ಭವನಕ್ಕೆ ಹೆಚ್ಚುವರಿ ಅನುದಾನ ಹಾಗೂ ಐತಿಹಾಸಿಕ ಶ್ರೀ ಬಾಹುಬಲಿ ಮಹಾ ಮಸ್ತಕಾಭಿಷೇಕಕ್ಕೆ ವಿಶೇಷ ಅನುದಾನ ನೀಡುವಂತೆ ಮುಖ್ಯಮಂತ್ರಿ ಅವರಿಗೆ ಮನವಿ ನೀಡಲಾಗುವುದು.
■ ವಿ. ಸುನಿಲ್ ಕುಮಾರ್, ಶಾಸಕರು, ಕಾರ್ಕಳ ವಿಧಾನ ಸಭಾ ಕ್ಷೇತ್ರ

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಹಾಗೂ ಇತರ ಅರಣ್ಯ ಪ್ರದೇಶಗಳಲ್ಲಿ ಇರುವ ಮಲೆಕುಡಿಯರು ಹಾಗೂ ಇತರ ಪಾರಂಪರಿಕ ಅರಣ್ಯ ವಾಸಿಗಳಿಗೆ ರಸ್ತೆ ಹಾಗೂ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಲು ಅರಣ್ಯ ಇಲಾಖೆ ಕಾಯ್ದೆಗಳು ಅಡ್ಡಿಪಡಿಸುತ್ತಿವೆ. ಅರಣ್ಯ ಹಕ್ಕು ಕಾಯ್ದೆಯಲ್ಲಿ ಅವಕಾಶವಿದ್ದರೂ ಅರಣ್ಯ ಇಲಾಖೆ ಅಡ್ಡಿಪಡಿಸುತ್ತಿರುವುದರ ಕುರಿತು ಸಿಎಂ ಗಮನಕ್ಕೆ ತರುತ್ತೇವೆ.
■ ಶ್ರೀಧರ ಗೌಡ ಈದು, ರಾಜ್ಯಾಧ್ಯಕ್ಷರು, ಮಲೆಕುಡಿಯ ಸಂಘ.

ಉಡುಪಿ ಜಿಲ್ಲೆಯನ್ನು ಕೇಂದ್ರೀಕರಿಸಿ ಕಾರ್ಕಳಕ್ಕೆ ಸುಸಜ್ಜಿತವಾದ ಮೆಡಿಕಲ್ ಕಾಲೇಜು, ಐ ಟಿ ಪಾರ್ಕ್ ನಿರ್ಮಾಣ, ಆಗುಂಬೆ ರಸ್ತೆ ವಿಸ್ತರಣೆ ಹಾಗೂ ನೆನೆಗುದಿಗೆ ಬಿದ್ದ ಜವಳಿ ಪಾರ್ಕ್ ನಿರ್ಮಾಣ, ಕಾರ್ಕಳ ನಗರ ವರ್ತುಲ ರಸ್ತೆಗಳಿಗೆ ದುರಸ್ತಿ ಹಾಗೂ ಡಾಮಾರೀಕರಣಕ್ಕಾಗಿ ಕೂಡಲೇ ಅನುದಾನ ಬಿಡುಗಡೆ ಮತ್ತು ಐತಿಹಾಸಿಕ ಶ್ರೀ ಬಾಹುಬಲಿ ಮಹಾ ಮಸ್ತಕಾಭಿಷೇಕಕ್ಕೆ ವಿಶೇಷ ಅನುದಾನ ನೀಡುವಂತೆ ಮನವಿ ನೀಡಲಾಗುವುದು.
■ ಉದಯ ಕುಮಾರ್ ಶೆಟ್ಟಿ ಮುನಿಯಲು, ಕಾಂಗ್ರೆಸ್ ನಾಯಕರು

ಬಂಡಿಮಠ ನಿಷ್ಪಕ್ರಷ್ಟ...

ಕಾರ್ಕಳ ಮೂಲಕ ಯಾತ್ರಾ ಸ್ಥಳ ಧರ್ಮಸ್ಥಳ, ಉಡುಪಿ ಸೇರಿದಂತೆ ಶೃಂಗೇರಿ-ಹೊರನಾಡು-ಕೊಲ್ಲೂರು ಭಾಗಗಳಿಗೆ ಈ ಬಸ್ ನಿಲ್ದಾಣಕ್ಕೆ ಪ್ರತಿ ದಿನವೂ ನೂರಕ್ಕು ಹೆಚ್ಚು ಬಸ್‌ಗಳು ಬಂದು ಹೋಗುತ್ತವೆ. ಆದರೆ, ಕಾರ್ಕಳದಲ್ಲಿ ಬಸ್ ನಿಲ್ದಾಣವಿಲ್ಲದೆ ಸಾರ್ವಜನಿಕರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಪುರಸಭೆಯ 5ನೇ ವಾರ್ಡ್ ಬಂಡಿಮಠದಲ್ಲಿ 2011-12 ರಲ್ಲಿ 1.78 ಎಕ್ರೆ ವಿಸ್ತೀರ್ಣದಲ್ಲಿ 2 ಕೋಟಿ.ರೂ. ವೆಚ್ಚದಲ್ಲಿ ಕಾಂಕ್ರೀಟ್ ಕಾಮಗಾರಿ ನಡೆಸಿ ನಿಲ್ದಾಣವನ್ನು ಅಭಿವೃದ್ಧಿಪಡಿಸಲಾಗಿತ್ತು. ಮೂಲ ಸೌಕರ್ಯ ಕಲ್ಪಿಸದಿರುವುದು ಹಾಗೂ ಪೇಟೆಯಿಂದ ಹೊರಗೆ ಇರುವುದರಿಂದ ಅದು ನಿರೀಕ್ಷಿತ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ಹಳೆಯ ಬಸ್ ನಿಲ್ದಾಣದಲ್ಲಿಂದಲೇ ಸಂಚಾರ ನಡೆಸುತ್ತಿದೆ. ಹಾಗಾಗಿ ಬಂಡಿಮಠ ವಿಶಾಲವಾದ ಜಾಗ ಹೊಂದಿದ್ದರೂ ಸೂಕ್ತವಾಗಿ ಬಳಕೆಯಾಗದ್ದರಿಂದ ನಿಷ್ಪಕ್ರಷ್ಟ ಎಂಬಂತಾಗಿದೆ.

ಆರೋಗ್ಯ ಕೇಂದ್ರ, ಕಟ್ಟಡ ಅನಿವಾರ್ಯ

ತಾಲೂಕಿನ ಅಜೆಕಾರು ಆರೋಗ್ಯ ಕೇಂದ್ರದ ಕಟ್ಟಡವು ಶಿಥಿಲ ಅವಸ್ಥೆಯಲ್ಲಿದ್ದು ಶೀಘ್ರದಲ್ಲಿ ನೂತನ ಕಟ್ಟಡ ನಿರ್ಮಾಣವಾಗಬೇಕಿದೆ. ಕಾರ್ಕಳ ಪುರಸಭೆ ವ್ಯಾಪ್ತಿಯ ವರ್ತುಲ ರಸ್ತೆ ಯಾದ ಕಾಬೆಟ್ಟು ರಸ್ತೆ, ತೆಳ್ಳರು ರಸ್ತೆ, ಆನೆಕೆರೆ ರಸ್ತೆ ಅಗಲೀಕರಣ, ಕೋರ್ಟ್ ರಸ್ತೆ, ಗಾಂಧಿ ಮೈದಾನ ರಸ್ತೆ ಮೊದಲಾದ ರಸ್ತೆಗಳಿಗೆ ಡಾಮಾರೀಕರಣಕ್ಕಾಗಿ ಕೂಡಲೇ ಅನುದಾನ ಬಿಡುಗಡೆ ಮಾಡಬೇಕಿದೆ.

ಕಾರ್ಕಳ ಹೆಬ್ರಿ ಭಾಗದಲ್ಲಿ ಬಹುತೇಕ ಕೃಷಿಕರು ಹಾಗೂ ರೈತರು ಭತ್ತದ ಕೃಷಿ ಹಾಗೂ ಅಡಿಕೆ, ತೆಂಗು ಮುಂತಾದ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿರುವ ಕಾರಣದಿಂದ ಕೃಷಿ ಹಾಗೂ ತೋಟಗಾರಿಕಾ ಬೆಳೆಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕಾರ್ಕಳ ವಿಧಾನಸಭಾ ಕ್ಷೇತ್ರದಲ್ಲಿ ತೋಟಗಾರಿಕೆ ಹಾಗೂ ಕೃಷಿ ಸಂಶೋಧನಾ ಕೇಂದ್ರ ಸ್ಥಾಪಿಸಬೇಕು. ಇದರಿಂದ ರೈತರಿಗೆ ವರದಾನವಾಗಲಿದೆ.
■ ಕೃಷ್ಣ ಎಂ.ನಾಯ್ಕ್ ಕೃಷಿಕರು, ಅಜೆಕಾರ್

ವಿದ್ಯಾಪೋಷಕ್‌ನ 'ಜೀವನ ವಿದ್ಯಾ' ಸನಿವಾಸ ಶಿಬಿರಕ್ಕೆ ಪುತ್ತಿಗೆ ಶ್ರೀ ಚಾಲನೆ

ಉಚಿತ ಆರೋಗ್ಯ ಕಾರ್ಡ್ ವಿತರಣೆ



ಉಡುಪಿ: ಯಕ್ಷಗಾನ ಕಲಾರಂಗದ ಅಂಗ ಸಂಸ್ಥೆಯಾದ ವಿದ್ಯಾಪೋಷಕ್ ಪ್ರಥಮ ಪಿಯುಸಿ ಮುಗಿಸಿದ ವಿದ್ಯಾರ್ಥಿಗಳಿಗಾಗಿ ಐದು ದಿನಗಳ 'ಜೀವನ ವಿದ್ಯಾ' ಸನಿವಾಸ ಶಿಬಿರವನ್ನು 16 ವರ್ಷಗಳಿಂದ ನಡೆಸಿಕೊಂಡು ಬಂದಿದ್ದು, ಈ ಬಾರಿಯ ಶಿಬಿರವನ್ನು ಸಂಸ್ಥೆಯ ಐವೈಸಿ ಸಭಾಂಗಣದಲ್ಲಿ ಮಂಗಳವಾರ ಪುತ್ತಿಗೆ ಮಠಾಧೀಶರಾದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಉದ್ಘಾಟಿಸಿದರು.

ಗೀತಾಲೇಖನ ಬರೆದು ಒಪ್ಪಿಸಿದವರಿಗೆ ಪ್ರಮಾಣ ಪತ್ರ ವಿತರಿಸಿದರು.

ಬಳಿಕ ಅನುಗ್ರಹ ಸಂದೇಶ ನೀಡಿ, ಇಂತಹ ಶಿಬಿರ ಮಕ್ಕಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಭಗವದ್ಗೀತೆ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಶ್ರೇಷ್ಠ ಗ್ರಂಥ. ಲೌಕಿಕ ವಿದ್ಯೆಯೊಂದಿಗೆ ಮನಶ್ಶಾಂತಿ ಪಡೆಯಲು ಆಧ್ಯಾತ್ಮಿಕವಾಗಿ ಬೆಳೆಯುವದೂ ಅಷ್ಟೇ ಮುಖ್ಯ ಎಂದು ಹೇಳಿದರು. ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ವತಿಯಿದ ವಿದ್ಯಾಪೋಷಕ್ ನ 1000 ವಿದ್ಯಾರ್ಥಿಗಳಿಗಾಗಿ ಕೊಡಮಾಡಿದ ಉಚಿತ ಆರೋಗ್ಯ ಕಾರ್ಡನ್ನು ಮಾಹೆಯ ಸಹಕುಲಾಧಿಪತಿ ಡಾ. ಎಚ್. ಎಸ್. ಬಲ್ಲಾಳ್ ಅವರು ವಿತರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಉಡುಪಿ ಶಾಸಕ ಯಶ್‌ಪಾಲ್ ಎ. ಸುವರ್ಣರು ವಹಿಸಿದ್ದರು. ಪರ್ಯಾಯ ಶ್ರೀ ಶೀರೂರು ಮಠದ ದಿವಾನರಾದ ಡಾ. ಉದಯಕುಮಾರ್ ಸರಳತ್ತಾಯರು ಶುಭಾಶಂಸನೆಗೈದರು.

ಕಾರ್ಯಕ್ರಮದಲ್ಲಿ ಎಸ್. ವೆಂಕಟೇಶ್, ನಂದಾ ವೆಂಕಟೇಶ್, ಸಿ. ವಿ. ಸಂತೋಷ್, ಭಾಸ್ಕರ ಭಟ್, ಸಿ. ಎಸ್. ರಾವ್, ಪಿ. ಸತೀಶ ರಾವ್ ಶಿಬಿರದ ನಿರ್ದೇಶಕ ಗುರುದತ್ ಬಂಟ್ವಾಳಕರ್, ಸಹನಾ ಕಿಣಿ ಅಭ್ಯಾಗತರಾಗಿ ಭಾಗವಹಿಸಿದ್ದರು. ಉಪಾಧ್ಯಕ್ಷರುಗಳಾದ ಎಸ್. ವಿ. ಭಟ್, ಎ. ಜಿ. ಶೆಟ್ಟಿ ವಿದ್ಯಾ ಪ್ರಸಾದ್, ಯು. ಎಸ್. ರಾಜಗೋಪಾಲ ಆಚಾರ್ಯ, ಅನಂತರಾಜ ಉಪಾಧ್ಯ, ಅಶೋಕ ಎಂ., ಮಂಜುನಾಥ ಹೆಬ್ಬಾರ, ಅಜಿತ್ ಕುಮಾರ್, ಆನಂದ ಶೆಟ್ಟಿ ಎನ್. ರಾಮ ಭಟ್, ಪ್ರಭಾಕರ ಬಂಡಿ ಉಪಸ್ಥಿತರಿದ್ದರು.

ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ಪ್ರಾಸ್ತಾವಿಕ ಮಾತುಗಳೊಂದಿಗೆ ಕಾರ್ಯಕ್ರಮ ನಿರೂಪಿಸಿದರು. ನಾರಾಯಣ ಎಂ. ಹೆಗಡೆ ವಂದಿಸಿದರು.

250 ವಿದ್ಯಾರ್ಥಿಗಳು

ಮಂಗಳೂರಿನ ಪ್ರೊಟೊ ಆಫ್ ಸ್ಕಿಲ್ ಇದರ ನಿರ್ದೇಶನದಲ್ಲಿ ನಡೆಯುವ ಐದು ದಿನಗಳ ಸನಿವಾಸ ಶಿಬಿರದ ಪ್ರಯೋಜನವನ್ನು ಪ್ರಥಮ ಪಿಯು ಮುಗಿಸಿದ ವಿದ್ಯಾಪೋಷಕ್‌ನ 250 ವಿದ್ಯಾರ್ಥಿಗಳು ಪಡೆಯಲಿದ್ದಾರೆ. ಶಿಬಿರಾರ್ಥಿಗಳಲ್ಲಿ ಆತ್ಮಸ್ಥೈರ್ಯ, ಜೀವನ ಕೌಶಲ, ಆಂಗ್ಲಭಾಷಾ ಪ್ರೌಢಿಮೆ ಬೆಳೆಸಿ, ಅವರಿಗೆ ಸಾಧಕ ವ್ಯಕ್ತಿಗಳ ಪರಿಚಯದೊಂದಿಗೆ ಜೀವನ ಮೌಲ್ಯಗಳನ್ನು ಕಲಿಸಲಾಗುವುದು.

ಕೋಳಿ ಅಂಕಕ್ಕೆ ದಾಳಿ:7 ಕೋಳಿ ಸಹಿತ 7 ಮಂದಿ ಸೆರೆ

ಬದಿಯಡ್ಕ: ಬೇಳದಲ್ಲಿ ಕೋಳಿ ಅಂಕ ನಡೆಸುತ್ತಿದ್ದ ಕೇಂದ್ರಕ್ಕೆ ಬದಿಯಡ್ಕ ಪೊಲೀಸರು ದಾಳಿ ನಡೆಸಿ ಕೋಳಿ ಅಂಕದಲ್ಲಿ ನಿರತರಾದ 7 ಮಂದಿಯನ್ನು ಬಂಧಿಸಿದ್ದಾರೆ. ಅಲ್ಲದೆ ಕೋಳಿ ಅಂಕಕ್ಕೆ ಬಳಸಲಾಗಿದ್ದ 3400 ರೂ. ಮತ್ತು 7 ಕೋಳಿಗಳನ್ನು ವಶಪಡಿಸಿಕೊಂಡು ಕೇಸು ದಾಖಲಿಸಿಕೊಂಡಿದ್ದಾರೆ. ಬೇಳ ಮತ್ತು ಪರಿಸರ ಪ್ರದೇಶದವರಾದ ಅನಿಲ್‌ಕುಮಾರ್ ಬಿ. (28), ಉದಯಕುಮಾರ್ ಡಿ. (40), ನಾರಾಯಣ (42), ರವಿರಾಜ್ ಪಿ. (37), ನಿತೀಶ್‌ಕುಮಾರ್ (26), ನಾರಾಯಣ ರೈ (42) ಮತ್ತು ಅಕ್ಷಯ್ ಬಿ. (34) ಬಂಧಿತರು.





ಕಾಸರಗೋಡು ತೆರುವತ್ ಶ್ರೀ ಚೇರುಂಬಾ ಭಗವತೀ ಕ್ಷೇತ್ರದಲ್ಲಿ ಬ್ರಹ್ಮಕಲಶ - ನಡಾವಳಿ ಮಹೋತ್ಸವದ ದ್ವಿತೀಯ ದಿನವಾದ ಮಂಗಳವಾರ ಬ್ರಹ್ಮಶ್ರೀ ನಾಗೇಶ್ ಭಟ್ ಪುತ್ತೂರು ಅವರ ನೇತೃತ್ವದಲ್ಲಿ ಚಂಡಿಕಾ ಹೋಮ ಜರಗಿತು.

ಯುವಜನರ ಜತೆ ಸರ್ಕಾರ ಚೆಲ್ಲಾಟ: ಬಿವೈವಿ

ಬೆಂಗಳೂರು: ಸಿಎಂ, ಡಿಸಿಎಂ ಇವತ್ತು ಯುವ ಜನತೆಯ ಜೀವನದ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.

ಅವರು ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ಯುವ ಜನತೆ ಕಳೆದ ಎರಡುವರೆ ವರ್ಷದಿಂದ ಕಣ್ಣೀರು ಹಾಕುತ್ತಿದ್ದಾರೆ. ಪ್ರತಿಭಟನೆ- ಹೋರಾಟ ಮಾಡುತ್ತಿದ್ದಾರೆ; ಇದ್ಯಾವುದನ್ನೂ ಲೆಕ್ಕಿಸದೇ ಬೆಳಗಾವಿಯ



ಅಧಿವೇಶನದ ಸಂದರ್ಭದಲ್ಲೂ ಇದೇ ವಿದ್ಯಾರ್ಥಿಗಳ ಒಕ್ಕೂಟ ಪ್ರತಿಭಟನೆ ಮಾಡಿದರೆ ಲಾಠಿ ಚಾರ್ಜ್ ಮಾಡಿದ್ದರು. ಆಗಲೂ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ ಎಂದು ದೂರಿದರು.

ಮುಖ್ಯಮಂತ್ರಿಗಳ ಜೊತೆ ಭೇಟಿಗೆ ಸಮಯ ನಿಗದಿಪಡಿಸಲು ರಾಜ್ಯ ಹೈಕೋರ್ಟ್ ಮಧ್ಯಸ್ಥಿಕೆ ವಹಿಸಬೇಕಾಯಿತು ಎಂದು ಅವರು ತಿಳಿಸಿದರು. ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ಒಂದೇ ಒಂದು ಹುದ್ದೆಯನ್ನೂ ಭರ್ತಿ ಮಾಡಲು ಸಾಧ್ಯವಾಗಿಲ್ಲ. ಸಿಎಂ, ಡಿಸಿಎಂ, ಸಚಿವ ಸಂಪುಟದ ಸದಸ್ಯರು ರಾಜ್ಯದುದ್ದಕ್ಕೂ ಭಾಷಣ ಬಿಗಿಯುತ್ತಿದ್ದಾರೆ. ಆದರೆ, ನಾಡಿನ ಯುವಜನತೆಗೆ ನ್ಯಾಯ ನೀಡಲು ಸಾಧ್ಯವಾಗಿಲ್ಲ. ಮೀಸಲಾತಿ ಗೊಂದಲ ಬಳಸಿಕೊಂಡು ರಾಜ್ಯ ಹೈಕೋರ್ಟ್‌ನಲ್ಲಿ ಸರಿಯಾಗಿ ವಾದ ಮಂಡಿಸದೇ ಕಾಲಹರಣ ಮಾಡಿಕೊಂಡು ಕಾಂಗ್ರೆಸ್ ಸರ್ಕಾರ ಕುಳಿತಿದೆ. ಯುವಜನತೆಯ ಬದುಕು ಕಟ್ಟಿಕೊಡುವ ನಿಟ್ಟಿನಲ್ಲಿ ಖಾಲಿ ಹುದ್ದೆಗಳ ನೇಮಕಾತಿ ಮಾಡುವ ಇಚ್ಛಾಶಕ್ತಿ ಈ ಸರ್ಕಾರದಿಂದ ಕಾಣುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ವಿದ್ಯಾರ್ಥಿಗಳ ಒಕ್ಕೂಟ ಬೆಂಗಳೂರಿನಲ್ಲೂ ಪ್ರತಿಭಟನೆ ಮಾಡಿತ್ತು. ಕಲಬುರಗಿ, ಧಾರವಾಡದಲ್ಲೂ ಪ್ರತಿಭಟನೆ ಮಾಡಿದ್ದರು. ಇವತ್ತು ಮತ್ತೊಮ್ಮೆ ಪ್ರತಿಭಟನೆ ಮಾಡುತ್ತಿದ್ದಾರೆ ಎಂದರು.

ತಾಳ್ಮೆ ಪರೀಕ್ಷೆ ಮಾಡುತ್ತೀರಿ?

ನೇಮಕಾತಿ ಪ್ರಕ್ರಿಯೆ ಪ್ರಾರಂಭ ಮಾಡುವುದಾಗಿ ಮುಖ್ಯಮಂತ್ರಿಗಳು ಹೇಳುತ್ತಾರೆ. ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷಗಳಾಗಿವೆ. ಇಷ್ಟು ಸಮಯ ಮಾಡದವರು ಇನ್ಮೇಲೆ ಮಾಡುತ್ತಾರಾ? ಇನ್ನೂ ಎಷ್ಟು ದಿನ ಯುವಜನರ ತಾಳ್ಮೆ ಪರೀಕ್ಷೆ ಮಾಡುತ್ತೀರಿ? ಅವರ ಕಣ್ಣೀರು ಸರ್ಕಾರಕ್ಕೆ ಕಾಣುತ್ತಿಲ್ಲವೇ ಎಂದು ಪ್ರಶ್ನಿಸಿದರು. ಖಾಲಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಕೂಡಲೇ ಪ್ರಾರಂಭಿಸಬೇಕು. ಜೊತೆಗೆ ಕೆಪಿಎಸ್‌ಸಿ ವ್ಯವಸ್ಥೆ ಸುಧಾರಣೆ ಮಾಡಬೇಕು. ನಿಮ್ಮ ಸರ್ಕಾರ ಇದ್ದಾಗ ಏನು ಮಾಡಿದ್ದೀರಿ ಎಂಬಂಥ ಮಾತುಗಳನ್ನು ಬದಿಗಿಟ್ಟು ಯುವಜನತೆಗೆ ನ್ಯಾಯ ಕೊಡುವ ಕೆಲಸ ಮಾಡಬೇಕೆಂದು ಅವರು ಆಗ್ರಹಿಸಿದರು.

ರಾಮ ಬಾಣ



ಅಧಿಕಾರ ಉಳಿಸಿಕೊಳ್ಳಲು ಬಜೆಟ್ ಮಂಡನೆ: ಅಶೋಕ

ಚಿತ್ರದುರ್ಗ: ಬಜೆಟ್ ಮಾಡೋಕೆ ಸಿಎಂ ಸಿದ್ದರಾಮಯ್ಯ ಬಳಿ ಹಣವಿಲ್ಲ. ಆದರೂ ಅಧಿಕಾರ ಉಳಿಸಿಕೊಳ್ಳಲು ಬಜೆಟ್ ಮಂಡನೆ ತಯಾರಿ ನಡೆಸಿದ್ದು, ಇದೊಂದು ಬೋಗಸ್ ಬಜೆಟ್ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಲೇವಡಿ ಮಾಡಿದರು.

ಚಿತ್ರದುರ್ಗದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ 3 ವರ್ಷದಲ್ಲಿ ತೋರಿಸಿದಷ್ಟು ಆದಾಯವೇ ಬಂದಿಲ್ಲ. ರಾಜ್ಯದ ಸಾಲ 3 ಲಕ್ಷ ಕೋಟಿ ರೂ. ತಲುಪಲಿದ್ದು, ರಾಜ್ಯದಲ್ಲಿ ಹೆಚ್ಚಿನ ಸಾಲ ಮಾಡಿದ ಸಿಎಂ ಎಂಬ ಹೆಗ್ಗಳಿಕೆ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಸರ್ಕಾರ ಸಭೆಯನ್ನೇ ಕರೆದಿಲ್ಲ. ಕೇಂದ್ರ ಸರ್ಕಾರ ಬಳಿ ಹೋಗೋಣ ಬನ್ನಿ ಎಂದು ಯಾರನ್ನೂ ಕರೆದಿಲ್ಲ. ಸಿಎಂ ಸಿದ್ದರಾಮಯ್ಯ ಜಿಎಸ್‌ಟಿ ಸಭೆಗೆ ಹೋಗಲ್ಲ. ಮಂತ್ರಿಯೊಬ್ಬರನ್ನು ಕಳಿಸಿ ಸಿಎಂ ಬೇಜವಬ್ದಾರಿತನ ಮೆರೆದಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಎರಡೂವರೆ ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿಯಿವೆ. 65 ಸಾವಿರ ಹುದ್ದೆ ಭರ್ತಿಗೆ ಫೈನಾನ್ಸ್ ಇಲಾಖೆ ಆದೇಶಿಸಿ 6 ತಿಂಗಳಾಗಿದೆ. ಆದರೂ ರಾಜ್ಯ ಸರ್ಕಾರ 3 ವರ್ಷದಿಂದ ಒಬ್ಬರಿಗೂ ಉದ್ಯೋಗ ನೀಡಿಲ್ಲ. ರಾಜ್ಯ ಕಾಂಗ್ರೆಸ್ ಸರ್ಕಾರ ಪಾಪರ್ ಆಗಿದೆ. ಸಿಎಂ, ಡಿಸಿಎಂ ಅಧಿಕಾರದ ಕಚ್ಚಾಟದಲ್ಲಿ ಮುಳುಗಿದ್ದಾರೆ. ಡಿಸಿಎಂ ಡಿಕೆಶಿಗೆ ಸಿಎಂ ಉದ್ಯೋಗ ಬೇಕು. ಸಿಎಂಗೆ 5 ವರ್ಷದವರೆಗೆ ಉದ್ಯೋಗ ಬೇಕು. ಸಿಎಂ, ಡಿಸಿಎಂಗೆ ಆದಾಯ ಬರುವ ಉದ್ಯೋಗ ಮಾತ್ರ ಬೇಕು. ಆದರೆ ಜನಸಾಮಾನ್ಯರು, ಬಡವರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಭಾರತೀಯ ಸನಾತನ ಧರ್ಮವನ್ನು ನಾಶ ಮಾಡಲು ಸಾಧ್ಯವಿಲ್ಲ. ಸೋಮನಾಥ ದೇವಾಲಯದ ಮೇಲೆ ಧಾಳಿ ಮಾಡಿದವರು ಅಳಿದು ಹೋದರು, ಆದರೆ ಆ ದೇವಾಲಯ ಅದೇ ಜಾಗದಲ್ಲಿ ಹೆಮ್ಮೆಯಿಂದ ತಲೆಯೆತ್ತಿ ನಿಂತಿದೆ – ಅಮಿತ್ ಷಾ

- ಧರ್ಮವನ್ನು ನಾಶ ಮಾಡಲು ಸಾಧ್ಯವಿಲ್ಲ, ನಾಶವಾಗುವಂಥಾದ್ದು ಧರ್ಮವಾಗಲು ಸಾಧ್ಯವಿಲ್ಲ!

ದಿನ ಭವಿಷ್ಯ

ಮೇಷ ದುಡುಕಿನ ನಡೆ ಸಾಮರಸ್ಯ ಕೆಡಿಸೀತು. ನಿಮ್ಮ ಮನೋಭಾವ ಬದಲಿಸಿಕೊಳ್ಳಿ. ಕೆಲಸದ ಒತ್ತಡ ಹೆಚ್ಚು. ತಪ್ಪು ಘಟಿಸಬಹುದು.

ವೃಷಭ ಇತ್ತೀಚಿಗೆ ಕೆಲಸದ ಪರಾಮರ್ಶೆ ನಡೆಸಿ. ಲೋಪ ತಿದ್ದಿಕೊಳ್ಳಿ. ನಿಮ್ಮ ಕೆಲಸ ಟೀಕಿಸಲ್ಪಟ್ಟರೆ ಆ ಕುರಿತು ಅತಿಯಾಗಿ ಚಿಂತಿಸಬೇಡಿ.

ಮಿಥುನ ವೃತ್ತಿ ಒತ್ತಡ ಎದುರಿಸುವಿರಿ. ಆದರೆ ಅದನ್ನು ಸಮರ್ಥವಾಗಿ ನಿಭಾಯಿಸುವಿರಿ. ಆಪ್ತರ ಜತೆ ಭಿನ್ನಮತ ಸಂಭವ. ಹೊಂದಾಣಿಕೆ ಒಳಿತು.

ಕಟಕ ಆತ್ಮೀಯ ಸಂಬಂಧ ಕೆಡದಂತೆ ಎಚ್ಚರ ವಹಿಸಿ. ಅನುಮಾನದ ಧೋರಣೆ ಬಿಡಿ. ವ್ಯವಹಾರದಲ್ಲಿ ಏರುಪೇರು ಸಂಭವ. ಆರ್ಥಿಕ ಒತ್ತಡ.

ಸಿಂಹ ನಿಮ್ಮ ಯೋಜನೆ ಕಾರ್ಯಗತಗೊಳಿಸಲು ಹಿಂಜರಿಕೆ ಬೇಡ. ಯಶಸ್ಸು ಖಂಡಿತ. ದೈಹಿಕ ಸಮಸ್ಯೆ ಕಡೆಗಣಿಸಬೇಡಿ. ಏಕಾಂಗಿಗಳಿಗೆ ಸಂಗಾತಿ ಲಭ್ಯ.

ಕನ್ಯಾ ನಿರ್ಲಕ್ಷಿಸಲ್ಪಟ್ಟ ಖಾಸಗಿ ಸಮಸ್ಯೆ ಮತ್ತೆ ಎದ್ದು ನಿಲ್ಲಬಹುದು. ಶಾಶ್ವತ ಪರಿಹಾರ ಹುಡುಕಿ. ವೃತ್ತಿಯಲ್ಲಿ ಉನ್ನತಿ, ಧನಪ್ರಾಪ್ತಿಯ ಸಾಧ್ಯತೆ.

ತುಲಾ ಇತರರಿಂದ ದಕ್ಷತೆ, ವಿನಯ ನಿರೀಕ್ಷಿಸುವಿರಿ. ಆದರೆ ಎಲ್ಲರನ್ನು ನಿಯಂತ್ರಿಸುವುದು ಅಸಾಧ್ಯ. ಕೆಲವರ ವರ್ತನೆಯಿಂದ ಅಸಹನೆ.

ವೃಶ್ಚಿಕ ಸಂತೋಷದ ದಿನ. ನಿಮ್ಮ ನಿರ್ಧಾರ ದೂರಗಾಮಿ ಪರಿಣಾಮ ಬೀರಲಿದೆ. ಆತ್ಮೀಯರ ಪ್ರೀತಿ, ವಿಶ್ವಾಸ ಗಳಿಸುವಿರಿ. ಕುಟುಂಬ ಸೌಹಾರ್ದ.

ಧನು ಕೆಲವರ ಬಗ್ಗೆ ವಿಧೇಯತೆ ಒಳ್ಳೆಯದೆ. ಆದರೆ ಅವರ ತಾಳಕ್ಕೆ ಕುಣಿಯಬೇಡಿ. ಸಾಮಾಜಿಕ ಕಾರ್ಯದಲ್ಲಿ ಆಸಕ್ತಿ. ಧನವ್ಯಯ ಹೆಚ್ಚು.

ಮಕರ ಉತ್ಸಾಹದ ಮನಸ್ಥಿತಿ. ವ್ಯವಹಾರದಲ್ಲಿ ಹೊಸ ಅವಕಾಶ ತೆರೆಯಲಿದೆ. ಚಿಂತೆ ಸೃಷ್ಟಿಸಿದ್ದ ಪರಿಸ್ಥಿತಿ ಇತ್ಯರ್ಥ ಕಾಣಲಿದೆ. ಬಂಧುಜನರ ಸಹಕಾರ.

ಕುಂಭ ಸಾಮಾಜಿಕ, ಆರ್ಥಿಕ ಮತ್ತು ಖಾಸಗಿ ಬದ್ಧತೆ ಪೂರೈಸಲು ಆದ್ಯತೆ ಕೊಡಿ. ಬಿಡುವಿಲ್ಲದ ಕೆಲಸದಿಂದ ವಿರಾಮ ಪಡೆಯಿರಿ. ಆರೋಗ್ಯ ಸುಸ್ಥಿರ.

ಮೀನ ಇಂದು ಹೊಸದರ ಅನ್ವೇಷಣೆಗೆ ಮನ ಮಾಡುವಿರಿ. ಏರುಪೇರು ಇಲ್ಲದ ಶಾಂತ ಮನಸ್ಥಿತಿ. ವ್ಯವಹಾರದಲ್ಲಿ ಆರ್ಥಿಕ ಅಡಚಣೆ ನಿವಾರಣೆ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 5,3,0,4

ಮುಖ್ಯಮಂತ್ರಿಗಳ ಪದಕ ಪ್ರದಾನ ಮಾಡಿದ ಸಚಿವ ಡಾ. ಜಿ.ಪರಮೇಶ್ವರ

ತುರ್ತುಸೇವೆಗೆ ಅಗ್ನಿಶಾಮಕ ಮನ್ನಣೆ

ಬೆಂಗಳೂರು: ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯು ಉತ್ತಮ ಕೆಲಸದ ಮೂಲಕ ರಾಷ್ಟ್ರ ಮಟ್ಟದಲ್ಲಿ ಜನಮನ್ನಣೆ ಪಡೆದಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ಹೇಳಿದರು.

ಬನ್ನೇರುಘಟ್ಟ ರಸ್ತೆಯ ಆರ್.ಎ.ಮುಂಡ್ಕುರ್ ಅಗ್ನಿಶಾಮಕ ತರಬೇತಿ ಅಕಾಡೆಮಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವಾ ಇಲಾಖೆ, ಗೃಹರಕ್ಷಕ ದಳ, ಪೌರರಕ್ಷಣೆ ಮತ್ತು ಎಸ್‌ಡಿಆರ್ ಎಫ್ ಅಧಿಕಾರಿ, ಸಿಬ್ಬಂದಿಗಳಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಹಾಗೂ 40 ಹೊಸ ಅಗ್ನಿಶಾಮಕ ಜಲ ವಾಹನಗಳನ್ನು ಹಸ್ತಾಂತರಿಸಿ ಅವರು ಮಾತನಾಡಿದರು.

ಅಗ್ನಿಶಾಮಕ ಮತ್ತು ತುರ್ತುಸೇವಾ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಶಿಸ್ತಿನ ಸಿಪಾಯಿಗಳು. ಪೊಲೀಸ್ ಇಲಾಖೆಯ ಜತೆಜತೆಯಾಗಿ ಅಷ್ಟೇ ಶಿಸ್ತನ್ನು ಕಾಪಾಡಿಕೊಂಡು ಬಂದಿದ್ದೀರಿ. ವಿಪತ್ತಿನ ಸಂದರ್ಭದಲ್ಲಿ ಸ್ವಯಂಸ್ಫೂರ್ತಿಯಿಂದ ಕೆಲಸ ಮಾಡಲು ಶ್ರಮಿಸಲಾಗಿದೆ. ಇದನ್ನು ಸಮಾಜ ಗುರುತಿಸಿದೆ. ಇಡೀ ದೇಶದಲ್ಲಿ ಕರ್ನಾಟಕ ಅಗ್ನಿಶಾಮಕ ಮತ್ತು ಇತರೆ ಇಲಾಖೆಗಳು ಮಾದರಿಯಾಗಿದೆ ಎಂದರು.

ಬೆಂಗಳೂರು ನಗರದಲ್ಲಿ ಬಹುಮಹಡಿ ಕಟ್ಟಡಗಳು ಹೆಚ್ಚಾಗುತ್ತಿವೆ. ಅಗ್ನಿ ಅವಘಡಗಳು ಸಂಭವಿಸಿದ ಸಂದರ್ಭದಲ್ಲಿ ನಿಯಂತ್ರಿಸಲು ಆಧುನಿಕ ಮತ್ತು ಸುಸಜ್ಜಿತ ಸಲಕರಣೆ, ವಾಹನಗಳನ್ನು ಒದಗಿಸಲಾಗಿದೆ.

ಪ್ರಥಮ ಬಾರಿಗೆ 90 ಮೀಟರ್ ಎತ್ತರ ತಲುಪಬಲ್ಲ ಏರಿಯಲ್ ಲ್ಯಾಡರ್ ಪ್ಲಾಟ್‌ಫಾರ್ಮ್ ವಾಹನ ಮಾದರಿ ಅಗ್ನಿಶಾಮಕ ವಾಹನವಾಗಿದೆ ಲಭ್ಯವಿದೆ ಎಂದರು. ಕಾರ್ಯಕ್ರಮದಲ್ಲಿ ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶರತ್‌ಚಂದ್ರ, ಅಗ್ನಿಶಾಮಕ ಸೇವೆಯ ಡಿಜಿಪಿ ಪ್ರಶಾಂತ್ ಕುಮಾರ್ ಠಾಕೂರ್, ಎಡಿಜಿಪಿ ನಂಜುಂಡಸ್ವಾಮಿ, ಡಿಐಜಿಗಳಾದ ರೇಣುಕಾ ಸುಕುಮಾರ್, ಸವಿತಾ ಇದ್ದರು.



15 ಹೊಸ ತಾಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲು ಮುಖ್ಯಮಂತ್ರಿ ಯವರನ್ನು ಕೋರಿದ್ದೇನೆ. ಪೊಲೀಸ್ ಗೃಹ ಯೋಜನೆಯಡಿ 40 ಸಾವಿರ ಮನೆ ನಿರ್ಮಿಸಿದ್ದೇವೆ. ಅದೇ ಮಾದರಿಯಲ್ಲಿ ಅಗ್ನಿಶಾಮಕ ಸಿಬ್ಬಂದಿಗಳಿಗೆ ವಸತಿ ಗೃಹ ಕಲ್ಪಿಸುವ ತೀರ್ಮಾನ ಮಾಡಲಾಗಿದೆ.

■ **ಡಾ. ಜಿ. ಪರಮೇಶ್ವರ,** ಗೃಹ ಸಚಿವ

ಶೀಘ್ರದಲ್ಲೇ 1,600 ಹುದ್ದೆಗಳನ್ನು ಭರ್ತಿ

15ನೇ ಹಣಕಾಸಿನ ಯೋಜನೆಯಡಿ 329 ಕೋಟಿ ರೂ. ಒದಗಿಸಲಾಗಿತ್ತು. 21 ಅಗ್ನಿಶಾಮಕ ಠಾಣೆ ನಿರ್ಮಿಸಲು 98 ಕೋಟಿ ರೂ. ಖರ್ಚು ಮಾಡಲಾಗಿದೆ. ಆಧುನಿಕ ಉಪಕರಣಗಳ ಖರೀದಿ, ತರಬೇತಿ ಕೇಂದ್ರದ ಉನ್ನತಿಕರಣಕ್ಕೆ ಕ್ರಮ ವಹಿಸಲಾಗಿದೆ. ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯಲ್ಲಿ 1,600ಕ್ಕೂ ಹೆಚ್ಚು ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಬೇಕಿದೆ. ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. 1,600 ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದರು.

ಕಾರ್ಖಾನೆ ವಿರುದ್ಧ ಸಿಡಿದೆದ್ದ ರೈತರು

ಕೊಪ್ಪಳ: ತಾಲೂಕಿನ ವಿವಿಧ ಕಾರ್ಖಾನೆಗಳ ವಿಸ್ತರಣೆಗೆ ವಿರೋಧ ವ್ಯಕ್ತಪಡಿಸಿ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆಗಳ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ನಡೆದ ಕೊಪ್ಪಳ ಬಂದ್ ಯಶಸ್ವಿಯಾಗಿತು.

ನಗರದ ಗವಿಮಠದ ಮೈದಾನದಿಂದ ಆರಂಭವಾದ ಬೃಹತ್ ಪ್ರತಿಭಟನಾ ಮೆರವಣಿಗೆಯು ಗಡಿಯಾರ ಕಂಬದ ಮೂಲಕ ಜವಾಹರ್ ರಸ್ತೆಯ ಮಾರ್ಗವಾಗಿ ಅಶೋಕ ವೃತ್ತ ತಲುಪಿತು. ಸಂಘಟನೆಗಳ ಮುಖಂಡರು, ಪಕ್ಷಾತೀತವಾಗಿ ನಾಯಕರು ಪಾಲ್ಗೊಂಡಿದ್ದರು. ಪ್ರತಿಭಟನಾ ಮೆರವಣಿಗೆಯಲ್ಲಿ 50ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳು, 20ಕ್ಕೂ ಹೆಚ್ಚು ಎತ್ತಿನ ಬಂಡಿಗಳು ಮತ್ತು ನೂರಾರು ಬೈಕ್‌ಗಳ ರ‍್ಯಾಲಿ ನಡೆಯಿತು. ಕಾರ್ಖಾನೆಗಳಿಂದ ಹಾನಿಗೊಳಗಾದ ಹಳ್ಳಿಗಳ ರೈತರು ತಮ್ಮ ಬೆಳೆ ನಷ್ಟದ ಮಾದರಿಗಳನ್ನು ಪ್ರದರ್ಶಿಸಿ ಸರ್ಕಾರದ ಗಮನ ಸೆಳೆದರು.

ಪ್ರತಿಭಟನಾಕಾರರು ಜಿಲ್ಲೆಯಲ್ಲಿ ಹೊಸ ಕಾರ್ಖಾನೆಗಳ ಸ್ಥಾಪನೆಯನ್ನು ಶಾಶ್ವತವಾಗಿ ನಿಲ್ಲಿಸಬೇಕು, ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಕಾರ್ಖಾನೆಗಳ ಪರಿಸರ ಹಾನಿ ಪರಿಶೀಲಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಹಾಲಿ ವರ್ತಿ ಪ್ರದೇಶದ ರೈತರು ತಮ್ಮ ಜಮೀನುಗಳಲ್ಲಿ ಬೆಳೆದ ಕಡಲೆ, ಮೆಕ್ಕೆಜೋಳ, ಜೋಳ ಸೇರಿದಂತೆ ಹಲವು ಬೆಳೆಗಳಿಗೆ ಕಾರ್ಖಾನೆಯ ಹೊಗೆಯಿಂದಾಗುವ ಹಾನಿಯನ್ನು ಪ್ರದರ್ಶಿಸಲು, ಹಾಳಾದ ಬೆಳೆಗಳನ್ನು ಎತ್ತಿನ ಬಂಡಿಗಳಲ್ಲಿ ಹೊತ್ತು ತಂದಿದ್ದಾರೆ. ಕಳೆದ ಒಂದು ವರ್ಷದಿಂದ ಈ ಸಮಸ್ಯೆ ಎದುರಿಸುತ್ತಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ರೈತರು ದೂರಿದ್ದಾರೆ.

ಗವಿಶ್ರೀ ಹೋರಾಟಕ್ಕೆ ವರ್ಷಪೂರ್ಣ: ಗವಿಮಠದ ಗವಿಸಿದ್ಧೇಶ್ವರ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆದ ಹೋರಾಟಕ್ಕೆ ವರ್ಷವಾಗಿದೆ. 2025ರ ಫೆ.24ರಂದು ಕೊಪ್ಪಳ, ಭಾಗ್ಯನಗರ ಬಂದ್ ಮಾಡಿ, ಪ್ರತಿಭಟನಾ ಮೆರವಣಿಗೆ ನಡೆಸಲಾಗಿತ್ತು.

ರಕ್ಷಣಾ ಸಹಕಾರ, ವ್ಯಾಪಾರಕ್ಕೆ ಒತ್ತು

ಪುಟ 1➡ ಎರಡೂ ದೇಶಗಳ ಸಂಬಂಧವನ್ನು, ಅವರ 2017ರ ಪ್ರವಾಸದ ಸಮಯದಲ್ಲಿ ಕಾರ್ಯತಂತ್ರದ ಪಾಲುದಾರಿಕೆಗೆ ವಿಸ್ತರಿಸಲಾಗಿತ್ತು. 2018ರಲ್ಲಿ ನೆತನ್ಯಾಹು ಭಾರತಕ್ಕೂ ಭೇಟಿ ನೀಡಿದ್ದರು.

ರಕ್ಷಣಾ ಮತ್ತು ಪ್ರಾದೇಶಿಕ ಭದ್ರತೆ: ನಿಯೋಗ ಮಟ್ಟದ ಮಾತುಕತೆಯಲ್ಲಿ ರಕ್ಷಣಾ ಸಹಕಾರ ಪ್ರಮುಖವಾಗಿ ಚರ್ಚೆಯಾಗುವ ನಿರೀಕ್ಷೆಯಿದೆ. ಚರ್ಚೆಗಳು ಗಾಜಾದಲ್ಲಿನ ಪರಿಸ್ಥಿತಿ ಮತ್ತು ಇಸ್ರೇಲ್–ಇರಾನ್ ನಡುವಿನ ಉದ್ವಿಗ್ನತೆಯನ್ನು ಒಳಗೊಳ್ಳುವ ಸಾಧ್ಯತೆಯಿದೆ. ಭಾರತದ ಉದ್ದೇಶಿತ ವಾಯು ರಕ್ಷಣಾ ವ್ಯವಸ್ಥೆಯಾದ ಸುದರ್ಶನ್ ಚಕ್ರಕ್ಕೆ ಇಸ್ರೇಲ್‌ನ ಐರನ್ ಡೋಮ್‌ನ ಅಂಶಗಳನ್ನು ಸೇರಿಸಲೂಬಹುದು ಎನ್ನಲಾಗಿದೆ.

ವ್ಯಾಪಾರ ಮತ್ತು ವಲಸಿಗರು: ಇಸ್ರೇಲ್ ಜತೆಗಿನ ಆರ್ಥಿಕ ಸಂಬಂಧಗಳು ಸ್ಥಿರ ಪ್ರಗತಿ ಸಾಧಿಸಿವೆ. ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರ ಭೇಟಿಯ ಸಮಯದಲ್ಲಿ ಹಲವು ಒಪ್ಪಂದಗಳಿಗೆ ಸಹಿ ಹಾಕಿದ ನಂತರ, ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆಗಳನ್ನು ಪ್ರಾರಂಭಿಸಲಾಗಿತ್ತು. ದ್ವಿಪಕ್ಷೀಯ ಹೂಡಿಕೆ ಒಪ್ಪಂದಕ್ಕೂ ಸಹಿ ಹಾಕಲಾಗಿದೆ. 41 ಸಾವಿರ ಭಾರತೀಯ ವಲಸಿಗರು ಮತ್ತು ಇತ್ತೀಚಿನ ಕಾರ್ಮಿಕ ಸಂಚಾರ ಒಪ್ಪಂದಗಳ ಬೆಂಬಲದಿಂದ ಜನರ ನಡುವಿನ ಸಂಬಂಧಗಳು ಬಲವಾಗಿ ಉಳಿಯಲಿವೆ ಎನ್ನಲಾಗಿದೆ.

ವಿದ್ಯಾರ್ಥಿ ಹತ್ಯೆ: ಶಿವಮೊಗ್ಗ ತಲ್ಲಣ

ಪುಟ 1➡ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯಾಗಿರುವ 15 ವರ್ಷದ ಬಾಲಕ ಸಂಕೇತ್ ಕೊಲೆಯಾಗಿರುವ ದುರ್ದೈವಿ. ಈತ ಶಿವಕುಮಾರ್–ಮಂಜುಳಾ ದಂಪತಿ ಪುತ್ರ. ವಿದ್ಯಾರ್ಥಿ ಸಂಕೇತ್ ಊರುಗಡೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಕಲಿಯುತ್ತಿದ್ದ. ಫಲಿತಾಂಶ ಸುಧಾರಣೆಗೆ ಶಾಲೆಯಲ್ಲಿ ನಡೆಯುತ್ತಿರುವ ವಿಶೇಷ ತರಗತಿ ಶಾಲೆಗೆ ಹೋಗಿದ್ದ ಎನ್ನಲಾಗಿದೆ. ತರಗತಿ ಮುಗಿಸಿ ಸ್ನೇಹಿತನ ಜತೆಗೆ ವಾಪಸ್ ಬರುವಾಗ ರಾತ್ರಿ 8 ಗಂಟೆ ಆಗಿತ್ತು. ಆಗ ಸಂಕೇತ್ ಸ್ನೇಹಿತನ ಹಳೆ ಸಹಪಾಠಿಗಳು ಎರಡು ದಿನಗಳ ಹಿಂದೆ ನಡೆದಿದ್ದ ಕ್ರಿಕೆಟ್ ಪಂದ್ಯಕ್ಕೆ ಸಂಬಂಧಿಸಿ ಕ್ಯಾತೆ ತೆಗೆದು ಜಗಳಕ್ಕೆ ಬಂದಿದ್ದರು. ತನ್ನ ಸ್ನೇಹಿತನ ಮೇಲೆ ಹಲ್ಲೆ ನಡೆಸಲು ಅನ್ಯ ಕೋಮಿನ ಅಪ್ರಾಪ್ತರ ತಂಡ ಮುಂದಾದಾಗ ಜಗಳ ಬಿಡಿಸಲು ಸಂಕೇತ್ ಮುಂದಾಗಿದ್ದ. ಆಗ ಸಂಕೇತ್ ಮತ್ತು ಆತನ ಸ್ನೇಹಿತನ ಮೇಲೆ 7 ಅಪ್ರಾಪ್ತರ ಗುಂಪು ಹಲ್ಲೆ ನಡೆಸಿದೆ. ಬಾಲಕ ಹಾಗೂ ಆತನ ಸ್ನೇಹಿತ ತೀವ್ರ ಹಲ್ಲೆಯಿಂದ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಸ್ವಲ್ಪ ಹೊತ್ತಿನ ಬಳಿಕ ಸಂಕೇತ್ ಸ್ನೇಹಿತ ಎಚ್ಚರಗೊಂಡು ಹಲ್ಲೆಯ ವಿಚಾರವನ್ನು ಶಿಕ್ಷಕರಿಗೆ ತಿಳಿಸಿದ್ದಾನೆ. ಪ್ರಜ್ಞಾ ಶೂನ್ಯನಾಗಿ ಬಿದ್ದಿದ್ದ ವಿದ್ಯಾರ್ಥಿಯನ್ನು ತಕ್ಷಣ ಮೆಗ್ಗಾನ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಮಾರ್ಗಮಧ್ಯದಲ್ಲೇ ಮೃತಪಟ್ಟಿದ್ದ. ಮಾರಿ ಜಾತ್ರೆ ಸಡಗರದಲ್ಲಿದ್ದ ಶಿವಮೊಗ್ಗ ನಗರಕ್ಕೆ ಇದೊಂದು ಕಪ್ಪುಚುಕ್ಕೆಯಾಯಿತು.

ಸಂಕೇತ್ ಹತ್ಯೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಖಂಡನೆ

ಬೆಂಗಳೂರು: ಶಿವಮೊಗ್ಗದಲ್ಲಿ ವಿದ್ಯಾರ್ಥಿಗಳ ಘರ್ಷಣೆಯಲ್ಲಿ ಸಾವನ್ನಪ್ಪಿರುವ ಘಟನೆ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದ್ದು, ಶಿವಮೊಗ್ಗ ನಗರದ ಸಮೀಪದ ಊರುಗಡೂರಿನಲ್ಲಿ ಶಾಲಾ ವಿದ್ಯಾರ್ಥಿಯನ್ನು ಥಳಿಸಿ, ಹತ್ಯೆಗೈದಿರುವುದನ್ನು ತೀವ್ರವಾಗಿ ಖಂಡಿಸುತ್ತೇನೆ ಎಂದಿದ್ದಾರೆ.



ಘಟನೆ ಬಗ್ಗೆ ಎಕ್ಸ್‌ನಲ್ಲಿ ಬೇಸರ ವ್ಯಕ್ತಪಡಿಸಿರುವ ಅವರು, ಮೃತ ವಿದ್ಯಾರ್ಥಿಯ ಕುಟುಂಬಕ್ಕೆ ನೆರವಾಗುವುದರ ಜೊತೆಗೆ, ಕೃತ್ಯದಲ್ಲಿ ಭಾಗಿಯಾದ ಪ್ರತಿಯೊಬ್ಬ ಅಪರಾಧಿಗೂ ಕಾನೂನಿನ ಮೂಲಕ ತಕ್ಕ ಶಿಕ್ಷೆಯಾಗುವಂತೆ ಕ್ರಮವಹಿಸಿ, ಆತನ ಸಾವಿಗೆ ನ್ಯಾಯ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಿದ್ದೇವೆ ಎಂದು ತಿಳಿಸಿದ್ದಾರೆ. ಕೊಲೆಯಲ್ಲಿ ಭಾಗಿಯಾದವರು ಇನ್ನೂ ಚಿಕ್ಕಪ್ರಾಯದ ಹುಡುಗರು ಎಂದು ಕೇಳಿ ದಿಗ್ಭ್ರಮೆಯಾಯಿತು. ಚೆನ್ನಾಗಿ ಓದಿ, ಭವಿಷ್ಯ ರೂಪಿಸಿಕೊಂಡು, ಕುಟುಂಬಕ್ಕೆ ಆಸರೆಯಾಗಬೇಕಿದ್ದ ಮಕ್ಕಳು ದುಷ್ಚಟಗಳಿಗೆ ಬಲಿಯಾಗಿ, ಹೀಗೆ ಕಾನೂನುಬಾಹಿರ ಕೃತ್ಯಗಳಲ್ಲಿ ತೊಡಗುವುದು ದುರದೃಷ್ಟಕರ ಎಂದು ಹೇಳಿದ್ದಾರೆ. ಕೊಲೆಯ ಹಿಂದಿನ ಉದ್ದೇಶವೇನೇ ಇರಲಿ, ಕೊಲೆಗೈದವರು ಯಾರೇ ಆಗಿರಲಿ, ಅವರನ್ನು ಕಾನೂನಿನ ಮೂಲಕ ಹೆಡೆಮುರಿ ಕಟ್ಟಿ, ಭವಿಷ್ಯದಲ್ಲಿ ಇಂತಹ ಕೃತ್ಯಗಳನ್ನು ಎಸಗುವ ಮುನ್ನ ನೂರು ಬಾರಿ ಯೋಚಿಸಬೇಕಾದಂತಹ ಸ್ಥಿತಿ ನಿರ್ಮಾಣ ಮಾಡುವಂತೆ ಪೊಲೀಸ್ ಇಲಾಖೆಗೆ ಸೂಚನೆ ನೀಡಿದ್ದೇನೆ ಎಂದು ತಿಳಿಸಿದ್ದಾರೆ. ಬಾಲ್ಯದಲ್ಲೇ ದ್ವೇಷ, ಹಿಂಸೆ, ಅಪರಾಧ ಕೃತ್ಯಗಳ ದುರ್ಬುದ್ಧಿ ಬೆಳೆಸಿಕೊಳ್ಳುವುದು ಅತ್ಯಂತ ಅಪಾಯಕಾರಿ. ಇಂತಹ ಮನಸ್ಥಿತಿಯಿರುವವರು ದುಶ್ಚಟಗಳಿಗೆ ದಾಸರಾದರೆ ಪರಿಸ್ಥಿತಿ ಕೈಮೀರಿ ಹೋಗುವುದು ಖಚಿತ. ಪೋಷಕರು ಸಹ ತಮ್ಮ ಮಕ್ಕಳ ಚಲನವಲನಗಳ ಮೇಲೆ ನಿಗಾ ವಹಿಸಬೇಕು, ಮಕ್ಕಳು ಹಾದಿ ತಪ್ಪಿದ್ದರೆ ತಿದ್ದಿ ಬುದ್ದಿ ಹೇಳಬೇಕು. ಶಾಲೆಯ ಸುತ್ತಮುತ್ತ ಕಾನೂನು ಬಾಹಿರ ಕೃತ್ಯಗಳು ನಡೆಯದಂತೆ ಆಡಳಿತ ಮಂಡಳಿ ನಿಗಾ ವಹಿಸಬೇಕು. ಅಗತ್ಯಬಿದ್ದರೆ ಪೊಲೀಸರ ನೆರವನ್ನು ಪಡೆಯಬೇಕು ಎಂದು ಸಲಹೆ ನೀಡಿದ್ದಾರೆ.

ನಾಳೆ ಜಿಲ್ಲಾ ತಂಡಗಳಿಗೆ ಪ್ರಶಿಕ್ಷಣ ಕಾರ್ಯಾಗಾರ

ಬೆಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಅಧ್ಯಕ್ಷತೆ ಮತ್ತು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಉಪಸ್ಥಿತಿಯಲ್ಲಿ ಫೆ. 26ರಂದು ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣದಲ್ಲಿ ಕರ್ನಾಟಕದ ಎಲ್ಲ ಜಿಲ್ಲಾ ತಂಡಗಳಿಗೆ ಪ್ರಶಿಕ್ಷಣ ಕಾರ್ಯಾಗಾರ ನಡೆಯಲಿದೆ ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ಪ್ರಶಿಕ್ಷಣ ಅಭಿಯಾನದ ರಾಜ್ಯ ಸಂಚಾಲಕ ಪಿ. ರಾಜೀವ್ ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯದ ಪ್ರತಿ ಜಿಲ್ಲೆಯಿಂದ ಪ್ರಶಿಕ್ಷಣ ತಂಡವನ್ನು ನಿಯೋಜಿಸಲಾಗಿದೆ. ರಾಜ್ಯಾದ್ಯಂತ 1,156 ಸ್ಥಳಗಳಲ್ಲಿ ಪ್ರಶಿಕ್ಷಣ ವರ್ಗ ನಡೆಯಲಿದೆ. ಒಂದು ಪ್ರಶಿಕ್ಷಣದಲ್ಲಿ ಸರಾಸರಿ 200 ಪದಾಧಿಕಾರಿಗಳು ಭಾಗವಹಿಸಲಿದ್ದು, ಸುಮಾರು 2 ಲಕ್ಷಕ್ಕೂ ಹೆಚ್ಚು ಪದಾಧಿಕಾರಿಗಳಿಗೆ ಪ್ರಶಿಕ್ಷಣ ನೀಡಲಿದ್ದೇವೆ ಎಂದು ಮಾಹಿತಿ ನೀಡಿದರು. ಬಿಜೆಪಿ ಸಂಘಟನಾ ಪರ್ವ ಪ್ರಾರಂಭವಾಗಿದೆ. ಸದಸ್ಯತ್ವ ಅಭಿಯಾನ, ಸಕ್ರಿಯ ಸದಸ್ಯರ ಅಭಿಯಾನ, ಬೂತ್, ಮಂಡಲ, ಜಿಲ್ಲಾ ಅಧ್ಯಕ್ಷರಿಂದ ರಾಷ್ಟ್ರೀಯ ಅಧ್ಯಕ್ಷರವರೆಗೆ ಸಂಘಟನಾ ಪರ್ವ ನಡೆಯುತ್ತದೆ. ನಿತಿನ್ ನವೀನ್ ಅವರು ರಾಷ್ಟ್ರೀಯ ಅಧ್ಯಕ್ಷರಾದ ತಕ್ಷಣ ಪಂಡಿತ್ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನಕ್ಕೆ ಫೆ. 5ರಂದು ಚಾಲನೆ ಕೊಟ್ಟಿದ್ದಾರೆ ಎಂದರು.

ಪಕ್ಷದ ವಿಚಾರವಾಗಿ ದಿಲ್ಲಿಗೆ ಮಾಹಿತಿ

ಪುಟ 1➡ ಮಹದೇವಪ್ಪ ಅವರ ಹೇಳಿಕೆ ಹೊರತಾಗಿ ಬೇರೆ ಯಾವುದೇ ಚರ್ಚೆ ಇಲ್ಲ. ಅವರಿಗೆ ಸಿಎಂ ಬದಲಾವಣೆ ಮಾಹಿತಿ ಇರಬಹುದು. ಆದರೆ ಆ ವಿಚಾರವಾಗಿ ನನಗೆ ಯಾವುದೇ ಮಾಹಿತಿ ಇಲ್ಲ ಎಂದರು.

ನಾನು, ಸತೀಶ್ ಜಾರಕಿಹೊಳಿ ಸಮಾನಮನಸ್ಕರು: ಜಾರಕಿಹೊಳಿ ಅವರು ನಮ್ಮ ಹಿರಿಯ ನಾಯಕರು. ನನ್ನ ಜತೆ ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ನಾವು ವಾರಕ್ಕೊಮ್ಮೆ ಮಾತನಾಡುತ್ತಿರುತ್ತೇವೆ. ನಾವು ಸಮಾನ ಮನಸ್ಕರು. ಅವರಿಗೂ ಪಕ್ಷದ ಬಗ್ಗೆ ಅಪಾರವಾದ ಚಿಂತನೆ ಇದೆ. ನಮ್ಮ ಸರ್ಕಾರವನ್ನು ಮತ್ತೆ ಅಧಿಕಾರಕ್ಕೆ ತರಲು ನಾವೆಲ್ಲ ಯೋಜನೆ ತಯಾರು ಮಾಡುತ್ತಿದ್ದೇವೆ ಎಂದರು.

ಶಾಸಕರು ಪತ್ರ ಬರೆದರೆ ತಪ್ಪೇನು?: ಸಚಿವ ಸ್ಥಾನ ನೀಡಲು ನೂತನ ಶಾಸಕರು ಬರೆದ ಪತ್ರದ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದೇನೆ. ನನಗೆ ಅವರ ಪತ್ರ ತಲುಪಿಲ್ಲ. ಎಲ್ಲರಿಗೂ ಮಂತ್ರಿಯಾಗುವ ಆಸೆ ಇರುತ್ತದೆ. ಮೋದಿ ಅವರು ಶಾಸಕರಾಗದೇ ಸಿಎಂ ಆಗಲಿಲ್ಲವೇ. ಅವರು ಕೇಳುವುದರಲ್ಲಿ ತಪ್ಪೇನಿಲ್ಲ. ಮೊದಲ ಬಾರಿಗೆ ಶಾಸಕರಾದಾಗ ಮಂತ್ರಿಯಾದವರಲ್ಲಿ ನಾನೂ ಒಬ್ಬ. ಹೊಸ ಪೀಳಿಗೆ ಬೆಳೆಯಬೇಕು. ನಾವು ಎಷ್ಟು ದಿನ ಗೂಟ ಹೊಡೆದುಕೊಂಡು ಕೂರಲು ಸಾಧ್ಯ? ನಾನು ಸಚಿವನಾಗಿ 36 ವರ್ಷವಾಗಿದೆ. ಹೊಸ ಪೀಳಿಗೆ, ಹೊಸ ಆಲೋಚನೆಗಳು ಬರಬೇಕು. ಹೊಸಬರು ಸಂಪುಟಕ್ಕೆ ಬರಬೇಕು. ಹೊಸಬರನ್ನು ನಾವು ತಯಾರು ಮಾಡಬೇಕಲ್ಲ. ಈ ಬಗ್ಗೆ ಪಕ್ಷ ತೀರ್ಮಾನಿಸುತ್ತದೆ ಎಂದರು.

ಹುದ್ದೆ ಭರ್ತಿ ಹೋರಾಟ

ಪುಟ 1➡ ಬಳಿಕ ಜ್ಯುಬ್ಲಿ ವೃತ್ತಕ್ಕೆ ಬಂದು ಪ್ರತಿಭಟನೆ ನಡೆಸಿದರು.

ಡಿಸಿಗೂ ಡೋಂಟ್ ಕೇರ್: ಜ್ಯುಬ್ಲಿ ವೃತ್ತಕ್ಕೆ ಬಂದ ಜಿಲ್ಲಾಧಿಕಾರಿ ಸ್ನೇಹಲ್ ಆರ್, ಬೇಡಿಕೆ ಬಗ್ಗೆ ಸರ್ಕಾರಕ್ಕೆ ಮನವಿ ಮಾಡಲಿದ್ದು, ಪ್ರತಿಭಟನೆ ಕೈಬಿಡಲು ವಿನಂತಿಸಿದರು. ಇದಕ್ಕೆ ಒಪ್ಪದ ಪ್ರತಿಭಟನಾಕಾರರು ಧರಣಿ ಕುಳಿತಾಗ ಕಾಂತರಾಜು ಅವರನ್ನು ಬಂಧಿಸಿ, ಕರೆದೊಯ್ದರು. ನಂತರ ಲಘು ಲಾಠಿ ಪ್ರಹಾರ ಮೂಲಕ ಪ್ರತಿಭಟನಾಕಾರರನ್ನು ಚದುರಿಸಿ, ವಾಹನಗಳ, ಸಾರ್ವಜನಿಕರ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಯಿತು.

ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಕುರ್ಚಿ: ಅಶೋಕ

ಪುಟ 1➡ **ಜೈಲ್ ಭರೋ ಚಳವಳಿ:** ಇದು ಕೇವಲ ಧಾರವಾಡದ ಪ್ರತಿಭಟನೆಯಲ್ಲ, ರಾಜ್ಯದ ಉದ್ಯೋಗಾಕಾಂಕ್ಷಿಗಳ ಕಿಚ್ಚು. ತಕ್ಷಣವೇ 2.50 ಲಕ್ಷ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಬೇಕು. ಇಲ್ಲವಾದಲ್ಲಿ ಬಿಜೆಪಿ ನೇತೃತ್ವದಲ್ಲಿ ಜೈಲ್ ಭರೋ ಚಳವಳಿ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು.

ಕೈ ಕೊಟ್ಟ ಸರ್ಕಾರ: ವಿಧಾನಸಭೆ ವಿಪಕ್ಷದ ಉಪನಾಯಕ ಅರವಿಂದ ಬೆಲ್ಲದ ಮಾತನಾಡಿ, ಲಕ್ಷ ಹುದ್ದೆ ಭರ್ತಿಗೆ ಆಶ್ವಾಸನೆ ನೀಡಿದ ಕೈ ಸರ್ಕಾರ ನಿರುದ್ಯೋಗ ಯುವಕರಿಗೆ ಕೈ ಕೊಟ್ಟಿದೆ. ಸರ್ಕಾರ ಆರ್ಥಿಕ ದಿವಾಳಿಯಾಗಿದೆ ಎಂಬುದಕ್ಕೆ ನೇಮಕಾತಿ ಪ್ರಕ್ರಿಯೆ ವಿಳಂಬಕ್ಕೆ ಸಾಕ್ಷಿ. ಸಂಬಳ ನೀಡಲು ಸರ್ಕಾರದಲ್ಲಿ ಹಣವಿಲ್ಲ. ಹೀಗಾಗಿ ಹುದ್ದೆಗಳ ಭರ್ತಿಗೆ ಮೀನಾಮೇಷ ಎಣಿಸುತ್ತಿದೆ. ನೇಮಕಾತಿ ಮಾಡುವವರೆಗೆ ಹೋರಾಟ ನಿಲ್ಲುವುದಿಲ್ಲ ಎಂದೆಚ್ಚರಿಸಿದರು.

ಯುವಕರು ಬೀದಿಪಾಲು: ವಿಧಾನ ಪರಿಷತ್ ವಿಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಯುವಕರು ಬೀದಿ ಪಾಲಾಗಿದ್ದಾರೆ. ರಾಜ್ಯದ ನಿರುದ್ಯೋಗಿಗಳ ನೋವು ಸರ್ಕಾರಕ್ಕೆ ಕೇಳಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಮಗೆ ಭಿಕ್ಷೆ ಬೇಡ: ಅಖಿಲ ಕರ್ನಾಟಕ ವಿದ್ಯಾರ್ಥಿ ಸಂಘಟನೆ ರಾಜ್ಯಾಧ್ಯಕ್ಷ ಹಾಗೂ ಹೋರಾಟದ ರೂವಾರಿ ಕಾಂತರಾಜು ಮಾತನಾಡಿ, ಸರ್ಕಾರ ಯುವನಿಧಿ ಹೆಸರಲ್ಲಿ 2000-3000 ಸಾವಿರ ಭಿಕ್ಷೆ ಹಾಕುತ್ತಿದೆ. ನಮಗೆ ಭಿಕ್ಷೆ ಬೇಡ, ಉದ್ಯೋಗ ನೀಡಿ. 2.50 ಲಕ್ಷ ಹುದ್ದೆಗಳ ಭರ್ತಿಗೆ ಏಕಿಷ್ಟು ಮೀನಾಮೇಷ? ನಮ್ಮ ಹಕ್ಕಿನ ಉದ್ಯೋಗ ಕೊಡಿ. 15 ದಿನದೊಳಗೆ ಹುದ್ದೆಗಳ ಭರ್ತಿಗೆ ಮುಂದಾಗದಿದ್ದರೆ, ಧಾರವಾಡದಿಂದ ಬೆಂಗಳೂರಿನವರೆಗೆ ಪಾದಯಾತ್ರೆ ನಡೆಸಿ, ಅನಿರ್ದಿಷ್ಟಾವಧಿ ಧರಣಿ ನಡೆಸುವುದಾಗಿ ಎಚ್ಚರಿಸಿದರು.

ಖಾಲಿ ಹುದ್ದೆ ಭರ್ತಿಗೆ ಸಿಎಂ ವಾಗ್ದಾನ

ಪುಟ 1➡ ರಾಜ್ಯದ ಸರ್ಕಾರಿ ಉದ್ಯೋಗಾಕಾಂಕ್ಷಿಗಳು ಅನುಭವಿಸುತ್ತಿರುವ ಆತಂಕ, ನಿರಾಶೆ ಮತ್ತು ಅನಿಶ್ಚಿತತೆಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಯುವಜನರ ಆತಂಕ ಅಹವಾಲುಗಳು ನನ್ನನ್ನು ತಲುಪಿವೆ. ಅವರ ಭವಿಷ್ಯ ನಮಗೂ ಅತ್ಯಂತ ಮಹತ್ವದ್ದಾಗಿದೆ ಎಂದಿದ್ದಾರೆ. ಒಳ ಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣಗಳು ನಡೆಯುತ್ತಿದ್ದ ಕಾರಣದಿಂದ ಹಲವು ನೇಮಕಾತಿ ಪ್ರಕ್ರಿಯೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತು. ಸಂವಿಧಾನದ ಪಾಲನೆ ಮತ್ತು ಸಾಮಾಜಿಕ ನ್ಯಾಯಕ್ಕೆ ಬದ್ಧವಾದ ಸರ್ಕಾರವಾಗಿ, ಸಾವಿರಾರು ಅಭ್ಯರ್ಥಿಗಳ ವೃತ್ತಿಜೀವನಕ್ಕೆ ಧಕ್ಕೆ ತರುವಂತಹ ತ್ವರಿತ ನಿರ್ಧಾರಗಳನ್ನು ತೆಗೆದುಕೊಳ್ಳದೆ ಕಾನೂನಿನ ಚೌಕಟ್ಟಿನೊಳಗೆ ಜವಾಬ್ದಾರಿಯುತವಾಗಿ ವರ್ತಿಸಲು ನಾವು ನಿರ್ಧರಿಸಿದ್ದೇವೆ ಎಂದು ಹೇಳಿದ್ದಾರೆ.

ಬಿಜೆಪಿ ಬ್ಯಾನರ್ ದಹನ!

ಜಯನಗರದ ವಿವಿಧೆಡೆ ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಹಾಕಲಾಗಿದ್ದ ಪ್ರಲ್ಹಾದ್ ಜೋಶಿ, ಅರವಿಂದ ಬೆಲ್ಲದ, ಬಸವರಾಜ ಬೊಮ್ಮಾಯಿ ಭಾವಚಿತ್ರವುಳ್ಳ ಬ್ಯಾನರ್‌ನ್ನು ಕೆಲ ಎಡಪಂಥೀಯ ಸಂಘಟನೆಗಳ ಪ್ರಮುಖರು ಹರಿದು ದಹನ ಮಾಡಿದ ಘಟನೆ ನಡೆಯಿತು. ಜಯನಗರ ಹತ್ತಿರ, ಮುಚಗನ್ ಕಂಪೌಂಡ್, ಜ್ಯುಬ್ಲಿ ವೃತ್ತದ ಹತ್ತಿರ ಸಹಸ್ರಾರು ಸಂಖ್ಯೆಯಲ್ಲಿ ಸೇರಿದ ಉದ್ಯೋಗ ಆಕಾಂಕ್ಷಿಗಳನ್ನು ಉದ್ದೇಶಿಸಿ ಆರ್.ಅಶೋಕ, ಚಲವಾದಿ ನಾರಾಯಣಸ್ವಾಮಿ, ಭರತ್ ಬೊಮ್ಮಾಯಿ ಹಾಗೂ ಅರವಿಂದ ಬೆಲ್ಲದ ಮಾತನಾಡಲು ಮುಂದಾದ ವೇಳೆಯಲ್ಲೂ ಕೆಲವರು ಗೋ ಬ್ಯಾಕ್ ಎಂಬ ಘೋಷಣೆ ಮೊಳಗಿಸಿದರು. ಬೇಸತ್ತ ಚಲವಾದಿ ನಾರಾಯಣಸ್ವಾಮಿ, ಅಶೋಕ ಅಲ್ಲಿಂದ ಮರಳಿದರು.

ಕೇರಳ ಇನ್ನು ಕೇರಳಂ

ಪುಟ 1➡ ಚುನಾವಣೆಗಳು ನಡೆಯುತ್ತವೆ, ಆದರೆ ದೇಶದ ಹಿತಾಸಕ್ತಿಗೆ ಸಂಬಂಧಿ ಸಿದ ಎಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಿದರು.

ಕೇರಳ ವಿಧಾನಸಭೆಯು 2024ರ ಜೂನ್ 24ರಂದು ಕೇರಳದ ಹೆಸರನ್ನು 'ಕೇರಳಂ' ಎಂದು ಬದಲಾಯಿಸುವ ನಿರ್ಣಯವನ್ನು ಅಂಗೀಕರಿಸಿತ್ತು. ನಮ್ಮ ರಾಜ್ಯದ ಹೆಸರು ಮಲಯಾಳಂ ಭಾಷೆಯಲ್ಲಿ 'ಕೇರಳಂ' ಆಗಿದೆ. 1956ರ ನ.1ರಂದು ಭಾಷಾ ಆಧಾರದ ಮೇಲೆ ರಾಜ್ಯಗಳು ರಚಿಸಲ್ಪಟ್ಟವು. ಕೇರಳ ಪಿರವಿ ದಿನವೂ ನ.1ರಂದು ಆಚರಿಸಲಾಗುತ್ತದೆ. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಕಾಲದಿಂದಲೇ ಮಲಯಾಳಂ ಭಾಷೆ ಮಾತನಾಡುವ ಜನರಿಗಾಗಿ ಏಕೀಕೃತ ಕೇರಳ ರಾಜ್ಯ ರಚನೆಗೆ ಬಲವಾದ ಬೇಡಿಕೆ ಇತ್ತು. ಆದರೆ ಸಂವಿಧಾನದ ಪ್ರಥಮ ಅನುಕ್ರಮಣದಲ್ಲಿ ನಮ್ಮ ರಾಜ್ಯದ ಹೆಸರು 'ಕೇರಳ' ಎಂದು ದಾಖಲಿಸಲಾಗಿದೆ. ಆದ್ದರಿಂದ ಸಂವಿಧಾನದ ವಿಧಿ 3ರ ಪ್ರಕಾರ ಹೆಸರನ್ನು 'ಕೇರಳಂ' ಎಂದು ಬದಲಾಯಿಸಲು ಕೇಂದ್ರ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಈ ಸದನವು ಏಕಮತದಿಂದ ಮನವಿ ಮಾಡುತ್ತದೆ ಎಂದು ಕೇರಳ ವಿಧಾನಸಭೆಯ ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ದೂರು, ಪ್ರತಿದೂರು ಒಬ್ಬರೇ ತನಿಖಾಧಿಕಾರಿ ತನಿಖೆ ನಡೆಸಿ

ಬೆಂಗಳೂರು: ಒಂದೇ ಘಟನೆಗೆ ಸಂಬಂಧಿಸಿದ ದೂರು ಮತ್ತು ಪ್ರತಿದೂರುಗಳನ್ನು ಒಬ್ಬರೇ ತನಿಖಾಧಿಕಾರಿ ತನಿಖೆ ನಡೆಸಬೇಕು ಎಂಬ ನಿಯಮವನ್ನು ಕಡ್ಡಾಯವಾಗಿ ಪಾಲಿಸುವಂತೆ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಈ ನಿಯಮ ಉಲ್ಲಂಘನೆಯಾದಲ್ಲಿ ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಬೇಕಾಗುತ್ತದೆ ಎಂದು ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠವು ಮಂಗಳವಾರ ಎಚ್ಚರಿಸಿದೆ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಗ್ರಾಮೀಣ ಠಾಣೆಯಲ್ಲಿ ದಾಖಲಾಗಿದ್ದ ಕೊಲೆ ಯತ್ನ ಪ್ರಕರಣವೊಂದರ ರದ್ದತಿ ಕೋರಿ ಸಿದ್ದಪ್ಪ ಎಂಬವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಾಲಯ ಈ ಅಸಮಾಧಾನ ವ್ಯಕ್ತಪಡಿಸಿತು.

ಪ್ರಕರಣದಲ್ಲಿ ದೂರು ಮತ್ತು ಪ್ರತಿದೂರಿನ ತನಿಖೆಗೆ ಇಬ್ಬರು ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸಿರುವುದನ್ನು ಗಮನಿಸಿದ ಪೀಠವು, ಸರ್ಕಾರದ ಈ ಕ್ರಮ ಸರಿಯಲ್ಲ ಎಂದು ತಿಳಿಸಿ, ದೂರು–ಪ್ರತಿದೂರಿಗೆ ಒಬ್ಬರೇ ತನಿಖಾಧಿಕಾರಿ ಇರಬೇಕು ಎಂಬ ಬಗ್ಗೆ ಕಾನೂನು ಸ್ಪಷ್ಟವಾಗಿದ್ದರೂ ಮತ್ತು ಈ ಕುರಿತು ಸರ್ಕಾರ ಈಗಾಗಲೇ ಸುತ್ತೋಲೆ ಹೊರಡಿಸಿದೆ ಎಂದು ಪೀಠ ತಿಳಿಸಿದೆ.

ಫ್ಲೈ-ಟ್ಯಾಕ್ಸಿ ಸೇವೆ ಪರಿಶೀಲನೆ

ಬೆಂಗಳೂರು: ಫ್ಲೈ-ಟ್ಯಾಕ್ಸಿ ಸೇವೆಗೆ ಸಂಬಂಧಿಸಿದಂತೆ ಸಮರ್ಪಕ ನೀತಿ ರೂಪಿಸಿ, ಇಲ್ಲೂ ಅಂತಹ ಸೇವೆಯನ್ನು ಆರಂಭಿಸಬಹುದು ಎಂದು ಉದ್ಯಮಿಗಳು ಹೇಳಿದ್ದಾರೆ. ಇದನ್ನು ಗಂಭೀರವಾಗಿ ಪರಿಶೀಲಿಸಲಾಗುವುದು ಸಚಿವ ಎಂ.ಬಿ. ಪಾಟೀಲ ಹೇಳಿದರು.

ನಾನಾ ಕೈಗಾರಿಕಾ ವಲಯಗಳ ಭವಿಷ್ಯದ ಹಾದಿ ಹೇಗಿರಬೇಕು ಮತ್ತು ಸರ್ಕಾರವು ಈ ನಿಟ್ಟಿನಲ್ಲಿ ತೆಗೆದುಕೊಳ್ಳಬೇಕಿರುವ ಕ್ರಮಗಳ ಸ್ವರೂಪ ಯಾವುದಾಗಿರಬೇಕು ಎಂದು



ತಿಳಿದುಕೊಳ್ಳುವ ಬಗ್ಗೆ ಸಚಿವರು ಸೋಮವಾರ ಖನಿಜ ಭವನದಲ್ಲಿ ಸಭೆ ನಡೆಸಿದರು. ಏರೋಸ್ಪೇಸ್, ರಕ್ಷಣೆ, ಮಶೀನ್ ಟೂಲ್ಸ್, ಆಟೋ, ಇ.ವಿ, ಮತ್ತು ಪರಿಸರಸ್ನೇಹಿ ಇಂಧನ ವಲಯಗಳ ವಿಷನ್ ಗ್ರೂಪ್‌ಗಳ ಮಹತ್ವದ ಸಭೆಯಲ್ಲಿ ಪ್ರಮುಖ್ಯ ಉದ್ಯಮಿಗಳು ಹಾಗೂ ಅವರ ಪ್ರತಿನಿಧಿಗಳು ಭಾಗವಹಿಸಿದ್ದರು. ಕೆಲವರು ವರ್ಚುವಲ್ ಮೂಲಕ ಭಾಗವಹಿಸಿದ್ದರು.

ಇಡೀ ದೇಶದ ವೈಮಾಂತರಿಕ್ಷ ಮತ್ತು ರಕ್ಷಣಾ ಉದ್ಯಮಗಳ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಜಪಾನಿನಲ್ಲಿ 2028ರ ಹೊತ್ತಿಗೆ ಸುಝುಕಿ ಮತ್ತು ಟೊಯೊಟಾ ಕಂಪನಿಗಳು ಏರಿಯಲ್ ಟ್ಯಾಕ್ಸಿ ಸೇವೆ ಆರಂಭಿಸುತ್ತಿವೆ. ಅದಕ್ಕೆ ಬೆಂಗಳೂರಿನ ಸಾಸ್ಮೋಸ್ ಕಂಪನಿಯೇ ವಿದ್ಯುತ್ ಸಾಧನ-ಸಲಕರಣೆಗಳನ್ನು ಪೂರೈಸುತ್ತಿದೆ ಎಂದರು. ಕರ್ನಾಟಕವು ರಕ್ಷಣಾ ಇಲೆಕ್ಟ್ರಾನಿಕ್ ಉತ್ಪನ್ನಗಳ ಉತ್ಪಾದನೆಯ ರಾಜಧಾನಿಯಾಗಬೇಕು. ಇದಕ್ಕಾಗಿ 200 ಎಕರೆಯಲ್ಲಿ ಪ್ರತ್ಯೇಕ ಪಾರ್ಕ್ ಸ್ಥಾಪಿಸಬೇಕು. ಇದೇ ರೀತಿಯಲ್ಲಿ 100 ಎಕರೆಯಲ್ಲಿ ಏವಿಯಾನಿಕ್ಸ್ ಮತ್ತು ಸೆನ್ಸರ್ ಪಾರ್ಕ್ ಆರಂಭಿಸಬೇಕು ಎಂಬ ಚಿಂತನೆಗಳ ಪ್ರಸ್ತಾಪವಾಗಿದೆ. ವಿಶೇಷ ಹೂಡಿಕೆ ವಲಯ ಅಸ್ತಿತ್ವಕ್ಕೆ ಬಂದ ಮೇಲೆ ಇವುಗಳನ್ನು ಜಾರಿಗೊಳಿಸಲಾಗುವುದು. ಇದಕ್ಕೆ ಬೇಕಾದ ಭೂಮಿಗೆ ಯಾವ ತೊಂದರೆಯೂ ಇಲ್ಲ ಎಂದರು.

ರಾಜ್ಯದಲ್ಲಿ ಮಶೀನ್ ಟೂಲ್ಸ್ ಕ್ಷೇತ್ರದಲ್ಲಿ ವಾರ್ಷಿಕ 36,500 ಕೋಟಿ ರೂ. ವಹಿವಾಟು ನಡೆದಿದ್ದು, ಒಳ್ಳೆಯ ಬೆಳವಣಿಗೆ ಇದೆ. ಇದರ ಉತ್ತೇಜನಕ್ಕೆಂದೇ ನಾವು ಬೃಹತ್ ಪ್ರಮಾಣದ ಪ್ರದರ್ಶನ ಮೇಳಗಳನ್ನು ನಡೆಸಿದ್ದೇವೆ. ಇದಾದ ಮೇಲೆ ಈ ಕ್ಷೇತ್ರದಲ್ಲಿ ವಿಪರೀತ ಬೇಡಿಕೆ ಕಂಡುಬರುತ್ತಿದೆ. ಬೃಹತ್ ಯಂತ್ರಗಳಿಗೆ ಬೇಕಾದ ಕಂಟ್ರೋಲ್ ಸಿಸ್ಟಂ ನಮ್ಮಲ್ಲೇ ಇರುವಂತೆ ನಾವು ಸುಧಾರಿಸಿಕೊಳ್ಳಬೇಕಿದೆ ಎಂದು ಹೇಳಿದ್ದಾರೆ.



ಬಳ್ಳಾರಿ ನಗರದ ಅಧಿದೇವತೆ ಶ್ರೀ ಕನಕ ದುರ್ಗಮ್ಮ ದೇವಿ ಸಿಡಿಬಂಡಿ ರಥೋತ್ಸವ ಮಂಗಳವಾರ ಸಂಜೆ ಲಕ್ಷಾಂತರ ಭಕ್ತರ ಮಧ್ಯೆ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಉತ್ಥಾನ ಸ್ಪರ್ಧೆ: ಪೂಜಾ ಪ್ರಥಮ

ಬೆಂಗಳೂರು: ಉತ್ಥಾನ ಮಾಸಪತ್ರಿಕೆಯು ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ 2024ನೇ ಸಾಲಿನ ರಾಜ್ಯಮಟ್ಟದ ವಾರ್ಷಿಕ ಪ್ರಬಂಧ ಸ್ಪರ್ಧೆಯ ಫಲಿತಾಂಶ ಪ್ರಕಟಗೊಂಡಿದ್ದು, ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪೂಜಾ ಮಹಾದೇವ ಸಾರವಾಡ ಅವರು ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ.


ಪೂಜಾ


ಕಾವೇರಿ


ಸಹನಾ

ಶತಮಾನ ಪೂರೈಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘ: ವಿಚಾರ, ವಿಶೇಷತೆ ಮತ್ತು ಕೊಡುಗೆ' ಎಂಬ ವಿಷಯದ ಕುರಿತು ನಡೆದ ಈ ಸ್ಪರ್ಧೆಯಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ನೂರಾರು ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು.

ವಿಜೇತರ ವಿವರ: ಪ್ರಥಮ ಬಹುಮಾನ 15,000 ರೂ. ಇದ್ದು, ಬೆಂಗಳೂರು ಮಹಾರಾಣಿ ಕ್ಲಸ್ಟರ್ ವಿವಿಯ ಪೂಜಾ ಮಹಾದೇವ ಸಾರವಾಡ (ಎಂ.ಎ.) ಗಳಿಕೊಂಡಿದ್ದಾರೆ. ದ್ವಿತೀಯ ಬಹುಮಾನ 12,000 ರೂ ಇದ್ದು, ಬೆಂಗಳೂರು ಜ್ಯೋತಿ ನಿವಾಸ ಕಾಲೇಜಿನ ಸಹನಾ ಎಂ. (ಎಂ.ಎಸ್ಸಿ. ಮನೋವಿಜ್ಞಾನ) ಅವರು ಮತ್ತು ತೃತೀಯ ಬಹುಮಾನ 10,000 ರೂ. ಇದ್ದು, ಬೆಳಗಾವಿಯ ಸುಂದರಬಾಯಿ ಬಿ. ಪಾಟೀಲ್ ಮಹಿಳಾ ಶಿಕ್ಷಣ ಮಹಾವಿದ್ಯಾಲಯ ಕಾವೇರಿ ಎಂ. ಹೆಗಡೆ (ಬಿ.ಎಡ್.) ಪಡೆದುಕೊಂಡಿದ್ದಾರೆ. ರಾಮನಗರದ ಯೋಗೇಶ್ವರಿ ಎಸ್, ಬಾದಾಮಿಯ ಪವಿತ್ರಾ ಸ. ಜೇವೂಜಿ, ಕುಮಟಾದ ವೈಶಾಲಿ ಉಮೇಶ್ ಗೊಂಡ, ಭಟ್ಕಳದ ಶ್ರೀರಕ್ಷಾ ಗಜಾನನ ಹೆಬ್ಬಾರ, ಧಾರವಾಡದ ಶಿವಾನಂದ ಎಸ್. ಲಿಂಗದಳ್ಳಿ, ಶಿರಸಿಯ ರಿತೇಶ್ ಆರ್. ಶಾನಭೋಗ್, ಮೈಸೂರಿನ ದೀಕ್ಷಿತಾ, ಕುಮಟಾದ ವಿನಾಯಕ ರಮೇಶ ನಾಯ್ಕ್, ಉಜಿರೆಯ ಉಜ್ವಲ್ ಮತ್ತು ಮುಲ್ಕಿಯ ಅಕ್ಷತಾ ಪೋಮಸಿಂಗ್ ಚೌವ್ಹಾಣ್ ಅವರು ಸಮಾಧಾನಕರ ಬಹುಮಾನಕ್ಕೆ ಪಾತ್ರರಾಗಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭ: ಬಹುಮಾನ ವಿತರಣಾ ಕಾರ್ಯಕ್ರಮವು 2026-ಮಾರ್ಚ್ 7 ರದಂದು ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ನಡೆಯಲಿದೆ ಎಂದು ಉತ್ಥಾನ ತಿಳಿಸಿದೆ.

ಕಿರುಸುದ್ದಿ

ಹಿಂದು ಮನೆಗಳ ಮೇಲೆ ಕಲ್ಲು: ಮುಸ್ಲಿಂ ಬಾಲಕರ ಸೆರೆ

ಭಟ್ಕಳ: ತಾಲೂಕಿನ ಮುರುಡೇಶ್ವರ ಬೈಲೂರು ಮಾರ್ಗದ ತೆಂಗಾರ್ ರಸ್ತೆಯ ಅಕ್ಕಪಕ್ಕದ ಕೆಲವು ಹಿಂದು ಮನೆಗಳ ಮೇಲೆ ಬೈಕ್‌ನಲ್ಲಿ ಬಂದ ಮುಸ್ಲಿಂ ಅಪ್ರಾಪ್ತ ಬಾಲಕರು ಕಲ್ಲು ತೂರಾಟ ನಡೆಸಿದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸ್ ಇಲಾಖೆ 7 ಮಂದಿ ಅಪ್ರಾಪ್ತ ಬಾಲಕರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ ಸೋಮವಾರ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದ ಹಿಂದೂ ಸಂಘಟನೆಯ ಕಾರ್ಯಕರ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು.

ಘಟನೆ ಏನು?: ಸೋಮವಾರ ರಾತ್ರಿ ಬೈಲೂರಿನ ತೆಂಗಾರಕ್ಕೆ ಬೈಕ್‌ನಲ್ಲಿ ಹೋಗಿದ್ದ ಸುಮಾರು 7 ಜನ ಮುಸ್ಲಿಂ ಅಪ್ರಾಪ್ತ ಬಾಲಕರು ಏಕಾಏಕಿ ಹಿಂದುಗಳ ಮನೆಗಳತ್ತ ಕಲ್ಲು ತೂರಿ ಕೆಲ ಹೊತ್ತು ಆತಂಕದ ವಾತಾವರಣ ಸೃಷ್ಟಿಸಿ ದ್ದರು. ಕಲ್ಲು ತೂರಾಟದಿಂದ ಕೆಲ ಮನೆಗಳ ಕಿಟಕಿ ಗಾಜುಗಳು ಹಾನಿಗೊಂಡಿತ್ತು. ಘಟನೆಯ ವೇಳೆ ಸ್ಥಳೀಯರು ಸಮಯ ಪ್ರಜ್ಞೆಯಿಂದ ಇಬ್ಬರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಈ ಘಟನೆಯಿಂದ ಕೆಲ ಹೊತ್ತು ಬೈಲೂರು ಮತ್ತು ಮುರುಡೇಶ್ವರದಲ್ಲಿ ಬಿಗುವಿನ ವಾತಾವರಣ ಉಂಟಾಗಿತ್ತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು ತನಿಖೆ ನಡೆಸಿ ಒಟ್ಟು 7 ಅಪ್ರಾಪ್ತ ಯುವಕರನ್ನು ಬಂಧಿಸಿದ್ದಾರೆ.

2.39 ಕೋಟಿ ರೂ. ಮೌಲ್ಯದ ಮಾದಕವಸ್ತು ವಶ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ 2.39 ಕೋಟಿ ರೂ. ಮೌಲ್ಯದ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದಾರೆ. ವಿದೇಶದಿಂದ ಆಗಮಿಸಿದ್ದ ಇಬ್ಬರು ಪ್ರಯಾಣಿಕರು ತಮ್ಮ ಲಗೇಜ್ ಬ್ಯಾಗ್‌ನಲ್ಲಿ ಅಡಗಿಸಿಟ್ಟು ತಂದಿದ್ದ ಹೈಡ್ರೋಪೋನಿಕ್ ಗಾಂಜಾವನ್ನು ಅಧಿಕಾರಿಗಳು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಬ್ಯಾಂಕಾಕ್‌ನಿಂದ ಬಂದಿದ್ದ ಪ್ರಯಾಣಿಕನ ಲಗೇಜ್ ತಪಾಸಣೆ ನಡೆಸಿದಾಗ ಸುಮಾರು 8 ಕೆ.ಜಿ ತೂಕದ ಹೈಡ್ರೋಪೋನಿಕ್ ಗಾಂಜಾ ಪತ್ತೆಯಾಗಿದ್ದು, ಇದರ ಅಂತರರಾಷ್ಟ್ರೀಯ ಮಾರುಕಟ್ಟೆ ಮೌಲ್ಯ ಅಂದಾಜು 2.8 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಇದೇ ವೇಳೆ ಹಾಂಕಾಂಗ್‌ನಿಂದ ಬಂದಿದ್ದ ಮತ್ತೊಬ್ಬ ಪ್ರಯಾಣಿಕನಿಂದ 31.5 ಲಕ್ಷ ರೂ. ಮೌಲ್ಯದ 900 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ. ಪ್ರಸ್ತುತ ಕಸ್ಟಮ್ಸ್ ಅಧಿಕಾರಿಗಳು ಇಬ್ಬರೂ ಆರೋಪಿಗಳನ್ನು ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ.

ಸುಬ್ರಹ್ಮಣ್ಯ ಭಟ್ ನಿಧನ

ಬೆಂಗಳೂರು: ಉದಯವಾಣಿ ಪ್ರಧಾನ ಸಂಪಾದಕ ರವಿಶಂಕರ್ ಭಟ್ ಅವರ ತಂದೆ ಕೆ.ಸುಬ್ರಹ್ಮಣ್ಯ ಭಟ್ (83) ಅವರು ಬೆಂಗಳೂರಿನಲ್ಲಿ ನಿಧನ ಹೊಂದಿದ್ದಾರೆ. ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ



ಅವರು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಇಹಲೋಕ ತ್ಯಜಿಸಿದರು. ಬನಶಂಕರಿಯ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಅವರು ಪತ್ನಿ ಸರಸ್ವತಿ, ಪುತ್ರ ರವಿಶಂಕರ್, ಸೊಸೆ-ಗಾಯಕಿ ನಾಗಚಂದ್ರಿಕಾ ಭಟ್ ಹಾಗೂ ಮೊಮ್ಮಕ್ಕಳಾದ ಅರ್ಣವ್ ಮತ್ತು ಅಚಿಂತ್ಯನನ್ನು ಅಗಲಿದ್ದಾರೆ. ಕೇರಳದ ಕಾಸರಗೋಡು ಜಿಲ್ಲೆಯ ಎಡನಾಡ್ ಗ್ರಾಮದ ಸುಬ್ರಹ್ಮಣ್ಯ ಭಟ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪಡೆದು ಉದ್ಯಮಿಯಾಗಿದ್ದರು. ಕಳೆದ ಕೆಲ ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿದ್ದರು.

ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಕರೆ

ಆತ್ಮನಿರ್ಭರಕ್ಕೆ ಕೈಜೋಡಿಸಿ

ಕಲಬುರಗಿ: ಈ ದೇಶ ನಿಮಗೆ ಬಹಳಷ್ಟು ನೀಡಿದೆ. ಈಗ ದೇಶಕ್ಕಾಗಿ ಏನಾದರೂ ಮಾಡುವುದು ನಿಮ್ಮ ಕರ್ತವ್ಯ. ನೀವು ಸಂಪಾದಿಸಿದ ಜ್ಞಾನದಿಂದ ಇತರೆ ವಿದ್ಯಾರ್ಥಿಗಳಿಗೆ ಸ್ಫೂರ್ತಿಯ ಮೂಲವಾಗುತ್ತೀರಿ ಮತ್ತು ಆತ್ಮನಿರ್ಭರ ಭಾರತದ ನಿರ್ಮಾಣದಲ್ಲಿ ಕೈಜೋಡಿಸುತ್ತೀರಿ ಎಂಬ ಆಶಾಭಾವನೆ ನನ್ನದಾಗಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಭಿಮತ ವ್ಯಕ್ತಪಡಿಸಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದ ಡಾ.ಬಿ. ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಗುಲಬರ್ಗಾ ವಿಶ್ವವಿದ್ಯಾಲಯದ 43ನೇ ಘಟಿಕೋತ್ಸವದಲ್ಲಿ ಸಾಧಕರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ಹಾಗೂ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ನೀವು ಪಡೆಯುವ ಶಿಕ್ಷಣವು ನಿಮ್ಮ ವೃತ್ತಿಜೀವನ ಯಶಸ್ವಿಯಾಗಿ ಸಾಧಿಸಲು ಸಹಾಯ ಮಾಡುವುದಲ್ಲದೆ, ನಿಮ್ಮ ಜೀವನವನ್ನು ಅರ್ಥ ಪೂರ್ಣವಾಗಿಸುತ್ತದೆ ಎಂಬುದು ನನ್ನ ದೃಢ ವಿಶ್ವಾಸ. ಜೀವನದ ಯಶಸ್ಸಿನಲ್ಲಿ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ. ನೀವು ಕಲಿತ ಶಿಕ್ಷಣ ಎಂದಿಗೂ ವ್ಯರ್ಥವಾಗುವುದಿಲ್ಲ ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣ ಸುಧಾರಣೆಗೆ ನಮ್ಮ ಸರ್ಕಾರ ಕಟಿಬದ್ಧವಾಗಿದ್ದು, ಕೆ.ಕೆ.ಆರ್.ಡಿ.ಬಿ. ಅನುದಾನದಿಂದ ಗ್ರಾಮೀಣ ಭಾಗದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆ ತೆರೆಯಲಾಗುತ್ತಿದೆ. ಬುನಾದಿ ಭದ್ರವಾದರೆ ಮಾತ್ರ ಮುಂದೆ ಬೆಳೆಯಲು ಸಾಧ್ಯ. ಹೀಗಾಗಿ ನರ್ಸರಿಯಿಂದ ಪಿಯುಸಿ ವರೆಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಕನ್ನಡ-ಆಂಗ್ಲ ಬೋಧನೆಯ ಪಬ್ಲಿಕ್ ಶಾಲೆ ಪ್ರಾರಂಭಿಸಲಾಗುತ್ತಿದೆ. ಅಂಗನವಾಡಿ ಶಿಕ್ಷಣದಲ್ಲೂ ಗಮನಾರ್ಹ ಬದಲಾವಣೆ ತರುತ್ತಿದ್ದೇವೆ ಎಂದ ಅವರು, ಮಾತೃ ಭಾಷೆ ಜೊತೆಗೆ ಜಾಗತಿಕವಾಗಿ ಉದ್ಯೋಗ ಪಡೆಯಲು, ಉತ್ತಮ ಸಂವಹನಕ್ಕೆ ಇಂಗ್ಲಿಷ್ ಕಲಿಯುವುದು ಅವಶ್ಯಕ ಎಂದರು. ಮಣಿಯ ಉನ್ನತ ರಕ್ಷಣಾ ತಂತ್ರಜ್ಞಾನ ಸಂಸ್ಥೆ (ಡೀಮ್ಡ್ ವಿಶ್ವವಿದ್ಯಾಲಯ) ವಿಶ್ರಾಂತ ಕುಲಪತಿ ಪ್ರೊ. ಎಲ್.ಎಂ. ಪಟ್ನಾಯಕ್, ಗುವಿವಿ ಕುಲಪತಿ ಪ್ರೊ.ಶಶಿಕಾಂತ ಎಸ್ ಉಡಿಕೇರಿ ಮಾತನಾಡಿದರು. ಕುಲಸಚಿವ ಪ್ರೊ.ರಮೇಶ್ ಲಂಡನಕರ್ ಭಾಗವಹಿಸಿದ್ದರು.



ಮೂವರು ಸಾಧಕರಿಗೆ ಗೌಡಾ ಪ್ರದಾನ

ವಿವಿಧ ಕ್ಷೇತ್ರದಲ್ಲಿನ ಸಾಧನೆಗೆ ಮಾಜಿ ಸಚಿವರಾದ ಪಿ.ಜಿ. ಆರ್.ಸಿಂಧ್ಯಾ, ಮುರುಗೇಶ ನಿರಾಣಿ ಹಾಗೂ ಸಾಮಾಜಿಕ ಸೇವೆಗಾಗಿ ಹೋರಾಟಗಾರ ಕೇದಾರಲಿಂಗಯ್ಯ ಹಿರೇಮಠ ಅವರಿಗೆ ರಾಜ್ಯಪಾಲರು ಗೌಡಾ ಪದವಿ ಪ್ರದಾನ ಮಾಡಿ ಗೌರವಿಸಿದರು. ಘಟಿಕೋತ್ಸವದಲ್ಲಿ 77 ವಿದ್ಯಾರ್ಥಿಗಳಿಗೆ 172 ಚಿನ್ನದ ಪದಕ,19,133 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕನ್ನಡ ವಿವಿ ನುಡಿಹಬ್ಬ: ಮೂವರಿಗೆ ನಾಡೋಜ ಗರಿ

ವಿಜಯನಗರ: ಹೊಸಪೇಟೆ ಸಮೀಪದ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಸಂಜೆ ನಡೆದ 34ನೇ ನುಡಿಹಬ್ಬದಲ್ಲಿ ಮೂವರು ಗಣ್ಯರಿಗೆ ನಾಡಿನ ಪ್ರತಿಷ್ಠಿತ ನಾಡೋಜ ಗೌರವ ಪದವಿ ಪ್ರದಾನ ಮಾಡಲಾಯಿತು. ಕನ್ನಡ ವಿವಿ ಆವರಣದ 'ನವರಂಗ' ಬಯಲು ರಂಗಮಂದಿರದಲ್ಲಿ ಮಂಗಳವಾರ ಸಂಜೆ ಆಯೋಜಿಸಿದ್ದ ನುಡಿ ಹಬ್ಬದಲ್ಲಿ ಬಹುಭಾಷೆ ಹಾಗೂ ಬಹುಶಿಸ್ತುಗಳ ತಜ್ಞರು, ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಪ್ರಕಾಂಡ ಪಂಡಿತ ಶತಾಯುಷಿ ಪ್ರೊ.ಸಿ.ಮಹಾದೇವಪ್ಪ, ಮಾರ್ಕ್ಸ್‌ವಾದಿ ಡಾ.ಜಿ.ರಾಮಕೃಷ್ಣ ಹಾಗೂ ದಕ್ಷ ಆಡಳಿತಗಾರ, ರಾಜ್ಯ ಮಾಹಿತಿ ಹಕ್ಕು ಆಯುಕ್ತ ಡಾ.ಎಚ್.ಸಿ.ಸತ್ಯನ್ ಅವರಿಗೆ ರಾಜ್ಯಪಾಲರೂ ಆಗಿರುವ ಕನ್ನಡ ವಿವಿ ಕುಲಾಧಿಪತಿ ಥಾವರ್‌ಚಂದ್ ಗೆಹ್ಲೋಟ್ 'ನಾಡೋಜ'(ಗೌರವ ಡಾಕ್ಟರೇಟ್) ಪದವಿ ಪ್ರದಾನ ಮಾಡಿದರು. ವಿಶ್ರಾಂತ ಪ್ರಾಧ್ಯಾಪಕ ಹಾಗೂ ಸಂಸ್ಕೃತಿ ಚಿಂತಕ ಡಾ.ಕೆ.ಮರುಳಸಿದ್ದಪ್ಪ ಅವರು ಘಟಿಕೋತ್ಸವ ಭಾಷಣ ಮಾಡಿದರು. ಕನ್ನಡ ವಿಶ್ವವಿದ್ಯಾಲಯದ ವಿವಿಧ ನಿಕಾಯಗಳ ಡೀನರು ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು ವೇದಿಕೆಯಲ್ಲಿದ್ದರು.

ರಸ್ತೆ ಅಭಿವೃದ್ಧಿಗೆ 5065 ಕೋಟಿ ರೂ. ಬಿಡುಗಡೆ

ಬೆಂಗಳೂರು: ನಗರದ ರಸ್ತೆ ಅಭಿವೃದ್ಧಿಗೆ ನಮ್ಮ ಸರ್ಕಾರ 5065 ಕೋಟಿ ರೂ. ವೆಚ್ಚ ಮಾಡುತ್ತಿದ್ದು, ಮುಖ್ಯಮಂತ್ರಿಗಳು 2 ಸಾವಿರ ಕೋಟಿ ಅನುದಾನ



ನೀಡಿದ್ದಾರೆ. 75% ಕಾಮಗಾರಿಗಳು ಮುಕ್ತಾಯವಾಗಿದ್ದು, ಏಪ್ರಿಲ್ ತಿಂಗಳಾಂತ್ಯದ ವೇಳೆಗೆ ಎಲ್ಲವೂ ಮುಕ್ತಾಯಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಸ್ತೆ ಸೇರಿದಂತೆ ಯಾವುದೇ ಕಾಮಗಾರಿಯ ಗುಣಮಟ್ಟದಲ್ಲಿ ರಾಜಿಯಾಗಬಾರದು. 10 ಲಕ್ಷ ಇ ಖಾತಾ ದಾಖಲೆ ವಿತರಣೆ ಕಾರ್ಯಕ್ರಮ ಮಾಡಲಾಗುವುದು. ಇನ್ನು 30 ಸಾವಿರ ಬೀದಿ ವ್ಯಾಪಾರಿಗಳು ನೋಂದಣಿ ಮಾಡಿಕೊಂಡಿದ್ದು, ಅವರ ವ್ಯಾಪಾರಕ್ಕೆ ವಾಹನ ನೀಡುವ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡಲಾಗುವುದು ಎಂದು ತಿಳಿಸಿದರು.

ಬಜೆಟ್ ಗೌಪ್ಯವಾಗಿರಬೇಕು: ಮುಖ್ಯಮಂತ್ರಿಗಳಾಗಲಿ, ಮಂತ್ರಿಗಳಾಗಲಿ ಬಜೆಟ್ ಯಾವ ರೀತಿ ಇರುತ್ತದೆ ಎಂದು ಮುಂಚಿತವಾಗಿ ಮುನ್ಸೂಚನೆ ನೀಡಲು ಆಗುವುದಿಲ್ಲ. ಅದೇ ಬಜೆಟ್‌ನ ಮಹತ್ವ. ಇಲ್ಲಿ ಗೌಪ್ಯತೆ ಇರಬೇಕು. ಇದೇ ಕಾರಣಕ್ಕೆ ಬಜೆಟ್ ಮಂಡನೆಗೂ ಮುನ್ನ ಸಚಿವ ಸಂಪುಟದಲ್ಲಿ ಅನುಮೋದನೆ ಪಡೆಯಲಾಗುವುದು. ರಾಜ್ಯದ ಹಿತದ ವಿಚಾರದಲ್ಲಿ ಸಾಕಷ್ಟು ಸವಾಲುಗಳಿವೆ. ಕೇಂದ್ರ ಸರ್ಕಾರ ನಮಗೆ ಸಹಕಾರ ನೀಡಿಲ್ಲ. ಈ ಮಧ್ಯೆ ಮುಖ್ಯಮಂತ್ರಿಗಳೇ ಹಣಕಾಸು ಸಚಿವರಾಗಿರುವುದರಿಂದ ಅವರು ಯಾವ ರೀತಿ ಬಜೆಟ್ ಮಂಡಿಸುತ್ತಾರೆ ನೋಡೋಣ ಎಂದರು.

> ಶೀಘ್ರದಲ್ಲೇ ನಾವು ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡುತ್ತೇವೆ. ನಿರುದ್ಯೋಗಿ ಯುವಕರಿಗೆ ತೊಂದರೆಯಾಗಬಾರದು ಎಂದು ಯುವನಿಧಿ ನೀಡಿದ್ದೇವೆ. ಒಳ ಮೀಸಲಾತಿ ಸೇರಿದಂತೆ ಅನೇಕ ವಿಚಾರವಾಗಿ ವಿಳಂಬವಾಗಿದೆ.
> ■ ಡಿ.ಕೆ.ಶಿವಕುಮಾರ್, ಡಿಸಿಎಂ

» ಏಪ್ರಿಲ್ ತಿಂಗಳಾಂತ್ಯದ ವೇಳೆಗೆ ಕಾಮಗಾರಿ ಮುಗಿಸಲು ಡಿಸಿಎಂ ಸೂಚನೆ

ಇಲಾಖೆ ವಿಚಾರವಾಗಿ ದೆಹಲಿಗೆ: ಹೈಕಮಾಂಡ್‌ನಿಂದ ನನಗೆ ಯಾವುದೇ ಕರೆ ಬಂದಿಲ್ಲ. ನಾನು ನಮ್ಮ ಇಲಾಖೆಗೆ ಸಂಬಂಧಿಸಿದ ಕೆಲಸಗಳ ಮೇಲೆ ದೆಹಲಿಗೆ ಹೋಗಬೇಕಾಗಿದೆ. ನಗರಾಭಿವೃದ್ಧಿ ಇಲಾಖೆ ಯೋಜನೆಗೆ ಸಂಬಂಧಿಸಿದಂತೆ 1 ಲಕ್ಷ ಕೋಟಿ ರೂ. ನೀಡಲಾಗುತ್ತಿದ್ದು, ದೊಡ್ಡ ನಗರಗಳಿಗೆ ನೀಡುವುದಿಲ್ಲ ಎನ್ನುತ್ತಿದ್ದಾರೆ. ಈ ಬಗ್ಗೆ ನಮ್ಮ ನಗರಾಭಿವೃದ್ಧಿ ಸಚಿವರ ಬಳಿ ಚರ್ಚೆ ಮಾಡಿ, 2 ಹಾಗೂ 3ನೇ ಹಂತದ ನಗರಗಳ ಅಭಿವೃದ್ಧಿಗೆ ಪ್ರಸ್ತಾವನೆ ಸಿದ್ಧಪಡಿಸಲು ಹೇಳುತ್ತೇನೆ ಎಂದು ತಿಳಿಸಿದರು.

ರಣವೀರ್ ವಿರುದ್ಧ ಬಲವಂತದ ಕ್ರಮ ಬೇಡ: ಹೈ

ಬೆಂಗಳೂರು: ಬಾಲಿವುಡ್ ನಟ ರಣವೀರ್ ಸಿಂಗ್ ಅವರು ಸೂಪರ್ ಸ್ಟಾರ್ ಆಗಿದ್ದರೂ ಕಾನೂನಿನಿಗಿಂತ ಮೇಲಿಲ್ಲ ಎಂದು ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, ಈ ಪ್ರಕರಣ



ಸಂಬಂಧ ಮುಂದಿನ ವಿಚಾರಣೆವರೆಗೆ ರಣವೀರ್ ವಿರುದ್ಧ ಬಲವಂತದ ಕ್ರಮಕೈಗೊಳ್ಳಬಾರದು ಎಂದು ರಾಜ್ಯ ಸರ್ಕಾರಕ್ಕೆ ಮಂಗಳವಾರ ನಿರ್ದೇಶಿಸಿದೆ.

ಗೋವಾದಲ್ಲಿ ಇತ್ತೀಚೆಗೆ ನಡೆದ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕಾಂತಾರ ಚಾಪ್ಟರ್-1 ಚಿತ್ರದ ದೈವ ಪಾತ್ರದ ಬಗ್ಗೆ ಆಕ್ಷೇಪಾರ್ಹ ಮಾತುಗಳನ್ನಾಡಿದ ಸಂಬಂಧ ಕ್ರಿಮಿನಲ್ ಅಪರಾಧ ಪ್ರಕರಣ ಹಾಗೂ ಚಾಮುಂಡಿ ದೈವಕ್ಕೆ ಅಪಮಾನ ಮಾಡಿದ ಆರೋಪದ ಸಂಬಂಧ ದಾಖಲಾಗಿರುವ ಖಾಸಗಿ ದೂರು, ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ರಣವೀರ್ ಸಿಂಗ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.

ರಣವೀರ್ ಸಿಂಗ್ ಅವರು ತಾವಾಡಿದ ಆಕ್ಷೇಪಾರ್ಹ ಮಾತುಗಳಿಗೆ ಕ್ಷಮೆ ಕೋರಿದ್ದಾರೆ. ಪ್ರಕರಣದ ಸಂಬಂಧ ಅವರು ತನಿಖೆಗೆ ಸಹಕರಿಸಬೇಕು ಎಂಬ ಷರತ್ತಿಗೆ ಒಳಪಟ್ಟು, ಮುಂದಿನ ವಿಚಾರಣೆವರೆಗೆ ಅವರ ವಿರುದ್ಧ ರಾಜ್ಯ ಸರ್ಕಾರ ಬಲವಂತದ ಕ್ರಮಕೈಗೊಳ್ಳಬಾರದು. ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲಾಗಿದ್ದು, ಆಕ್ಷೇಪಣೆ ಸಲ್ಲಿಸಬೇಕು ಎಂದು ನಿರ್ದೇಶಿಸಿದ ನ್ಯಾಯಾಲಯವು ವಿಚಾರಣೆಯನ್ನು ಮಾ.2ಕ್ಕೆ ಮುಂದೂಡಿತು.

ಅಸಾಮಾನ್ಯ ಪ್ರದರ್ಶನ

ವಿಚಾರದ ಬಗ್ಗೆ ತಿಳಿಯದೇ ಮಾಡಿರುವ ಈ ಕೃತ್ಯವು ಅಜ್ಞಾನದ ಕೆಲಸವಾಗಿದೆ. ಆ ಭಾಗದಲ್ಲಿ ಇದೊಂದು ಪವಿತ್ರ ಆರಾಧನೆ. ಇದೊಂದು ಅಸಾಮಾನ್ಯ ಪ್ರದರ್ಶನ ಎಂದು ಹೇಳಿ ರಣವೀರ್ ನಿಲ್ಲಿಸಬೇಕಿತ್ತು. ಇದನ್ನು ಮೀರಿ ಮಿಮಿಕ್ರಿ ಮಾಡಲು ಮುಂದಾಗಿದ್ದು ತಪ್ಪಾಗಿದೆ. ರಣವೀರ್ ಸಿಂಗ್ ಸೂಪರ್ ಸ್ಟಾರ್ ಆದ ಮಾತ್ರಕ್ಕೆ ಅವರು ಕಾನೂನಿನ ಮೇಲಿಲ್ಲ ಎಂದು ಪೀಠ ಹೇಳಿತು.

ಇದಕ್ಕೂ ಮುನ್ನ, ರಣವೀರ್ ಪರ ಹಿರಿಯ ವಕೀಲ ಸಜನ್ ಪೂವಯ್ಯ ಅವರು ಐಎಫ್‌ಎಫ್‌ಐನಲ್ಲಿ ತಾನಾಡಿದ ಮಾತುಗಳಿಗೆ ತಕ್ಷಣ ಕ್ಷಮೆ ಕೋರಿದ್ದಾರೆ. ಐಎಫ್‌ಎಫ್‌ಐ ಆಡಿದ ಮಾತುಗಳನ್ನಾಧರಿಸಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ರಣವೀರ್ ಅವರಿಂದ ಆಗಿರುವ ಪ್ರಮಾದಕ್ಕೆ, ಅದನ್ನು ಸರಿಪಡಿಸಲು ಏನಾದರೂ ಮಾಡಲು ಸಿದ್ಧರಿದ್ದಾರೆ. ಖಂಡಿತವಾಗಿಯೂ ಅವರು ಉದ್ದೇಶಪೂರ್ವಕವಾಗಿ ಈ ಹೇಳಿಕೆ ನೀಡಿಲ್ಲ ಎಂದರು.

ಆಗ ಪೀಠವು ಇಲ್ಲಿ 2 ವಿಚಾರಗಳಿವೆ. ದೇವತೆಯಾದ ಚಾಮುಂಡಿಯ ಪಾತ್ರವನ್ನು ರಿಷಬ್ ಶೆಟ್ಟಿ ನಿಭಾಯಿಸಿದ್ದಾರೆ. ಧಾರ್ಮಿಕ ಭಾವನೆಗಳ ಬಗ್ಗೆ ರಣವೀರ್‌ಗೆ ಗೊತ್ತಿಲ್ಲದಿರ ಬಹುದು. ಮಹಿಳಾ ದೆವ್ವ ಎಂದು ಹೇಳಿ ರಿಷಬ್ ಅವರ ನಟನೆಯನ್ನು ಮಿಮಿಕ್ರಿ ಮಾಡಿದ್ದಾರೆ. ಇದು ನಿಜಕ್ಕೂ ಭಾವನೆಗಳಿಗೆ ಘಾಸಿ ಮಾಡಿರುವ ವಿಚಾರ ಇಷ್ಟು ಹಗುರವಾಗಿ ರಣವೀರ್ ಮಾತನಾಡಲಾಗದು. ನೀವು ರಣವೀರ್ ಸಿಂಗ್ ಅಥವಾ ಬೇರಾರೇ ಆದರೂ ಹಗುರವಾಗಿ ಮಾತನಾಡಲಾಗದು ಎಂದು ಪೀಠ ತಿಳಿಸಿತು.

ಮಂತ್ರಿ ಸ್ಥಾನಕ್ಕೆ ಬೇಡಿಕೆ ತಪ್ಪಲ್ಲ: ಮೊಯ್ಲಿ

ಮಂಗಳೂರು: ಹೊಸ ಶಾಸಕರು ಮಂತ್ರಿ ಸ್ಥಾನಕ್ಕೆ ಬೇಡಿಕೆ ಇರಿಸಿರುವುದು ತಪ್ಪಲ್ಲ. ಹಿರಿಯರು- ಕಿರಿಯರು ಎಂದು ಹೇಳುವುದು ಸರಿಯಲ್ಲ. ಮೆರಿಟ್ ಇದ್ದರೆ ಯಾರೂ ಸಚಿವರಾಗಬಹುದು ಎಂದು ಮಾಜಿ ಸಿಎಂ ಎಂ.ವೀರಪ್ಪ ಮೊಯ್ಲಿ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದರು. ನಾವು ಎಲ್ಲರೂ ಒಂದು ಕಾಲದಲ್ಲಿ ಹೊಸಬರಾಗಿಯೇ ಬಂದವರು. ನಾನು ರಾಜಕೀಯಕ್ಕೆ ಬಂದಾಗ ದೇವರಾಜ ಅರಸು ಸಿಎಂ ಆಗಿದ್ದರು. ಆ ಕಾಲದಲ್ಲೂ ಹೊಸಬರಿಗೆ ಅವಕಾಶ ಸಿಕ್ಕಿತ್ತು. ನಾನೂ ಹೊಸಬನಾಗಿಯೇ ಮಂತ್ರಿಯಾಗಿದ್ದೆ. ಆದ್ದರಿಂದ ಹೊಸ ಪ್ರತಿನಿಧಿಗಳಿಗೆ ಅವಕಾಶ ಕೊಡಬಾರದು ಎಂದು ಹೇಳುವುದು ನೈತಿಕವಾಗಿ ಸರಿಯಲ್ಲ ಎಂದರು. ಈಗಿನ ಶಾಸಕರಲ್ಲಿಯೂ ಮೆರಿಟ್ ಇದ್ದರೆ ಸಚಿವ ಸ್ಥಾನ ಕೊಡಬಹುದು. ಮೆರಿಟ್ ಅಂದರೆ ಅವರ ಯೋಗ್ಯತೆ, ಒಳ್ಳೆಯ ದಾಖಲೆ, ಜನರನ್ನು ಪ್ರತಿನಿಧಿಸುವ ಸಾಮರ್ಥ್ಯ, ನಾಯಕತ್ವ ಮತ್ತು ಮುಖ್ಯಮಂತ್ರಿ ಅವರ ಶ್ರದ್ಧೆ, ಪಾತ್ರ ಮುಂತಾದವುಗಳನ್ನು ನೋಡಿ ಗುರುತಿಸುತ್ತಾರೆ. ಲಾಬಿ ಮಾಡಿ ಸಚಿವರಾಗಲು ಸಾಧ್ಯವಿಲ್ಲ ಎಂದರು.

ಛಲವಾದಿಗೆ ನಮ್ಮ ನಿಂದನೆಯೇ ಕಾಯಕ: ಪ್ರಿಯಾಂಕ್ ಖರ್ಗೆ

ಬೆಂಗಳೂರು: ವಿಧಾನಪರಿಷತ್‌ನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಸಚಿವ ಪ್ರಿಯಾಂಕ್ ಖರ್ಗೆ ಕಿಡಿಕಾರಿದ್ದು, ಹಿಂದೆ ಕಾಂಗ್ರೆಸ್‌ನಲ್ಲಿ ಛಲವಾದಿ ನಾರಾಯಣಸ್ವಾಮಿಯಾಗಿದ್ದವರು, ಬಿಜೆಪಿಗೆ ಹೋಗಿ ಅವಕಾಶವಾದಿ ನಾರಾಯಣಸ್ವಾಮಿಯಾಗಿ ನಮ್ಮ ನಿಂದನೆಯನ್ನೇ ಕಾಯಕವನ್ನಾಗಿ ಮಾಡಿ ಕೊಂಡಿದ್ದಾರೆ ಎಂದಿದ್ದಾರೆ.



ಎಕ್ಸ್‌ನಲ್ಲಿ ಛಲವಾದಿ ಅವರನ್ನು ಟೀಕಿಸಿರುವ ಅವರು, ನಾರಾಯಣಸ್ವಾಮಿಯವರ ಅಸ್ತಿತ್ವವು ನನ್ನ ಅಸ್ತಿತ್ವದ ಮೇಲೆ ಅವಲಂಬನೆಯಾಗಿದೆ, ನಾನು ಮುಗಿದು ಹೋದರೆ ನಾರಾಯಣಸ್ವಾಮಿಯವರೂ ಮುಗಿದು ಹೋಗುತ್ತಾರೆ ಎಂದು ಹೇಳಿದ್ದಾರೆ. ನಾರಾಯಣಸ್ವಾಮಿಯವರೇ, ಕಾಂಗ್ರೆಸ್ ಪಕ್ಷ ನಿಮ್ಮನ್ನು ನಾಯಕನನ್ನಾಗಿ ಬೆಳೆಸಿದ್ದಕ್ಕಾಗಿಯೇ ನಿಮ್ಮನ್ನು ಬಿಜೆಪಿ ಕರೆದುಕೊಂಡಿದ್ದು, ನಿಮ್ಮ ಸೇವೆಗಾಗಿಯೇ ಕಾಂಗ್ರೆಸ್ ನಿಮಗೆ ಅವಕಾಶಗಳನ್ನು ನೀಡಿದ್ದು, ನಿಮ್ಮನ್ನು ರಾಷ್ಟ್ರಮಟ್ಟದ ರೈಲ್ವೆ ಬೋರ್ಡ್ ಚೆರ್ಮನ್ ಮಾಡಿದ್ದು, ಎರಡೆರಡು ಬಾರಿ ರಾಜ್ಯ ಮಟ್ಟದ ಬೋರ್ಡ್ ಚೆರ್ಮನ್ ಮಾಡಿದ್ದು, ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ನೀಡಿದ್ದು. ನಿಮ್ಮನ್ನು ಜೀರೋದಿಂದ ಹೀರೋ ಮಾಡಿದ್ದು ಕಾಂಗ್ರೆಸ್ ಪಕ್ಷ ಎಂದು ಟೀಕಿಸಿದ್ದಾರೆ.

ನಿಮ್ಮ ರಾಜೀನಾಮೆ, ರಾಜಕೀಯ ನಿವೃತ್ತಿಯ ಪ್ರತಿಜ್ಞೆಯೊಂದು ಕಾರ್ಯಗತವಾಗದೆ ಉಳಿದುಕೊಂಡಿದೆ. ಆಡಿದ ಮಾತನ್ನು ಉಳಿಸಿಕೊಳ್ಳುವುದೇ ನಿಜವಾದ ದಲಿತತ್ವ, ರಾಜೀನಾಮೆ ಕೊಟ್ಟು ನಿಮ್ಮ ದಲಿತತ್ವವನ್ನು ಉಳಿಸಿಕೊಳ್ಳುವುದು ಯಾವಾಗ, ಈಗಾಗಲೇ ತುಂಬಾ ತಡವಾಗಿದೆ. ರಾಜೀನಾಮೆ ಮಾತ್ರ ಕೊಡಿ ಸಾಕು ಎಂದು ಹೇಳಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಲ್ಲಿ ಉತ್ತಮ ಫಲಿತಾಂಶಕ್ಕಾಗಿ ಶಕ್ತಿ ಮೀರಿ ಪ್ರಯತ್ನ

ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಟೊಂಕಕಟ್ಟಿದ ಸರ್ಕಾರ

▸ ನಂದಿನಿ ಎನ್.

ಬೆಂಗಳೂರು: ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಸುಧಾರಿಸಲು ಸರ್ಕಾರ ಹಾಗೂ ಶಾಲಾ ಶಿಕ್ಷಣ ಇಲಾಖೆ ಅನೇಕ ಸುಧಾರಣೆ ಕ್ರಮಗಳನ್ನು ಕೈ ಗೊಂಡಿದ್ದು, ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಲ್ಲಿ ಉತ್ತಮ ಫಲಿತಾಂಶಕ್ಕಾಗಿ ಶಕ್ತಿ ಮೀರಿ ಪ್ರಯತ್ನಿಸುತ್ತಿದೆ. ಹೀಗಾಗಿ ಈ ಬಾರಿ ಫಲಿತಾಂಶದಲ್ಲಿ ಸುಧಾರಣೆ ತರಲು ಟೊಂಕಕಟ್ಟಿ ನಿಂತಿದೆ.

ಶಾಲಾ ಶಿಕ್ಷಣ ಇಲಾಖೆ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸಲು ಅನೇಕ ರೀತಿಯ ಕ್ರಮಗಳನ್ನು ಹಾಗೂ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ. ಆದರೂ, ಕಳೆದ ವರ್ಷದ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳು ಕಳಪೆ ಫಲಿತಾಂಶ ಪಡೆದಿದ್ದವು. ಇದನ್ನು ಸುಧಾರಿಸುವ ಗುರಿಯೊಂದಿಗೆ ಹಲವು ಕ್ರಮಗಳನ್ನು ಶಾಲಾ ಶಿಕ್ಷಣ ಇಲಾಖೆ ಕೈಗೊಂಡಿದೆ.

ಶೈಕ್ಷಣಿಕವಾಗಿ ಹಿಂದುಳಿದಿರುವ ಭಾಗವಾಗಿರುವ



ದಿಗಂತ ವಿಶೇಷ

ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಮಂಜೂರಾಗಿರುವ ವಿಷಯ ಶಿಕ್ಷಕರ ನೂರಾರು ಹುದ್ದೆಗಳು ಭರ್ತಿಯಾಗದೆ ಖಾಲಿ ಉಳಿದಿದ್ದರೂ, ಶಿಕ್ಷಕರ ಕೊರತೆ ನಡುವೆಯೇ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಇಲಾಖೆ ವಿಶೇಷ ತರಗತಿಗಳು, ಪೂರಕ ಅಧ್ಯಯನ, ಮಾದರಿ ಪ್ರಶ್ನೆಪತ್ರಿಕೆಗಳ ವಿತರಣೆ, ಕೆಲಸಕ್ಕೆ ಹೋಗುತ್ತಿದ್ದ ವಿದ್ಯಾರ್ಥಿಗಳನ್ನು ಮರಳಿ ಶಾಲೆಗೆ ಕರೆಸಿರುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಂಡಿದೆ.

ಶಿಕ್ಷಕರ ಕೊರತೆಯನ್ನು ನೀಗಿಸಲು ಕ್ರಮ: ಪೋಷಕರ ಹಾಗೂ ಶಿಕ್ಷಕರ ಸಭೆಗಳು, ಶಿಕ್ಷಕರಿಗೆ ಕಾರ್ಯಾಗಾರ ಸೇರಿ ಇನ್ನಿತರೆ ಕಾರ್ಯಕ್ರಮ ಅನುಷ್ಠಾನಕ್ಕೆ ಯೋಜನೆ ಹಾಕಿಕೊಂಡು ಅದಕ್ಕೆ ಪೂರಕವಾಗಿ ಕಾರ್ಯಾಚರಣೆಗಿಳಿದಿದೆ. ಖಾಯಂ ಶಿಕ್ಷಕರೇ ಇಲ್ಲದ ಪರಿಣಾಮ ಅತಿಥಿ ಶಿಕ್ಷಕರು, ಪ್ರಾಥಮಿಕ ಶಾಲೆಗಳಲ್ಲಿರುವ ಜಿಪಿಟಿ (ಪದವೀಧರ ಪ್ರಾಥಮಿಕ ಶಿಕ್ಷಕರು) ಶಿಕ್ಷಕರನ್ನು ಕೂಡ ಪ್ರೌಢ ಶಾಲೆಗೆ ನಿಯೋಜಿಸುವ ಮೂಲಕ ಸಾಧ್ಯವಾದಷ್ಟು ಮಟ್ಟಿಗೆ ಶಿಕ್ಷಕರ ಕೊರತೆ ನೀಗಿಸಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿದೆ.

> ಫಲಿತಾಂಶ ಹಿಂದುಳಿದ ಜಿಲ್ಲೆಯಲ್ಲಿ ಶಿಕ್ಷಣಕ್ಕಾಗಿ ಹೆಚ್ಚಿನ ಒತ್ತು ನೀಡುವ ಜತೆಗೆ ಅವಶ್ಯಕ ವಾತಾವರಣ ನಿರ್ಮಿಸಲಾಗಿದೆ. ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳ ಮೂಲಕ ಆಯಾ ಶಾಲೆಗಳ ಶಿಕ್ಷಕರಿಗೆ ಯಾವ ರೀತಿ ಮಕ್ಕಳು ಪರೀಕ್ಷೆಯನ್ನು ಎದುರಿಸಬೇಕು. ಮಾದರಿ ಪ್ರಶ್ನೆಪತ್ರಿಕೆಗಳ ಕುರಿತು ತರಬೇತಿ ನೀಡಲಾಗಿದೆ.
> ■ ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ

ವಿಶೇಷ ಪಾಠ-ತರಗತಿ

ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಲ್ಲಿ ಪ್ರತಿದಿನ ಬೆಳಗ್ಗೆ ಹಾಗೂ ಸಂಜೆ ವಿಶೇಷ ತರಗತಿ ನಡೆಸಲಾಗುತ್ತಿದೆ. ವಿದ್ಯಾರ್ಥಿಗಳನ್ನು ಕೂಲಿ ಕೆಲಸಕ್ಕೆ ಕರೆದೊಯ್ಯುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ ಶಾಲೆ ಬಿಟ್ಟು ಕೂಲಿ ಕೆಲಸ ಹೋಗುವುದಿಲ್ಲ ಎಂಬ ಪ್ರತಿಜ್ಞೆಯನ್ನು ಮಕ್ಕಳಿಂದ ಮಾಡಿಸಲಾಗಿದೆ. ಜತೆಗೆ ಪಾಲಕರಿಗೆ ಮಕ್ಕಳನ್ನು ಕಲಿಕೆಯಿಂದ ವಂಚನೆ ಮಾಡದಂತೆ ಮನವರಿಕೆ ಮತ್ತು ಮನವಿಯನ್ನೂ ಮಾಡಲಾಗುತ್ತಿದೆ. ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ವಿಶೇಷ ತರಗತಿಗಳು, ಹಾಸ್ಟೆಲ್‌ಗಳಲ್ಲಿ ರಾತ್ರಿ ತರಗತಿಗಳು ಹಾಗೂ ಶನಿವಾರ ಹಾಗೂ ಭಾನುವಾರ ವಿಶೇಷ ತರಗತಿಗಳನ್ನು ಏರ್ಪಡಿಸಿ, ಪರಿಹಾರಾತ್ಮಕ ಬೋಧನೆ ಸೇರಿ ಹಲವು ಕ್ರಮ ಕೈಗೊಳ್ಳಲಾಗುತ್ತಿದೆ. ಕಳೆದ ವರ್ಷಕ್ಕಿಂತ ಉತ್ತಮವಾದ ಫಲಿತಾಂಶ ನಿರೀಕ್ಷೆ ಮಾಡಲಾಗಿದ್ದು, ಆಶಾಭಾವನೆಯೂ ಮೂಡಿದೆ.

ಪರಿಹಾರ ಬೋಧನೆ

ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳನ್ನು ಗುರುತಿಸಿ ಪ್ರತಿದಿನ ವೇಳಾಪಟ್ಟಿಯಂತೆ ವಿಶೇಷ ತರಗತಿ ತೆಗೆದುಕೊಳ್ಳಲಾಗುತ್ತಿದೆ. ಈ ಮಕ್ಕಳ ಪರಿಹಾರ ಬೋಧನೆಯ ಬಗ್ಗೆ ವಿಷಯ ಶಿಕ್ಷಕರು ಅನುಪಾಲನೆ ಮಾಡಲು ಜವಾಬ್ದಾರಿಯೂ ನೀಡಲಾಗಿದೆ. ನಿಧಾನಗತಿ ಕಲಿಕಾ ಲಕ್ಷಣಗಳಿರುವ ವಿದ್ಯಾರ್ಥಿಗಳ ಕಲಿಕೆಯನ್ನು ಬಲವರ್ಧನೆಗೊಳಿಸಲು ಅವರನ್ನು ಕಲಿತಾ ಪ್ರಗತಿ ಸಾಧಿಸಿರುವ ವಿದ್ಯಾರ್ಥಿ ಗಳೊಂದಿಗೆ ಸಂಯೋಜಿಸಲಾಗಿದೆ.

ಕಾಂಗ್ರೆಸ್‌ನಿಂದ ದಲಿತರ ದುರ್ಬಳಕೆ: ರಾಜೀವ್

ಬೆಂಗಳೂರು: ದಲಿತ ಎನ್ನುವ ಪದ ಕಾಂಗ್ರೆಸ್ ಪಕ್ಷದ ವೋಟ್ ಬ್ಯಾಂಕ್ ರಾಜಕಾರಣ. ಕಾಂಗ್ರೆಸ್ ಪಕ್ಷವು ದಲಿತರನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ಅವರು ಆರೋಪಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಪಕ್ಷದ ಅಸ್ತಿತ್ವಕ್ಕೆ ಎಲ್ಲಿ ಪೆಟ್ಟು ಬೀಳುತ್ತದೋ ಆಗ ದಲಿತ ಮುಖ್ಯಮಂತ್ರಿ ಕೂಗು ಬರುತ್ತದೆ ಎಂದು ವಿಶ್ಲೇಷಿಸಿದರು. ಕರ್ನಾಟಕದಲ್ಲೂ ತಮ್ಮ ಸ್ಥಾನಗಳಿಗೆ ಕುತ್ತು ಬಂದಾಗ, ಕಾಂಗ್ರೆಸ್ಸಿನಿಂದ ದಲಿತರು ದೂರ ಆಗುತ್ತಿದ್ದಾರೆ ಎಂದಾಗ ಈ ರೀತಿ ದಲಿತ ಮುಖ್ಯಮಂತ್ರಿ ಕೂಗನ್ನು ಹರಿಬಿಡುತ್ತಾರೆ. ಮೂಗಿಗೆ ತುಪ್ಪ ಸವರುತ್ತಾರೆ. ಇವರಿಂದ ದಲಿತರಿಗೆ ಯಾವ ನ್ಯಾಯವೂ ಸಿಗುವುದಿಲ್ಲ ಎಂದು ಪಿ. ರಾಜೀವ್ ತಿಳಿಸಿದರು.


ತಪ್ಪು ಯಾರೇ ಮಾಡಿದರೂ ಒಪ್ಪಲಾಗದು: ಬಂಜಾರ ಸಮುದಾಯವನ್ನು ಈ ರಾಜ್ಯದಲ್ಲಿ ಟಾರ್ಗೆಟ್ ಮಾಡಲಾಗುತ್ತಿದೆ. ಗೆದ್ದಿರುವುದು ಒಬ್ಬನೇ ಒಬ್ಬ ಸದಸ್ಯ. ಆದರೆ, ಅವರಿಗೆ ಸಚಿವ ಸ್ಥಾನ ನೀಡಿಲ್ಲ. ಬಂಜಾರ ಸಮುದಾಯದ ಒಬ್ಬನೇ ಒಬ್ಬ ಸಚಿವರಿಲ್ಲದ ಸಚಿವ ಸಂಪುಟ ಇದಾಗಿದೆ. ಶಾಸಕ ಚಂದ್ರು ಲಮಾಣಿ ಅವರ ಹಿಂದೆ ಷಡ್ಯಂತ್ರ ನಡೆಯುತ್ತಿದೆ. ಅವರು ಬಲಿಪಶು ಆಗಿದ್ದಾರಾ ಅಥವಾ ನಿಜವಾಗಿಯೂ ಪ್ರಕರಣದಲ್ಲಿದ್ದಾರಾ ಎನ್ನುವುದು ತನಿಖೆಯಿಂದ ಬಹಿರಂಗವಾಗಲಿ. ತಪ್ಪು ಯಾರೇ ಮಾಡಿದರೂ ಪಕ್ಷ ಒಪ್ಪುವುದಿಲ್ಲ ಎಂದು ಪಿ. ರಾಜೀವ್ ತಿಳಿಸಿದರು.

ಸಂಪಾದಕೀಯ

ನೇಮಕಾತಿ ವಿಳಂಬವಾಗದಿರಲಿ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಸುಮಾರು 2.7ಲಕ್ಷ ಉದ್ಯೋಗಗಳನ್ನು ಕೂಡಲೇ ಭರ್ತಿ ಮಾಡಬೇಕೆಂಬ ಆಗ್ರಹ ಈಗ ಹೋರಾಟದ ರೂಪ ಪಡೆದಿದೆ. ಸಾಮಾನ್ಯವಾಗಿ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಆಡಳಿತ ತುರ್ತು ಕ್ರಮಗಳನ್ನು ಕೈಗೊಳ್ಳುತ್ತದೆ. ಕನಿಷ್ಠ ಆಶ್ವಾಸನೆಗಳನ್ನಾದರೂ ಕೊಡುತ್ತದೆ. ಆದರೆ ನಿನ್ನೆ ಧಾರವಾಡದಲ್ಲಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಪ್ರತಿಭಟನೆಗೆ ಪೊಲೀಸರು ಅಡ್ಡಿಪಡಿಸಿದ್ದಾರೆ ಮತ್ತು ಹೋರಾಟದ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಉಪಮುಖ್ಯಮಂತ್ರಿಯವರು ರಾಜ್ಯದಲ್ಲಿ ನಿರುದ್ಯೋಗ ಭತ್ಯೆ ನೀಡುವ ಮೂಲಕ ಸಮಸ್ಯೆಗೆ ಪರಿಹಾರ ಒದಗಿಸಲಾಗಿದೆ ಎಂದಿದ್ದಾರೆ.

ಇಲ್ಲಿ ಅನೇಕ ಪ್ರಶ್ನೆಗಳು ಏಳುತ್ತವೆ. 2023ರಿಂದ ರಾಜ್ಯದಲ್ಲಿ ಯಾವುದೇ ಸರ್ಕಾರಿ ನೇಮಕಾತಿಗಳು ನಡೆದಿಲ್ಲ. ವಿವಿಧ ಸರ್ಕಾರಿ ಇಲಾಖೆಗಳಲ್ಲಿ



ಎರಡುವರೆ ಲಕ್ಷಕ್ಕೂ ಹೆಚ್ಚಿನ ಹುದ್ದೆಗಳು ಖಾಲಿಯಾಗಿವೆ ಎಂದರೆ ಅದನ್ನು ಏನೆಂದು ಹೇಳಬೇಕು? ಮುಖ್ಯವಾಗಿ ಇಲ್ಲಿ ಪಕ್ಷ ರಾಜಕೀಯದ ಟೀಕೆಗಿಂತ ಆಡಳಿತದ ಲೆಕ್ಕಾಚಾರಗಳನ್ನು ಪ್ರಶ್ನಿಸಬೇಕಿದೆ. ಕಾಂಗ್ರೆಸ್ ಬದಲು ಬೇರೆ ಯಾವುದೇ ಪಕ್ಷ ಅಧಿಕಾರದಲ್ಲಿದ್ದಿದ್ದರೂ ಹುದ್ದೆಗಳು ಖಾಲಿಯಾಗಿಯೇ ಇರುತ್ತಿತ್ತು ಮತ್ತು ಎಂಥ ತುರ್ತು ನೇಮಕಾತಿಗಳನ್ನು ಮಾಡಿದರೂ ಇಷ್ಟು ದೊಡ್ಡ ಸಂಖ್ಯೆಯನ್ನು ಶೀಘ್ರದಲ್ಲಿ ತುಂಬಲಾಗುತ್ತಿರಲಿಲ್ಲ ಎನ್ನುವುದು ಸತ್ಯ. ಹಾಗಾದರೆ ಆಳುವ ವರ್ಗ ಯಾಕೆ ಹೀಗೆ ಮಾಡುತ್ತದೆ? ಎಲ್ಲರಿಗೂ ಸರ್ಕಾರಿ ಉದ್ಯೋಗವನ್ನು ನೀಡಲಾಗುವುದಿಲ್ಲವೆಂಬುದು ಹೌದಾದರೂ ಆಡಳಿತ ಯಂತ್ರದ ಚಲನೆಗೆ ತಕ್ಕಂತೆ ಹುದ್ದೆಗಳು ಭರ್ತಿಯಾಗಬೇಕಲ್ಲವೇ? ನಿರುದ್ಯೋಗ ಭತ್ಯೆ ಸಮಸ್ಯೆಗೆ ಶಾಶ್ವತ ಪರಿಹಾರ ಅಲ್ಲ. ಇಂದು ಬಹುತೇಕ ಸರ್ಕಾರಗಳು ನಿರುದ್ಯೋಗಿಗಳ ಕಣ್ಣಿಗೆ ಮಣ್ಣೆರಚಲು ಭತ್ಯೆ ನೀಡುವ ಉಪಾಯವನ್ನು ಕಂಡುಕೊಂಡಿವೆ. ರಾಜ್ಯದ ಅಂಕೆಸಂಖ್ಯೆಗಳನ್ನೇ ನೋಡಿದರೂ ಇದೊಂದು ತಂತ್ರ ಎನ್ನುವುದು ಅರಿವಾಗುತ್ತದೆ. ಖಾಲಿ ಇರುವ ಎರಡುವರೆ ಲಕ್ಷ ಹುದ್ದೆಗಳಿಗೆ ಸರ್ಕಾರಿ ನೇಮಕ ಮಾಡುವುದಾದರೆ ಕನಿಷ್ಠ ವೇತನ 30 ಸಾವಿರದ ಲೆಕ್ಕಾಚಾರದಲ್ಲಿ ಸರ್ಕಾರಕ್ಕೆ ತಿಂಗಳಿಗೆ 7,500 ಕೋಟಿ ರೂಪಾಯಿಗಳ ವೆಚ್ಚವಾಗುತ್ತದೆ. ಆದರೆ ರಾಜ್ಯದ ಮೂರು ಲಕ್ಷ ನಿರುದ್ಯೋಗಿಗಳಿಗೆ ಎಷ್ಟು ವೆಚ್ಚವಾಗುತ್ತದೆ ಎಂಬುದನ್ನು ಇಲ್ಲಿ ನೋಡಬೇಕಿದೆ. ಪದವೀಧರರಿಗೆ ತಲಾ 3 ಸಾವಿರ ಮತ್ತು ಡಿಪ್ಲೋಮಾ ಪಡೆದವರಿಗೆ 1.500 ರೂಗಳ ಭತ್ಯೆ ನೀಡಲಾಗುತ್ತಿದೆ. ಇದರಿಂದ ಸರ್ಕಾರಕ್ಕೆ ಅಂದಾಜು ಕೆಲವು ನೂರು ಕೋಟಿಗಳಷ್ಟು ಮಾತ್ರ ವೆಚ್ಚವಾಗುತ್ತದೆ. ಅಂದರೆ ಇದು ನಿಜಕ್ಕೂ ನಿರುದ್ಯೋಗವನ್ನು ನಿವಾರಿಸುವ ಮಾರ್ಗವೋ ಅಥವಾ ಸರ್ಕಾರ ಕರ್ಚನ್ನು ಉಳಿಸುವ ಮಾರ್ಗವೋ ಎಂಬುದನ್ನು ಚಿಂತಿಸಬೇಕಾಗಿದೆ. ಆಡಳಿತಕ್ಕೆ ತನ್ನದೇ ಆದ ಸಮಜಾಯಿಷಿಗಳಿರುತ್ತವೆ. ಆದರೆ ಯಾವ ಆಡಳಿತ ಕೂಡ ನಿರುದ್ಯೋಗ ಒಂದು ಸಮಸ್ಯೆ ಎನ್ನುವುದರಿಂದ ನುಣುಚಿಕೊಳ್ಳಲಾಗದು. ಸಮಾಜಕ್ಕೆ ಸರ್ಕಾರಿ ಉದ್ಯೋಗಳ ಬಗ್ಗೆ ಅತಿಯಾದ ಆಸಕ್ತಿ ಇರುವುದಂತೂ ನಿಜ. ಆದ್ದರಿಂದ ಸರ್ಕಾರ ಉದ್ಯೋಗ ಸೃಷ್ಟಿಗೆ ಮಾಡಬೇಕಾದ ಇತರ ಕಾರ್ಯಗಳೂ ಇವೆ. ಸ್ವಯಂ ಉದ್ಯೋಗ ಸೃಷ್ಟಿಸುವತ್ತ ಮತ್ತು ಖಾಸಗಿ ಉದ್ಯೋಗ ಹೆಚ್ಚಿಸುವಲ್ಲಿ ಗಮನ ಹರಿಸಬೇಕಿದೆ. ಅಥವಾ ಹಂತಹಂತವಾಗಿ ನೇಮಕಾತಿ ಆರಂಭಿಸಬೇಕಿದೆ.

ಲವ್ ಜಿಹಾದ್ ಜಾಗೃತಿ ಸೌಹಾರ್ದಕ್ಕೆ ಧಕ್ಕೆಯೇ!?

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು
vakradanta@gmail.com



ಸುದೀಪ್ತೊ ಸೇನ್ ನಿರ್ದೇಶನದ 'ದಿ ಕೇರಳ ಸ್ಟೋರಿ' ಅತ್ಯಂತ ಪ್ರಮುಖವಾದ ಅಥವಾ ಎಲ್ಲರಿಗೂ ಗೊತ್ತಿದ್ದ ವಿಷಯವನ್ನು ಕಣ್ಣಿಗೆ ಕಟ್ಟುವಂತೆ ತೋರಿಸಿ, ನಮಗೆಲ್ಲ ಮನದಟ್ಟು ಮಾಡಿದ ಸಿನೆಮಾ. ಲವ್ ಜಿಹಾದ್ ಬಗ್ಗೆ ಎಲ್ಲರೂ ಮಾತನಾಡುತ್ತಾರೆ, ಅಂಥದ್ದೊಂದು ನಡೆಯುತ್ತಿದೆ ಎಂಬುದು ಎಲ್ಲರಿಗೂ ತಿಳಿದೂ ಇತ್ತು. ಆದರೆ ಕೇರಳ ಸ್ಟೋರಿ ಸಿನೆಮಾ ಅದನ್ನು ತುಂಬಾ ಖಚಿತವಾಗಿ ಜನರಿಗೆ ತಲುಪಿಸಿತ್ತು. ಕೇರಳದಲ್ಲಿ ಅಡಗಿರುವ 'ಲವ್ ಜಿಹಾದ್' ಮತ್ತು ಧಾರ್ಮಿಕ ಮತಾಂತರದಂತಹ ಗಂಭೀರ ವಿಷಯಗಳನ್ನು ಚರ್ಚೆಯ ಮುನ್ನೆಲೆಗೆ ತಂದಿತ್ತು.

ಕೇರಳದ ನರ್ಸಿಂಗ್ ಕಾಲೇಜೊಂದರಲ್ಲಿ ಓದುತ್ತಿರುವ ಮೂವರು ಯುವತಿಯರ ಜೀವನದ ಸುತ್ತ ಕತೆ ಸಾಗುತ್ತದೆ. ಈ ಯುವತಿಯರನ್ನು ವ್ಯವಸ್ಥಿತವಾಗಿ ಗುರುತಿಸಿ, ಪ್ರೀತಿಸಿ, ಬ್ರೇನ್‌ವಾಶ್ ಮಾಡಿ, ಇಸ್ಲಾಮಿಗೆ ಮತಾಂತರಿಸಿ, ನಂತರ ಅವರನ್ನು ಭಯೋತ್ಪಾದಕ ಸಂಘಟನೆಯಾದ ಐಸಿಸ್ ಸೇರಲು ಪ್ರೇರೇಪಿಸುವ ಕಥೆಯನ್ನು ಇದು ಒಳಗೊಂಡಿತ್ತು. ಮುಖ್ಯ ಪಾತ್ರಧಾರಿ ಶಾಲಿನಿ ಉನ್ನಿಕೃಷ್ಣನ್ (ಅದಾ ಶರ್ಮಾ), ಹೇಗೆ ಫಾತಿಮಾ ಎಂಬ ಹೆಸರಿನಿಂದ ಮತಾಂತರಗೊಂಡು ಅಂತಿಮವಾಗಿ ಅಫ್ಘಾನಿಸ್ತಾನದ ಜೈಲು ಸೇರುತ್ತಾಳೆ ಎಂಬುದು ಚಿತ್ರದ ಹೃದಯಸ್ಪರ್ಶಿ ಮತ್ತು ಆಘಾತಕಾರಿ ಅಂಶವಾಗಿತ್ತು. ಅದು ಕೇರಳದಲ್ಲಿ ನಡೆದ ಸತ್ಯ ಘಟನೆಯನ್ನು ಆಧರಿಸಿಯೇ ನಿರ್ಮಿಸಿದ ಸಿನೆಮಾವಾಗಿತ್ತು. ಸಿನೆಮಾ ಕೊನೆಯಲ್ಲಿ ಈ ರೀತಿ ಮತಾಂತರಕ್ಕೊಳಗಾಗಿ, ಐಸಿಸ್ ಉಗ್ರರ ಕಾಮದಾಸೆ ತಣಿಸಲು ಹೋಗಿದ್ದ ಯುವತಿಯ ತಂದೆ-ತಾಯಿಯರನ್ನು, ಕೆಲವು ಹುಡುಗಿಯರನ್ನು ಮಾತನಾಡಿಸಿದ ತುಣುಕುಗಳೂ ಇದ್ದವು.



ಲವ್ ಜಿಹಾದ್ ಈ ಸಿನೆಮಾದ ಮುಖ್ಯ ವಿಷಯವಾಗಿತ್ತು. ಮುಸ್ಲಿಂ ಯುವಕರು ಮುಖ್ಯವಾಗಿ ಹಿಂದು ಯುವತಿಯರನ್ನು ಪ್ರೀತಿಯ ಬಲೆಯಲ್ಲಿ ಸಿಲುಕಿಸಿ, ಮತಾಂತರ ಮಾಡುವುದಕ್ಕೆ ಲವ್ ಜಿಹಾದ್ ಎನ್ನಲಾಗುತ್ತದೆ. ಚಿತ್ರದಲ್ಲಿ ಈ ಪ್ರಕ್ರಿಯೆ ಹೇಗೆ ನಡೆಯುತ್ತದೆ, ಹೇಗೆಲ್ಲ ಅವರು ಯೋಜನೆ ರೂಪಿಸುತ್ತಾರೆ, ಹೇಗೆ ಮುಸ್ಲಿಂ ಮುಲ್ಲಾಗಳು ಅದನ್ನು ಬೆಂಬಲಿಸಿ, ಅದಕ್ಕೊಂದು ವ್ಯವಸ್ಥೆ ರೂಪಿಸಿದ್ದಾರೆ ಎಂಬುದನ್ನು ಸಿನೆಮಾದಲ್ಲಿ ವಿವರವಾಗಿ ತೋರಿಸಲಾಗಿತ್ತು.

ಈಗ ಕೇರಳ ಸ್ಟೋರಿ 2 ಬರುತ್ತಿದೆ. ಇದು ಹಳೆ ಸಿನೆಮಾದ ಮುಂದುವರಿದ ಭಾಗ ಎಂದು ನಿಮಗೆ ಅನ್ನಿಸಬಹುದು. ಆದರೆ ಕೇರಳ ಸ್ಟೋರಿ ಸಿನೆಮಾ ನಿರ್ದೇಶಕರೇ ಬೇರೆ, ಈಗ ಬರುತ್ತಿರುವ ಕೇರಳ ಸ್ಟೋರಿ 2 ನಿರ್ದೇಶಕರೇ ಬೇರೆ. ಮೊದಲ ಸಿನೆಮಾ ಕೇರಳ ರಾಜ್ಯದಲ್ಲಿ ನಡೆಯುತ್ತಿರುವ ಲವ್ ಜಿಹಾದ್ ಮೇಲೆ ಗಮನ ಕೇಂದ್ರೀಕರಿಸಿದ್ದರೆ, ಕೆರಳ ಸ್ಟೋರಿ 2 ಸಿನೆಮಾ ಅದರ ವ್ಯಾಪ್ತಿಯನ್ನು ದೇಶಕ್ಕೆ ವಿಸ್ತರಿಸಿಕೊಂಡಿದೆ. ರಾಜಸ್ತಾನ, ಮಧ್ಯಪ್ರದೇಶ ಸೇರಿದಂತೆ ದೇಶದ ಹಲವೆಡೆ ನಡೆದ ಲವ್ ಜಿಹಾದ್ ಪ್ರಕರಣಗಳನ್ನು ಗಮನದಲ್ಲಿರಿಸಿಕೊಂಡು ಕತೆ ಹೆಣೆಯಲಾಗಿದೆ. ಸಿನೆಮಾದ ಟ್ರೈಲರ್‌ನಲ್ಲಿ ತೋರಿಸಿರುವ ಕೆಲವು ದೃಶ್ಯಗಳು, ವಿಶೇಷವಾಗಿ ಆಹಾರ ಪದ್ಧತಿ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ನಡೆಯುವ ದಾಳಿಗಳು ಸಾರ್ವಜನಿಕವಾಗಿ ತೀವ್ರ ಚರ್ಚೆಗೆ ಕಾರಣವಾಗಿವೆ.

ಹೀಗಾಗಿ ಈ ಸಿನೆಮಾ ಬಿಡುಗಡೆಯ ಬಗ್ಗೆ ಪರ-ವಿರೋಧದ ಚರ್ಚೆಗಳು ನಡೆಯುತ್ತಿವೆ. ಕೇರಳ ಸ್ಟೋರಿ ಎಂದು ಹೆಸರಿರುವ ಕಾರಣಕ್ಕೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಈ ಸಿನೆಮಾ ನೋಡದೆ ಕೇರಳ ಜನ ಅದನ್ನು ತಿರಸ್ಕರಿಸಬೇಕು, ಕೇರಳ ಕೋಮು ಸೌಹಾರ್ದದ ರಾಜ್ಯ ಎಂದಿದ್ದಾರೆ. ಹಾಗೆಯೇ ಕೇರಳ ಹೈಕೋರ್ಟ್‌ನಲ್ಲಿ ಕೂಡ ಸಿನೆಮಾ ಪ್ರದರ್ಶನಕ್ಕೆ ತಡೆ ನೀಡುವಂತೆ ಒಂದು ಪ್ರಕರಣ ದಾಖಲಾಗಿ, ವಿಚಾರಣೆ ನಡೆಯುತ್ತಿದೆ. ಕೇರಳ ಹೈಕೋರ್ಟ್ ನ್ಯಾಯಾಧೀಶರು ಫೆ.25ರಂದು ಸಿನೆಮಾ ವೀಕ್ಷಿಸಲು ನಿರ್ಧರಿಸಿದ್ದು, ಅದರ ನಂತರ ತೀರ್ಮಾನ ಪ್ರಕಟಿಸುವ ಸಾಧ್ಯತೆ ಇದೆ. ಆದರೆ ಅವರು ಕೂಡ ವಿಚಾರಣೆ ಸಂದರ್ಭದಲ್ಲಿ ಕೇರಳ ಕೋಮು ಸೌಹಾರ್ದ ಕೆಡಿಸುವ ಅಂಶಗಳು ಸಿನೆಮಾದಲ್ಲಿದ್ದರೆ ಅದು ಒಳ್ಳೆಯದಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಚಿತ್ರತಂಡವು ಇದು ನೈಜ ಘಟನೆಗಳಿಂದ ಪ್ರೇರಿತವಾಗಿದೆ ಮತ್ತು ನೊಂದ ಮಹಿಳೆಯರ ಕಥೆಯಾಗಿದೆ ಎಂದು ವಾದ ಮಂಡಿಸಿದೆ.

ವಿಚಿತ್ರವೆಂದರೆ ಕೇರಳದ 150ಕ್ಕೂ ಹೆಚ್ಚು ಆರೆಸ್ಸೆಸ್-ಬಿಜೆಪಿ ಕಾರ್ಯಕರ್ತರನ್ನು ಕೊಲೆ ಮಾಡಿದಾಗ ಕೇರಳ ಮುಖ್ಯಮಂತ್ರಿಗೆ ರಾಜ್ಯದಲ್ಲಿ ಕೋಮು ಸೌಹಾರ್ದ ಹಾಳಾಗುತ್ತಿದೆ ಅನ್ನಿಸಿಲ್ಲ. ಹಿಂದು ಹೆಣ್ಣು ಮಕ್ಕಳನ್ನು ಪ್ರೀತಿಯ ಹೆಸರಲ್ಲಿ ಮೋಸ ಮಾಡಿ, ಮದುವೆಯಾಗಿ, ಇಸ್ಲಾಮಿಗೆ ಮತಾಂತರಿಸಿ ಅವರನ್ನು ಐಸಿಸ್ ಉಗ್ರರ ಕಾಮತೃಷೆ ತೀರಿಸಲು ಕಳಿಸಿದಾಗಲೂ ಅವರಿಗೆ ಕೇರಳದ ಕೋಮು ಸೌಹಾರ್ದ ಕೆಡುತ್ತಿದೆ ಅನ್ನಿಸಲಿಲ್ಲ. ಆದರೆ ಯಾವಾಗ ಸಿನೆಮಾ ಮೂಲಕ ಸತ್ಯವನ್ನು ತೋರಿಸಲು ಹೊರಟಿದ್ದಾರೊ, ಆಗ ಕೇರಳದ ಹೆಸರು ಹಾಳಾಗುತ್ತಿದೆ, ಕೇರಳದ ಕೋಮು ಸೌಹಾರ್ದ ಕೆಡುತ್ತಿದೆ ಎಂದು ಮಾತನಾಡುತ್ತಿದ್ದಾರೆ. ಹಾಗಾದರೆ ಮುಸ್ಲಿಮರಿಗೆ ಬೇಸರವಾದರೆ ಅಥವಾ ಸಿಟ್ಟು ಬಂದರೆ ಕೋಮು ಸೌಹಾರ್ದ ಕೆಡುತ್ತದೆ ಎಂದಾಯಿತಲ್ಲವೆ? ಮುಸ್ಲಿಮರಿಗೆ ಏನೂ ಹೇಳದೆ, ಅವರು ಏನು ಮಾಡಿದರೂ ಸುಮ್ಮನಿರುವುದೇ ಇವರ ಕೋಮು ಸೌಹಾರ್ದವಾ? ನಡೆದ ಸಂಗತಿಗಳನ್ನು ತೋರಿಸಿದರೆ ಅದು ಕೋಮು ಸೌಹಾರ್ದವನ್ನು ಹೇಗೆ ಕೆಡಿಸೀತು? ಹಾಗೆ ನೋಡಿದರೆ ಕೇರಳದಲ್ಲಿ ಅಷ್ಟು ದೊಡ್ಡ ಪ್ರಮಾಣದಲ್ಲಿ ಹಿಂದುಗಳ ಹತ್ಯೆ ಆದಾಗ ಕೋಮು ಸೌಹಾರ್ದ ಕೆಡಬೇಕಿತ್ತು. ಲವ್ ಜಿಹಾದ್ ನಡೆದಾಗಲೂ ಕೋಮು ಸೌಹಾರ್ದ ಹಾಳಾಗಬೇಕಿತ್ತು. ಆವಾಗ ಆಗಿಲ್ಲವೆಂದರೆ ಈಗ ದಿಢೀರನೆ ಆ ಕೋಮು ಸೌಹಾರ್ದದ ಬಗ್ಗೆ ಮುಖ್ಯಮಂತ್ರಿಗೆ ಕಾಳಜಿ ಬಂದಿದ್ದೇಕೆ?

ಕೇರಳದಲ್ಲಿ ಲವ್ ಜಿಹಾದ್ ಎಷ್ಟು ವ್ಯವಸ್ಥಿತವಾಗಿದೆಯೆಂದರೆ ಕರ್ನಾಟಕದಲ್ಲಿ ಈ ರೀತಿಯ ಲವ್ ಜಿಹಾದ್‌ಗೊಳಗಾದ ಹಿಂದು ಯುವತಿಯರನ್ನು ಕೂಡ ಕೇರಳಕ್ಕೆ ಕರೆದುಕೊಂಡು ಹೋಗಲಾಗುತ್ತದೆ. ಆಗ ಹಿಂದು ಹುಡುಗಿಯರ ಪಾಲಕರು ಅಥವಾ ಹಿಂದು ಸಂಘಟನೆಗಳು ಆ ಹುಡುಗಿಯರನ್ನು ಕಾಪಾಡಿಕೊಳ್ಳಲು, ಮರಳಿ ಮನೆಗೆ ಕರೆದುಕೊಂಡುಬರಲು ಕಷ್ಟವಾಗುತ್ತದೆ ಎಂಬುದು ಒಂದು ಕಾರಣವಾದರೆ, ಈ ರೀತಿ ಪ್ರಕರಣಗಳನ್ನು ನಿಭಾಯಿಸಲು, ಅವರನ್ನು ಪಾಲಕರಿಂದ ರಕ್ಷಿಸಿಕೊಂಡು, ಸಂಪೂರ್ಣ ಬ್ರೇನ್ ವಾಶ್ ಮಾಡಿ, ಮತಾಂತರ ಮಾಡಲು ಅತ್ಯಂತ ವ್ಯವಸ್ಥಿತವಾದ ಜಾಲ ಅಲ್ಲಿ ಸಿದ್ಧವಾಗಿದೆ. ಇದು ಲವ್ ಜಿಹಾದ್ ಅಲ್ಲ, ಮಾಮೂಲಿ ಹುಡುಗ-ಹುಡುಗಿ ನಡುವೆ ನಡೆಯುವ ಪ್ರೇಮವಾಗಿದ್ದರೆ, ಅವರೆಲ್ಲ ಹುಡುಗನ ಪರವಾಗಿ ಅಷ್ಟೆಲ್ಲ ಕೆಲಸ ಮಾಡಬೇಕಾದ ಅಗತ್ಯವಾದರೂ ಏನಿದೆ?

ಕಶ್ಮೀರ್ ಫೈಲ್ಸ್ ಸಿನೆಮಾ ಕಾಶ್ಮೀರದಲ್ಲಿ ನಡೆದ ಹಿಂದುಗಳ ನರಮೇಧವನ್ನು ಕಣ್ಣಿಗೆಕಟ್ಟುವಂತೆ ತೋರಿಸಿದರೆ, ಕೇರಳ ಸ್ಟೋರಿ ಕೇರಳದ ಲವ್ ಜಿಹಾದ್ ಕರಾಳ ಮುಖವನ್ನು ತೆರೆದಿಟ್ಟಿತ್ತು. ಫೆ.27ರಂದು ಬಿಡುಗಡೆಯಾಗುತ್ತಿರುವ ಕೇರಳ ಫೈಲ್ಸ್ 2 ಸಿನೆಮಾ ದೇಶಾದ್ಯಂತ ನಡೆಯುತ್ತಿರುವ ಲವ್ ಜಿಹಾದ್, ಇಸ್ಲಾಂ ಮತಾಂತರ ಮತ್ತು ಭಾರತದಲ್ಲಿ ಶರಿಯಾ ಕಾನೂನು ಜಾರಿ ಮಾಡಲು ಯತ್ನಿಸುತ್ತಿರುವ ದುಷ್ಟ ಶಕ್ತಿಗಳನ್ನು ತೋರಿಸಿ, ನಮ್ಮ ಕಣ್ಣು ತೆರೆಸಲಿದೆಯೇನೊ.

ಯಾರನ್ನು ಕಡೆಗಣಿಸಬಾರದು?

ಹೀನಾಂಗಾನತಿರಿಕ್ತಾಂಶ್ಚ ವಿದ್ಯಾಹೀನಾನ್ ವಯೋಧಿಕಾನ್ ।
ಬಲರೂಪವಿಹೀನಾಂಶ್ಚ ಜಾತಿಹೀನಾಂಶ್ಚ ನಾಕ್ಷಿಪೇತ್ ॥

ಅಂಗಹೀನರನ್ನಾಗಲಿ, ಕಡುಬಡವರನ್ನಾಗಲಿ, ವಿದ್ಯಾಹೀನರನ್ನಾಗಲಿ, ಮುದುಕರನ್ನಾಗಲಿ, ಬಲರೂಪಗಳಿಲ್ಲದವರನ್ನಾಗಲಿ ಕಡೆಗಣಿಸಬಾರದು - ಎಂಬುದು ಶ್ಲೋಕಾರ್ಥ.

ದೇವ ನಿರ್ಮಿತ ಜಗತ್ತು ಹಲವು ಬಗೆಯ ವೈವಿಧ್ಯಗಳ ಆಗರ. ಎಲ್ಲವೂ ಭಗವಂತನ ಸೃಷ್ಟಿಯೇ ಆಗಿದೆ. ಸ್ಥಾವರ-ಜಂಗಮಗಳೆಲ್ಲ ಆವನ ಕೊಡುಗೆ. ಎಲ್ಲರಿಗೂ, ಎಲ್ಲದಕ್ಕೂ ಈ ಜಗತ್ತಿನಲ್ಲಿ ಚೆನ್ನಾಗಿ ಬದುಕುವುದಕ್ಕೆ ಅಧಿಕಾರವಿದೆ. ಯಾರ ಅಧಿಕಾರವನ್ನೂ ಕಿತ್ತುಕೊಳ್ಳುವ ಹಕ್ಕು ಯಾರಿಗೂ ಇಲ್ಲ. ಇದರ ಬದಲಾಗಿ ಎಲ್ಲರೊಂದಿಗೂ ಪ್ರೀತಿಯಿಂದ, ಸಾಮರಸ್ಯದಿಂದ ಹೊಂದಿಕೊಳ್ಳಬೇಕಾದ ಅವಶ್ಯಕತೆಯಿದೆ. ಪ್ರಾಚೀನ ಕಾಲದ ಮನೆಯೊಂದನ್ನು ನೋಡಿದರೆ ಪ್ರೀತಿಯಿಂದ ಕೂಡಿದ ಸಾಮರಸ್ಯದ ವಾತಾವರಣವನ್ನು ಕಾಣುತ್ತೇವೆ. ಮನೆಯಲ್ಲಿ ಮನುಷ್ಯರಿದ್ದಂತೆ ನಾಯಿ, ಬೆಕ್ಕು, ಕುರಿ, ಕೋಳಿ, ಎಮ್ಮೆ, ದನ.... ಹೀಗೆ ಎಲ್ಲವೂ ಇರುತ್ತಿದ್ದವು. ಈ ಎಲ್ಲ ಪ್ರಾಣಿಗಳ ಜತೆಗೆ ಮನುಷ್ಯ ಹೊಂದಿಕೊಂಡು, ಎಲ್ಲರೊಳು ಒಂದಾಗಿ ಬದುಕುತ್ತಿದ್ದ. ಸಮದರ್ಶಿತ್ವ ಅವನಲ್ಲಿರುತ್ತಿತ್ತು.



ಸಮಾಜದಲ್ಲಿ ಎಲ್ಲವೂ ಬದುಕುವ ಪರಿ ಹೀಗಿರುವಾಗ ಮನುಷ್ಯರೂ 'ಪರಸ್ಪರಂ ಭಾವಯಂತಃ' ಎಂಬ ತತ್ತ್ವಕ್ಕೆ ಪೂರಕವಾಗಿ ಹೊಂದಿಕೊಂಡು ಬದುಕಬೇಕಾಗಿದೆ. ಸಮಾಜದಲ್ಲಿ ಬಡವರು-ಬಲ್ಲಿದರು, ಜ್ಞಾನಿಗಳು-ಅಜ್ಞಾನಿಗಳು, ಸಶಕ್ತರು- ದುರ್ಬಲರು ಹೀಗೆ ವಿವಿಧ ಬಗೆಯ ಜನರಿರುತ್ತಾರೆ. ಬಲವಂತರಿರುವಂತೆ ಬಲಹೀನರೂ ಇರುತ್ತಾರೆ. ವಿದ್ಯಾವಂತರಂತೆ ವಿದ್ಯಾಹೀನರೂ ಇರುತ್ತಾರೆ. ಜಗತ್ತೇ ವೈವಿಧ್ಯಮಯವಾದುದರಿಂದ ಇಲ್ಲಿರುವ ಜನರು ವಿವಿಧ ಪ್ರಕಾರದವರಾಗಿರುತ್ತಾರೆ. ನ್ಯೂನಾಧಿಕ್ಯಗಳಿಂದ ಕೂಡಿದವರಾಗಿರುತ್ತಾರೆ. ಇವೆಲ್ಲವೂ ಭಗವಂತನ ಲೋಕದಲ್ಲಿ ಸಹಜ. ಅವರವರು ಪೂರ್ವಜನ್ಮದಲ್ಲಿ ಎಸಗಿದ ಪಾಪ-ಪುಣ್ಯಗಳ ಪರಿಣಾಮವಾಗಿ ಅದಕ್ಕನುಗುಣವಾಗಿ ರೂಪು ತಳೆಯುತ್ತಾರೆ.

ಸಮಾಜದಲ್ಲಿ ಯಾರನ್ನೂ ಕಡೆಗಣಿಸುವ ಹಕ್ಕು ಯಾರಿಗೂ ಇಲ್ಲ. ಅವರವರ ಚಿಂತನೆಗನುಸಾರವಾಗಿ ಬದುಕಬಹುದಾಗಿದೆ. ನಾನೇನೋ ಚೆನ್ನಾಗಿದ್ದೇನೆ. ಐಶ್ವರ್ಯವಂತನಾಗಿದ್ದೇನೆ.... ಇತ್ಯಾದಿ ಭಾವಿಸಿಕೊಂಡು ದುರ್ಬಲರತ್ತ ಸವಾರಿ ಮಾಡಬಾರದು.

ಅಂಗಹೀನರಾಗಿದ್ದರೆ, ಮುದುಕರಾಗಿದ್ದರೆ, ರೋಗಿಗಳಾಗಿದ್ದರೆ ಪ್ರಥಮ ಪ್ರಾಶಸ್ತ್ಯ ಇವರಿಗೆ ಸಲ್ಲಬೇಕು. ಬಡವರಿಗೂ ಸಮಾನ ಸ್ಥಾನಮಾನ ದೊರಕಿಸಿಕೊಡಬೇಕು. ವಿದ್ಯಾಹೀನರಿಗೂ ಸರಿಯಾದ ಗೌರವ ಸಲ್ಲಬೇಕು. ರೂಪ-ಕುರೂಪಗಳು ಕಡೆಗಣಿಸುವುದಕ್ಕೆ ಕಾರಣವಾಗಬಾರದು. ಯಾರೂ ಅಂಗಹೀನತೆ, ಕುರೂಪ.... ಇತ್ಯಾದಿಗಳನ್ನು ತಾವಾಗಿ ಮಾಡಿಕೊಳ್ಳುವುದಿಲ್ಲ. ಎಲ್ಲ ಭಗವಂತನ ಕೊಡುಗೆ. ಒಂದಿಷ್ಟು ಕೊರತೆಯಿದೆ ಎಂದ ಮಾತ್ರಕ್ಕೆ ತಿರಸ್ಕಾರ ಸಲ್ಲದು. ಭಗವಂತ ಒಲಿದರೆ ವಿಷವೂ ಅಮೃತವಾಗುತ್ತದೆ. ಕುರೂಪವೂ ಸುರೂಪವಾಗುತ್ತದೆ. ಜಡನೂ ಚೈತನ್ಯನಾಗುತ್ತಾರೆ. ಇದಕ್ಕೆ ಪೂರಕವಾದ ಉದಾಹರಣೆಗಳು ಪುರಾಣೇತಿಹಾಸಿಗಳಲ್ಲಿ ಸಿಗುತ್ತದೆ.

ಯಾರನ್ನೂ ತಿರಸ್ಕರಿಸುವುದು ಮನುಷ್ಯನಿಗೆ ಹೇಳಿದ ವಿಷಯವಲ್ಲ. ಯಾರನ್ನೂ ಕಡೆಗಣಿಸದೇ ಬದುಕಬೇಕು. ಅಷ್ಟೇ ಅಲ್ಲ, ಎಲ್ಲರನ್ನೂ ಗೌರವಿಸುವ ಕ್ರಮವನ್ನು ರೂಢಿಸಿಕೊಳ್ಳಬೇಕು. ಇಂತಹ ಸ್ವಭಾವವೇ ಉನ್ನತಿಗೂ, ಗೌರವಕ್ಕೂ, ಎಲ್ಲರ ಸದ್ಭಾವಕ್ಕೂ ಕಾರಣವಾಗುತ್ತದೆ.

ಸ್ವರ್ಗ ಯಾಕೆ ಮೇಲಿದೆ? ನರಕ ಯಾಕೆ ಕೆಳಗಿದೆ?

ಪದಸಂಚಲನ

• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಸ್ವರ್ಗ-ನರಕಗಳಬಗ್ಗೆಶ್ರುತಿ-ಸ್ಮೃತಿ-ಪುರಾಣಗಳಲ್ಲಿಉಲ್ಲೇಖವಿದೆಯೆಂಬ ಅಂಶವನ್ನು ನೋಡಿದೆವು. ಜೊತೆಗೆ ಸ್ವರ್ಗ-ನರಕಗಳನ್ನು ಹೊಂದಲು ಕಾರಣವಾಗುವ ಕರ್ಮಗಳನ್ನೂ ನೋಡಿದೆವು. ಇನ್ನು ಮುಂದೆ ಗರುಡ ಪುರಾಣದಲ್ಲಿ ವಿವರಿಸಿದಂತೆ ನರಕಗಳ ಬಗ್ಗೆ ತಿಳಿದುಕೊಳ್ಳುವ ಮೊದಲು, ಸ್ವರ್ಗ-ನರಕಗಳ ಬಗ್ಗೆಇನ್ನಷ್ಟುತಿಳಿದುಕೊಳ್ಳೋಣ. ಸಾಮಾನ್ಯವಾಗಿಸ್ವರ್ಗ ಮತ್ತು ನರಕಗಳು ಎಲ್ಲಿವೆ ಎಂದು ಕೇಳಿದರೆ, ಸ್ವರ್ಗವು ಮೇಲಿದೆ ಎಂಬುದಾಗಿಯೂ, ನರಕವು ಕೆಳಗಿದೆ ಎಂಬುದಾಗಿಯೂ ಹೇಳಲಾಗುತ್ತದೆ. ಇದು ಕೇವಲ ಶಾಸ್ತ್ರಗಳಲ್ಲಿ ಅಲ್ಲ, ಬದಲಿಗೆ ಜನಸಾಮಾನ್ಯರೂ ಇದನ್ನು ತಿಳಿದಿದ್ದಾರೆ. ಹಾಗಿದ್ದರೆ ಸ್ವರ್ಗ ಯಾಕೆ ಮೇಲೆಯೇ ಇದೆ? ನರಕವು ಯಾಕೆ ಕೆಳಗೆ ಇರುವಂತೆಯೇ ಪುರಾಣಾದಿಗಳಲ್ಲಿ ಚಿತ್ರಿಸಲಾಗಿದೆ ಎಂಬ ಜಿಜ್ಞಾಸೆಯುಂಟಾಗುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವ ಮೊದಲು ಸ್ವರ್ಗ ಮತ್ತು ನರಕಗಳ ಸ್ವರೂಪವನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ.

ಬ್ರಹ್ಮನಿಂದ ಸೃಷ್ಟವಾದ ಈ ವಿಶ್ವದಲ್ಲಿ ಒಟ್ಟು ಹದಿನಾಲ್ಕು ಭುವನಗಳಿವೆ ಎಂಬುದಾಗಿ ಶಾಸ್ತ್ರಗಳು ವಿವರಿಸುತ್ತವೆ. ಈ ಹದಿನಾಲ್ಕು ಭುವನಗಳು ಅಥವಾ ಲೋಕಗಳು ಎಲ್ಲ ಜೀವರ ವಾಸಸ್ಥಾನವಾಗಿದ್ದು, ಪೂರ್ವಜನ್ಮದ ಸುಕೃತ ಅಥವಾ ದುಷ್ಕೃತಗಳ ಫಲವನ್ನು ಅನುಭವಿಸುತ್ತಾರೆ. ಇಲ್ಲಿ ಭೂಲೋಕವೆಂಬುದು ಪಾಪ-ಪುಣ್ಯಗಳೆರಡರ ಮಿಶ್ರಣದಿಂದ ದೊರೆಯುವಂಥ ಲೋಕ. ಇದು ಭುವನದ ಮಧ್ಯಭಾಗದಲ್ಲಿದೆ. ಇದರ ಮೇಲೆ ಭುವಃ, ಸುವಃ, ಮಹಃ, ಜನಃ, ತಪಃ, ಸತ್ಯ ಎಂಬ ಆರು ಲೋಕಗಳು ಮೇಲುಮೇಲುಗಡೆಯಿವೆ. ಭೂಲೋಕವನ್ನು ಮಧ್ಯವೆಂದು ಪರಿಗಣಿಸಿದರೆ ಅದರ ಕೆಳಗಡೆ ಕ್ರಮವಾಗಿ ಅತಲ, ವಿತಲ, ಸುತಲ, ತಲಾತಲ, ಮಹಾತಲ, ರಸಾತಲ, ಪಾತಾಲಗಳೆಂಬ ಏಳು ಲೋಕಗಳು ವ್ಯಾಪಿಸಿವೆ. ಒಟ್ಟಿನಲ್ಲಿ ಭೂಮಿಯಿಂದ ಮೇಲೆ ಒಂದಿಷ್ಟು ಲೋಕಗಳು ಮತ್ತು ಭೂಲೋಕದ ಕೆಳಭಾಗದಲ್ಲಿ ಉಳಿದ ಲೋಕಗಳೆಂಬುದಾಗಿ ಭುವನದ ವರ್ಣನೆಯು ನಮಗೆ ಪರ್ಯಾಪ್ತ ಪ್ರಮಾಣದಲ್ಲಿ ದೊರೆಯುತ್ತದೆ.

ಭುವವೇ ಮೊದಲಾದ ಲೋಕಗಳನ್ನು ಸ್ವರ್ಗಗಳೆಂಬುದಾಗಿಯೂ, ಕೆಳಗಿನ ಲೋಕಗಳನ್ನು ನರಕಗಳೆಂಬುದಾಗಿಯೂ ಕರೆಯಲಾಗುತ್ತದೆ. ಸ್ವರ್ಗದಲ್ಲಿ ಭೂಲೋಕಕ್ಕಿಂತ ಹೆಚ್ಚಿನ ಸುಖದ ಅನುಭವ ಪ್ರಾಪ್ತವಾಗುತ್ತದೆ ಎಂಬುದಾಗಿಯೂ, ಮೇಲುಮೇಲಕ್ಕೆ ಹೋದಂತೆ ಸುಖದ ಪ್ರಮಾಣ ಹೆಚ್ಚುತ್ತದೆ ಎಂಬುದಾಗಿಯೂ ಶಾಸ್ತ್ರಗಳು ತಿಳಿಸುತ್ತವೆ. ಅದೇ ರೀತಿಯಲ್ಲಿ ಭೂಲೋಕಕ್ಕಿಂತ ಕೆಳಗಿನ ಲೋಕಗಳಿಗೆ ಹೋದಂತೆಲ್ಲ ದುಃಖದ ಅನುಭವ ಹೆಚ್ಚುತ್ತದೆಂಬುದಾಗಿಯೂ ಶಾಸ್ತ್ರಗಳು ಸ್ಪಷ್ಟವಾಗಿ ತಿಳಿಸಿವೆ. ಇವೆರಡೂ ಕೂಡ ನಮ್ಮ ಕರ್ಮದಲ್ಲಿನ ಧರ್ಮಾಧರ್ಮಗಳ ಆಧಾರದಲ್ಲಿಯೇ ಪ್ರಾಪ್ತವಾಗುವಂಥವು. ಪುಣ್ಯದ ಅಂಶವು ಹೆಚ್ಚಿದಂತೆಲ್ಲ ಊರ್ಧ್ವಲೋಕಗಳೂ, ಪಾಪದ ಅಂಶ ಹೆಚ್ಚಿದಂತೆಲ್ಲ ಅಧೋಲೋಕಗಳೂ ಹಾಗೂ ಅವುಗಳಿಂದ ಉಂಟಾಗುವ ಸುಖ ಮತ್ತು ದುಃಖಗಳೂ ಪ್ರಾಪ್ತವಾಗುತ್ತವೆ. ಇಲ್ಲಿ ಪುಣ್ಯಾಧಿಕ್ಯದಿಂದ ಸ್ವರ್ಗವೂ, ಪಾಪಾಧಿಕ್ಯದಿಂದ ನರಕವೂ, ಅವೆರಡರ ಸಮಪ್ರಮಾಣದಲ್ಲಿ ಮನುಷ್ಯಲೋಕವೂ ದೊರೆಯುವವು ಎಂಬುದಾಗಿ ಹೇಳಲಾಗಿದೆ. ಇದು ಹೀಗೇಕೆ ಎಂಬ ಪ್ರಶ್ನೆಗೆ ಉತ್ತರವನ್ನು ಪಡೆದುಕೊಳ್ಳುವ ಸಲುವಾಗಿ ನಾವು ತ್ರಿಗುಣಗಳ ಸ್ವರೂಪವನ್ನೂ, ಅವುಗಳ ಕಾರ್ಯವನ್ನೂ ಅರ್ಥೈಸಿಕೊಳ್ಳಬೇಕಾಗುತ್ತದೆ. ಯಾಕೆಂದರೆ ಈ ಲೋಕಗಳ ಕಲ್ಪನೆ ಮತ್ತು ಅವುಗಳಲ್ಲಿ ನಮಗೆ ಉಂಟಾಗುವ ಭೋಗದ ವರ್ಣನೆಗಳೆಲ್ಲವೂ ತ್ರಿಗುಣಗಳನ್ನು ಆಧರಿಸಿಯೇ ಇರುವಂಥವು.

ಪ್ರಪಂಚದ ಸರ್ವವೂ ತ್ರಿಗುಣಾತ್ಮಕವೇ ಆಗಿವೆ. ಆತ್ಮನ ಶುದ್ಧ ಸ್ವರೂಪವೊಂದನ್ನು ಹೊರತುಪಡಿಸಿ ಕಾರ್ಯರೂಪವಾದ್ದೆಲ್ಲವೂ ತ್ರಿಗುಣಾತ್ಮಕವೇ ಆಗಿದೆ. ಗುಣಗಳು ಸತ್ತ್ವ, ರಜಸ್ಸು ಮತ್ತು ತಮಸ್ಸು ಎಂಬುದಾಗಿ ಮೂರು ವಿಧ. ಈ ಮೂರು ಗುಣಗಳ ಸ್ವಭಾವವನ್ನು ಸಾಂಖ್ಯಕಾರಿಕೆಯಲ್ಲಿ ಈ ರೀತಿಯಲ್ಲಿ ತಿಳಿಸಲಾಗಿದೆ:

ಪ್ರೀತ್ಯಪ್ರೀತಿವಿಷಾದಾತ್ಮಕಾಃಪ್ರಕಾಶಪ್ರವೃತ್ತಿನಿಯಮಾರ್ಥಾಃ ।
ಅನ್ಯೋನ್ಯಾಭಿಭವಾಶ್ರಯಜನನಮಿಥುನವೃತ್ತಯಶ್ಚ ಗುಣಾಃ ॥

ಇಲ್ಲಿ ಸತ್ತ್ವಗುಣವನ್ನು ಪ್ರೀತ್ಯಾತ್ಮಕವೆಂಬುದಾಗಿ ಕರೆಯಲಾಗಿದೆ. ಅರ್ಥಾತ್ ಸತ್ತ್ವಗುಣವು ಸ್ವಭಾವತಃ ಸುಖರೂಪವಾದುದು. ಹಾಗೆಯೇ ರಜೋಗುಣವು ಸ್ವಭಾವತಃ ದುಃಖರೂಪವಾದುದು. ತಮೋಗುಣವು ಮೋಹರೂಪವಾದುದು. ಇದು ತ್ರಿಗುಣಗಳ ಸ್ವಭಾವ. ಅವುಗಳ ಪ್ರಯೋಜನವನ್ನು ತಿಳಿಸುತ್ತಾ ಸತ್ತ್ವಗುಣದ ಪ್ರಯೋಜನವು ಪ್ರಕಾಶವೆಂಬುದಾಗಿಯೂ, ರಜೋಗುಣದ ಪ್ರಯೋಜನವು ಪ್ರವೃತ್ತಿ ಎಂಬುದಾಗಿಯೂ ಮತ್ತು ತಮೋಗುಣದ ಪ್ರಯೋಜನವು ನಿಯಮನವೆಂಬುದಾಗಿಯೂ ತಿಳಿಸಲಾಗಿದೆ. ಇದನ್ನು ಹೀಗೆ ವಿವರಿಸಬಹುದು - ಸತ್ತ್ವಗುಣವು ಎಲ್ಲವುಗಳ ಪ್ರಕಾಶ ಅಥವಾ ಜ್ಞಾನವನ್ನುಂಟುಮಾಡುತ್ತದೆ. ರಜೋಗುಣವು ಸ್ವಭಾವತಃ ಪ್ರವೃತ್ತಿಕರವಾಗಿರುವುದರಿಂದ ಉಳಿದ ಗುಣಗಳ ಕಾರ್ಯವು ಸಂಭವಿಸಬೇಕಾದರೆ ಅವಕ್ಕೆ ರಜೋಗುಣದ ಸಹಾಯ ಬೇಕು. ರಜೋಗುಣವು ಸರ್ವದಾ ಕ್ರಿಯಾಶೀಲವಾಗಿರುವುದರಿಂದ ಉಳಿದ ಗುಣಗಳಿಗೂ ಅದು ಪ್ರೇರಕವಾಗಿದೆ. ಇದರ ಪ್ರೇರಣೆಯಿಂದಲೇ ಕ್ರಿಯೆ ಎಂಬುದು ಸಂಭವಿಸುತ್ತದೆ.

ತಮೋಗುಣವು ಸ್ವತಃ ಜಡರೂಪವಾದುದರಿಂದ ಆವರಣವನ್ನು ಮತ್ತು ಆ ಮೂಲಕ ಎಲ್ಲವುಗಳ ನಿಯಮನವನ್ನು ಮಾಡುತ್ತದೆ. ಹೀಗೆ ಈ ಮೂರೂ ಗುಣಗಳು ಪರಸ್ಪರ ವಿಲಕ್ಷಣವಾದ ಪರಿಣಾಮವನ್ನು ಹೊಂದಿವೆ. ಈ ಗುಣಗಳು ಯಾವತ್ತೂ ಒಂದನ್ನು ಬಿಟ್ಟು ಇನ್ನೊಂದು ಇರಲಾರವು. ಹಾಗಿದ್ದರೂ ಅವುಗಳು ಪರಸ್ಪರ ಒಬ್ಬರನ್ನೊಬ್ಬರು ಸೋಲಿಸಲು ಪ್ರಯತ್ನಿಸುತ್ತಿರುತ್ತವೆ. ತಮ್ಮ ತಮ್ಮ ಆಧಿಪತ್ಯವನ್ನು ಸ್ಥಾಪಿಸಲು ನಿರಂತರ ಸಂಘರ್ಷವನ್ನು ನಡೆಸುತ್ತಿರುತ್ತವೆ. ಜೊತೆಗೆ ಅನ್ಯೋನ್ಯಾಶ್ರಯಸ್ವಭಾವವೂ ಆಗಿವೆ. ಅರ್ಥಾತ್ ತಮ್ಮ ತಮ್ಮ ಕಾರ್ಯವನ್ನು ನಡೆಸಲು ಅವು ಉಳಿದ ಗುಣಗಳನ್ನು ಕೂಡ ಆಶ್ರಯಿಸುತ್ತವೆ. ಜೊತೆಗೆ ತಮ್ಮ ತಮ್ಮ ಪರಿಮಾಣದ ವರ್ಧನೆಗೋಸ್ಕರ ಉಳಿದವುಗಳನ್ನು ಅವಲಂಬಿಸುತ್ತವೆ.

ಇಂಥ ಮೂರುಗುಣಗಳ ಸ್ವಭಾವವೇನು ಎಂಬುದನ್ನು ಮುಂದಿನ ಕಾರಿಕೆಯಲ್ಲಿ ವಿವರಿಸಲಾಗಿದೆ.

ಸತ್ತ್ವಂ ಲಘು ಪ್ರಕಾಶಕಂ ಇಷ್ಟಮುಪಷ್ಟಂಭಕಂ ಚಲಂ ಚ ರಜಃ ।
ಗುರು ವರಣಕಮೇವ ತಮಃ ಪ್ರದೀಪವಚ್ಚಾರ್ಥತೋ ವೃತ್ತಿಃ॥ ಎಂಬುದಾಗಿ.

ಮೂರು ಗುಣಗಳಲ್ಲಿ ಸತ್ತ್ವಗುಣವನ್ನು ಇಲ್ಲಿ ಲಘು ಮತ್ತು ಪ್ರಕಾಶಕ ಎಂದು ತಿಳಿಸಲಾಗಿದೆ. ಅರ್ಥಾತ್ ಸತ್ತ್ವಗುಣವು ಯಾವ ವಸ್ತುವಿನಲ್ಲಿ ಅಧಿಕವಾಗುವುದೋ ಆ ವಸ್ತುವಿನಲ್ಲಿ ಲಘುತ್ವ ಉಂಟಾಗುತ್ತದೆ. ಆ ವಸ್ತು ಹಗುರವಾಗುವುದರಿಂದ ಪತನಕ್ರಿಯೆಗೆ ವಿರುದ್ಧವಾದ ಕಾರ್ಯವು ಅದರಲ್ಲಿ ಉಂಟಾಗುತ್ತದೆ. ಜೊತೆಗೆ ಸತ್ತ್ವಗುಣವು ಪ್ರಕಾಶಕರವಾಗಿದೆ. ಅರ್ಥಾತ್ ಜ್ಞಾನವನ್ನುಂಟುಮಾಡುವಂಥದ್ದು. ಅದನ್ನೇ ಗೀತೆಯಲ್ಲಿ 'ಸತ್ತ್ವಾತ್ ಸಂಜಾಯತೇ ಜ್ಞಾನಮ್' ಎಂಬುದಾಗಿ ತಿಳಿಸಲಾಗಿದೆ. ರಜೋಗುಣವು ಅತ್ಯಂತ ಚಂಚಲಸ್ವಭಾವದ್ದು. ಯಾವುದು ಅಧಿಕಕ್ರಿಯಾಶೀಲವೋ ಅದು ಸಹಜವಾಗಿಯೇ ಚಂಚಲಸ್ವಭಾವದ್ದಾಗಿರುತ್ತದೆ. ಜೊತೆಗೆ ಇದು ಉಳಿದ ಗುಣಗಳ ಕಾರ್ಯದಲ್ಲಿ ಪ್ರೇರಕವೂ ಆಗಿದೆ. ತಮೋಗುಣವು ಗುರುತ್ವವೆಂಬ ಸ್ವಭಾವವನ್ನುಳ್ಳದ್ದು. ಜೊತೆಗೆ ಆವರಣವನ್ನು ಉಂಟುಮಾಡುವ ಸ್ವಭಾವದ್ದು. ಹಾಗಾಗಿ ಸತ್ತ್ವಾಧಿಕ್ಯದಿಂದ ಕೂಡಿದ ಯೋಗಿಗಳು ಸಹಜವಾಗಿ ಜ್ಞಾನಿಗಳಾಗಿರುತ್ತಾರೆ. ಅವರಲ್ಲಿ ತೃಪ್ತಿ ಮತ್ತು ಶಾಂತಿ ತುಂಬಿರುತ್ತದೆ. ರಜೋಗುಣವು ಹೆಚ್ಚಾದಂತೆಲ್ಲ ಕ್ರಿಯಾಶೀಲತೆ ಹೆಚ್ಚುತ್ತದೆ. ಅತೃಪ್ತಿ ಹೆಚ್ಚುತ್ತದೆ. ತೃಪ್ತಿ ಎಂಬುದು ಇರುವುದಿಲ್ಲ. ಇನ್ನಷ್ಟು ಮತ್ತಷ್ಟು ಎಂಬ ಭಾವ ಉಂಟಾಗುತ್ತದೆ. ಲೋಭಕ್ಕೆ ಇದೇ ಮೂಲ. ಆದರಿಂದ ನಿರಂತರವಾಗಿ ಕ್ರಿಯೆಗಳಲ್ಲಿ ತೊಡಗುವುದರಿಂದ ದುಃಖವು ಸಹಜವಾಗಿಯೇ ಉದ್ಭವಿಸುತ್ತದೆ. ಅದು ದೈಹಿಕ ಪರಿಶ್ರಮಜನ್ಯವಾದ ದುಃಖವಿರಬಹುದು ಅಥವಾ ಇಷ್ಟಪಟ್ಟ ಸಂಗತಿಯ ಅಲಭ್ಯದಿಂದ ಉಂಟಾದ ದುಃಖವಿರಬಹುದು. ಒಟ್ಟಿನಲ್ಲಿ ವಿಷಾದವೆಂಬುದು ರಜೋಗುಣದ ಕಾರ್ಯವೇ ಆಗಿದೆ. ಮನುಷ್ಯರಲ್ಲಿ ಹೆಚ್ಚಾಗಿ ರಜೋಗುಣವೇ ಜನ್ಮತಃ ಹೆಚ್ಚಿರುತ್ತದೆ. ತಮೋಗುಣವು ಇದಕ್ಕೆ ವಿರುದ್ಧವಾಗಿ ಆವರಣ ಮತ್ತು ಜಡಸ್ವಭಾವದ್ದಾದ್ದರಿಂದ ಭಾರ, ಜಾಡ್ಯದಿಂದ ಕೂಡಿರುತ್ತದೆ. ಶರೀರ, ಮನಸ್ಸುಗಳೆಲ್ಲ ಭಾರವಾದಂತೆ ಅಲ್ಲಿ ಕ್ರಿಯೆ ಎಂಬುದು ಇರುವುದಿಲ್ಲ. ಸತ್ತ್ವಕ್ಕೆ ವಿರುದ್ಧವಾದ ಸ್ವಭಾವದ್ದಾಗಿರುವುದರಿಂದ ಅಜ್ಞಾನ, ಆದರಿಂದುಂಟಾಗುವ ಮೋಹ, ಜಾಡ್ಯ, ರೋಗ, ಅಧಿಕ ನಿದ್ರೆ, ಆಲಸ್ಯ ಮೊದಲಾದ ಎಲ್ಲ ದೋಷಗಳಿಂದ ವ್ಯಕ್ತಿಯು ಕೂಡಿಕೊಳ್ಳುತ್ತಾನೆ.

ಒಟ್ಟಿನಲ್ಲಿ ಸತ್ತ್ವವು ಹಗುರವೆಂಬ ಸ್ವಭಾವದ್ದೂ, ತಮೋಗುಣವು ಭಾರವೆಂಬ ಸ್ವಭಾವದ್ದೂ ಎಂಬುದು ನಿಶ್ಚಿತ. ಈಗ ಸ್ವರ್ಗ-ನರಕಗಳಿಗೆ ಕಾರಣವಾಗುವ ಕರ್ಮದ ಸ್ವಭಾವವನ್ನು ನೋಡೋಣ. ಪುಣ್ಯವೆಂದರೆ ಅದು ಸತ್ತ್ವದ ಕಾರ್ಯ. ಪಾಪವು ತಮೋಗುಣದ ಕಾರ್ಯ. ಹಾಗಾಗಿ ಪುಣ್ಯಾಧಿಕ್ಯವೆಂದರೆ ಅದು ಸತ್ತ್ವಾಧಿಕ್ಯವೆಂದೇ ಅರ್ಥ. ಯಾವ ವ್ಯಕ್ತಿಯಲ್ಲಿ ಸತ್ತ್ವಾಧಿಕ್ಯವಿದೆಯೋ ಆತನೇ ಪುಣ್ಯಕಾರ್ಯವನ್ನು ಮಾಡುತ್ತಾನೆ. ಈ ಕಾರ್ಯದ ಫಲವಾದ ಪುಣ್ಯವೂ ಸತ್ತ್ವವೇ ಆಗಿದೆ. ಹಾಗಾಗಿ ಪುಣ್ಯವು ಹೆಚ್ಚಾದಂತೆಲ್ಲ ಸತ್ತ್ವಗುಣದ ಸ್ವಭಾವವಾದ ಲಘುತ್ವವೂ ಉಂಟಾಗಲೇಬೇಕು. ಯಾವ ವಸ್ತು ಹಗುರವಾದುದೋ ಅದು ಒಂದೋ ತೇಲುತ್ತದೆ ಅಥವಾ ಊರ್ಧ್ವಮುಖವಾಗಿ ಮೇಲುಮೇಲಕ್ಕೆ ಸಾಗುತ್ತದೆ. ಇದಕ್ಕೆ ಉದಾಹರಣೆಯೆಂದರೆ ದೀಪಶಿಖೆ. ಮೇಣದ ಬತ್ತಿಯನ್ನು ಪ್ರಜ್ವಲಿಸಿ, ಅದನ್ನು ಕೆಳಮುಖವಾಗಿ ಹಿಡಿದುಕೊಂಡರೂ ಜ್ವಾಲೆ ಮಾತ್ರ ಮೇಲ್ಮುಖವಾಗಿಯೇ ಹೋಗುತ್ತದೆ. ಯಾಕೆಂದರೆ ಬೆಂಕಿಯಲ್ಲಿ ಸತ್ತ್ವಗುಣದ ಆಧಿಕ್ಯವಿದೆ. ಜೊತೆಗೆ ಅದು ಅತ್ಯಂತ ಹಗುರವಾದುದು. ಬೆಳಕು, ಹೊಗೆ ಇವುಗಳೆಲ್ಲ ಅತ್ಯಂತ ಹಗುರವಾದವುಗಳೆಂಬ ಕಾರಣದಿಂದಲೇ ಅವು ಊರ್ಧ್ವಮುಖಿಯಾಗಿ ಸಾಗುತ್ತವೆ. ಪುಣ್ಯಾಧಿಕ್ಯ ಉಂಟಾದಾಗಲೂ ಜೀವನಿಗೆ ಇದೇ ಸ್ಥಿತಿಯೊದಗುತ್ತದೆ. ಹಾಗಾಗಿ ಆತ ಈ ಕರ್ಮಲೋಕದಿಂದ ಪುಣ್ಯಲೋಕಕ್ಕೆ ಸಾಗುತ್ತಾನೆ. ಅರ್ಥಾತ್ ಮೇಲುಮೇಲಕ್ಕೆ ಸಾಗುತ್ತಾನೆ. ಸ್ವರ್ಗವೆಂದರೆ ಅದು ಪುಣ್ಯದಿಂದ ದೊರಕುವಂಥದ್ದು. ಪುಣ್ಯವು ಸತ್ತ್ವವೇ ಆಗಿರುವುದರಿಂದ ಅದು ಮೇಲ್ಭಾಗದಲ್ಲಿಯೇ ಇರುತ್ತದೆ.

ಇದಕ್ಕೆ ವಿರುದ್ಧವಾಗಿ ತಮೋಗುಣದ ಕಾರ್ಯವಾದ ಗುರುತ್ವವು ಹೆಚ್ಚಾದಂತೆಲ್ಲ ವಸ್ತು ಕೆಳಮುಖವಾಗಿ ಸಾಗುತ್ತದೆ. ಅದನ್ನು ಪತನವೆಂಬುದಾಗಿ ಕರೆಯುತ್ತೇವೆ. ಪಾಪಕರ್ಮವು ತಮೋಗುಣದ ಕಾರ್ಯ. ತಮಸ್ಸು ಹೆಚ್ಚಾದಂತೆ ಆಯಾ ವಸ್ತು ಭಾರವಾಗುತ್ತದೆ. ಹಾಗಾಗಿ ಅದು ಕೆಳಮುಖವಾಗಿ ಸಂಚರಿಸುವುದು ಸಹಜ. ಇದೇ ರೀತಿಯಲ್ಲಿ ಪಾಪವು ಹೆಚ್ಚಾದಂತೆ ಅದು ಜೀವವನ್ನು ಕೆಳಕ್ಕೆ ತಳ್ಳುತ್ತದೆ. ನರಕವು ಪಾಪಕರ್ಮದ ಆಧಿಕ್ಯದಿಂದ ದೊರೆಯುವಂಥದ್ದು. ಇದನ್ನೇ ಭಗವದ್ಗೀತೆಯಲ್ಲಿ ಹೀಗೆ ವರ್ಣಿಸಲಾಗಿದೆ:

ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾಃ ಅಧೋ ಗಚ್ಛಂತಿ ತಾಮಸಾಃ ।
ಜಘನ್ಯಗುಣವೃತ್ತಿಸ್ಥಾಃ ಮಧ್ಯೇ ತಿಷ್ಠಂತಿ ರಾಜಸಾಃ॥ ಎಂಬುದಾಗಿ.

ನಮ್ಮ ಪ್ರಾಚೀನರು ಸ್ವರ್ಗ-ನರಕಾದಿಗಳ ವರ್ಣನೆಯನ್ನು ಮಾಡುವಾಗ ತ್ರಿಗುಣಗಳ ಸ್ವಭಾವವನ್ನು ಅರ್ಥೈಸಿಕೊಂಡು ಅದರ ಆಧಾರದಲ್ಲಿ ಇವುಗಳನ್ನೆಲ್ಲ ವಿವರಿಸಿದ್ದಾರೆ.

ನಾಯಕತ್ವ, ರಾಜಕೀಯ ಮತ್ತು ಶೈಕ್ಷಣಿಕ ಸಂಸ್ಥೆಗಳ ಮೌನ ಕುಸಿತ

▸ ಡಾ. ಶರಣ್ ಕುಮಾರ್ ಶೆಟ್ಟಿ

ಜ್ಞಾನ ಸೃಷ್ಟಿ, ಬೌದ್ಧಿಕ ಸ್ವಾತಂತ್ರ್ಯ ಮತ್ತು ವಿದ್ಯಾರ್ಥಿ ಕೇಂದ್ರಿತ ಅಭಿವೃದ್ಧಿಗೆ ಮೀಸಲಿರಬೇಕಾದ ಶೈಕ್ಷಣಿಕ ಜಗತ್ತು ಇಂದು ಒಂದು ಅಸಹಜವಾದ ವಾಸ್ತವವನ್ನು ಎದುರಿಸುತ್ತಿದೆ. ನಾಯಕತ್ವದ ಒಳಾಂಗಣ ಸಂಘರ್ಷಗಳಿಂದ ಉಂಟಾಗುವ ಸಂಸ್ಥಾ ರಾಜಕೀಯ. ಮೇಲ್ದರ್ಜೆಯ ಆಡಳಿತಾಧಿಕಾರಿಗಳ ವೈಯಕ್ತಿಕ ಅಸುರಕ್ಷತೆಗಳು ಮತ್ತು ಅಧಿಕಾರದ ಹೋರಾಟಗಳಿಂದ ಹುಟ್ಟುವ ಈ ಸಂಘರ್ಷಗಳು ಶೈಕ್ಷಣಿಕ ಸಂಸ್ಥೆಗಳ ಮೂಲಾಧಾರವನ್ನೇ ನಿಧಾನವಾಗಿ ಕುಸಿತಗೊಳಿಸಿ, ಅವುಗಳ ವಿಶ್ವಾಸಾರ್ಹತೆ ಮತ್ತು ಉದ್ದೇಶವನ್ನು ಹಾಳುಮಾಡುತ್ತಿವೆ.

ಇಂದಿನ ಅನೇಕ ಸಂಸ್ಥೆಗಳಲ್ಲಿ ನಿಜವಾದ ಕೊಡುಗೆದಾರರು ವಿದ್ಯಾರ್ಥಿಗಳನ್ನು ರೂಪಿಸಲು ಮತ್ತು ಸಂಸ್ಥೆಯನ್ನು ಬಲಪಡಿಸಲು ಹೃದಯ, ಆತ್ಮ ಮತ್ತು ಅವಿಶ್ರಾಂತ ಶ್ರಮವನ್ನು ಹೂಡುವ ಬೋಧಕ ವೃಂದ ಮತ್ತು ಶೈಕ್ಷಣಿಕ ತಜ್ಞರು. ಆದರೆ ಈ ವು ಸಂಸ್ಥೆಗಳಲ್ಲಿ ಆರೋಗ್ಯಕರವಾಗಿವೆಯೇ ಎಂಬ ಪ್ರಶ್ನೆ ಹುಟ್ಟುತ್ತವೆ. ಅನಾರೋಗ್ಯಕರ ಆಡಳಿತಾತ್ಮಕ ಚಲನವಲನಗಳ ನೆರಳಲ್ಲಿ ಇವರೆಲ್ಲರೂ ಮಸುಕಾಗುತ್ತಿದ್ದಾರೆ. ಶೈಕ್ಷಣಿಕ ಮಟ್ಟವನ್ನು ಮೇಲಕ್ಕೆತ್ತಲು, ಬೋಧನಾ ವಿಧಾನಗಳಲ್ಲಿ ಹೊಸತನ ತರುವಂತೆ ಮತ್ತು ಕೆಲಸದ ಸಮಯದಾಚೆಯೂ ವಿದ್ಯಾರ್ಥಿಗಳಿಗೆ ಬೆಂಬಲ ನೀಡುವ ವರ್ಗ ಕಡಿಮೆಯಾಗುತ್ತಿವೆ. ಅದಕ್ಕೆ ನಾನಾ ಕಾರಣಗಳನ್ನೇನೋ ನಾವು ನೀಡಬಹುದು. ಅದೇ ರೀತಿ ಇನ್ನೊಂದೆಡೆ, ಈ ವೃತ್ತಿಪರರು ನಿರಂತರವಾಗಿ ದುಡಿಯುತ್ತಿದ್ದರೂ, ಮೇಲಿನ ನಾಯಕತ್ವವು ಹಲವಾರು ಬಾರಿ ಒಳಾಂಗಣ ಭಿನ್ನಾಭಿಪ್ರಾಯಗಳು ಮತ್ತು ಅಹಂಕಾರದಿಂದ ಪ್ರೇರಿತ ನಿರ್ಧಾರಗಳಲ್ಲಿ ಸಿಲುಕಿರುತ್ತವೆ. ಇಂಥ ಮಾನವ ದೌರ್ಬಲ್ಯ ಅಥವಾ ಮನೋಭಾವಗಳು ಎಲ್ಲಾ ಕ್ಷೇತ್ರಗಳಲ್ಲಿ ಕಂಡುಬರುತ್ತವೆಯಾದರೂ ಶಿಕ್ಷಣ ಕ್ಷೇತ್ರದಲ್ಲಿ ಇವು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿವೆ. ಶಿಕ್ಷಣ ಕ್ಷೇತ್ರ ಕೂಡ ಇಂದು ಒಂದು ಉದ್ಯಮ. ಆದರೆ ಅಂತಿಮವಾಗಿ ಇದಕ್ಕೆ ಸಮಾಜವೇ ಬಲಿಯಾಗುತ್ತವೆ ಎನ್ನುವುದು ಗಂಭೀರತೆಗೆ ಸಾಕ್ಷಿ. ದುರ್ಭಾಗ್ಯವಶಾತ್ ಇಂತಹ ಸಂಘರ್ಷಗಳು ಸಭಾಂಗಣಗಳಿಗೆ ಮಾತ್ರ ಸೀಮಿತವಾಗದೆ, ಸಂಪೂರ್ಣ ಸಂಸ್ಥಾ ರಚನೆಗೆ ಹರಡುತ್ತವೆ.

ಇನ್ನೂ ಹೆಚ್ಚು ಆತಂಕಕಾರಿ ವಿಷಯವೆಂದರೆ, ನೇಮಕಗೊಂಡಿರುವ ನಾಯಕತ್ವದ ಒಳಗಿನ ವಾಸ್ತವ ಸ್ಥಿತಿಗತಿಯ ಬಗ್ಗೆ ನಿರ್ವಹಣಾ ಮಂಡಳಿಗೆ ಸಾಕಷ್ಟು ಅರಿವು ಇಲ್ಲದಿರುವುದು. ನಿರ್ವಹಣೆಯ ನಿರೀಕ್ಷೆಗಳು ಮತ್ತು



ಆಡಳಿತಾತ್ಮಕ ನಾಯಕತ್ವದ ನೈಜ ಶೈಲಿ, ಉದ್ದೇಶ ಮತ್ತು ದಿಕ್ಕಿನ ನಡುವೆ ಸ್ಪಷ್ಟವಾದ ಅಂತರ ಕಂಡುಬರುತ್ತದೆ. ಇದರ ಪರಿಣಾಮವಾಗಿ, ಸಂಸ್ಥೆಯ ದೀರ್ಘಕಾಲೀನ ದೃಷ್ಟಿಕೋನ, ಶೈಕ್ಷಣಿಕ ಸಂಸ್ಕೃತಿ ಮತ್ತು ನೈತಿಕ ಹೊಣೆಗಾರಿಕೆಗಳಿಗೆ ಹೊಂದಿಕೆಯಾಗದ ನಿರ್ಧಾರಗಳು ತೆಗೆದುಕೊಳ್ಳಲಾಗುತ್ತವೆ.

ಈ ರೀತಿಯ ನಾಯಕತ್ವ ವೈಫಲ್ಯದ ಪರಿಣಾಮಗಳು ತಕ್ಷಣವೇ ಗೋಚರವಾಗುವುದಿಲ್ಲ. ಮೇಲ್ಮೈಯಲ್ಲಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಲೇ ಇರುತ್ತವೆ. ಆದರೆ ಕಾಲಕ್ರಮೇಣ ಹಾನಿ ಸ್ಪಷ್ಟವಾಗುತ್ತದೆ. ಮನೋಬಲದ ಕುಸಿತ, ನಂಬಿಕೆಯ ನಾಶ, ಶೈಕ್ಷಣಿಕ ಸ್ಥಬ್ಧತೆ ಮತ್ತು ಕೊನೆಯಲ್ಲಿ ಸಮರ್ಪಿತ ಹಾಗೂ ಪರಿಣತ ಬೋಧಕರ ನಿಷ್ಕ್ರಿಯತೆ. ಪ್ರಾಮಾಣಿಕ ಮತ್ತು ಸಾಮರ್ಥ್ಯವಂತ ವೃತ್ತಿಪರರಿಗೆ ತಮ್ಮ ಮಾತು ಕೇಳಿಸದಿದ್ದಾಗ, ಅವಮಾನಕ್ಕೊಳಗಾದಾಗ ಅಥವಾ ಗುರಿಯಾಗಿಸಿದಾಗ, ನಿರ್ಗಮನ ಅಥವಾ ನಿಷ್ಕ್ರಿಯತೆಯೊಂದೇ ಅವರ ಮುಂದಿರುವ ಏಕೈಕ ಮಾರ್ಗವಾಗುತ್ತದೆ. ಇದು ಕೇವಲ ವೈಯಕ್ತಿಕ ನಷ್ಟವಲ್ಲ; ಅದು ಒಂದು ಸಂಸ್ಥೆಯ ದುರಂತ.

ಆದ್ದರಿಂದ ಪ್ರತಿಯೊಂದು ಶೈಕ್ಷಣಿಕ ನಿರ್ವಹಣೆಯೂ ಗಂಭೀರ ಹಾಗೂ ಪ್ರಾಮಾಣಿಕ ಆತ್ಮಪರಿಶೀಲನೆ ನಡೆಸಬೇಕು. ಕೇವಲ ಯಾರನ್ನು ನಾಯಕತ್ವ ಸ್ಥಾನಕ್ಕೆ ನೇಮಿಸಲಾಗಿದೆ ಎಂಬುದಷ್ಟೇ ಅಲ್ಲ, ಅವರು ಹೇಗೆ ನಾಯಕತ್ವ ವಹಿಸುತ್ತಾರೆ, ಏಕೆ ವಹಿಸುತ್ತಾರೆ ಮತ್ತು ತಮ್ಮ ತಂಡಕ್ಕೆ ಯಾವ ದಿಕ್ಕು ತೋರಿಸುತ್ತಾರೆ ಎಂಬುದನ್ನೂ ಮೌಲ್ಯಮಾಪನ ಮಾಡುವುದು ಅತ್ಯಾವಶ್ಯಕ. ಅಕಾಡೆಮಿಕ್ ಕ್ಷೇತ್ರದ ನಾಯಕತ್ವವು ದೃಷ್ಟಿ, ನೈತಿಕತೆ, ಸಹಾನುಭೂತಿ ಮತ್ತು ಸಹಕಾರದಿಂದ ಪ್ರೇರಿತವಾಗಿರಬೇಕು. ಅಸುರಕ್ಷತೆ ಅಥವಾ ವೈಯಕ್ತಿಕ ಅಜೆಂಡಾಗಳಿಂದಲ್ಲ. ಸಮಯೋಚಿತ ತಿದ್ದುಪಡಿ ಕ್ರಮಗಳನ್ನು ಕೈಗೊಳ್ಳದಿದ್ದರೆ, ಸಂಸ್ಥೆಗಳು ತಮ್ಮ ಅತ್ಯಮೂಲ್ಯ ಸಂಪತ್ತಾದ ವಿದ್ಯಾರ್ಥಿಗಳು ಮತ್ತು ಸಂಸ್ಥೆಯ ಬೆಳವಣಿಗೆಗಾಗಿ ದಿನರಾತ್ರಿ ದುಡಿಯುವ ಸಮರ್ಪಿತ ಶಿಕ್ಷಕರನ್ನು ಕಳೆದುಕೊಳ್ಳುವ ಅಪಾಯವನ್ನು ಎದುರಿಸುತ್ತವೆ. ಮೂಲಸೌಕರ್ಯ ಅಥವಾ ಬ್ರ್ಯಾಂಡಿಂಗ್ ಮೂಲಕ ಈ ನಷ್ಟವನ್ನು ತುಂಬಲಾಗುವುದಿಲ್ಲ. ಶಿಕ್ಷಣದ ಭವಿಷ್ಯವು ನೀತಿಗಳು ಮತ್ತು ವ್ಯವಸ್ಥೆಗಳ ಮೇಲೆ ಮಾತ್ರವಲ್ಲ, ನೈತಿಕ, ಪಾರದರ್ಶಕ ಮತ್ತು ಪ್ರೌಢ ನಾಯಕತ್ವದ ಮೇಲೆ ಕೂಡ ಅವಲಂಬಿತವಾಗಿದೆ.

ಆತ್ಮಪರಿಶೀಲನೆ ಮತ್ತು ಸುಧಾರಣೆಗೆ ಇದು ಸೂಕ್ತ ಸಮಯ. ವಿಳಂಬವು ಹಾನಿಯನ್ನು ಇನ್ನಷ್ಟು ಆಳಗೊಳಿಸುವುದಷ್ಟೇ. ಶಿಕ್ಷಣ ಕ್ಷೇತ್ರದ ಸುಧಾರಣೆಯನ್ನು ನಾನಾ ಕೋನಗಳಿಂದ, ನಾನಾ ಆಯಾಮಗಳಿಂದ ಚರ್ಚಿಸಲಾಗುತ್ತದೆ. ಆದರೆ ಸಂಸ್ಥೆಯ ಚಾಲಕಶಕ್ತಿಯ ಗುಣಮಟ್ಟ ಯಾವಾಗಲೂ ಚರ್ಚೆಯಿಂದ ಹೊರಗಿರುತ್ತದೆ. ನಿಜಕ್ಕೂ ಶಿಕ್ಷಣದ ಗುಣಮಟ್ಟ ಮತ್ತು ಶಿಕ್ಷಣದ ಉದ್ದೇಶ ಫಲಿಸಬೇಕಾದರೆ ಶಿಕ್ಷಣ ಸಂಸ್ಥೆಗಳ ಆಂತರಿಕ ಸುಧಾರಣೆ ಮೊಟ್ಟಮೊದಲು ಆಗಬೇಕು.

ಕಾಂಗ್ರೆಸ್ ಪ್ರತಿಭಟನೆ ಪೂರ್ವನಿಯೋಜಿತ

ರಾಷ್ಟ್ರೀಯ ಘನತೆಗೆ ಗಂಭೀರ ಅವಮಾನ



ಎಐ ಶೃಂಗದಲ್ಲಿ ಯುವ ಕಾಂಗ್ರೆಸ್ ಪ್ರತಿಭಟನೆ ಖಂಡಿಸಿ ದೇಶದ ಗಣ್ಯರಿಂದ ಜಂಟಿ ಹೇಳಿಕೆ

• **ಹೊಸದಿಲ್ಲಿ:** ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆ 2026ರಲ್ಲಿ ಭಾರತೀಯ ಯುವ ಕಾಂಗ್ರೆಸ್ ಕಳೆದ ವಾರ ನಡೆಸಿದ ಪ್ರತಿಭಟನೆಯನ್ನು ನಿವೃತ್ತ ನ್ಯಾಯಾಧೀಶರು, ರಾಜತಾಂತ್ರಿಕರು ಮತ್ತು ಹಿರಿಯ ಅಧಿಕಾರಿಗಳು ಸೇರಿದಂತೆ 277 ಗಣ್ಯರು ಖಂಡಿಸಿದ್ದು, ಇದನ್ನು ಪೂರ್ವನಿಯೋಜಿತ ವಿಧ್ವಂಸಕ ಕೃತ್ಯ ಮತ್ತು ರಾಷ್ಟ್ರೀಯ ಘನತೆಗೆ ಗಂಭೀರ ಅವಮಾನ ಎಂದು ಹೇಳಿದ್ದಾರೆ.

ಜಂಟಿ ಹೇಳಿಕೆಯೊಂದರಲ್ಲಿ, ಭಾರತ್ ಮಂಟಪದಲ್ಲಿನ ಕೃತ್ಯವನ್ನು ಕ್ಷಮಿಸಲಾಗದ ದೃಶ್ಯ ಮತ್ತು ಜಾಗತಿಕ ಹೂಡಿಕೆದಾರರು ಮತ್ತು ಪಾಲುದಾರರಿಗೆ ಅಸ್ಥಿರತೆಯನ್ನು ಸೂಚಿಸಲು ರೂಪಿಸಲಾದ ರಾಷ್ಟ್ರ ವಿರೋಧಿ ಕೃತ್ಯ ಎಂದು ವಿವರಿಸಲಾಗಿದೆ. ಅದು ಭಿನ್ನಾಭಿಪ್ರಾಯದ ಸ್ವಯಂಪ್ರೇರಿತ ಅಭಿವ್ಯಕ್ತಿಯಲ್ಲ, ಬದಲಿಗೆ ಪಕ್ಷಪಾತದ ಉದ್ದೇಶಗಳಿಗಾಗಿ ಪ್ರತಿಷ್ಠಿತ ಅಂತಾರಾಷ್ಟ್ರೀಯ ವೇದಿಕೆಯನ್ನು ಹೈಜಾಕ್ ಮಾಡುವ ಯೋಜಿತ ಕೃತ್ಯ ಎಂದು ಆರೋಪಿಸಲಾಗಿದೆ.

ಸಹಿ ಮಾಡಿದವರಲ್ಲಿ 26 ನಿವೃತ್ತ ನ್ಯಾಯಾಧೀಶರು ಸೇರಿದ್ದಾರೆ. ದಿಲ್ಲಿ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಬಿ.ಸಿ. ಪಟೇಲ್, ಮಾಜಿ ಪೊಲೀಸ್ ಮುಖ್ಯಸ್ಥರು, 11 ಮಾಜಿ ರಾಯಭಾರಿಗಳು ಮತ್ತು 149 ನಿವೃತ್ತ ಸಶಸ್ತ್ರ ಪಡೆಗಳ ಅಧಿಕಾರಿಗಳು ಸೇರಿದಂತೆ 102 ನಿವೃತ್ತ ಅಧಿಕಾರಿಗಳೂ ಹೇಳಿಕೆಗೆ ಸಹಿ ಮಾಡಿದ್ದಾರೆ.

ದೇಶಕ್ಕಿಂತ ವೈಯಕ್ತಿಕ ಪ್ರತಿಷ್ಠೆ: ಪ್ರತಿಭಟನೆಯನ್ನು ಪೂರ್ವನಿಯೋಜಿತ ದಂಗೆ ಎಂದು ಟೀಕಿಸಿರುವ ಗಣ್ಯರು, ಇದು ಜಾಗತಿಕ ವೇದಿಕೆಯಲ್ಲಿ ದೇಶದ ಮಾನ ಕಳೆಯುವ ಉದ್ದೇಶವನ್ನು ಮಾತ್ರ ಹೊಂದಿತ್ತು. ಈ ಅಸಹ್ಯ ಕೃತ್ಯವನ್ನು ಕಾರ್ಯಗತಗೊಳಿಸಲು ಉನ್ನತ ಮಟ್ಟದ ರಾಜತಾಂತ್ರಿಕ ಮತ್ತು ತಾಂತ್ರಿಕ ವೇದಿಕೆಯನ್ನು ಆಯ್ಕೆ ಮಾಡುವ ಮೂಲಕ, ಪ್ರತಿಭಟನೆಯ ಸಂಘಟಕರು ತಮ್ಮ ಬ್ರ್ಯಾಂಡ್ ರಾಜಕೀಯ, ದೇಶದ ಪ್ರತಿಷ್ಠೆಗಿಂತ ವೈಯಕ್ತಿಕ ದ್ವೇಷವೇ ಆದ್ಯತೆ ನೀಡುತ್ತದೆ ಎಂಬುದನ್ನು ಸಾಬೀತುಪಡಿಸಿದ್ದಾರೆ ಎಂದು ಹೇಳಿಕೆಯಲ್ಲಿ ಆರೋಪಿಸಲಾಗಿದೆ.

ಜಾಗತಿಕ ವೇದಿಕೆಗಳಲ್ಲಿ ರಾಜಕೀಯ ಬೇಡ: ಪ್ರಜಾಸತ್ತಾತ್ಮಕ ಪ್ರತಿಭಟನೆ ಪವಿತ್ರ ಹಕ್ಕು ಎಂದಿರುವ ಹೇಳಿಕೆ, ಇದು ಅರಾಜಕತೆಗೆ ಅಥವಾ ರಾಷ್ಟ್ರದ ಸಾರ್ವಜನಿಕ ಅವಮಾನಕ್ಕೆ ಪರವಾನಗಿ ಆಗಲು ಸಾಧ್ಯವಿಲ್ಲ ಎಂದಿದೆ. ಅಂತಾರಾಷ್ಟ್ರೀಯ ಶೃಂಗಸಭೆಗಳು ದೇಶೀಯ ರಾಜಕೀಯ ನಾಟಕಗಳಿಂದ ದೂರವಿರಬೇಕು. ಏಕೆಂದರೆ ಅಂತಹ ಕೃತ್ಯಗಳು ಭಾರತದ ಜಾಗತಿಕ ವರ್ಚಸ್ಸಿಗೆ ಹಾನಿ ಉಂಟು ಮಾಡುತ್ತವೆ ಮತ್ತು ಅದರ ತಾಂತ್ರಿಕ-ರಾಜತಾಂತ್ರಿಕ ಕಾರ್ಯಚಟುವಟಿಕೆಗಳನ್ನು ದುರ್ಬಲಗೊಳಿಸುತ್ತವೆ ಎಂದು ಕಟುವಾಗಿ ಟೀಕಿಸಲಾಗಿದೆ. ಭಾರತೀಯ ಯುವ ಕಾಂಗ್ರೆಸ್ ಸದಸ್ಯರು ಪ್ರದರ್ಶನ ಸಭಾಂಗಣದೊಳಗೆ ಶರ್ಟ್ ಇಲ್ಲದೆ ಪ್ರತಿಭಟನೆ ನಡೆಸಿ, ಸರ್ಕಾರ ಮತ್ತು ಭಾರತ-ಅಮೆರಿಕ ವ್ಯಾಪಾರ ಒಪ್ಪಂದದ ವಿರುದ್ಧ ಘೋಷಣೆಗಳನ್ನು ಕೂಗಿದ್ದರು.

ಅರೆನಗ್ನ ಪ್ರತಿಭಟನೆ: ಐವೈಸಿ ಅಧ್ಯಕ್ಷನ ಬಂಧನ

ಬಂಧಿತರ ವಿರುದ್ಧ ಗಲಭೆ ಕೇಸ್

• **ಹೊಸದಿಲ್ಲಿ:** ಕಳೆದ ವಾರ ನಡೆದ ಎಐ ಶೃಂಗಸಭೆಯಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸಿದ ಪ್ರಕರಣದಲ್ಲಿ ಮುಖ್ಯ ಸಂಚುಕೋರ ಮತ್ತು ಮಾಸ್ಟರ್‌ಮೈಂಡ್ ಎಂದು ಆರೋಪಿಸಿ ಯುವ ಕಾಂಗ್ರೆಸ್ ಅಧ್ಯಕ್ಷ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್‌ರನ್ನು ಮಂಗಳವಾರ ದಿಲ್ಲಿ ಪೊಲೀಸರು ಬಂಧಿಸಿದ್ದಾರೆ. ಈಗಾಗಲೇ ಬಂಧಿತರಾಗಿದ್ದ ಐವೈಸಿನ ಇತರೆ ಏಳು ಕಾರ್ಯಕರ್ತ ವಿರುದ್ಧ ಗಲಭೆ ಆರೋಪಗಳನ್ನು ಸೇರಿಸಲಾಗಿದೆ.

ಕಾಂಗ್ರೆಸ್ ತನ್ನ ಕಾರ್ಯಕರ್ತರ ಬಂಧನವನ್ನು ಪ್ರಜಾಪ್ರಭುತ್ವದ ಹತ್ಯೆ ಎಂದು ಕರೆದಿದ್ದರೆ, ಬಿಜೆಪಿ, ಈ ಅರಾಜಕ ಘಟನೆಗೆ ಮಾಸ್ಟರ್‌ಮೈಂಡ್ ರಾಹುಲ್ ಗಾಂಧಿ ಎಂದು ಆರೋಪಿಸಿದೆ.

ಇದಕ್ಕೂ ಮೊದಲು, ಪೊಲೀಸರು ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಅನ್ವಯ ಸೆಕ್ಷನ್ 191(1) (ಗಲಭೆ) ಮತ್ತು 192 (ಗಲಭೆ ಉಂಟುಮಾಡುವ ಉದ್ದೇಶದಿಂದ ಪ್ರಚೋದನೆ ನೀಡುವುದು; ಗಲಭೆ ನಡೆದಿದ್ದರೆ/ನಡೆಯದಿದ್ದರೆ) ಸೇರಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವಿಶೇಷ ಪೊಲೀಸ್ ಆಯುಕ್ತ(ಅಪರಾಧ ಮತ್ತು ಪೊಲೀಸ್ ನಿರ್ವಹಣೆ ಹಾಗೂ ಮಾಧ್ಯಮ ವಿಭಾಗ) ದೇವೇಶ್ ಚಂದ್ರ ಶ್ರೀವಾಸ್ತವ, ಅಂತಾರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು, ಪ್ರತಿನಿಧಿಗಳು ಮತ್ತು ಭೇಟಿದಾರರ ಸಮ್ಮುಖದಲ್ಲಿ ಭದ್ರತಾ ವಲಯವನ್ನು ಉಲ್ಲಂಘಿಸಲು ಪೂರ್ವಯೋಜಿತ ಪ್ರಯತ್ನ ನಡೆದಿದೆ ಎಂದರು.

ಹಲವಾರು ಸುತ್ತಿನ ವಿಚಾರಣೆಯ ನಂತರ ಭಾರತೀಯ ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಉದಯ್ ಭಾನು ಚಿಬ್‌ನನ್ನು ಬಂಧಿಸಲಾಗಿದೆ. ಪೊಲೀಸ್ ಮೂಲಗಳ ಪ್ರಕಾರ, ಚಿಬ್ ವಿಚಾರಣೆ ವೇಳೆ ಸಹಕರಿಸಲಿಲ್ಲ. ತನಿಖಾಧಿಕಾರಿಗಳನ್ನು ದಾರಿ ತಪ್ಪಿಸಲು ಪ್ರಯತ್ನಿಸಿದರು.


ಸಂವಿಧಾನ ಮತ್ತು ಎಲ್ಲಾ ಅಧಿಕೃತ ದಾಖಲೆಗಳಲ್ಲಿ ದೇವರನಾಡು ಎಂದೇ ಕರೆಸಿಕೊಳ್ಳುವ ಕೇರಳ ರಾಜ್ಯದ ಹೆಸರನ್ನು ಕೇರಳಂ ಎಂದು ಬದಲಾಯಿಸುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸುವ ಕೇರಳ ವಿಧಾನಸಭೆ ಮಾಡಿದ್ದ ಸರ್ವಾನುಮತದ ನಿರ್ಣಯವನ್ನು ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟ ಪರಿಗಣಿಸಿದೆ. ಕೇರಳಕ್ಕೆ ಶೀಘ್ರದಲ್ಲೇ ಕೇರಳಂ ಎಂಬ ಹೆಸರು ಸಿಗಲಿದೆ. ಆ ಕುರಿತ ವಿವರ ಇಲ್ಲಿದೆ.

ದೇವರನಾಡಿನ ನಾಮ ಮರ್ಮ

ಕೇರಳಂ- ಇತಿಹಾಸದ ಬೇರುಗಳು

ಐತಿಹಾಸಿಕ ದಾಖಲೆಗಳಲ್ಲಿ ಈ ಹೆಸರನ್ನು ಪ್ರಾಚೀನ ಕಾಲದಿಂದಲೂ ಕಾಣಬಹುದು. ಅತ್ಯಂತ ಹಳೆಯ ಶಿಲಾಶಾಸನ, ಅಂದರೆ ಕ್ರಿಸ್ತಪೂರ್ವ 257ರ ಚಕ್ರವರ್ತಿ ಅಶೋಕನ ಶಿಲಾ ಶಾಸನದಲ್ಲಿ ಈ ಪ್ರದೇಶವನ್ನು ಕೇರಳಾಪುರಂ ಎಂದು ಉಲ್ಲೇಖಿಸಲಾಗಿದೆ. ಇದರ ಅರ್ಥ ಕೇರಳದ ಮಗ ಎಂದು. ಈ ಹೆಸರಿಗೂ ಚೇರ ರಾಜವಂಶಕ್ಕೂ ಸಂಬಂಧವಿದೆ ಎನ್ನಲಾಗಿದೆ. ಕೇರಳಂ ಎಂಬ ಪದ ಚೇರಂನಿಂದ ಹುಟ್ಟಿಕೊಂಡಿರಬಹುದು ಎಂದು ವಿದ್ವಾಂಸರು ನಂಬುತ್ತಾರೆ. ಶತಮಾನಗಳ ಕಾಲ, ಮಲಯಾಳಂ ಮಾತನಾಡುವ ಪ್ರದೇಶ ಸಮಾನ ಸಾಂಸ್ಕೃತಿಕ ಮತ್ತು ಭಾಷಾ ಗುರುತನ್ನು ಬೆಳೆಸಿಕೊಂಡಿತು, ಹೆಸರಿನೊಂದಿಗೆ ಭಾವನಾತ್ಮಕ ಮತ್ತು ಐತಿಹಾಸಿಕ ಬಾಂಧವ್ಯವೂ ಬಲವಾಯಿತು.

ಕೇರಳ ರಾಜ್ಯದ ಹೆಸರನ್ನು ಕೇರಳಂ ಎಂದು ಬದಲಾಯಿಸಲು ಕೇಂದ್ರ ಅನುಮೋದನೆ



ಸುದ್ದಿ ಸಮಗ್ರ

ಭಾರತೀಯ ಸಂವಿಧಾನದಲ್ಲೇನಿದೆ?

ಮಲಯಾಳಂನಲ್ಲಿ ಕೇರಳ ರಾಜ್ಯವನ್ನು ಕೇರಳಂ ಎಂದು ಕರೆಯಲಾಗುತ್ತದೆ ಎಂದು ನಿರ್ಣಯ ಹೇಳಿದೆ. ಆದರೂ, ಸಂವಿಧಾನದ ಮೊದಲ ಭಾಗದಲ್ಲಿ, ರಾಜ್ಯದ ಹೆಸರನ್ನು ಕೇರಳ ಎಂದೇ ಉಲ್ಲೇಖಿಸಲಾಗಿದೆ. ಬದಲಾವಣೆಯನ್ನು ಜಾರಿಗೆ ತರಲು ಸಂವಿಧಾನದ 3ನೇ ವಿಧಿಯಲ್ಲಿ ಕ್ರಮಗಳನ್ನು ಪ್ರಾರಂಭಿಸಲು ವಿಧಾನಸಭೆ ಕೇಂದ್ರವನ್ನು ವಿನಂತಿಸಿತ್ತು. ಭಾರತದಲ್ಲಿ ರಾಜ್ಯಗಳನ್ನು ಭಾಷಾವಾರು ಆಧಾರದ ಮೇಲೆ ನವೆಂಬರ್ 1, 1956ರಂದು ಮರುಸಂಘಟಿಸಲಾಯಿತು, ಈ ದಿನಾಂಕವನ್ನು ಕೇರಳ ರಚನೆಯ ದಿನವಾಗಿ ಆಚರಿಸಲಾಗುತ್ತದೆ. ಮಲಯಾಳಂ ಮಾತನಾಡುವ ಜನರಿಗೆ ಏಕೀಕೃತ ಕೇರಳದ ಬೇಡಿಕೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಬಲ ಪಡೆದುಕೊಂಡಿತು ಮತ್ತು ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಅದು ಮುಂದುವರಿದಿತ್ತು.



ಭಾಷಾ ಮರುಸಂಘಟನೆ- ರಾಜ್ಯರಚನೆ

1920ರ ದಶಕದಲ್ಲಿ ಐಕ್ಯ ಕೇರಳ ಚಳವಳಿಯಲ್ಲಿ ಮಲಯಾಳಂ ಭಾಷಿಕರಿಗೆ ಪ್ರತ್ಯೇಕ ರಾಜ್ಯದ ಬೇಡಿಕೆ ಬಿರುಸು ಪಡೆಯಿತು. ಇದು ಮಲಬಾರ್ ಕೊಚ್ಚಿ ಮತ್ತು ತಿರುವಾಂಕೂರುಗಳನ್ನು ಒಂದೇ ಪ್ರದೇಶವಾಗಿ ಏಕೀಕರಿಸಲು ಒತ್ತಾಯಿಸಿತು. ಸ್ವಾತಂತ್ರ್ಯದ ನಂತರ, ರಾಷ್ಟ್ರೀಯ ಏಕೀಕರಣದ ಭಾಗವಾಗಿ ರಾಜಪ್ರಭುತ್ವದ ರಾಜ್ಯಗಳನ್ನು ವಿಲೀನಗೊಳಿಸಲಾಯಿತು. ಜುಲೈ 1, 1949 ರಂದು, ತಿರುವಾಂಕೂರು ಮತ್ತು ಕೊಚ್ಚಿಯನ್ನು ಸಂಯೋಜಿಸಿ ತಿರುವಾಂಕೂರು-ಕೊಚ್ಚಿನ್ ರಾಜ್ಯವನ್ನು ರೂಪಿಸಲಾಯಿತು.

ಹೆಸರು ಬದಲಾಯಿಸಿದ ರಾಜ್ಯಗಳು

- ಒರಿಸ್ಸಾದಿಂದ ಒಡಿಶಾ(2010): ಸಂವಿಧಾನದ (113ನೇ ತಿದ್ದುಪಡಿ)- ಒರಿಯಾದಿಂದ ಒಡಿಶಾ.
- ಮದ್ರಾಸ್‌ನಿಂದ ತಮಿಳುನಾಡು(1969): ಸಿ.ಎನ್. ಅಣ್ಣಾದೊರೈ ಅವರ ಸರ್ಕಾರದಲ್ಲಿ ಮರುನಾಮಕರಣ
- ಮಧ್ಯಭಾರತದಿಂದ ಮಧ್ಯಪ್ರದೇಶ(1956): ರಾಜ್ಯ ಪುನರ್ವಿಂಗಡಣೆಯ ಸಮಯದಲ್ಲಿ ಮರುನಾಮಕರಣ
- ಮೈಸೂರಿನಿಂದ ಕರ್ನಾಟಕ(1973): ಸಂಸತ್ ಅನುಮೋದನೆ ಬಳಿಕ ಅಧಿಕೃತವಾಗಿ ಹೆಸರು ಬದಲಾವಣೆ
- ಉತ್ತರಾಂಚಲದಿಂದ ಉತ್ತರಾಖಂಡ(2006): ರಾಷ್ಟ್ರಪತಿಗಳ ಅನುಮೋದನೆಯ ನಂತರ ಮರುನಾಮಕರಣ
- ಯುನೈಟೆಡ್ ಪ್ರೊವಿನ್ಸ್‌ನಿಂದ ಉತ್ತರ ಪ್ರದೇಶ(1950): ಸ್ವಾತಂತ್ರ್ಯ ಏಕೀಕರಣದ ನಂತರ ಮರುನಾಮಕರಣ

ಇಂಗ್ಲಿಷ್ ಪ್ರಭಾವ- ಕೇರಳವೆಂಬ ಹೆಸರು

ಭಾಷಾ ಆಧಾರದ ಮೇಲೆ ರಾಜ್ಯಗಳನ್ನು ಮರುಸಂಘಟಿಸಲು ಕೇಂದ್ರ ಸರ್ಕಾರ ನಿರ್ಧರಿಸಿದಾಗ, ರಾಜ್ಯಗಳ ಮರುಸಂಘಟನಾ ಆಯೋಗ ಕೇರಳ ಎಂದು ಹೆಸರಿಸಲು ಶಿಫಾರಸು ಮಾಡಿತು. ನ್ಯಾಯಮೂರ್ತಿ ಫಜಲ್ ಅಲಿ ನೇತೃತ್ವದ ಆಯೋಗ, ಮಲಬಾರ್ ಜಿಲ್ಲೆ ಮತ್ತು ಕಾಸರಗೋಡು ತಾಲೂಕನ್ನು ಸೇರಿಸಲು ಸೂಚಿಸಿತು. ಆದರೆ, ಈಗ ತಮಿಳುನಾಡಿನ ಭಾಗವಾಗಿರುವ ಕೆಲವು ದಕ್ಷಿಣ ತಾಲ್ಲೂಕುಗಳನ್ನು ಹೊರತುಪಡಿಸಿ. ಕೇರಳ ಅಧಿಕೃತವಾಗಿ ನವೆಂಬರ್ 1, 1956ರಂದು ಅಸ್ತಿತ್ವಕ್ಕೆ ಬಂದಿತು. ಮಲಯಾಳಂನಲ್ಲಿ, ಇದನ್ನು ಕೇರಳಂ ಎಂದು ಕರೆಯಲಾಗುತ್ತಿತ್ತು, ಆದರೆ ಇಂಗ್ಲಿಷ್‌ನಲ್ಲಿ ಇದು ಕೇರಳವಾಗಿ ಉಳಿಯಿತು.

ಮರುನಾಮಕರಣಕ್ಕಾಗಿ ಕಾರ್ಯವಿಧಾನ

ಸಂವಿಧಾನದ 3ನೇ ವಿಧಿಯಲ್ಲಿ ಸಂಸತ್ತು ರಾಜ್ಯದ ಹೆಸರು, ಪ್ರದೇಶ ಅಥವಾ ಗಡಿಗಳನ್ನು ಬದಲಾಯಿಸುವ ಅಧಿಕಾರ ಹೊಂದಿದೆ. ಈ ಪ್ರಕ್ರಿಯೆ ರಾಜ್ಯ ಸರ್ಕಾರದಿಂದ ಪ್ರಸ್ತಾವನೆಯೊಂದಿಗೆ ಪ್ರಾರಂಭವಾಗುತ್ತದೆ. ಕೇಂದ್ರ ಗೃಹ ಸಚಿವಾಲಯ ಪ್ರಸ್ತಾವನೆಯನ್ನು ಪರಿಶೀಲಿಸುತ್ತದೆ ಮತ್ತು ರೈಲ್ವೆ ಸಚಿವಾಲಯ, ಗುಪ್ತಚರ ಸಂಸ್ಥೆ, ಅಂಚೆ ಇಲಾಖೆ, ಭಾರತ ಸರ್ವೇ ಮತ್ತು ಭಾರತದ ರಿಜಿಸ್ಟ್ರಾರ್ ಜನರಲ್‌ನಂತಹ ಸಂಸ್ಥೆಗಳಿಂದ ನಿರಾಕ್ಷೇಪಣಾ ಪ್ರಮಾಣಪತ್ರಗಳನ್ನು ಪಡೆಯುತ್ತದೆ. ಅಂಗೀಕರಿಸಲ್ಪಟ್ಟರೆ, ಸಂಸತ್ತಿನಲ್ಲಿ ಮಸೂದೆಯನ್ನು ಪರಿಚಯಿಸಲಾಗುತ್ತದೆ. ಅಂತಹ ಬದಲಾವಣೆಗೆ ಸಂವಿಧಾನವನ್ನು ತಿದ್ದುಪಡಿ ಮಾಡಲು 107 ಮತ್ತು 108ನೇ ವಿಧಿಗಳ ಅನ್ವಯ ಸರಳ ಬಹುಮತ ಸಾಕು. ಅಂಗೀಕಾರವಾದ ನಂತರ, ಹೊಸ ಹೆಸರು ಕಾನೂನುಬದ್ಧವಾಗಿ ಮಾನ್ಯವಾಗುತ್ತದೆ.

ಕೇಂದ್ರ ಸಚಿವ ಸಂಪುಟ ಪ್ರಸ್ತಾವನೆಗೆ ಅನುಮೋದನೆ

ರಾಜ್ಯ ವಿಧಾನಸಭೆಯಿಂದ ನಿರ್ಣಯ ತೆಗೆದುಕೊಂಡ ಬಳಿಕ, ಕೇರಳದ ಹೆಸರನ್ನು ಕೇರಳಂ ಎಂದು ಬದಲಾಯಿಸುವ ಪ್ರಸ್ತಾವವನ್ನು ಕೇಂದ್ರ ಸಚಿವ ಸಂಪುಟ ಅನುಮೋದಿಸಿದೆ. ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಈ ಘೋಷಣೆ ಮಾಡಿದ್ದಾರೆ. ವಿಧಾನಸಭೆ, ಮೊದಲು 2023ರಲ್ಲೇ ನಿರ್ಣಯವನ್ನು ಅಂಗೀಕರಿಸಿತ್ತು. ಜೂನ್ 2024ರಲ್ಲಿ ಅದನ್ನು ನವೀಕರಿಸಿತು. ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಕೇರಳಂ ಮೂಲ ಹೆಸರು ಮತ್ತು ಈ ಬದಲಾವಣೆ ಐತಿಹಾಸಿಕ ಗುರುತನ್ನು ಪುನಃಸ್ಥಾಪಿಸುತ್ತದೆ ಎಂದು ಹೇಳಿದ್ದಾರೆ. ಸಂಸತ್ತು ಕೇರಳ(ಹೆಸರಿನ ಬದಲಾವಣೆ) ಮಸೂದೆ, 2026 ಅನ್ನು ಅನುಮೋದಿಸಿದರೆ ಮತ್ತು ರಾಷ್ಟ್ರಪತಿಗಳು ಒಪ್ಪಿಗೆ ನೀಡಿದರೆ, ಸಂವಿಧಾನದ ಮೊದಲ ಭಾಗದಲ್ಲಿರುವ ಹೆಸರನ್ನು ತಿದ್ದುಪಡಿ ಮಾಡಲಾಗುತ್ತದೆ. ಬದಲಾವಣೆ ಸಾಂಕೇತಿಕವಾಗಿದ್ದು, ಮತ್ತು ಆಡಳಿತಾತ್ಮಕ ಗಡಿಗಳು ಅಥವಾ ಆಡಳಿತದ ಮೇಲೆ ಪರಿಣಾಮ ಬೀರುವುದಿಲ್ಲ.

ಕಿರುಸುದ್ದಿ

ಹೈಸ್ಪೀಡ್ ರೈಲಲ್ಲಿ ಒಂದೇ ದಿನ ಲಕ್ಷ ಜನ ಪ್ರಯಾಣ

• **ಹೊಸದಿಲ್ಲಿ:** ನಮೋ ಭಾರತ್ ರೀಜನಲ್ ರ್‍ಯಾಪಿಡ್ ಟ್ರಾನ್ಸಿಟ್ ಸಿಸ್ಟಮ್ (ಆರ್‌ಆರ್‌ಟಿಎಸ್) ತನ್ನ ಹೈಸ್ಪೀಡ್ ರೈಲುಗಳಲ್ಲಿ ಸೋಮವಾರ 1 ಲಕ್ಷಕ್ಕೂ ಹೆಚ್ಚು ಜನ ಪ್ರಯಾಣ ನಡೆಸಿದ್ದಾರೆ. ಈ ಮೂಲಕ ತನ್ನ ಪೂರ್ಣ ಕಾರ್ಯಾಚರಣೆಯ ಮೊದಲ ದಿನವೇ ಅತಿ ಹೆಚ್ಚು ದೈನಂದಿನ ಸವಾರಿ ದಾಖಲಿಸಿದೆ. ಪ್ರಧಾನಿ ಮೋದಿ ಅವರು ಸಂಪೂರ್ಣ 82 ಕಿಮೀ ಉದ್ದದ ದಿಲ್ಲಿ-ಮೀರತ್ ಕಾರಿಡಾರ್ ಮತ್ತು ಹೊಸ ಮೀರತ್ ಮೆಟ್ರೊ ಸಂಪರ್ಕವನ್ನು ಔಪಚಾರಿಕವಾಗಿ ಉದ್ಘಾಟಿಸಿದ ಒಂದೇ ದಿನದಲ್ಲಿ ಈ ಬೆಳವಣಿಗೆಯಾಗಿದೆ. ಇದು ಕಾರಿಡಾರ್‌ನಲ್ಲಿ ಇದುವರೆಗೆ ದಾಖಲಾದ ಅತಿ ಹೆಚ್ಚು ಸವಾರಿಯಾಗಿದೆ ಎಂದು ನಿಗಮ ಹೇಳಿದೆ.

ರಾಷ್ಟ್ರವ್ಯಾಪಿ ಎಚ್‌ಪಿವಿ ಲಸಿಕೆ ಅಭಿಯಾನ ಶೀಘ್ರ

• **ಹೊಸದಿಲ್ಲಿ:** ಕೇಂದ್ರ ಸರ್ಕಾರವು ಒಂದು ವಾರದೊಳಗೆ ರಾಷ್ಟ್ರವ್ಯಾಪಿ ಹ್ಯೂಮನ್ ಪ್ಯಾಪಿಲೋಮ ವೈರಸ್ (ಎಚ್‌ಪಿವಿ) ಲಸಿಕೆ ಅಭಿಯಾನವನ್ನು ಪ್ರಾರಂಭಿಸಲು ತಯಾರಿ ನಡೆಸುತ್ತಿದೆ. ಇದು ಭಾರತದ ಯುವತಿಯರಲ್ಲಿ ಗರ್ಭಕಂಠದ ಕ್ಯಾನ್ಸರ್‌ನ ಸಮಸ್ಯೆ ಕಡಿಮೆ ಮಾಡುವ ಗುರಿ ಹೊಂದಿದೆ. ಈ ಅಭಿಯಾನವು ಎಂಎಸ್‌ಡಿಯ ಗಾರ್ಡಸಿಲ್ 4 ಎಚ್‌ಪಿವಿ ಲಸಿಕೆಯನ್ನು ಅರ್ಹ ಫಲಾನುಭವಿಗಳಿಗೆ ದೇಶಾದ್ಯಂತ ಸರ್ಕಾರಿ ಆರೋಗ್ಯ ಸೌಲಭ್ಯಗಳ ಮೂಲಕ ಉಚಿತವಾಗಿ ಒದಗಿಸುತ್ತದೆ. ಖಾಸಗಿ ಮಾರುಕಟ್ಟೆಯಲ್ಲಿ, ಲಸಿಕೆಯ ಪ್ರತಿ ಡೋಸ್‌ಗೆ ಸುಮಾರು 4,000 ರೂ. ಇದೆ. ಗಾರ್ಡಸಿಲ್ 4 ನಾಲ್ಕು ಎಚ್‌ಪಿವಿ ತಳಿಗಳ ವಿರುದ್ಧ ರಕ್ಷಿಸುತ್ತದೆ. 6,11,16 ಮತ್ತು 18 ಇವುಗಳಲ್ಲಿ, 16 ಮತ್ತು 18 ತಳಿಗಳನ್ನು ಹೆಚ್ಚಿನ ಅಪಾಯವೆಂದು ಪರಿಗಣಿಸಲಾಗಿದೆ. ಭಾರತದಲ್ಲಿ ಸುಮಾರು ಶೇ. 83 ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳಿವೆ.

ನದಿ ಮಾಲಿನ್ಯ ಪ್ರಕರಣಕ್ಕೆ ಸುಪ್ರೀಂ ಕೋರ್ಟ್ ಇತಿಶ್ರೀ

• **ಹೊಸದಿಲ್ಲಿ:** ಕಲುಷಿತ ನದಿಗಳ ಕುರಿತ 2021ರ ಸ್ವಯಂ ಪ್ರೇರಿತ ಪ್ರಕರಣವನ್ನು ಸುಪ್ರೀಂ ಕೋರ್ಟ್ ಮಂಗಳವಾರ ಮುಕ್ತಾಯಗೊಳಿಸಿದೆ, ಮತ್ತು ವಿಚಾರಣೆಯನ್ನು ಮತ್ತೆ ಆರಂಭಿಸಲು ಮತ್ತು ನಿರಂತರ ಮೇಲ್ವಿಚಾರಣೆಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಪ್ರಧಾನ ಪೀಠಕ್ಕೆ ನಿರ್ದೇಶನ ನೀಡಿದೆ. ಮಾಲಿನ್ಯ ಮುಕ್ತ ನೀರಿನ ಹಕ್ಕು 21ನೇ ವಿಧಿಯ ಭಾಗ, ಮತ್ತು ಘನತೆಯಿಂದ ಬದುಕಲು ಅನಿವಾರ್ಯ, ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

ಸಹೋದರರ ಕೊಲೆ: 13 ಜನಕ್ಕೆ ಜೀವಾವಧಿ ಜೈಲು

• **ಹೊಸದಿಲ್ಲಿ:** ಸುಮಾರು 10 ವರ್ಷಗಳ ಹಿಂದೆ ಭೂ ವಿವಾದದಲ್ಲಿ ಇಬ್ಬರು ಸಹೋದರರನ್ನು ಕೊಂದ ಒಂದೇ ಕುಟುಂಬದ 13 ಜನರಿಗೆ ಸ್ಥಳೀಯ ನ್ಯಾಯಾಲಯವು ಜೀವಾವಧಿ ಜೈಲು ಶಿಕ್ಷೆ ವಿಧಿಸಿದೆ. ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ವಿಕಾಸ್ ಗುಪ್ತಾ ಅವರು, ಅಪರಾಧಿಗಳಿಗೆ 10.73 ಲಕ್ಷ ರೂ. ದಂಡ ವಿಧಿಸಿದೆ ಎಂದು ಹೆಚ್ಚುವರಿ ಜಿಲ್ಲಾ ಸರ್ಕಾರಿ ವಕೀಲ (ಎಡಿಜಿಸಿ) ದೀಪಕ್



ಸೈನಿ ತಿಳಿಸಿದ್ದಾರೆ. ಸುಮಾರು 20 ಬಿಘಾ ಭೂಮಿಗೆ ಸಂಬಂಧಿಸಿದ ವಿವಾದದ ಮೇಲೆ ತನ್ನ ತಂದೆ, ಯಾಸಿನ್ ಮತ್ತು ಚಿಕ್ಕಪ್ಪ ತಾಸಿನ್ ಅವರನ್ನು ಜನರ ಗುಂಪೊಂದು ಕೊಲೆ ಮಾಡಿದೆ ಎಂದು ಇಸ್ರಾರ್ ನೀಡಿದ ದೂರಿನ ಆಧಾರದ ಮೇಲೆ 2016ರ ನವೆಂಬರ್ 12ರಂದು ಪೊಲೀಸರು ಎಫ್‌ಐಆರ್ ದಾಖಲಿಸಲಾಗಿತ್ತು ಎಂದು ಸೈನಿ ಹೇಳಿದರು. ತನಿಖೆಯ ಬಳಿಕ ಪೊಲೀಸರು ಆರೋಪಿಯನ್ನು ಬಂಧಿಸಿ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ. ನ್ಯಾಯಾಲಯವು ಶಿಕ್ಷೆ ಧಿಸಿರುವ 13 ಆರೋಪಿಗಳಲ್ಲಿ ನಾಲ್ವರು ಸಹೋದರರು-ಮುನವರ್, ಮುಸ್ತಫಾ, ಸನವರ್ ಮತ್ತು ಸ್ಟಕೀಮ್ (ಎಲ್ಲರೂ ಸುಬ್ಬಾ ಅವರ ಪುತ್ರರು) ಸೇರಿದ್ದಾರೆ ಎಂದು ಸೈನಿ ಹೇಳಿದರು. ಮುಸ್ತಫಾನ ಇಬ್ಬರು ಪುತ್ರರಾದ ಶೌಕೀನ್ ಮತ್ತು ಮೋನ್ ಅವರಿಗೂ ಶಿಕ್ಷೆ ಧಿಸಲಾಗಿದೆ. ಈ ಪ್ರಕರಣದಲ್ಲಿ ಶಿಕ್ಷೆಗೊಳಗಾದ ಇತರ ಅಪರಾಧಿಗಳಲ್ಲಿ ಅನ್ವರ್, ಇಸ್ಲಾಂ, ಗುಲ್ಜಾರ್, ಜಮ್ಶೆಡ್, ಪರ್ವೇಜ್, ಅನ್ವರ್ ಮತ್ತು ಶಕೀಬ್ ಸೇರಿದ್ದಾರೆ.

ಉಗ್ರ ದಾಳಿ ಸಂಚುಕೋರ ಶಬೀರ್‌ಗೆ ಹಫೀಜ್ ಲಿಂಕ್

• **ಹೊಸದಿಲ್ಲಿ:** ದಿಲ್ಲಿ ಪೊಲೀಸರು ಇತ್ತೀಚೆಗೆ ಸದೆಬಡಿದ ಬಾಂಗ್ಲಾದೇಶ ಮೂಲದ ಭಯೋತ್ಪಾದಕ ಜಾಲದ ಸಂಚುಕೋರ ಶಬೀರ್ ಅಹ್ಮದ್ ಲೋನ್‌ಗೆ ಲಷ್ಕರ್ ತೊಯ್ಬಾದ ಮುಖ್ಯಸ್ಥ ಹಫೀಜ್ ಸೇರಿದಂತೆ ಪಾಕಿಸ್ತಾನದಲ್ಲಿನ ಭಯೋತ್ಪಾದಕ ಜಾಲದ ಪ್ರಮುಖರ ಜೊತೆ ನಂಟಿದ್ದುದು ತನಿಖೆಯಿಂದ ಬಯಲಿಗೆ ಬಂದಿದೆ.

ಈತ ಮುಂಬೈ ಭಯೋತ್ಪಾದಕ ದಾಳಿಯ(26/11) ಸಂಚುಕೋರ ಹಫೀಜ್ ಸಯೀದ್ ಮತ್ತು ಕಾರ್ಯಾಚರಣಾ ಮುಖ್ಯಸ್ಥ ಜಾಕೀಯುರ್ ರಹಮಾನ್ ಲಖ್ವಿ ಜೊತೆ ಸಂಪರ್ಕವಿತ್ತು. ಈ ಭಯೋತ್ಪಾದಕ ಜಾಲ ಪಾಕಿಸ್ತಾನದ ಬದಲಿಗೆ ಬಾಂಗ್ಲಾ ದೇಶದಿಂದ ಕಾರ್ಯಾಚರಣೆ ನಡೆಸುತ್ತಿತ್ತು. ಈ ದಾಳಿ ಸಂಚಿಗೆ ಸಂಬಂಧಿಸಿ 8 ಮಂದಿಯನ್ನು ಬಂಧಿಸಲಾಗಿದ್ದು, ಈ ಮೂಲಕ ಭಾರೀ ಷಡ್ಯಂತ್ರವೊಂದನ್ನು ವಿಫಲಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲೋನ್ ದೀರ್ಘಕಾಲದಿಂದ ಲಷ್ಕರ್ ತೊಯ್ಬಾದ ಸಹಚರನಾಗಿದ್ದು, ಈತನಿಗಾಗಿ ಭದ್ರತಾ ಏಜೆನ್ಸಿಗಳು 2ದಶಕಗಳಿಂದ ನಿಗಾ ಇರಿಸಿದ್ದು, ಈತ ಕಾಶ್ಮೀರದ ಗಂಡೇರ್‌ಬಾಲ್‌ನ ನಿವಾಸಿಯಾಗಿದ್ದು, ಪ್ರಕೃತ ಬಾಂಗ್ಲಾದೇಶದಲ್ಲಿ ನೆಲೆ ಹೊಂದಿದ್ದ. 2007ರಲ್ಲಿ ಈತನನ್ನು ಎಕೆ-47ರೈಫಲ್‌ಮತ್ತು ಗ್ರೆನೇಡ್‌ಗಳ ಸಹಿತವಾಗಿ ಬಂಧಿಸಲಾಗಿತ್ತು. ಈತ ದೇಶದ ಹಿರಿಯ ರಾಜಕೀಯ ನಾಯಕರ ಮೇಲೆ ಫಿದಾಯೀನ್ ದಾಳಿಗೆ ಸಂಚು ರೂಪಿಸಿದ್ದ. ಆದರೆ 2019ರಲ್ಲಿ ಈತ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದು, ಅನಂತರ ಈತ ಬಾಂಗ್ಲಾದೇಶಕ್ಕೆ ಪರಾರಿಯಾಗಿದ್ದನು.ಈತ ಭಾರತದಲ್ಲಿದ್ದ ಉಗ್ರರ ಸ್ಲೀಪರ್‌ಸೆಲ್‌ಗಳ ಮೂಲಕ ಭಯೋತ್ಪಾದಕ ಕೃತ್ಯಗಳನ್ನೆಸಗಲು ಸಂಚು ಹೂಡಿದ್ದ.

ಒಬ್ಬನ ಜೀವ ಉಳಿಸುವ ಯಾನದಲ್ಲಿ 7 ಜೀವಾಂತ್ಯ

• **ರಾಂಚಿ:** ಒಂದು ವ್ಯಕ್ತಿಯ ಜೀವ ಉಳಿಸಲು ಲಕ್ಷ ಖರ್ಚು ಮಾಡಿ, ಏಳು ಸಾವಿಗೆ ಸಾಕ್ಷಿಯಾಗುವುದೆಂದರೆ ಅದು ನೋವಿನ ಸಂಗತಿ. ಹೌದು ಹೊಟೇಲ್ ಮಾಲೀಕನೊಬ್ಬ ತನ್ನ ಹೊಟೇಲ್‌ನಲ್ಲಿ ಸಂಭವಿಸಿದ ಶಾರ್ಟ್ ಸರ್ಕ್ಯೂಟ್‌ನಿಂದ ಶೇ.65 ಸುಟ್ಟು ಹೋಗಿದ್ದ. ಆತನ ಹೆಚ್ಚುವರಿ ಚಿಕಿತ್ಸೆಗಾಗಿ ರಾಂಚಿಯಿಂದ ದಿಲ್ಲಿಗೆ ತೆರಳುತ್ತಿದ್ದ ಏರ್ ಆಂಬುಲೆನ್ಸ್ ಜಾರ್ಖಂಡ್‌ನ ಚತ್ರಾ ಜಿಲ್ಲೆಯ ಸಿಮರಿಯಾ ಬಳಿ ಸೋಮವಾರ ಸಂಜೆ ಅಪಘಾತಕ್ಕೀಡಾಗಿದೆ. ಘಟನೆಯಲ್ಲಿ ಎಲ್ಲಾ ಏಳು ಮಂದಿ ಮೃತಪಟ್ಟಿದ್ದಾರೆ.

ಅಷ್ಟಕ್ಕೂ ಈ ಹೆಚ್ಚುವರಿ ಚಿಕಿತ್ಸೆಗೆ ಪ್ರಯಾಣಿಸಲು ಅವರು 7.5 ಲಕ್ಷ ರೂ.ಗಳ ಏರ್ ಆಂಬುಲೆನ್ಸ್ ವ್ಯವಸ್ಥೆ ಮಾಡಿರುವುದು ಕೂಡ ಸಾಲದ ಮೂಲಕವೇ ಆಗಿತ್ತು. ವಿಮಾನದಲ್ಲಿದ್ದ ಎಲ್ಲಾ ಏಳು ಜನರ ಮೃತದೇಹಗಳನ್ನು ಹೊರತೆಗೆಯಲಾಗಿದೆ ಎಂದು ಎಸ್‌ಡಿಪಿಒ ಶುಭಂ ಖಂಡೇಲ್ವಾಲ್ ತಿಳಿಸಿದ್ದಾರೆ. ಅವರನ್ನು ಕ್ಯಾಪ್ಟನ್ ವಿವೇಕ್ ವಿಕಾಸ್ ಭಗತ್, ಕ್ಯಾಪ್ಟನ್ ಸವ್ರಾಜ್ದೀಪ್ ಸಿಂಗ್, ಸಂಜಯ್ ಕುಮಾರ್, ಡಾ ವಿಕಾಸ್ ಕುಮಾರ್ ಗುಪ್ತಾ, ಸಚಿನ್ ಕುಮಾರ್ ಮಿಶ್ರಾ, ಅರ್ಚನಾ ದೇವಿ ಮತ್ತು ಧುರು ಕುಮಾರ್ ಎಂದು ಗುರುತಿಸಲಾಗಿದೆ.

ಸಮುದ್ರಕ್ಕೆ ಬಿದ್ದ ಕಾಪ್ಟರ್, ಪ್ರಯಾಣಿಕರು ಸುರಕ್ಷಿತ: ಇಬ್ಬರು ಪೈಲಟ್‌ಗಳು ಸೇರಿದಂತೆ ಏಳು ಜನರು ಪ್ರಯಾಣಿಸುತ್ತಿದ್ದ ಪವನ್ ಹನ್ಸ್ ಹೆಲಿಕಾಪ್ಟರ್ ಮಂಗಳವಾರ ಬೆಳಗ್ಗೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಮಾಯಾಬಂದರ್ ಬಳಿ ಸಮುದ್ರಕ್ಕೆ ಬಿದ್ದಿದೆ. ಅದೃಷ್ಟವಶಾತ್ ಏಳು ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಪಶ್ಚಿಮ ಬಂಗಾಳ ಎಸ್‌ಐಆರ್‌ಗೆ ಜಡ್ಜ್‌ಗಳ ನೇಮಕ

• **ಹೊಸದಿಲ್ಲಿ:** ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್‌ಗಳನ್ನು ಕಾಲಮಿತಿಯಲ್ಲಿ ತೀರ್ಮಾನಿಸಲು ಸಾಕಷ್ಟು ಸಂಖ್ಯೆಯ ನ್ಯಾಯಾಧೀಶರಿಲ್ಲದಿರುವುದರಿಂದ, ಪಶ್ಚಿಮ ಬಂಗಾಳದಲ್ಲಿ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿನ ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು ನಿರ್ಧರಿಸಲು ಒಡಿಶಾ ಮತ್ತು ಜಾರ್ಖಂಡ್‌ನ ನ್ಯಾಯಾಧೀಶರುಗಳನ್ನು ನಿಯೋಜಿಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ಕನಿಷ್ಠ 3 ವರ್ಷಗಳ ಅನುಭವ ಹೊಂದಿರುವ ಹಿರಿಯ ವಿಭಾಗ ಮತ್ತು ಕಿರಿಯ ವಿಭಾಗದ ಸಿವಿಲ್ ನ್ಯಾಯಾಧೀಶರನ್ನು ಜಿಲ್ಲಾ ನ್ಯಾಯಾಧೀಶರ ಶ್ರೇಣಿಯ ನ್ಯಾಯಾಧೀಶರ ಜತೆಗೆ ಎಸ್‌ಐಆರ್‌ಗೆ ಬಳಸಲು ನ್ಯಾಯಪೀಠವು ಅನುಮತಿ ನೀಡಿತು. ಕಳೆದ ವಾರ, ಎಸ್‌ಐಆರ್‌ಗಾಗಿ ಜಿಲ್ಲಾ ನ್ಯಾಯಾಧೀಶರು/ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರ ಶ್ರೇಣಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಥವಾ ನಿವೃತ್ತ ನ್ಯಾಯಾಧೀಶರನ್ನು ನಿಯೋಜಿಸಲು ನಿರ್ದೇಶನ ನೀಡಿತ್ತು.

ಪ್ರಧಾನಮಂತ್ರಿ ನೂತನ ಕಾರ್ಯಾಲಯದಲ್ಲಿ ಮೊದಲ ಸಂಪುಟ ಸಭೆ ನಿರ್ಣಯ

ಸೇವಾತೀರ್ಥ ಎಲ್ಲರ ಸಬಲೀಕರಣ ಕೇಂದ್ರ

• **ಹೊಸದಿಲ್ಲಿ:** ಪ್ರಧಾನಮಂತ್ರಿ ಹೊಸ ಕಾರ್ಯಾಲಯ ಸೇವಾತೀರ್ಥ ಅಧಿಕಾರ ಪ್ರದರ್ಶನ ಕೇಂದ್ರವಲ್ಲ. ಇಲ್ಲಿ ಕೈಗೊಳ್ಳುವ ಪ್ರತಿಯೊಂದು ನಿರ್ಧಾರವು ನಾಗರಿಕ ದೇವೋ ಭವ ಭಾವನೆಯಿಂದ ಪ್ರೇರಿತವಾಗಿರಲಿದೆ. ಸೇವಾತೀರ್ಥ ಪ್ರತಿಯೋರ್ವ ಭಾರತೀಯನ ಸಬಲೀಕರಣ ಕೇಂದ್ರವಾಗಿರಲಿದೆ ಎಂಬ ದೃಢ ಸಂಕಲ್ಪವನ್ನು ಕೇಂದ್ರ ಸಚಿವ ಸಂಪುಟ ಕೈಗೊಂಡಿದೆ. ಸೇವಾತೀರ್ಥದಲ್ಲಿ ನಡೆದ ಸಂಪುಟದ ಪ್ರಥಮ ಸಭೆಯಲ್ಲಿ ಈ ರೀತಿ ಸಂಕಲ್ಪ ತೊಡಲಾಗಿದೆ.

ಸರ್ಕಾರವು ಸೇವಾತೀರ್ಥದಿಂದ ನಡೆಸುವ ಪ್ರತಿಯೊಂದು ಪ್ರಯತ್ನವು, ದೇಶದ ಕಟ್ಟಕಡೆಯ ವ್ಯಕ್ತಿಯ ಬದುಕನ್ನು ಸುಗಮಗೊಳಿಸುವ ಸ್ಫೂರ್ತಿಯಿಂದ ಕೂಡಿರುವುದು ಎಂಬ ಸಂಕಲ್ಪವನ್ನೂ ಸಂಪುಟ ಸಭೆ ತೊಟ್ಟಿದೆ. ಪ್ರಧಾನಿ ನರೇಂದ್ರ ಮೋದಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಭಾರತದ ಅಭಿವೃದ್ಧಿಯಾನದಲ್ಲಿ ಇದು ಹೊಸ ಆರಂಭ. ಹೊಸ ಸಂಕೀರ್ಣದಲ್ಲಿ ಅಂಗೀಕರಿಸುವ ಪ್ರತಿಯೊಂದು ನಿರ್ಧಾರಗಳೂ, ದೇಶದ 140 ಕೋಟಿ ಪ್ರಜೆಗಳ ಸೇವಾ ಸ್ಫೂರ್ತಿಯಿಂದ ಪ್ರೇರಿತವಾಗಿರುವುದು ಮತ್ತು ರಾಷ್ಟ್ರ ನಿರ್ಮಾಣದ ವಿಸ್ತೃತ ಧ್ಯೇಯಕ್ಕೆ ಬದ್ಧವಿರುವುದು ಎಂದು ಸಭೆಯಲ್ಲಿ ಅಂಗೀಕರಿಸಿದ ಸೇವಾ ಸಂಕಲ್ಪ ನಿರ್ಣಯ ಹೇಳಿದೆ.



ಇತರ ನಿರ್ಣಯಗಳು

- ಶ್ರೀನಗರ ವಿಮಾನ ನಿಲ್ದಾಣದಲ್ಲಿ 1,677 ಕೋಟಿ ರೂ. ವೆಚ್ಚದ ಸಿವಿಲ್ ಎನ್‌ಕ್ಲೇವ್ ಅಭಿವೃದ್ಧಿಗೆ ಅಸ್ತು
- ಗಿಫ್ಟ್ ನಗರದಿಂದ ಶಾಹ್ಪುರದವರೆಗೆ ಗುಜರಾತ್ ಮೆಟ್ರೋ ವಿಸ್ತರಣೆ
- ಪವರ್ ಗ್ರಿಡ್‌ನ ಈಕ್ವಿಟಿ ಹೂಡಿಕೆಯ ಮಿತಿಯನ್ನು ಪ್ರತಿ ಅಂಗಸಂಸ್ಥೆಗೆ 7,500 ಕೋಟಿ ರೂ. ಗಳಿಗೆ ಹೆಚ್ಚಿಸಲು ಅನುಮೋದನೆ

ಇದು ಮಾನವೀಯ ಮೌಲ್ಯ, ಭೌತಿಕ ವೈಭವಗಳ ಸಂಗಮ

ಸಂಕೀರ್ಣದ ಜಾಗವು ಹಿಂದೆ ಬ್ರಿಟಿಷ್ ಕಾಲದಲ್ಲಿ ತಾತ್ಕಾಲಿಕ ಸೇನಾ ಬ್ಯಾರಕ್‌ಗಳ ಜಾಗವಾಗಿತ್ತು. ವಸಾಹತುಶಾಹಿ ಆಳ್ವಿಕೆಗೆ ಮುನ್ನ ಭಾರತವು ತನ್ನ ಭೌತಿಕ ಸಂಪತ್ತು-ವೈಭವಗಳು ಹಾಗೂ ಮಾನವೀಯ ಮೌಲ್ಯಗಳಿಗೆ ಹೆಸರಾಂತ ರಾಷ್ಟ್ರವಾಗಿತ್ತು. ಸೇವಾತೀರ್ಥ ವನ್ನು ಇವೇ ಚಿಂತನೆಗಳ ಸಂಗಮದೊಂದಿಗೆ ರೂಪಿಸಲಾಗಿದೆ. ನಮ್ಮ ಪಾಲಿಗೆ, ದೇಶದ ಪ್ರತಿಯೋರ್ವ ಪ್ರಜೆಗೆ ಘನತೆ, ಸಮಾನತೆ ಮತ್ತು ನ್ಯಾಯ ನೀಡುವ ಆಡಳಿತ ವ್ಯವಸ್ಥೆಯನ್ನು ಎತ್ತಿಹಿಡಿಯುವ ನೈತಿಕ ಬದ್ಧತೆಯ ಅಭಿವ್ಯಕ್ತಿಯಾಗಿದೆ ಸಾಂವಿಧಾನಿಕ ಮೌಲ್ಯಗಳು. ಸ್ಥಾಗಿತ್ಯದ ಬದಲು ಕ್ರಿಯಾಶೀಲತೆ, ಅನಾದರಣೆ ಬದಲು ಸಮರ್ಪಣಾ ಭಾವ, ಶಂಕೆಗಳ ಬದಲು ಪರಿಹಾರಗಳ ನೀಡುವ ಆಡಳಿತ ಮೂಲಸೌಕರ್ಯಗಳ ಆವಶ್ಯಕತೆಗೊಂದು ಉತ್ತರವಾಗಿದೆ ಸೇವಾತೀರ್ಥ ಎಂದು ಸಂಪುಟದ ಸೇವಾಸಂಕಲ್ಪ ನಿರ್ಣಯದಲ್ಲಿ ವಿಶ್ಲೇಷಿಸಲಾಗಿದೆ.

ಹರ್ಯಾಣದಲ್ಲಿ ಮಾ.13ರಿಂದ ಮೂರು ದಿನ ಎಬಿಪಿಎಸ್ ಸಭೆ

• **ಹೊಸದಿಲ್ಲಿ:** ಆರೆಸ್ಸೆಸ್‌ನ ಅತ್ಯುನ್ನತ ನಿರ್ಧಾರಗಳ ಕೈಗೊಳ್ಳು ಪ್ರಮುಖ ಘಟಕ ಅಖಿಲ ಭಾರತ ಪ್ರತಿನಿಧಿ ಸಭಾವು(ಎಬಿಪಿಎಸ್) ಮಾ.13ರಿಂದ 15ರವರೆಗೆ ಹರ್ಯಾಣದ ಸಮಲ್ಖಾ ನಗರದಲ್ಲಿ ಸಭೆ ಸೇರಲಿದೆ. ರಾಷ್ಟ್ರಕ್ಕೆ ಸಂಬಂಧಿಸಿದಂತೆ ಹಲವು ಪ್ರಮುಖ ವಿಚಾರಗಳ ಬಗ್ಗೆ ಚರ್ಚೆ ಜತೆಗೆ ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿ ಸುವುದು ವಾರ್ಷಿಕ ಬೈಠಕ್‌ನ ಮೂಲೋದ್ದೇಶವಾಗಿದೆ. ಆರೆಸ್ಸೆಸ್ ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಮತ್ತು ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಬೈಠಕ್‌ಗಳ ಅಧ್ಯಕ್ಷತೆ ವಹಿಸಲಿದ್ದಾರೆ.

ವಾರ್ಷಿಕ ಬೈಠಕ್ ಹರ್ಯಾಣದ ಸಮಲ್ಖಾ ನಗರಕ್ಕೆ ಸಮೀಪ ಪಟ್ಟಿ ಕಲ್ಯಾಣದ ಗ್ರಾಮ ವಿಕಾಸ್ ಮತ್ತು ಸೇವಾ ಸಾಧನಾ ಕೇಂದ್ರದಲ್ಲಿ ನಡೆಯಲಿದೆ. ಸಂಘಟನಾತ್ಮಕ ದೃಷ್ಟಿಯಿಂದ ಎಬಿಪಿಎಸ್ ಆರೆಸ್ಸೆಸ್‌ನ ಉನ್ನತ ನಿರ್ಧಾರಗಳ ರೂಪಿಸುವ ಘಟಕವಾಗಿದೆ. ಸಭೆಯಲ್ಲಿ ದೇಶದ ಪ್ರಸ್ತುತ ಸನ್ನಿವೇಶಗಳ ಕುರಿತು ಚರ್ಚೆ ನಡೆಯಲಿದೆ ಮತ್ತು ಮಹತ್ವದ ವಿಚಾರಗಳಿಗೆ ಸಂಬಂಧಿಸಿ ನಿರ್ಣಯಗಳ ಅಂಗೀಕರಿಸಲಾಗುವುದು ಎಂದು ಆರೆಸ್ಸೆಸ್ ರಾಷ್ಟ್ರೀಯ ಮಾಧ್ಯಮ ಮತ್ತು ಪ್ರಚಾರ ಪ್ರಮುಖ್ ಸುನಿಲ್ ಅಂಬೇಕರ್ ತಿಳಿಸಿದ್ದಾರೆ.

ಪಂಚಪರಿವರ್ತನ್ ಉಪಕ್ರಮಗಳು, ಸಂಘ ಶಾಖೆಗಳ ಮುಖೇನ ನಡೆಯುತ್ತಿರೋ ಸಾಮಾಜಿಕ ಪರಿವರ್ತನಾ ಪ್ರಯತ್ನಗಳ ಕುರಿತು ಬೈಠಕ್‌ಗಳಲ್ಲಿ ಚರ್ಚೆ ನಡೆಯಲಿದೆ. ಸಂಘಶಿಕ್ಷಾ ವರ್ಗಗಳ ಆಯೋಜನೆ, ಕಾರ್ಯಕರ್ತ ವಿಕಾಸ ವರ್ಗಗಳು ಮತ್ತಿತರ ತರಬೇತಿ ಕಾರ್ಯಕ್ರಮಗಳಬಗ್ಗೆಯೂ ಚರ್ಚೆ ನಡೆಯಲಿದೆ. ಮುಂಬರುವ ವರ್ಷಕ್ಕೆ ಅನ್ವಯಿಸುವ ಕ್ರಿಯಾ ಯೋಜನೆಗಳನ್ನು ಬೈಠಕ್‌ನಲ್ಲಿ ನಿರ್ಧರಿಸಲಾಗುವುದು ಎಂದು ಅಂಬೇಕರ್ ತಿಳಿಸಿದ್ದಾರೆ.

ಉಡುಪಿ : ಇಬ್ಬರು ಬೈಕ್ ಕಳ್ಳರ ಸೆರೆ

ಉಡುಪಿ: ರಾಹುಲ್ ನಗರದ ವೀರ ಮಾರುತಿ ಭಜನಾ ಮಂದಿರದ ಬಳಿ ಪಾರ್ಕ್ ಮಾಡಲಾಗಿದ್ದ ಬಜಾಜ್ ಪಲ್ಸರ್ ಮೋಟಾರ್ ಸೈಕಲ್ ಕಳವು ಮಾಡಿದ ಇಬ್ಬರನ್ನು ಮಣಿಪಾಲ ಪೊಲೀಸರು ಬಂಧಿಸಿದ್ದಾರೆ.

ನೇತಾಜಿನಗರದ ನಿವಾಸಿಗಳಾದ ಶರತ್ (26) ಮತ್ತು ಗಣೇಶ್ (31) ಬಂಧಿತ ಆರೋಪಿಗಳು. ಫೆ. 21 ರಂದು ಸುದರ್ಶನ್ ಎಂಬವರ ಬೈಕ್ ಕಳವಾಗಿದ್ದು, ಈ ಬಗ್ಗೆ 23 ರಂದು ದೂರು ದಾಖಲಾಗಿತ್ತು. ತನಿಖೆ ಕೈಗೆತ್ತಿಕೊಂಡ ಪೊಲೀಸರು ಮಿಂಚಿನ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ದಸ್ತಗಿರಿ ಮಾಡಿ, ಕಳವು ಮಾಡಿದ್ದ ಬೈಕನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತರು ಕುಖ್ಯಾತ ಕಳ್ಳರಾಗಿದ್ದು, ಇವರ ಮೇಲೆ ಉಡುಪಿ, ಭದ್ರಾವತಿ, ಕೊಪ್ಪ, ಮಡಿಕೇರಿ ಮತ್ತು ತುಮಕೂರು ಸೇರಿದಂತೆ ವಿವಿಧ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ 11ಕ್ಕೂ ಹೆಚ್ಚು ಕಳವು ಪ್ರಕರಣಗಳು ದಾಖಲಾಗಿವೆ. ಆರೋಪಿಗಳನ್ನು ಸದ್ಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಫೆ.27ರಂದು ಮಹಾ ಆಹೋರಾತ್ರಿ ಏಕಾಹ ಭಜನಾ ವೃತ

ಮಂಗಳೂರು: ಬೋಳಾರದ ಶ್ರೀ ವಿದ್ಯೋದಯ ಭಜನಾ ಮಂಡಳಿಯ 98ನೇ ವರ್ಷಾವಧಿ ಮಹಾ ಆಹೋರಾತ್ರಿ ಏಕಾಹ ಭಜನಾ ವೃತ ಫೆ.27ರಂದು ನಡೆಯಲಿದೆ. ಬೆಳಗ್ಗೆ 6.49ರ ಸೂರ್ಯೋದಯಕ್ಕೆ ರಾಜೇಂದ್ರ ಬೋಳಾರ ಮತ್ತು ಸುರೇಖಾ ಬೋಳಾರ, ಮನೀಷ್‌ಕುಮಾರ್, ಧನ್ಯಶ್ರೀ ಗಗನ್‌ರಾಜ್ ಅವರು ಏಕಾಹ ಭಜನೆ ಉದ್ಘಾಟಿಸುವರು. ವಿವಿಧ ಭಜನಾ ಮಂಡಳಿ, ಸಂಘ ಸಂಸ್ಥೆಗಳಿಂದ ಇಡೀ ದಿನ ಭಜನಾ ಸಂಕೀರ್ತನೆ ನಡೆದು ಮರುದಿನ ಸೂರ್ಯೋದಯಕ್ಕೆ ಮಂಗಳಾಚರಣೆ ನಡೆಯಲಿದೆ. ಅಂದು ರಾತ್ರಿ 7ಕ್ಕೆ ಆನಂದ ಭಜನೆ ನಡೆಯಲಿದೆ ಎಂದು ರಘುನಾಥ ಎಂ. ವರ್ಕಾಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಕೂಟರ್ ಕಳವು

ಮಂಗಳೂರು: ನಗರದ ಬಂದರಿನ ಅಂಗಡಿಯೊಂದರ ಎದುರು ನಿಲ್ಲಿಸಿದ್ದ ಸ್ಕೂಟರ್ ಕಳವಾಗಿರುವ ಬಗ್ಗೆ ಪಾಂಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುನಾವರ್ ಎನ್ನುವವರು ಫೆ.20ರಂದು ಸಂಜೆ 6.20ರ ವೇಳೆಗೆ ಬಂದರಿನ ಫಿದಾ ಟ್ರೇಡರ್ಸ್ ಎನ್ನುವ ಅಂಗಡಿ ಮುಂದೆ ಸ್ಕೂಟರ್ ನಿಲ್ಲಿಸಿ ಸಾಮಗ್ರಿ ಖರೀದಿಸಲು ಹೋಗಿದ್ದಾರೆ. 6.40ರ ವೇಳೆ ಬಂದು ವಾಪಸು ಬಂದು ನೋಡಿದಾಗ ಪಾರ್ಕ್ ಮಾಡಿದ್ದ ಸ್ಥಳದಲ್ಲಿ ಸ್ಕೂಟರ್ ಇರಲಿಲ್ಲ. ಆಸುಪಾಸಿನಲ್ಲಿದ್ದವರಲ್ಲಿ ವಿಚಾರಿಸಿ, ನಗರದ ವಿವಿಧೆಡೆ ಹುಡುಕಾಡಿದರೂ ಸ್ಕೂಟರ್ ಪತ್ತೆಯಾಗಿಲ್ಲ. ಕಳವಾದ ಸ್ಕೂಟರ್ ಅಂದಾಜು ಮೌಲ್ಯ 15 ಸಾವಿರ ರೂ. ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

24-02-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 485
ಚೋಲ್ ಅಡಿಕೆ	505 - 535
ಡಬಲ್ ಚೋಲ್	505 - 535
ಹೊಸ ಪಠೋರ	365 - 415
ಹಳೆ ಪಠೋರ	400 - 430
ಹೊಸ ಉಳ್ಳಿ	115 - 300
ಹಳೆ ಉಳ್ಳಿ	105 - 305
ಹೊಸ ಕೋಕಾ	330 - 350
ಹಳೆ ಕೋಕಾ	355 - 375
ಹೊಸ ಕರಿಗೋಟು	240 - 270
ಹಳೆ ಕರಿಗೋಟು	240 - 270
ಹಸಿ ಕೊಕ್ಕೋ	80 - 110
ಒಣ ಕೊಕ್ಕೋ	350 - 380

ಕಾಳುಮೆಣಸು ಧಾರಣೆ

ಕಾಳುಮೆಣಸು	465 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	213.50
ಆರ್‌ಎಸ್‌ಎಸ್ 2	191.00
ಸ್ಕ್ರಾಪ್ 1	135.50
ಸ್ಕ್ರಾಪ್ 2	123.00

ಲಕ್ಕಿಡಿಪ್

ಶ್ರೀ ಸೂರ್ಯೇಶ್ವರ ಕಲಾವೃಂದ (ರಿ.) ಬಾಕ್ರಬೈಲು ಇದರ ಮಹಾಶಿವರಾತ್ರಿ ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಲಕ್ಕಿಡಿಪ್ ವಿಜೇತ ಸಂಖ್ಯೆಗಳು:

ಪ್ರಥಮ : 0965
ದ್ವಿತೀಯ : 1373
ತೃತೀಯ : 1894

IN THE COURT OF THE ADDL. DISTRICT AND SESSIONS JUDGE OF KODAGU AT MADIKERI
P & SC: 1/2026

Petitioner : Smt Uma W/o. Ganesh, Aged about 51 years, Residing at B M Road, 7th Hoskote Village, Somwarpet Taluk, Kodagu- VS-
Respondent : Nil

PUBLIC NOTICE

Take notice that the petitioner has filed this petition under section 276 of the Indian Succession Act seeking succession certificate for the transfer the property in daughter in law Smt Jayamma. Residing at B M Road, 7th Hoskote Village, Somwarpet Taluk, Kodagu. Will dated 09.07.2020.

The case is posted to at 02.04.2026 at 11.00 AM before the aforesaid court. If anybody has objection in granting the succession certificate in favour of the petitioner, may file their objections before the aforesaid court on the aforesaid day. If no objections are received, then the matter will be heard and decided in accordance with law.

By order of the court
Chief Ministerial Officer , 1st Addl. District and Sessions Judge at Madikeri
Advocate for petitioner
Archana J B, BA, LLB

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-508th) ಡ್ರಾ ಫೆಬ್ರವರಿ 24ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SB 543647 (VAIKKOM)

Cons Prize-Rs: 5000/-
SA 543647 SC 543647 SD 543647 SE 543647
SF 543647 SG 543647 SH 543647 SJ 543647
SK 543647 SL 543647 SM 543647

2nd Prize Rs: 30,00,000/- [30 Lakhs]
SB 296805 (VAIKKOM)

3d Prize Rs: 5,00,000/- [5 Lakhs]
SL 233970 (KOTTAYAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0118 0350 0704 1150 1152 1671 1798 4775 5141 5627 6134 6163 6500 6508 6691 7759 7979 9012 9076

5th Prize Rs.2,000/-
0569 0983 1959 3337 4194 8063

6th Prize Rs.1,000/-
0928 1079 1144 1168 1203 1498 1903 2173 2848 3006 4169 4740 4898 5409 5697 5904 6961 6966 7365 8158 8196 8305 8695 9223 9672

7th Prize Rs.500/-
0131 0317 0325 0526 0740 0774 0984 1242 1265 1347 1486 1523 1723 1779 2043 2110 2142 2314 2322 2360 2419 2639 2738 2780 2876 2989 3210 3287 3334 3861 3906 3921 4348 4358 4460 4544 4565 4729 4757 4939 4973 5267 5506 6019 6064 6117 6222 6255 6353 6402 6593 6698 6827 6994 7017 7261 7623 7656 7666 7961 8037 8088 8267 8349 8531 8687 8781 8784 8788 8957 9233 9281 9479 9502 9653 9823

8th Prize Rs.200/-
0037 0258 0292 0396 0508 0573 0860 0976 1108 1114 1134 1299 1452 1683 1728 1764 1990 2135 2509 2582 2616 2783 2792 2859 2927 3049 3169 3173 3189 3243 3250 3325 3494 3588 3693 3912 4155 4186 4187 4218 4233 4364 4616 4625 4733 4737 4826 4918 4943 4980 5007 5157 5468 5529 5586 5877 6191 6408 6436 6449 6527 6534 6668 6879 6937 7005 7106 7194 7367 7524 7615 7709 7719 7931 7935 8087 8176 8198 8201 8333 8379 8473 8497 8700 8838 9050 9051 9405 9594 9652

9th Prize Rs.100/-
0045 0079 0200 0237 0346 0347 0352 0375 0446 0447 0473 0501 0580 1072 1094 1129 1157 1192 1303 1464 1508 1572 1579 1613 1718 1729 1897 2120 2149 2163 2283 2285 2299 2368 2370 2481 2482 2485 2578 2741 2756 2769 2850 2920 3247 3260 3289 3405 3497 3571 3597 3641 3657 3664 3706 3782 3801 4036 4132 4228 4267 4349 4397 4432 4596 4631 4675 4724 4930 4946 4977 5147 5183 5302 5345 5374 5636 5670 5718 5730 5757 5826 5847 5855 5929 5958 6006 6008 6015 6026 6083 6098 6174 6188 6264 6266 6417 6538 6686 6716 6788 6813 6881 6935 6962 6991 7066 7140 7171 7204 7308 7353 7435 7443 7649 7767 7772 7775 7927 7977 7982 8083 8140 8142 8186 8287 8290 8342 8383 8403 8530 8585 8668 8793 8855 9121 9195 9263 9509 9577 9643 9646 9742 9753 9789 9799 9830 9865 9930 9985

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಟ್ರಾಫಿಕ್ ಇಂಜಿನಿಯರಿಂಗ್ ಅಂಡ್ ಮೊಬಿಲಿಟಿ ಸೆಲ್, 2ನೇ ಮಹಡಿ, 9ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು-560011

ನಂ.: ಕಾಪಾಅ/ಟಿಇ&ಎಂ ಸೆಲ್/ಬೆಂದನಪಾ/ಟೆಂಡ್/05/2025-26 ದಿನಾಂಕ: 24.02.2026

ಟೆಂಡರ್ ಆಹ್ವಾನ (ಐಎಫ್‌ಟಿ)

(ದ್ವಿ ಲಕೋಟೆ ಪದ್ಧತಿ) (ಜಿಒಕೆ ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿಯರಿಂಗ್ ಮತ್ತು ಮೊಬಿಲಿಟಿ ಸೆಲ್ (ಬೆಂದನಪಾ) ಇವರು ಗ್ರೇಟರ್ ಬೆಂಗಳೂರು ಪ್ರದೇಶ (ಜಾಹೀರಾತು) ನಿಯಮಗಳು 2025 ರ ಪ್ರಕಾರ 2-ವಲಯಗಳಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳ ನಿಯೋಜನೆಗಾಗಿ ಬೆಂದನಪಾ / ಯಾವುದೇ ಇತರ ಬೆಂಗಳೂರು ನಗರ ಪಾಲಿಕೆಯೊಂದಿಗೆ ಅರ್ಹ ಪರವಾನಗಿ ಪಡೆದ / ನೋಂದಾಯಿತ ಜಾಹೀರಾತುದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಎರಡು (2) ವಲಯಗಳಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳ ನಿಯೋಜನೆ.

ಟೆಂಡರ್ ವೇಳಾಪಟ್ಟಿಯು ಈ ಕೆಳಗಿನಂತಿವೆ:

(1) ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಟಿಇ&ಎಂ ಸೆಲ್/ಬೆಂದನಪಾ/ಟೆಂಡ್/05/2025-26, ದಿನಾಂಕ: 25.02.2026. (2) ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಬಿಡ್ ದಾಖಲೆಯನ್ನು ಡೌನ್‌ಲೋಡ್ ಮಾಡಲು ಸಿದ್ಧವಾಗಿರುವ ದಿನಾಂಕ: 25.02.2026 ಸಂಜೆ 5:30ರಿಂದ (3) ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸ್ಥಳ: 09.03.2026ರ ಮಧ್ಯಾಹ್ನ 3:00 ಗಂಟೆಗೆ ಅಪರ ಆಯುಕ್ತರ ಕಚೇರಿ (ಜಾಹೀರಾತುಗಳು), ಬೆಂದನಪಾ, 2ನೇ ಮಹಡಿ, 9ನೇ ಮುಖ್ಯ ರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು-560011. (4) ಸ್ಪಷ್ಟೀಕರಣವನ್ನು ಪಡೆಯಲು ಕೊನೆಯ ದಿನಾಂಕ: 09.03.2026ರ ಬೆಳಿಗ್ಗೆ 11:00 ಗಂಟೆಗೆ. (5) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೇದಿಕೆಯಲ್ಲಿ ಟೆಂಡರ್ ಅನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 21.03.2026 ಸಂಜೆ 5:00 ಗಂಟೆಯವರೆಗೆ. (6) ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ ಮತ್ತು ತಾಂತ್ರಿಕ ಮೌಲ್ಯಮಾಪನ: 24.03.2026 ರಂದು ಮಧ್ಯಾಹ್ನ 3:00 ಗಂಟೆಗೆ. (7) ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕವಾಗಿ ಅರ್ಹವಾದ ಬಿಡ್ಡರ್‌ಗಳ ವಾಣಿಜ್ಯ ಬಿಡ್ (ಸಾಧ್ಯವಾದರೆ): ತಾಂತ್ರಿಕ ಮೌಲ್ಯಮಾಪನದ ನಂತರ. (8) ಪ್ರಶ್ನೆಗಳಿಗೆ ಸಂಪರ್ಕಿಸ ಬೇಕಾದ ವ್ಯಕ್ತಿ: ಅಪರ ಆಯುಕ್ತರು (ಜಾಹೀರಾತುಗಳು), ಮೊಬೈಲ್: 9480056951, ಇಮೇಲ್: addl.comm.rev.bscc@gmail.com (9) ಟೆಂಡರ್‌ಗಳನ್ನು ತೆರೆಯುವ ಸ್ಥಳ ಮತ್ತು ಸಂವಹನಕ್ಕಾಗಿ ವಿಳಾಸ: ಕಾರ್ಯಪಾಲಕ ಅಭಿಯಂತರರ ಕಚೇರಿ, ಟ್ರಾಫಿಕ್ ಇಂಜಿನಿಯರಿಂಗ್ ಅಂಡ್ ಮೊಬಿಲಿಟಿ ಸೆಲ್, 2ನೇ ಮಹಡಿ, 9ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು-560011. (10) ಇಎಂಡಿ ಮೊತ್ತ: ಪ್ರತಿ ವಲಯವಾರು ಬಿಡ್‌ಗೆ ರೂ. 20 ಲಕ್ಷ (ಇದರಲ್ಲಿ ರೂ. 16 ಲಕ್ಷ ಬ್ಯಾಂಕ್ ಗ್ಯಾರಂಟಿಯಾಗಿ ಮತ್ತು ಉಳಿದ ರೂ. 4 ಲಕ್ಷ ಕೆಪಿಪಿ ಪೋರ್ಟಲ್‌ನಲ್ಲಿ ಪಾವತಿಸುವುದು). ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು ಟ್ರಾಫಿಕ್ ಇಂಜಿನಿಯರಿಂಗ್ ಅಂಡ್ ಮೊಬಿಲಿಟಿ ಸೆಲ್, ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತಿ, ವಿಜಯಪುರ
ತಾಲೂಕ ಪಂಚಾಯತ ಕಾರ್ಯಾಲಯ, ಆಲಮೇಲ
ಇ-ಮೇಲ್: eotpalmel@gmail.com

ಸಂ:ತಾಪಅ/ಟೆಂಡರ್/2025-26 ದಿನಾಂಕ:23.02.2026

ಅಲ್ಪಾವಧಿ ಟೆಂಡರ ಪ್ರಕಟಣೆ

2025-26 ನೇ ಸಾಲಿನ ತಾಲೂಕ ಪಂಚಾಯತ ಆಲಮೇಲ ಕಾರ್ಯಾಲಯದ ಅನಿರ್ಬಂದಿತ ಯೋಜನೆಯಡಿ, ಅಂಗವಿಕಲರಿಗಾಗಿ ಮೀಸಲಿರಿಸಿದ ಅನುದಾನದಲ್ಲಿ ತ್ರಿಚಕ್ರ ಸ್ಕೂಟರ್‌ಗಳನ್ನು ಪೂರೈಸಲು ಈ ಪ್ರೋಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ವಿವರಗಳನ್ನು https://eproc.karnataka.gov.in ಈ ವೆಬ್‌ಸೈಟ್‌ನಲ್ಲಿ ದಿನಾಂಕ: 24.02.2026 ರಿಂದ ಪಡೆಯಬಹುದಾಗಿದೆ.

Tender Information Vehicle:RDPR/2025-26/IND13685
Name: GEARLESS SCOOTER

ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕು ಪಂಚಾಯತ,ಆಲಮೇಲ

ವಾಸಾಸಂಇ/ವಿಜಯಪುರ/746/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ-ಧಾರ್ಮಿಕ ದತ್ತಿ ಇಲಾಖೆ
ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಕಟೀಲು, ದ.ಕ.
ದೂರವಾಣಿ: 7411534591, 8904905361

ಕ್ರಮಾಂಕ: ಕದುಪದೇ:ಟೆಂಡರು:ಸಿಆರ್01,02/2025-26 ದಿನಾಂಕ: 24.02.2026

ಟೆಂಡರು ಪ್ರಕಟಣೆ

ಶ್ರೀದೇವಳಕ್ಕೆ ವಿದ್ಯುತ್ ಉಪಕರಣಗಳನ್ನು ಹಾಗೂ ನೀರು ಸರಬರಾಜಿಗೆ ಬೇಕಾದ ಉತ್ತಮ ಗುಣಮಟ್ಟದ ಸಾಮಾಗ್ರಿಗಳನ್ನು ದಿನಾಂಕ 01.04.2026 ರಿಂದ 31.03.2027 ರವರೆಗಿನ ಅವಧಿಗೆ ಸರಬರಾಜು ಮಾಡುವರೇ ಜಿ.ಎಸ್.ಟಿ ನೋಂದಾಯಿತ ಸರಬರಾಜುದಾರರಿಂದ ಟೆಂಡರು ಕರೆಯಲಾಗಿದೆ. ಟೆಂಡರುಗಳನ್ನು ದಿನಾಂಕ 20.03.2026 ರಂದು ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು.

ಟೆಂಡರ್ ಬಗ್ಗೆ ಹೆಚ್ಚಿನ ವಿವರಗಳನ್ನು ಶ್ರೀದೇವಳದ ಕಚೇರಿ ಸಮಯದಲ್ಲಿ ಪಡೆಯುವುದು.

ಸಹಿ/- ಆಸ್ರಣ್ಣ ಅನುವಂಶಿಕ ಮೊಕ್ತೇಸರ
ಸಹಿ/- ಕೊಡೆತ್ತೂರುಗುತ್ತು ಅನುವಂಶಿಕ ಮೊಕ್ತೇಸರ

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.

ಕ್ರಮಾಂಕ:ಶಿಮನಪಾಶಿ:ಕಾವಿ:ಟೆಂಡರ್: 52/2025-26 ದಿ: 23.02.2026

ಟೆಂಡರ್ ಪ್ರಕಟಣೆ (KPP Portal ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ KPP PORTAL ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. KPP PORTAL ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು. 1) KPP PORTAL ಮೂಲಕ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10.03.2026 (ಸಂಜೆ:4.00 ಗಂಟೆಗೆ). 2) KPP PORTAL ಮೂಲಕ ಕಾಮಗಾರಿಗಳಿಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 11.03.2026 (ಸಂಜೆ: 4.30 ಗಂಟೆಗೆ) 3) KPP PORTAL ಮೂಲಕ ಆರ್ಥಿಕ ಬಿಡ್ ತೆರೆಯುವ ದಿನಾಂಕ: 12.03.2026 (ಸಂಜೆ: 4.30 ಗಂಟೆಗೆ)

ಕ್ರ.ಸಂ. 1. ಇಂಡೆಂಟ್ ಸಂಖ್ಯೆ: 49584/CALL-2 **ಕಾಮಗಾರಿ/ಸೇವಯ ವಿವರ:** Development of Parshvanath and Nagarkatte Park **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 107.77 **ಇ.ಎಂ.ಡಿ (ರೂ.ಗಳಲ್ಲಿ):** 136800 **ಅನುದಾನ:** ಅಮೃತ್ 2.0

ಕ್ರ.ಸಂ.2. ಇಂಡೆಂಟ್ ಸಂಖ್ಯೆ: 49562/CALL-2 **ಕಾಮಗಾರಿ/ಸೇವಯ ವಿವರ:** Development of Park in Allarim Layout **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):**209.26 **ಇ.ಎಂ.ಡಿ (ರೂ.ಗಳಲ್ಲಿ):** 266000 **ಅನುದಾನ:**ಅಮೃತ್2.0

ಕ್ರ.ಸಂ. 3. ಇಂಡೆಂಟ್ ಸಂಖ್ಯೆ: 50476/CALL-2 Developemnt of Park in Purale Apoorva Layout **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 157.77 **ಇ.ಎಂ.ಡಿ (ರೂ.ಗಳಲ್ಲಿ):** 200500 **ಅನುದಾನ:** ಅಮೃತ್ 2.0

ಸೂಚನೆ: ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದು ಪಡಿಯನ್ನು KPP PORTAL ಮುಖಾಂತರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು KPP PORTAL ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/122/02/1894

ಕರ್ನಾಟಕ ಸರಕಾರ
(ಪೌರಾಡಳಿತ ಇಲಾಖೆ)
ಪಟ್ಟಣ ಪಂಚಾಯತ ಕಾರ್ಯಾಲಯ ಚನ್ನಮ್ಮನ ಕಿತ್ತೂರ-591115
ತಾ:ಚ,ಕಿತ್ತೂರ ಜಿ:ಬೆಳಗಾವಿ ದೂ:08288-286344 E-Mail :itstaff_ulb_chkittur@yahoo.in

ಕ್ರ:ಸಂ:ಪಪಂಚಕಿ:ಲೋಕೊ/2025-26 ದಿನಾಂಕ: 21/02/2026

ಟೆಂಡರ್ ಪ್ರಕಟಣೆ:
॥ಇ-ಪ್ರೋಕ್ಯೂರಮೆಂಟ್ ಮುಖಾಂತರ॥

ಸನ್ 2024-25ನೇ ಸಾಲಿನ ಎಸ್.ಎಫ್.ಸಿ ಅನುದಾನದ "Grants for Infrastructure of upgraded ULBs from GP" ಯೋಜನೆಯಡಿ ಪಟ್ಟಣ ಪಂಚಾಯತಿಯ ನೂತನ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲು-4 ನಿಯಮದನ್ವಯ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಕಾರಣ ಇಚ್ಛೆಯುಳ್ಳ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ ಟೆಂಡರ ಸಲ್ಲಿಸಬಹುದು.

ಪ್ಯಾ. ಕ್ರ.ಸಂ:1:ಕಾಮಗಾರಿಗಳ ವಿವರ / ಇಂಡೆಂಟ್ ಸಂಖ್ಯೆ:DMA/2025-26/BD/WORK_INDENT53702, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):449.58, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ):5,71,320/-

ಟೆಂಡರ್ ಸಲ್ಲಿಸುವ ಮೊದಲು ಗುತ್ತಿಗೆದಾರರು ಅತ್ಯಂತ ಅವಶ್ಯಕವಾಗಿ ಟೆಂಡರುಗಳಿಗೆ ಸಂಬಂಧಿಸಿದಂತೆ ನಿಯಮ ನಿಭಂದಣೆಗಳನ್ನು ಓದಿ ಪಾಲಿಸಬೇಕು.

ಟೆಂಡರ ಪ್ರಿ ಬಿಡ್ ಸಭೆ ದಿನಾಂಕ: 13-03-2026 ಮುಂಜಾನೆ 12.00 ಘಂಟೆಗೆ. ಟೆಂಡರ ಫಾರ್ಮ ವೆಬ್ ಸೈಟಿನಿಂದ ಡೌನ್ ಲೋಡ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ:23-02-2026. ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ ದಿನಾಂಕ: 23-03-2026 ಸಾಯಂಕಾಲ: 4:00 ಘಂಟೆಯವರೆಗೆ. ಟೆಂಡರಗಳನ್ನು ತೆರೆಯುವ ದಿನಾಂಕ: 24-03-2026 ರ ಬೆಳಿಗ್ಗೆ 4:00 ಘಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಮತ್ತು ಶರತ್ತುಗಳಿಗಾಗಿ Website: https://kppp.karnataka.gov.in ವೆಬ್‌ಸೈಟನಲ್ಲಿ ನೋಡಬಹುದು.

ಸಹಿ/-ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತ ಚ.ಕಿತ್ತೂರ
ಸಹಿ/-ಮಾನ್ಯ ಅಧ್ಯಕ್ಷರು, ಪಟ್ಟಣ ಪಂಚಾಯತ ಚ.ಕಿತ್ತೂರ

DIPR/BGM/RO-NO-1922/KSMCA/2025-26

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯತ ಕಾರ್ಯಾಲಯ ಮುಳಗುಂದ
ತಾ॥ ಜಿ॥ ಗದಗ

ಸಂ:ಪಪಂಮು/ತಾಂ.ವಿ./15ನೇ ಹಣಕಾಸು/ಉಳಿಕೆ/ಟೆಂಡರ/ವಹಿ-/2025-26
ದಿನಾಂಕ: 24-02-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರಮೆಂಟ್ ಮೂಲಕ

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ಇವರಿಂದ ಮುಳಗುಂದ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ-2000ರ ಪ್ರಕಾರ "ಕರ್ನಾಟಕ ಪಬ್ಲಿಕ್ ಪ್ರೋಕ್ಯೂರಮೆಂಟ್ ಪೋರ್ಟಲ್" ಪದ್ಧತಿಯಲ್ಲಿ ಮುಳಗುಂದ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯಡಿಯಲ್ಲಿ 10ನೇ ಹಣಕಾಸು, 12ನೇ ಹಣಕಾಸು ಯು.ಆಯ್.ಡಿ. ಎಸ್.ಎಸ್.ಎಂ.ಟಿ. ಹಾಗೂ ಎಸ್.ಎಫ್.ಸಿ. ಅನುದಾನದಡಿ ನಿರ್ಮಿಸಿದ ವಾಣಿಜ್ಯ ಮಳಿಗೆಗಳ ಮಾಸಿಕ ಭಾಡಿಗೆ ಮೊತ್ತದ ಅನುದಾನದಲ್ಲಿ ಮಂಜೂರಾದ ಕ್ರಿಯಾ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಉಳಿಕೆ ಮೊತ್ತದ ಅನುದಾನದಡಿ **ಇಂಡೆಂಟ್ ನಂಬರಗಳ ಸಂಖ್ಯೆಗಳು-42311** ನೇದ್ದರ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯೂ.1/2/3 ದಸ್ತಾವೇಜನಲ್ಲಿ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಚಾಲ್ತಿ ಸಾಲಿನ ಅರ್ಹ ಏಜೇನ್ಸಿ/ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ-ಪ್ರೋಕ್ಯೂರಮೆಂಟ ದಾಖಲೆಗಳಿಗಾಗಿ http://kppp.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವದು.

1. ಇ-ಪ್ರೋಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 03-03-2026 ಸಂಜೆ: 16.00 ಗಂಟೆಗೆ**
2. ಇ-ಪ್ರೋಕ್ಯೂರಮೆಂಟ್ ಪದ್ಧತಿಯಲ್ಲಿ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 04-03-2026 ಸಂಜೆ: 16:30 ಗಂಟೆಗೆ**

ನಿಗಧಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ ಕಾಮಗಾರಿ ಇ.ಎಂ.ಡಿ. ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಛೇರಿಯ ವೆಬ್‌ಸೈಟ್ http://www.mulagundatown.mrc.gov.in ಹಾಗೂ ಕಛೇರಿ ವೇಳೆಯಲ್ಲಿ ಸಂಭಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ-ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ ಹಾಗೂ ಟೆಂಡರ್ ಮಂಜೂರ ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

ಸಹಿ/- (ಶ್ರೀ ಮಂಜುನಾಥ ಪಿ. ಗುಳೇದ) ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಮುಳಗುಂದ
ಸಹಿ/- (ಶ್ರೀ ಶ್ರೀನಿವಾಸ ಮೂರ್ತಿ ಕುಲಕರ್ಣಿ) ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ತಹಶೀಲ್ದಾರ ಹಾಗೂ ತಾಲೂಕಾ ದಂಡಾಧಿಕಾರಿಗಳು ಗದಗ

ವಾ.ಸಾ.ಇ./ಗದಗ/675/ದೇಶಪಾಂಡೆಪಬ್ಲಿಸಿಟಿ/2025-26

ಹೆಸರು ಬದಲಾವಣೆ

ಸುಳ್ಯ ತಾಲೂಕು ಕೊಡಿಯಾಳ ಗ್ರಾಮದ ಕೇರ್ಪಡ ನಿವಾಸಿ ಶಿವರಾಮ ಉಪಾಧ್ಯಾಯ ಎಂಬುವರ ಪತ್ನಿ ಯಶೋಧ ಕೆ. ಆದ ನಾನು ತಿಳಿಸುವುದೇನೆಂದರೆ, ನನಗೆ ಸಂಬಂಧಪಟ್ಟ ಬೀಡಿ ಪ್ರಾವಿಡೆಂಟ್ ಫಂಡ್ ದಾಖಲೆಯಲ್ಲಿ ನನ್ನ ತಂದೆಯವರ ಹೆಸರು **ಬಾಬು ರಾವ್** ಎಂದು, ನನಗೆ ಸಂಬಂಧಪಟ್ಟ ಪಾನ್ ಕಾರ್ಡ್‌ನಲ್ಲಿ ನನ್ನ ತಂದೆಯವರ ಹೆಸರು **ಸುಬ್ಬ ರಾವ್** ಎಂದು ದಾಖಲಾಗಿರುತ್ತದೆ.

ಮೇಲ್ಕಾಣಿಸಿದ **ಬಾಬು ರಾವ್ ಮತ್ತು ಸುಬ್ಬ ರಾವ್** ಎಂಬ ಎರಡೂ ಹೆಸರುಗಳು ನನ್ನ ತಂದೆಯವರಿಗೆ ಸಂಬಂಧಪಟ್ಟವುಗಳಾಗಿರುತ್ತವೆ.

ಇನ್ನು ಮುಂದೆ ಎಲ್ಲಾ ದಾಖಲೆಗಳಲ್ಲಿ ಆಧಾರ್ ದಾಖಲೆಯಂತೆ ವ್ಯವಹರಿಸಲಾಗುತ್ತದೆ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡಲ್ಲಿ ಕಾನೂನು ಕ್ರಮಗಳಿಗೆ ಬದ್ಧಳಾಗಿರುತ್ತೇನೆ ಎಂದು ನೋಟರಿ ಭಗೀರಥ ಜಿ. ಎಂಬುವರಲ್ಲಿ ದಿನಾಂಕ: 18-02-2026 ರಂದು ಪ್ರಮಾಣೀಕರಿಸಿರುತ್ತೇನೆ.

ಸಾರ್ವಜನಿಕ ಪ್ರಕಟಣೆ

ಈ ಕೆಳಗೆ ತಪಶೀಲಿನಲ್ಲಿ ವಿವರ ಕಾಣಿಸಿದ ಮನೆ ನಿವೇಶನ ಜಮೀನನು ಹಾಜ್ರ ಕೋಂ ಮುಸ್ತಾಫ್ ಇವರಿಗೆ ಕರ್ನಾಟಕ ಸರಕಾರದ ಅಡಿಸ್ಥಳದ ಸಕ್ರಮೀಕರಣ ಯೋಜನೆಯಡಿ ಹೆಚ್. ಎಸ್.ಆರ್. ಎಸ್.ಆರ್ 87/2014-15, ಹಕ್ಕು ಪತ್ರ ನಂಬರ್ 643/2017-18 ರಂತೆ ದಿನಾಂಕ 15-09-2017 ರಂದು ಮಂಜೂರಾಗಿರುತ್ತದೆ. ಸದ್ರಿ ಮನೆ ನಿವೇಶನ ಜಮೀನಿನ ಹಕ್ಕು ಪತ್ರದ ಮೂಲ ಪ್ರತಿಯು ದಿನಾಂಕ: 10-12-2025 ರಂದು ಕಕ್ಯಪದವಿನಿಂದ ಬಿ.ಸಿ.ರೋಡ್ ಕಡೆಗೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುವಾಗ, ಮೇಲೆ ವಿವರಿಸಿದ ಮನೆ ನಿವೇಶನ ಜಮೀನಿನ ಹಕ್ಕುಪತ್ರದ ಮೂಲ ಪ್ರತಿ ಅವರ ವಶದಿಂದ ಕಳೆದು ಹೋಗಿರುವುದಾಗಿ ತಿಳಿಸಿದ್ದು ಆ ಬಗ್ಗೆ ದಿನಾಂಕ: 25-12-2025 ರಂದು ಪುಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ಫಿರ್ಯಾದಿ ದಾಖಲಿಸಿರುತ್ತಾರೆ. ಸದ್ರಿ ಮನೆ ನಿವೇಶನ ಹಕ್ಕುಪತ್ರದ ಆಧಾರದಲ್ಲಿ ಉಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ರಿ), ಕಕ್ಯಪದವು ಇಲ್ಲಿಂದ ಸದ್ರಿ ಹಾಜ್ರ ಕೋಂ. ಮುಸ್ತಾಫ್ ಇವರು ಆರ್ಥಿಕ ಸಹಾಯವನ್ನು ಪಡೆಯುವ ಅಭಿಪ್ರಾಯದಲ್ಲಿದ್ದಾರೆ.

ಸದ್ರಿ ಮೇಲೆ ವಿವರಿಸಿದ ಮನೆನಿವೇಶನ ಹಕ್ಕುಪತ್ರದ ಮೂಲಪ್ರತಿಯನ್ನು ಯಾರಾದರೂ ಹೊಂದಿದವರಿದ್ದಲ್ಲಿ ಯಾ ಸದ್ರಿ ಮನೆ ನಿವೇಶನ ಜಮೀನಿನ ಮೇಲೆ ಋಣಭಾರ ಯಾ ಜವಾಬ್ದಾರಿಯನ್ನು ಹೊಂದಿದವರಿದ್ದಲ್ಲಿ ಹಾಗೂ ಸದ್ರಿ ಮನೆ ನಿವೇಶನ ಜಮೀನನ್ನು ಸೊಸೈಟಿಗೆ ಅಡವು ಹಾಕುವಲ್ಲಿ ಆಕ್ಷೇಪಣೆಗಳಿದ್ದಲ್ಲಿ ಆಧಾರಸಹಿತ ಆಕ್ಷೇಪಣದಾರರು ಲಿಖಿತ ರೂಪದಲ್ಲಿ ಈ ಕೆಳಗೆ ಸಹಿ ಮಾಡಿದವರ ವಿಳಾಸಕ್ಕೆ ಈ ಪ್ರಕಟಣೆಯ ಏಳು ದಿನದ ಒಳಗಾಗಿ ತಿಳಿಸಬೇಕಾಗಿ ವಿನಂತಿ.

ತಪಶೀಲು ವಿವರ

ಬಂಟ್ವಾಳ ಸ.ರಿ. ಕಚೇರಿಗೆ ಸೇರಿದ ಬಂಟ್ವಾಳ ತಾಲೂಕು, ಉಳಿ ಗ್ರಾಮದ ಬಾಬ್ತು

ಸರ್ವೆ ನಂಬ್ರ	ಕಿ.ಸಂ	ವಿಸ್ತೀರ್ಣ(ಎ.ಸೆ.)
(ಹಕ್ಕುಪತ್ರ ಪ್ರಕಾರ) 80/ಪಿ4	ಮನೆ ನಿವೇಶನ	0.03

ಈ ಮನೆ ನಿವೇಶ ಜಮೀನು, ಇದಕ್ಕೊಪ್ಪಿದ ಮಾಮೂಲು ದಾರಿ, ರಸ್ತೆ, ನೀರು ಹಾಗೂ ಇತರ ಈಸ್‌ಮೆಂಟ್ ಹಕ್ಕು ಕೂಡಿರುವ ಸರ್ವಾದಿ

ಸಹಿ/- ಚಿದಾನಂದ ಯಂ. ಕಡೇಶ್ವಾಲ್ಯ
ವಕೀಲರು ಮತ್ತು ನೋಟರಿ,
1ನೇ ಮಹಡಿ, ರಾಜರಾಜೇಶ್ವರಿ ಕಾಂಪ್ಲೆಕ್ಸ್,
ಬಿ.ಸಿ.ರೋಡು-574219
ಮೊ : 9740221237

ಸ್ಥಳ: ಬಂಟ್ವಾಳ
ದಿನಾಂಕ: 19-02-2026

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ&ಗು.ಆ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು-560009.

ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
ಎಂಐಎಸ್	ಬೆಂಜಮಂ/ಇಎಂಎಸ್/ಟಿಇ/ಎಂಎಸ್1/ಸಅ/233/2025-26 ದಿನಾಂಕ: 24.02.2026	ರೂ. 43,80,000/- / ರೂ. 87,600/-	04.03.2026ರ ಸಂಜೆ 4.00 ಗಂಟೆಯವರೆಗೆ	05.03.2026ರ ಮಧ್ಯಾಹ್ನ 3.00 ಗಂಟೆಗೆ

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಎಂಐಎಸ್)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/5845/NR/2025-26

ಕರ್ನಾಟಕ ಸರಕಾರ
ತಾಲೂಕು ಪಂಚಾಯತ್ ಕಾರ್ಯಾಲಯ, ಸುಳ್ಯ
ಸುಳ್ಯ ತಾಲೂಕು, ದ.ಕ. - 574239, ಫೋನ್: 08257-230336
ಇಮೇಲ್: tpsullia@yahoo.co.in

ಕ್ರ.ಸಂ: ತಾ.ಪಂ.ಸು/ಕ.ನಿ.ಅ/ಸಾಮಾಗ್ರಿ/2025-26 ದಿನಾಂಕ: 23.02.2026

ಪ್ರಕಟಣೆ

2025-26ನೇ ಸಾಲಿನ ಸುಳ್ಯ ತಾಲೂಕು ಪಂಚಾಯತ್ ಕಛೇರಿ ನಿರ್ವಹಣಾ ಅನುದಾನದಲ್ಲಿ ಕಛೇರಿ ಉಪಯೋಗಕ್ಕಾಗಿ ಕಂಪ್ಯೂಟರ್, ಲ್ಯಾಪ್‌ಟಾಪ್, ಯು.ಪಿ.ಎಸ್, ಇನ್ವರ್ಟರ್ ಮತ್ತು ಬ್ಯಾಟರಿಯನ್ನು ಪೂರೈಕೆ ಮಾಡಿ ಅಳವಡಿಸಲು ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸರಬರಾಜುದಾರರು ತಮ್ಮ ಟೆಂಡರ್ ಅರ್ಜಿಯನ್ನು ಈ ಕಛೇರಿಗೆ ದಿನಾಂಕ 02.03.2026ರ ಪೂರ್ವಾಹ್ನ 11:00 ಗಂಟೆಯ ಒಳಗಾಗಿ ಸಲ್ಲಿಸಬಹುದಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹಾಗೂ ಸಾಮಾಗ್ರಿಗಳ ನಿರ್ದಿಷ್ಟತೆಯ ವಿವರಗಳನ್ನು ಟೆಂಡರ್ ಅರ್ಜಿಯೊಂದಿಗೆ ತಾಲೂಕು ಪಂಚಾಯತ್ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಪಡೆಯಬಹುದಾಗಿದೆ.

1	ಟೆಂಡರ್‌ಗೆ ಇರಿಸಿದ ಮೊತ್ತ	ರೂ 4.00 ಲಕ್ಷ
2	ಟೆಂಡರ್ ಪ್ರಕಟಣೆ ದಿನಾಂಕ	23.02.2026
3	ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	02.02.2026 ಪೂ.11.00 ಗಂಟೆ ಒಳಗೆ
4	ಟೆಂಡರ್ ಅರ್ಜಿ ತೆರೆಯುವ ದಿನಾಂಕ	02.02.2026 ಅ 03.00 ಗಂಟೆಗೆ
5	ಇ.ಎಂ.ಡಿ ಮೊತ್ತ (ಬ್ಯಾಂಕ್ ಹುಂಡಿ)	ರೂ 10,000/-

ಸಹಿ/- ಕಾರ್ಯನಿರ್ವಾಹಕ ಅಧಿಕಾರಿ
ತಾಲೂಕು ಪಂಚಾಯತ್ ಸುಳ್ಯ

DIPR/DK/MPL/1663/25-26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ-1:ಟೆಂಡರ್-63:2025-26 ದಿನಾಂಕ: 24.02.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಲೆಕ್ಕ ಶೀರ್ಷಿಕೆ ಸಿ.ಇ.ಪಿ.ಎಂ.ಐ.ಜಡ್. (ಕೆ.ಎಂ.ಇ.ಆರ್.ಸಿ) ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗೆ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:- 1 ಪ್ಯಾಕೇಜ್-01 ಎ) ಚಿತ್ರದುರ್ಗ ತಾಲ್ಲೂಕು ಸಾಸಲು-ಚಿತ್ರದುರ್ಗ ರಾಜ್ಯ ಹೆದ್ದಾರಿ-48 ಮಾರ್ಗ ಬಿ.ದುರ್ಗ, ಭೀಮಸಮುದ್ರ, ಹಿರೇಕಂದವಾಡಿ, ಮಾಳಪ್ಪನಹಟ್ಟಿ ರಸ್ತೆ ಅಭಿವೃದ್ಧಿ ಬಿ) ಚಿತ್ರದುರ್ಗ ತಾಲ್ಲೂಕು ಸಿರಿಗೆರೆ ಯಿಂದ ಬೊಮ್ಮೇನಹಳ್ಳಿ ಮಾರ್ಗ ಕಡ್ಲಗುದ್ದು ರಸ್ತೆ ಅಭಿವೃದ್ಧಿ ಕಾಮಗಾರಿಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿ.

ಇ.ಎಂ.ಡಿ.:- ಕಾಮಗಾರಿಗಾರಿವಾರು ಇ.ಎಂ.ಡಿ. ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಪಡೆಯುವುದು ಟೆಂಡರ್ ವಿವರಗಳು ಈ ಕೆಳಕಂಡಂತಿವೆ.

(1) ಟೆಂಡರ್ ದಾಖಲೆಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ದಿನಾಂಕ: 24.02.2026 ರಿಂದ 03.03.2026 ರ 16.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪ್ರೀ ಬಿಡ್ ಮೀಟಿಂಗ್‌ನ್ನು ದಿನಾಂಕ: 27.02.2026 ರ ಪೂರ್ವಾಹ್ನ 11.30 ಗಂಟೆಗೆ ಲೋಕೋಪಯೋಗಿ ಇಲಾಖೆ, ವಿಭಾಗ ಕಛೇರಿಯಲ್ಲಿ ನಡೆಸಲಾಗುವುದು. (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03.03.2026 ರ ಅಪರಾಹ್ನ 16.30 ಗಂಟೆಯವರೆಗೆ (4) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.03.2026 ರ ಅಪರಾಹ್ನ 16.45 ಗಂಟೆಗೆ (5) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು. (6) ಟೆಂಡರ್ ತಿದ್ದುಪಡಿ / ವಿಸ್ತರಣೆ / ಮಾರ್ಪಾಡುಗಳು ಇದ್ದರೆ ಕೆಪಿಪಿಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಕೆಪಿಪಿಪಿ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ 91 9240214000 & 91 9240214001. ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/700/2025-26

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ
ದೂರವಾಣಿ: 08382-220556 ಇ-ಮೇಲ್: predkarwar@gmail.com

ಕ್ರ.ಸಂ:ಪಂರಾ.ಇಂ/ಕಾ/ಪಿಬಿ-1/2025-26/51 ದಿ: 21.02.2026

ಟೆಂಡರ್ ಪ್ರಕಟಣೆ-51/2025-26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2025-26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅನುದಾನದ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1, 2 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) ಹೊನ್ನಾವರ ತಾ: ಚಿಕ್ಕನಕೋಡ ಪಂಚಾಯತದ ಗುಂಡಬಾಳ ಮುಖ್ಯ ರಸ್ತೆಯಿಂದ ಪದ್ಮಾವತಿ ಜೈನ್ ಬಸದಿ ರಸ್ತೆ ಕಾಂಕ್ರೀಟೀಕರಣ. ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(2) ಹೊನ್ನಾವರ ತಾಲೂಕಿನ ನಗರಬಸ್ತಿಕೇರಿ ಪಂಚಾಯತದ ಆನೆಗದ್ದೆಯಿಂದ ಕರ್ನಕೋಡ ರಸ್ತೆ ಕಾಂಕ್ರೀಟೀಕರಣ. ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(3) ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ನಾಡುಮಾಸ್ಕೇರಿ ಪಂಚಾಯತ ದುಬ್ಬನಶಸಿ ಬೇಚ್ ರಸ್ತೆ ಸುಧಾರಣೆ 2. ನಾಡುಮಾಸ್ಕೇರಿ ಪಂಚಾಯತ ಗಂಗೆ ಕೊಳ್ಳ ನಾಗರವೋಣಿ ರಸ್ತೆ ನಿರ್ಮಾಣ 3. ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಹನೇಹಳ್ಳಿ ಪಂಚಾಯತದ ಕನ್ನಡ ಶಾಲೆ ರಸ್ತೆ ಸುಧಾರಣೆ. ಅಂದಾಜು ಮೊತ್ತ: ರೂ. 40.00 ಲಕ್ಷ, ಮುಂಗಡ ಠೇವಣಿ: ರೂ. 80,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪ್ರವರ್ಗ 2ಎ) (4) ಹೊನ್ನಾವರ ತಾಲೂಕಿನ ಕಡತೋಕ ಪಂಚಾಯತದ ಕೆಕ್ಕಾರ ರಾಘವೇಶ್ವರ ಸಭಾಭವನ ಹೋಗುವಲ್ಲಿ ಚರಂಡಿ ನಿರ್ಮಾಣ. ಹೊನ್ನಾವರ ತಾಲೂಕಿನ ಕಡತೋಕ ಪಂಚಾಯತದ ಸುಂಕೋಳ್ಳಿಯಿಂದ ತ್ರಿಯಂಬಕ ದೇವಸ್ಥಾನಕ್ಕೆ ಹೋಗುವ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(5) 1. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಹೊಲನಗದ್ದೆ ಪಂಚಾಯತದ ಮಹಾಸತಿ ಕಾಲೋನಿ ರಸ್ತೆ ನಿರ್ಮಾಣ 2. ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ವಾಲಗಳ್ಳಿ ಪಂಚಾಯತ ಉಂಚಗಿ ಊರಿನ ಹಾಲಕ್ಕಿ ಕೇರಿ ಲಕ್ಷ್ಮೀ ಗೌಡ ಅವರ ಮನೆಯಿಂದ ಮುಂದೆ ರಸ್ತೆ ನಿರ್ಮಾಣ 3. ಹಿರೇಗುತ್ತಿ ಪಂಚಾಯತ್ ಬೊಮ್ಮಯ್ಯ ದೇವಸ್ಥಾನದ ಹತ್ತಿರ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 35.00 ಲಕ್ಷ, ಮುಂಗಡ ಠೇವಣಿ: ರೂ. 70,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪರಿಶಿಷ್ಟ ಜಾತಿ) (6) ಹೊನ್ನಾವರ ತಾಲೂಕಿನ ಇಡಗುಂಜಿ ಗ್ರಾಮ ಪಂಚಾಯತದ ಮಾಳಕೋಡ ದೊಡ್ಡಶಾಲೆಕೇರಿಯಿಂದ ಆಚಾರಿಕೇರಿಗೆ ಹೋಗುವ ರಸ್ತೆ ಕಾಂಕ್ರೀಟೀಕರಣ. ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪರಿಶಿಷ್ಟ ಪಂಗಡ) (7) ಹೊನ್ನಾವರ ತಾಲೂಕಿನ ಹಳದೀಪುರ ಪಂಚಾಯತ ಅಪ್ಪೇಕೇರಿ. ರಸ್ತೆ ಹಾಗೂ ಬಗ್ರಾಣೆ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(8) 1. ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಹೊಲನಗದ್ದೆ ಪಂಚಾಯತದ ಹೊಲನಗದ್ದೆ ತೊಂಬ್ಲೆಮಠ ರಸ್ತೆ ನಿರ್ಮಾಣ 2. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಹೊಲನಗದ್ದೆ ಪಂಚಾಯತದ ಕಡ್ಲೆ ಪ್ರಶಾಂತನಗರ ರಸ್ತೆ ನಿರ್ಮಾಣ 3. ಕುಮಟಾ ತಾಲೂಕಿನ ಹೊಲನಗದ್ದೆ ಪಂಚಾಯತ ಕೋಟೆ ಭಟ್ಟರಕೇರಿಯಿಂದ ಕೋಟೆಕಟ್ಟೆವರೆಗೆ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 40.00 ಲಕ್ಷ, ಮುಂಗಡ ಠೇವಣಿ: ರೂ. 80,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್-ಬಿಗಳನ್ನು ಮತ್ತು Technical Bid ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 13.03.2026 ರ ಮದ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 16.03.2026 ಬೆಳಗ್ಗೆ 11.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/1144/25-26 dt. 24.02.2026

ಕಿರುಸುದ್ದಿ

ಕರಾವಳಿ ಕಾಲೇಜು ಸಮೂಹ ಸಂಸ್ಥೆ: ಇಂದು ಸಾಂಸ್ಕೃತಿಕ ಹಬ್ಬ 'ಕ್ರೈಜನ್-2026'

ಮಂಗಳೂರು: ನಗರದ ಪ್ರತಿಷ್ಠಿತ ಕರಾವಳಿ ಕಾಲೇಜುಗಳ ಸಮೂಹದ ಅಂತರ್ ಕಾಲೇಜು ಸಾಂಸ್ಕೃತಿಕ ಹಬ್ಬ 'ಕ್ರೈಜನ್-2026' ಸ್ಪರ್ಧೆಯು ಫೆ. 25ರಂದು ಕರಾವಳಿ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಾಜಿ ನೀರುಮಾರ್ಗದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಜೆ 4 ಕ್ಕೆ ಕರಾವಳಿ ಕಾಲೇಜು ಸಮೂಹ ಸಂಸ್ಥೆಗಳ ನಿರ್ದೇಶಕಿ ಲತಾ ಜಿ. ರಾವ್ ಉದ್ಘಾಟಿಸಲಿದ್ದಾರೆ ಹಾಗೂ ಕರಾವಳಿ ಕಾಲೇಜು ಸಮೂಹ ಸಂಸ್ಥೆಗಳ ಸ್ಥಾಪಕಾಧ್ಯಕ್ಷ ಎಸ್. ಗಣೇಶ್ ರಾವ್ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಸ್ಪರ್ಧೆಯಲ್ಲಿ ಫ್ಯಾಶನ್ ಶೋ, ವೆಸ್ಟರ್ನ್ ಗ್ರೂಪ್ ಡ್ಯಾನ್ಸ್, ಕ್ಲಾಸಿಕಲ್ ಡ್ಯಾನ್ಸ್, ಫೋಕ್ ಗ್ರೂಪ್ ಡ್ಯಾನ್ಸ್, ಮೈಮ್, ಗ್ರೂಪ್ ಸಿಂಗಿಂಗ್, ಪೋಸ್ಟರ್ ಮೇಕಿಂಗ್, ಚುಕ್ಕಿ ರಂಗೋಲಿ, ಫೇಸ್ ಪೈಂಟಿಂಗ್, ರೀಲ್ಸ್ ಮೇಕಿಂಗ್, ಕ್ವಿಕ್ ಪೈಂಟಿಂಗ್, ಬೆಸ್ಟ್ ಔಟ್ ಆಫ್ ವೇಸ್ಟ್, ಮೆಹೆಂದಿ, ಕುಕ್ಕಿಂಗ್ ವಿದೌಟ್ ಫಯರ್, ಕೊಲಾಜ್ ಮೇಕಿಂಗ್, ಫ್ರೂಟ್ಸ್ ಆಂಡ್ ವೆಜಿಟೇಬಲ್ಸ್ ಕಾರ್ವಿಂಗ್, ಇತ್ಯಾದಿ ವಿಷಯಗಳಲ್ಲಿ ಸ್ಪರ್ಧೆಯು ನಡೆಯಲಿದೆ. ವಿದ್ಯಾರ್ಥಿಗಳಲ್ಲಿ ಸ್ಪರ್ಧಾಮನೋಭಾವ, ಮತ್ತು ಆತ್ಮಸ್ಥೈರ್ಯವನ್ನು ಮೂಡಿಸುವ ನಿಟ್ಟಿನಲ್ಲಿ ಹಾಗೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸವಾಲುಗಳನ್ನು ದಿಟ್ಟವಾಗಿ ಎದುರಿಸಬಲ್ಲ ಸಾಮರ್ಥ್ಯವನ್ನು ಹೆಚ್ಚಿಸುವುದು ಈ ಸಾಂಸ್ಕೃತಿಕ ಸ್ಪರ್ಧೆಯ ಉದ್ದೇಶವಾಗಿದೆ. ನಿರಂತರವಾಗಿ ಪ್ರತಿ ವರ್ಷವೂ ಈ ಸಾಂಸ್ಕೃತಿಕ ಸ್ಪರ್ಧೆಯನ್ನು ಅತ್ಯುತ್ತಮ ರೀತಿಯಲ್ಲಿ ಆಯೋಜಿಸುತ್ತಾ ಬಂದಿದ್ದು, ಸ್ಪರ್ಧೆಯ ವಿಜೇತರಿಗೆ ಸಮಗ್ರ ಪ್ರಥಮ, ಸಮಗ್ರ ದ್ವಿತೀಯ ಹಾಗೂ ತೃತೀಯ ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುವುದು. ಈ ಹಬ್ಬದ ವಾತಾವರಣದಲ್ಲಿ ಕರಾವಳಿ ಕಾಲೇಜುಗಳ ಸಮೂಹದ ಎಲ್ಲಾ ಪ್ರಾಂಶುಪಾಲರು, ಅಧ್ಯಾಪಕ ವೃಂದದವರು ಹಾಗೂ ವಿದ್ಯಾರ್ಥಿಗಳು ಅತ್ಯಂತ ಸಕ್ರೀಯವಾಗಿ ಭಾಗವಹಿಸಲಿದ್ದಾರೆ.

ಶ್ರೀರಾಮ ಸೇವಾ ಮಂಡಳಿ ಆಶ್ರಯದಲ್ಲಿ ಸಾರ್ವಜನಿಕ ಶ್ರೀ ಶನೀಶ್ವರ ಪೂಜೆ

ಮುಲ್ಕಿ: ಕಾರ್ನಾಡು ಶ್ರೀ ರಾಮ ಸೇವಾ ಮಂಡಳಿಯ ಆಶ್ರಯದಲ್ಲಿ ಕಾರ್ನಾಡು, ಶ್ರೀ ಮಹಾಮ್ಮಾಯಿ ದೇವರ ಕಟ್ಟೆಯಲ್ಲಿ ಫೆ.22ರಂದು ಬೆಳಿಗ್ಗೆ ಎಂಟನೇ ವರ್ಷದ ಸಾರ್ವಜನಿಕ ಶ್ರೀ ಶನೀಶ್ವರ ಪೂಜೆ ಹಾಗೂ ಗಣಹೋಮವು ಚಿತ್ರಾಪು ಪುಷ್ಪರಾಜ್ ಭಟ್ ನೇತೃತ್ವದಲ್ಲಿ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಬೆಳಿಗ್ಗೆ ಶ್ರೀ ರಾಮ ಸೇವಾ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಮಧ್ಯಾಹ್ನ ಅನ್ನಪ್ರಸಾದ ವಿತರಣೆ ನಡೆಯಿತು. ಈ ಸಂದರ್ಭ ಮುಲ್ಕಿ ಬಂಟರ ಸಂಘದ ಅಧ್ಯಕ್ಷ ಆಶೋಕ್ ಕುಮಾರ್ ಶೆಟ್ಟಿ,ಕಾರ್ನಾಡ್ ಶ್ರೀ ಹರಿಹರ ಯುವಕ ವೃಂದದ ಅಧ್ಯಕ್ಷ ಶೈಲೇಶ್ ಶೆಟ್ಟಿ ಪಡುಬೈಲು, ಕಾರ್ನಾಡು ಶ್ರೀ ರಾಮ ಸೇವಾ ಮಂಡಳಿಯ ಅಧ್ಯಕ್ಷ ಭಾಸ್ಕರ ಶೆಟ್ಟಿಗಾರ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಕರುಣಾಕರ ಶೆಟ್ಟಿ, ಪರಾರಿಗುತ್ತು ಹೌಸ್, ಮೂಡ ವಯಾ ಬಿ.ಸಿ.ರೋಡ್, ಬಂಟ್ವಾಳ (ತಾ).
2. ದಂಡೆ ಶ್ರೀ ಮಹಾಗಣಪತಿ ದೇವಸ್ಥಾನ ಹತ್ತು ಸಮಸ್ತರು, ಬಂಟ್ವಾಳ (ತಾ).
3. ಸುಂದರ ಶೆಟ್ಟಿ, ಚೆಂಬರಡ್ಕ, ವಿಟ್ಲ, ಪಡ್ನೂರು, ಬಂಟ್ವಾಳ (ತಾ).
4. ಪೂರ್ಣಿಮ ಜಯರಾಮ ಶೆಟ್ಟಿ, ಮೊಗರುಗುತ್ತು, ಮೊಗರು, ಗಂಜಿಮಠ.
5. ಆನಂದ ಶೆಟ್ಟಿ, ಮಣ್ಣೀವು ಮನೆ (ಕಳೆಂಜ), ಪೆರ್ನೆ, ಬಿಳಿಯೂರು, ಬಂಟ್ವಾಳ (ತಾ).
6. ಶ್ರೀ ನಾಗಬ್ರಹ್ಮ ರಕ್ತೇಶ್ವರೀ ಸಾನಿಧ್ಯ, ಸಂಕೋಡಿ, ಬೋಳಂತೂರು, ಬಂಟ್ವಾಳ (ತಾ).
7. ಶ್ರೀ ದುರ್ಗಾಪರಮೇಶ್ವರೀ ಸೇವಾ ಟ್ರಸ್ಟ್, ಒಡ್ಡಿದಕಳ, ಬಜಪೆ.

ಶ್ರೀ ಧರ್ಮಸ್ಥಳ ಮೇಳ
ಉಂಟೊರುಕಟ್ಟೆಯಲ್ಲಿ
ಶ್ರೀ ರಕ್ತೇಶ್ವರೀ ದೈವಸ್ಥಾನದ ಭಕ್ತವೃಂದ

ಶ್ರೀ ಸಾಲಿಗ್ರಾಮ ಮೇಳ
ಬಂಕಿಕೊಡ್ಲುವಿನಲ್ಲಿ-ಸಂಪೂರ್ಣ ನಾಗಶ್ರೀ

ಶ್ರೀ ಪೆರ್ಡೂರು ಮೇಳ
ಪೆರ್ಡೂರಿನ ಜೋಗಿಬೆಟ್ಟುವಿನಲ್ಲಿ - ನಾಗವಲ್ಲಿ

ಶ್ರೀ ಹನುಮಗಿರಿ ಮೇಳ
ಕುಡುಪುನಲ್ಲಿ

ಶ್ರೀ ಪಾವಂಜೆ ಮೇಳ
ಬಂಟ್ವಾಳದ ಕೊಲ್ಯ ಮಣಿನಾಲ್ಕೂರಿನಲ್ಲಿ
ಛಾಯಾನಂದನ



ಕೊಲ್ಲಮೊಗ್ರು ಗ್ರಾಮದ ನಿಲ್ಕೂರು ಶ್ರೀ ಶಿರಾಡಿ ದೈವ ಹಾಗೂ ಪರಿವಾರ ದೈವಗಳ ದೈವಸ್ಥಾನದಲ್ಲಿ ವಾರ್ಷಿಕ ನೇಮೋತ್ಸವವು ಭಾನುವಾರ ಭಕ್ತಿ ಸಡಗರದಿಂದ ನಡೆಯಿತು.

ಶಾರದಾ ಯೋಗ-ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಕಾಲೇಜು

ಉಚಿತ ಬೊಜ್ಜು ನಿರ್ವಹಣಾ ಕಾರ್ಯಾಗಾರ

ಮಂಗಳೂರು: ಅತಿಯಾದ ದೇಹದ ತೂಕ ಹಾಗೂ ಬೊಜ್ಜಿನ ಸಮಸ್ಯೆಯಿಂದ ಬಳಲುತ್ತಿರುವವರಿಗಾಗಿ ತಲಪಾಡಿಯ ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವಿಶೇಷ ಉಚಿತ ಕಾರ್ಯಾಗಾರಆಯೋಜಿಸಲಾಗಿದೆ. ಭಾರತ ಸರ್ಕಾರದ ಆಯುಷ್ ಸಚಿವಾಲಯದ ಅಡಿಯಲ್ಲಿರುವ (ಸಿಸಿಆರ್‌ವೈಎನ್) ಹೊಸದಿಲ್ಲಿಯ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಸಂಶೋಧನೆಯ ಕೇಂದ್ರ ಮಂಡಳಿಯ ಸಹಯೋಗದೊಂದಿಗೆ ಈ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮ ಫೆ. 28ರಂದು ಮಧ್ಯಾಹ್ನ 2 ಗಂಟೆಯಿಂದ ತಲಪಾಡಿಯ ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆಯಲಿದೆ.

ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಬಿ. ಪುರಾಣಿಕ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಶಾರದಾ ಸಮೂಹ ಸಂಸ್ಥೆಗಳ ನಿರ್ದೇಶಕ ಮತ್ತು ಟ್ರಸ್ಟಿ ಸಮೀರ್ ಪುರಾಣಿಕ್, ಬೆಂಗಳೂರಿನ ರಾಜಶೇಖರಯ್ಯ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒ ಆದ ಡಾ. ಆರ್. ಚೇತನ್ ಕುಮಾರ್, ಮಂಗಳೂರಿನ ಎ.ಜೆ. ವೈದ್ಯಕೀಯ ವಿಜ್ಞಾನ ಸಂಸ್ಥೆಯ ಎಂಡೋಕ್ರೈನಾಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಹಾಗೂ ಎಂಡೋಕ್ರೈನಾಲಜಿಸ್ಟ್ ಡಾ. ಹಿಮಾಂಶು ಆಚಾರ್ಯ ಎನ್. ಭಾಗವಹಿಸಲಿದ್ದಾರೆ.

ಕಾರ್ಯಾಗಾರದ ಪ್ರಮುಖ ಅಂಶಗಳು

ಬೊಜ್ಜು ಮುಕ್ತ ಸಮಾಜವನ್ನು ನಿರ್ಮಿಸುವ ನಿಟ್ಟಿನಲ್ಲಿ ಈ ಕಾರ್ಯಾಗಾರವು ಸಾಕ್ಷ್ಯಾಧಾರಿತ ಪ್ರಕೃತಿ ಚಿಕಿತ್ಸಾ ಪದ್ಧತಿಗಳು, ತೂಕ ಇಳಿಕೆಗಾಗಿ ವಿಶೇಷ ಯೋಗ ಚಿಕಿತ್ಸಾ ವಿಧಾನಗಳು, ಎಂಡೋಕ್ರೈನಾಲಜಿ ಮತ್ತು ಜೀವನಶೈಲಿ ವೈದ್ಯಕೀಯದ ಸಮನ್ವಯತೆ ವಿಷಯಗಳ ಮೇಲೆ ಬೆಳಕು ಚೆಲ್ಲಲಿದೆ.

ಆರೋಗ್ಯಕರ ಮತ್ತು ಸುಸ್ಥಿರ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು ಇಚ್ಛಿಸುವ ಸಾರ್ವಜನಿಕರು ಈ ಉಚಿತ ಕಾರ್ಯಾಗಾರದ ಸದುಪಯೋಗ ಪಡಿಸಿಕೊಳ್ಳಬೇಕಾಗಿ ಕಾಲೇಜಿನ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ದೇವಿನಗರ, ತಲಪಾಡಿ. ದೂರವಾಣಿ: 6363926599 / 9353909331.

ಮಡಿಕೇರಿಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ 'ಮನೆಗೊಂದು ಗ್ರಂಥಾಲಯ'ದ ಕರಪತ್ರ ಬಿಡುಗಡೆ

ಯುವಜನರಲ್ಲಿ ಪುಸ್ತಕ ಸಂಸ್ಕೃತಿ ಬಿತ್ತಬೇಕು

ಮಡಿಕೇರಿ: ಇಂದಿನ ಆಧುನಿಕ ನಾಗಾಲೋಟದಿಂದ ಯುವಜನರು ಪುಸ್ತಕ ಸಂಸ್ಕೃತಿಯಿಂದ ದೂರ ಸರಿಯುತ್ತಿದ್ದು, ಯುವಜನರನ್ನು ಪುಸ್ತಕ ಓದುವಂತೆ ಹತ್ತಿರಕ್ಕೆ ತರುವಲ್ಲಿ 'ಅಂಗಳದಲ್ಲಿ ತಿಂಗಳ ಪುಸ್ತಕ ಹಾಗೂ ಮನೆಗೊಂದು ಗ್ರಂಥಾಲಯ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಅವರು ತಿಳಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಂಯುಕ್ತಾಶ್ರಯದಲ್ಲಿ ನಗರದ ಪತ್ರಿಕಾ ಭವನದಲ್ಲಿ ನಡೆದ ಕನ್ನಡ ಪುಸ್ತಕ ಪ್ರಾಧಿಕಾರದ ಯೋಜನೆ 'ಮನೆಗೊಂದು ಗ್ರಂಥಾಲಯ' ಕರಪತ್ರ ಬಿಡುಗಡೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಜಿಲ್ಲಾ ಜಾಗೃತ ಸಮಿತಿ ಸದಸ್ಯರಿಗೆ ನೇಮಕಾತಿ ಪತ್ರ ವಿತರಿಸಿ ಅವರು ಮಾತನಾಡಿದರು.

ಯುವಜನರಲ್ಲಿ ಪುಸ್ತಕ ಸಂಸ್ಕೃತಿ ಬಿತ್ತಬೇಕು ಎಂಬ ಉದ್ದೇಶದಿಂದ ಮನೆಗೊಂದು ಗ್ರಂಥಾಲಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈಗಾಗಲೇ 30 ಜಿಲ್ಲೆಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಬಾಕಿ ಇದೆ ಎಂದು ಹೇಳಿದರು.

ಜ್ಞಾನಪೀಠ ಪ್ರಶಸ್ತಿ ಪಡೆದವರು ಸೇರಿದಂತೆ ಹಲವು ಸಾಹಿತಿ ಹಾಗೂ ಕವಿಗಳ ಹೆಸರಿನಲ್ಲಿ ವಿಶೇಷ ದಿನದಂದು ಕಾರ್ಯಕ್ರಮ ಆಯೋಜಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ಸಾಹಿತಿಗಳು ನೀಡಿರುವ ಕೊಡುಗೆಯನ್ನು ಸ್ಮರಿಸಲಾಗುತ್ತದೆ. ಕನ್ನಡಿಗರಲ್ಲಿ ಪುಸ್ತಕ ಓದುವ ಸಂಸ್ಕೃತಿ ಹೆಚ್ಚಿದ್ದು, ಇದನ್ನು ಮತ್ತಷ್ಟು ವಿಸ್ತರಿಸುವಲ್ಲಿ ಪುಸ್ತಕ ಪ್ರಾಧಿಕಾರ ಮುಂದಾಗಿದೆ.



ಸಮಿತಿ ಸದಸ್ಯರಿಗೆ ನೇಮಕಾತಿ ಪತ್ರ ವಿತರಣೆ

ಜ್ಞಾನಾಲಯವನ್ನು ಬಿತ್ತಲು ಪ್ರಯತ್ನಿಸಲಾಗುತ್ತಿದೆ ಎಂದು ಡಾ.ಮಾನಸ ನುಡಿದರು.

'ಪ್ರತೀ ಮನೆಯಲ್ಲೂ ಪೂಜಾ ಕೊಠಡಿ ಇರುವಂತೆ ಗ್ರಂಥಾಲಯ ಭಂಡಾರ ಸಹ ಇದ್ದಲ್ಲಿ, ಇಡೀ ಕುಟುಂಬದ ಎಲ್ಲರ ಜ್ಞಾನಾರ್ಜನೆ ಹೆಚ್ಚಲಿದೆ. ರಾಜ್ಯದಲ್ಲಿ ಒಂದು ಲಕ್ಷ ಮನೆಗಳಲ್ಲಿ ಗ್ರಂಥಾಲಯ ಭಂಡಾರ ಸ್ಥಾಪಿಸಲಾಗುತ್ತದೆ. ಜನ ಪ್ರತಿನಿಧಿಗಳು, ಚಲನಚಿತ್ರ ನಟ ನಟಿಯರು ಸೇರಿದಂತೆ ಎಲ್ಲರ ಮನೆಯಲ್ಲೂ ಸಹ ಪುಸ್ತಕ ಭಂಡಾರ ಇರಬೇಕು ಎಂಬ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಪ್ರತೀ ಜಿಲ್ಲೆಯಲ್ಲಿ 10 ಜನರನ್ನು ಜಾಗೃತಿ ಸದಸ್ಯರನ್ನಾಗಿ ನೇಮಿಸಲಾಗುತ್ತಿದ್ದು, ರಾಜ್ಯದಾದ್ಯಂತ ಆಂದೋಲನ ಮಾದರಿಯಲ್ಲಿ ನಡೆಸಲಾಗುತ್ತದೆ. ಸಾಹಿತಿ ದೇವನೂರು ಮಹಾದೇವ ಅವರು ಹೇಳಿದಂತೆ ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿತ್ತಿದ ಬೀಜ ಬೆಳೆಯಲೇಬೇಕು. ಆ ನಿಟ್ಟಿನಲ್ಲಿ ಪುಸ್ತಕ ಅಭಿರುಚಿ ಸಂಸ್ಕೃತಿಯನ್ನು ಹೆಚ್ಚಿಸಲಾಗುತ್ತದೆ ಎಂದರು.

ನಾಲ್ಕು ಪ್ರಶಸ್ತಿ ಸ್ಥಾಪನೆ

ರಾಜ್ಯದ ನಾಲ್ಕು ಕಂದಾಯ ವಿಭಾಗದಲ್ಲಿ ನಾಲ್ಕು ಜನ ವಿದ್ವಾಂಸರ ಹೆಸರಿನಲ್ಲಿ ನಾಲ್ಕು ಪ್ರಶಸ್ತಿಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಈ ವಾರ್ಷಿಕ ಪ್ರಶಸ್ತಿಗಳನ್ನು ಮುಖ್ಯಮಂತ್ರಿ ಅವರಿಂದ ಪ್ರದಾನ ಮಾಡಿಸುವ ಯೋಜನೆ ಇದೆ ಎಂದು ಅವರು ಈ ಸಂದರ್ಭ ಹೇಳಿದರು.

> ಪುಸ್ತಕ ಓದುವ ಅಭಿರುಚಿ ಎಲ್ಲರಲ್ಲೂ ಇರಬೇಕು. ಕೊಡಗು ಜಿಲ್ಲೆಯಲ್ಲಿ ಪುಸ್ತಕ ಮಳಿಗೆ ಇಲ್ಲ. ಆದ್ದರಿಂದ ಪುಸ್ತಕ ಪ್ರಾಧಿಕಾರದವರು ಪುಸ್ತಕ ಮಳಿಗೆ ಸ್ಥಾಪನೆಗೆ ಮುಂದಾಗಬೇಕು. ಹಾಗೆಯೇ ಪುಸ್ತಕ ಪ್ರಾಧಿಕಾರದಿಂದ ಪುಸ್ತಕ ಮೇಳಗಳನ್ನು ಆಯೋಜಿಸುವಂತಾಗಬೇಕು. ಆ ನಿಟ್ಟಿನಲ್ಲಿ ಅಗತ್ಯ ಸಹಕಾರ ನೀಡಲಾಗುವುದು.
>
> ■ ಎಚ್.ಟಿ.ಅನಿಲ್ , ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ

ಕನ್ನಡದ ಮಹತ್ವ ಲೇಖಕಿ ಮತ್ತು ಮೊಟ್ಟ ಮೊದಲ ಮಹಿಳಾ ಪ್ರಕಾಶಕಿ, ನಂಜನಗೂಡು ತಿರುಮಲಾಂಬ ಪ್ರಶಸ್ತಿ, ಕನ್ನಡದ ಅಪ್ರತಿಮ ಪುಸ್ತಕ ಪ್ರೇಮಿ, ಪುಸ್ತಕ ಪ್ರೀತಿಗೆ ಮತ್ತೊಂದು ಹೆಸರಾದ ಹಾ.ಮಾ.ನಾಯಕ ಪ್ರಶಸ್ತಿ, ಲಲಿತಾ ಕಲಾ ಅಕಾಡೆಮಿ ಅಧ್ಯಕ್ಷರಾಗಿದ್ದ ತಮ್ಮ ಇಡೀ ಸಂಬಳವನ್ನೆಲ್ಲ ಅಕಾಡೆಮಿಯ ಪುಸ್ತಕಗಳ ಪ್ರಕಟಣೆಗೆ ಬಳಸಿದ ಪುಸ್ತಕ ಪ್ರೇಮಿ ಮತ್ತು ಕಲಾಯೋಗಿ ಪಿ.ಆರ್.ತಿಪ್ಪೇಸ್ವಾಮಿ ಪ್ರಶಸ್ತಿ, ಹಾಗೆಯೇ ತಮ್ಮ ಬದುಕಿನುದ್ದಕೂ ಪುಸ್ತಕಗಳನ್ನು ತಲೆಮೇಲೆ ಹೊತ್ತುಕೊಂಡು ಮನೆ ಮನೆಗೆ ತಲುಪಿಸಿದ ಮಹಾನ್ ಪುಸ್ತಕ ಪ್ರೇಮಿ ಗಳಗನಾಥ ಪ್ರಶಸ್ತಿ ನೀಡಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಅವರು ಮಾತನಾಡಿ, ಹಿಂದೆ ಚಂದಮಾಮ, ಬಾಲಮಿತ್ರ ಓದುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಿಂದಾಗಿ ಪುಸ್ತಕ ಓದುವುದು ಕಡಿಮೆಯಾಗಿದೆ.ಮುಂದಿನ ಪೀಳಿಗೆಗೆ ಪುಸ್ತಕ ಓದುವ ಸಂಸ್ಕೃತಿ ಹೆಚ್ಚಬೇಕು. ಇದರಿಂದ ಜ್ಞಾನಾರ್ಜನೆ, ವಿಚಾರಧಾರೆ ತಿಳಿಯಬೇಕು ಎಂದರು.

ಮನೆ ಮಂದಿಗೆ ಪುಸ್ತಕ ಮಹತ್ವದ ಜಾಗೃತಿ ಮೂಡಿಸಬೇಕು. ಕೊಡಗು ಜಿಲ್ಲೆಯಲ್ಲಿ ಬರಹಗಾರರ ಸಂಖ್ಯೆ ಹೆಚ್ಚಿದ್ದು, ಪ್ರಕಟವಾಗುವ ಪುಸ್ತಕಗಳು ಮಾರಾಟವಾಗಬೇಕು. ಎಲ್ಲರೂ ಈ ಬಗ್ಗೆ ಯೋಚಿಸಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಮಾತನಾಡಿ, ಮನೆಗೊಂದು ಗ್ರಂಥಾಲಯ ಸ್ಥಾಪನೆಗೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು. ಮುಂದಿನ ದಿನಗಳಲ್ಲಿ ಮಕ್ಕಳಲ್ಲಿ ಸಾಹಿತ್ಯ ಅಭಿರುಚಿ ಬೆಳೆಸಲು ಮಕ್ಕಳ ಕವಿಗೋಷ್ಠಿ ಆಯೋಜಿಸಲಾಗುವುದು ಎಂದರು.

ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ ಕನ್ನಡ ಪುಸ್ತಕವನ್ನು ನೆನಪಿನ ಕಾಣಿಕೆಯಾಗಿ ನೀಡಲಾಗುತ್ತಿದೆ ಎಂದು ಹೇಳಿದರು.

ಅರ್ಹತಾ ಪತ್ರವನ್ನು ಬಿ.ಎನ್.ಪ್ರಕಾಶ್, ಸುಬ್ರಾಯ ಸಂಪಾಜೆ, ಎಚ್.ಎಲ್.ದಿವಾಕರ, ರಂಜಿತ್ ಕವಲಪಾರ, ಮುರಳೀಧರ, ಕೆ.ವಿ. ಉಮೇಶ್, ಕೆ.ಜಯಲಕ್ಷ್ಮಿ, ಕೇಶವ ಕಾಮತ್, ಟಿ.ಪಿ.ರಮೇಶ್, ಪ್ರತಿಮಾ ರೈ ಅವರಿಗೆ ವಿತರಿಸಲಾಯಿತು. ಶ್ರೀನಿವಾಸ್ ಸ್ವಾಗತಿಸಿದರೆ, ಕೆ.ಜಯಲಕ್ಷ್ಮಿ ಕಾರ್ಯಕ್ರಮ ನಿರೂಪಿಸಿದರು.

ಅಂತಾರಾಷ್ಟ್ರೀಯ ರೋಟರಿ ಸಂಸ್ಥೆಯ ಸ್ಥಾಪನಾ ದಿನಾಚರಣೆ ಬಾಲಕೃಷ್ಣ ಪೈಗೆ ಶ್ರೇಷ್ಠ ವೃತ್ತಿಪರ ಸೇವಾ ಪ್ರಶಸ್ತಿ ಪ್ರದಾನ



ಮಂಗಳೂರು: ರೋಟರಿ ಕ್ಲಬ್ ಮಂಗಳೂರು ಸಿಟಿ ಸಂಸ್ಥೆಯ ಆಶ್ರಯದಲ್ಲಿ ಅಂತಾರಾಷ್ಟ್ರೀಯ ರೋಟರಿ ಸಂಸ್ಥೆಯ 121ನೇ ಸ್ಥಾಪನಾ ದಿನಾಚರಣೆ ಹಾಗೂ ಸಾಧಕರಿಗೆ ಶ್ರೇಷ್ಠ ವೃತ್ತಿಪರ ಸೇವಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಗರದ ಆಫಿಸರ್ಸ್ ಕ್ಲಬ್ ಸಭಾಂಗಣದಲ್ಲಿ ಸೋಮವಾರ ನಡೆಯಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷೆ ಸಜ್ನಾ ಭಾಸ್ಕರ್, ಸಮಾಜಕ್ಕೆ ಉತ್ತಮ, ನಿಸ್ವಾರ್ಥ ಮತ್ತು ಪ್ರಾಮಾಣಿಕ ಸೇವಾ ಮನೋಭಾವದಿಂದ ಶ್ರೇಷ್ಠ ಕೊಡುಗೆ ನೀಡಿದವರನ್ನು ಗುರುತಿಸಿ, ಆಯ್ಕೆ ಮಾಡಿ ರೋಟರಿ ಸಂಸ್ಥೆಯ ಪ್ರತಿಷ್ಠಿತ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಸಾಧಕರಾದ ಕಸ್ತೂರಿ ಬಾಲಕೃಷ್ಣಪೈ ಅವರು ಕ್ರಿಕೆಟ್ ಆಟಗಾರನಾಗಿ, ಯುವಕರಿಗೆ ಕ್ರಿಕೆಟ್ ತರಬೇತುದಾರರಾಗಿ ಕ್ರಿಕೆಟ್ ಪಂದ್ಯಾಟದಲ್ಲಿ ತೀರ್ಪುಗಾರರಾಗಿ ಹಾಗೂ ದ.ಕ. ಜಿಲ್ಲೆಯ ಕ್ರಿಕೆಟ್ ಸಂಸ್ಥೆಯಲ್ಲಿ ವ್ಯವಸ್ಥಾಪಕರಾಗಿ ಸುಮಾರು 50 ವರ್ಷಗಳ ಸುದೀರ್ಘ ಅವಧಿಯಲ್ಲಿ ನಿಸ್ವಾರ್ಥ ಮತ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿ ಮತ್ತು ವಿವಿಧ ಸ್ಪರ್ಧಾ ಪಂದ್ಯಾಟಗಳನ್ನು ಆಯೋಜಿಸಿ ಯಶಸ್ಸು ಸಾಧಿಸಿರುವುದನ್ನು ಪರಿಗಣಿಸಿ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಯಿತು.

ಮುಖ್ಯ ಅತಿಥಿಯಾಗಿದ್ದ ವಲಯ ಸಹಾಯಕ ಗವರ್ನರ್ ಡಾ. ರವಿಶಂಕರ್ ರಾವ್ ಅವರು ಪ್ರಶಸ್ತಿ ವಿಜೇತರನ್ನು ಅಭಿನಂದಿಸಿದರು. ಸ್ಥಾಪನಾ ಅಧ್ಯಕ್ಷ ಡಾ. ರಂಜನ್ ಅಭಿನಂದನಾ ಭಾಷಣ ಮಾಡಿ, ಕ್ರಿಕೆಟ್ ಕ್ಷೇತ್ರಕ್ಕೆ ಪೈಯವರ ಕೊಡುಗೆ, ಅನುಪಮ ಸೇವೆ ಅಪಾರ ಮತ್ತು ಅಮೂಲ್ಯ ಎಂದರು.

ವೃತ್ತಿಪರ ಸೇವಾ ಯೋಜನೆಯ ನಿರ್ದೇಶಕ ನಿತಿನ್ ದೇವಾಡಿಗ ಉಪಸ್ಥಿತರಿದ್ದರು. ಕಾರ್ಯದರ್ಶಿ ಸುಜೀರ್ ಪದ್ಮನಾಭ ನಾಯ್ಕ್ ವರದಿ ಮಂಡಿಸಿ, ವಂದಿಸಿದರು.


ಬೆಟ್ಟಂಪಾಡಿ ಗುತ್ತು ಧರ್ಮ ಚಾವಡಿ ಶ್ರೀ ಜಠಾಧಾರಿ ದೈವ ಶ್ರೀ ವ್ಯಾಘ್ರ ಚಾಮುಂಡಿ ದೈವದ ಪುನಃ ಪ್ರತಿಷ್ಠೆ

ನಿಡ್ಪಳ್ಳಿ: ಬೆಟ್ಟಂಪಾಡಿ ಗುತ್ತು ಧರ್ಮ ಚಾವಡಿ ಶ್ರೀ ಜಠಾಧಾರಿ ದೈವದ ಚಾವಡಿ ನೂತನವಾಗಿ ನಿರ್ಮಾಣಗೊಂಡು ಶ್ರೀ ಜಠಾಧಾರಿ ದೈವ, ಧರ್ಮದೈವ ಶ್ರೀ ವ್ಯಾಘ್ರಚಾಮುಂಡಿ ಹಾಗೂ ಪರಿವಾರ ದೈವಗಳ ಪುನಃ ಪ್ರತಿಷ್ಠಾ ಬ್ರಹ್ಮಕಲಶವು ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಫೆ.25ರಿಂದ 28ರವರೆಗೆ ನಡೆಯಲಿದೆ.

ಫೆ.25ರಂದು ಪೂರ್ವಾಹ್ನ ಗಂಟೆ 10ಕ್ಕೆ ಬೆಟ್ಟಂಪಾಡಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಿಂದ ಹೊರೆ ಕಾಣಿಕೆ ಹೊರಡುವುದು ನಂತರ ಉಗ್ರಾಣ ತುಂಬಿಸುವುದು, ಸಂಜೆ ದೇವತಾ ಪ್ರಾರ್ಥನೆ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಪೂಜಾ ಬಲಿ, ಶ್ರೀ ದುರ್ಗಾ ಪೂಜೆ ಪ್ರಸಾದ ವಿತರಣೆ ನಡೆಯಲಿದೆ.

ಫೆ.26ರಂದು ಬೆಳಗ್ಗೆ ಮಹಾಗಣಪತಿ ಹೋಮ, ಪಂಚವಿಂಶತಿ ಕಲಶ ಪೂಜೆ. ಬೆಳಿಗ್ಗೆ ಗಂಟೆ 9.36ರ ನಂತರ ಮೇಷ ಲಗ್ನದಲ್ಲಿ ಶ್ರೀ ಜಠಾಧಾರಿ ದೈವ, ಧರ್ಮ ದೈವ ವ್ಯಾಘ್ರ ಚಾಮುಂಡಿ ಮತ್ತು ಪರಿವಾರ ದೈವಗಳ ಪುನಃ ಪ್ರತಿಷ್ಠೆ ತಂಬಿಲ ಸೇವೆ. ಗಂಟೆ 11.30ಕ್ಕೆ ಧಾರ್ಮಿಕ ಸಭೆ, ಮಧ್ಯಾಹ್ನ ಯಕ್ಷಗಾನ ತಾಳಮದ್ದಳೆ ಶಿವಭಕ್ತ ವೀರಮಣಿ, ಸಂಜೆ ಗಂಟೆ 7ರಿಂದ ಬೆಟ್ಟಂಪಾಡಿ ದೇವಾಲಯದಲ್ಲಿ ಸೋಮವಾರ ಪೂಜೆ ನಂತರ ಧರ್ಮ ಚಾವಡಿಗೆ ದೈವದ ಭಂಡಾರ ಆಗಮನ, 7.30ರಿಂದ ಯಕ್ಷಗಾನ ಜಾಂಬವತಿ ಕಲ್ಯಾಣ, ರಾತ್ರಿ ಗಂಟೆ 12ರಿಂದ ಶ್ರೀ ಜಠಾಧಾರಿ ದೈವದ ನೇಮೋತ್ಸವ. ರಾತ್ರಿ ಗಂಟೆ 3ಕ್ಕೆ ರಕ್ತೇಶ್ವರಿ ದೈವದ ನೇಮ ನಡೆಯಲಿದೆ.

ಫೆ.27ರ ಬೆಳಗ್ಗೆ ಧರ್ಮ ದೈವ ಶ್ರೀ ವ್ಯಾಘ್ರ ಚಾಮುಂಡಿ ದೈವದ ನೇಮ, ಯಕ್ಷಗಾನ ತಾಳಮದ್ದಳೆ. ಸಂಜೆ ಗಂಟೆ 7ಕ್ಕೆ ಶ್ರೀ ರುದ್ರಚಾಮುಂಡಿ ದೈವದ ನೇಮ, ರಾತ್ರಿ 10ಕ್ಕೆ ಶ್ರೀ ವರ್ಣರ ಪಂಜುರ್ಲಿ ದೈವದ ನೇಮ, 12ಕ್ಕೆ ಪುಳಿತ್ತಡಿ ಶ್ರೀ ಪಂಜುರ್ಲಿ ದೈವದ ನೇಮ ನಂತರ ಶ್ರೀ ಕೊರತ್ತಿ ದೈವದ ನೇಮ, ಶ್ರೀ ಅಂಗಾರ ದೈವದ ನೇಮ ನಡೆಯಲಿದೆ. ಫೆ.28ರಂದು ಶ್ರೀ ಗುಳಿಗ ದೈವದ ನೇಮ ನಡೆಯಲಿದೆ ಎಂದು ವಿನೋದ್ ಕುಮಾರ್ ರೈ ಗುತ್ತು ತಿಳಿಸಿದ್ದಾರೆ. ಪ್ರತೀ ದಿನ ಅನ್ನ ಸಂತರ್ಪಣೆ ಇದೆ.



ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಆಶ್ರಯದಲ್ಲಿ ಉಪನ್ಯಾಸಕಿ ಉಷಾ ಕೆ.ವಿ. ವಿರಚಿತ 'ವೇದಾಂತ', 'ಸ್ಪಂದನ' ಕೃತಿಗಳ ಲೋಕಾರ್ಪಣೆ

ಇದು ಪಠ್ಯಪುಸ್ತಕಗಳ ಮಟ್ಟಕ್ಕೂ ಯೋಗ್ಯವಾದ ಬರಹ: ಪುರಂದರ ಭಟ್

ಪುತ್ತೂರು: ಲೇಖಕಿ ಉಷಾ ಕೆ.ವಿ. ಅವರು ಅಧ್ಯಯನಶೀಲ ವ್ಯಕ್ತಿತ್ವದವರಾಗಿದ್ದು, ಬಿಡುಗಡೆಯಾದ ಕೃತಿಗಳು ಶೈಕ್ಷಣಿಕ ಮೌಲ್ಯಗಳನ್ನು ಒಳಗೊಂಡಿವೆ. ಯಾವುದೇ ಭಯವಿಲ್ಲದೆ ತಮ್ಮ ಅನಿಸಿಕೆಗಳನ್ನು ಮುಕ್ತ ವಾಗಿ ಅಭಿವ್ಯಕ್ತಿಸಿರುವುದು ಪ್ರಶಂಸನೀಯ. ಈ ಕೃತಿಗಳು ಪಠ್ಯಪುಸ್ತಕ ಮಟ್ಟಕ್ಕೂ ಯೋಗ್ಯವಾಗಿವೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪುರಂದರ ಭಟ್ ಹೇಳಿದರು.

ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಆಶ್ರಯದಲ್ಲಿ ನಗರದ ಅನುರಾಗ ವಠಾರದಲ್ಲಿ ಆಪ್ತ ವರ್ಗದ ಉಪಸ್ಥಿತಿಯಲ್ಲಿ ನಡೆದ ಉಪನ್ಯಾಸಕಿ ಉಷಾ ಕೆ.ವಿ. ಅವರ 'ವೇದಾಂತ' ಹಾಗೂ 'ಸ್ಪಂದನ' ಕೃತಿಗಳ ಲೋಕಾರ್ಪಣಾ ಸಮಾರಂಭವನ್ನು ಅವರು ದೀಪ ಪ್ರಜ್ವಲಿಸಿ ಮಾತನಾಡಿದರು.

ಹಿರಿಯ ಸಾಹಿತಿ ಪ್ರೊ. ಹರಿ ನಾರಾಯಣ ಮಾಡಾವು ಅವರು 'ವೇದಾಂತ' ಕೃತಿಯನ್ನು ಲೋಕಾರ್ಪಣೆ ಮಾಡಿ, ವೇದಗಳ ಸಾರವನ್ನು ಹೊಸ ಓದುಗರಿಗೂ ಮನಮುಟ್ಟುವಂತೆ ವಿವರಿಸಿರುವುದು ಕೃತಿಯ ವಿಶೇಷತೆ. 'ಆನೆಯನ್ನು ಕನ್ನಡಿಯಲ್ಲಿ ತೋರಿಸುವ ಪ್ರಯತ್ನದಂತಿದೆ ಈ ಕೃತಿ. ಇದು ವೇದಾಂತ-ಸ್ಪಂದನದ ಸಾರ್ಥಕ ಸಂವಾದ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರೊ.ಬಿ.ವಿ. ಸೂರ್ಯನಾರಾಯಣ ಅವರು 'ಸ್ಪಂದನ' ಕೃತಿಯನ್ನು ಬಿಡುಗಡೆಗೊಳಿಸಿ, ಗತಕಾಲದ ವೈಭವವನ್ನು ವರ್ತಮಾನಕ್ಕೆ ಜೋಡಿಸುವ ಧೈರ್ಯ ಲೇಖಕಿಯದು. ಸನಾತನ ಸಂಸ್ಕೃತಿಯ ಶ್ರೀಮಂತಿಕೆಯನ್ನು ನಿರ್ಭೀತಿಯಾಗಿ, ಮೊನಚಾದ ಮಾತುಗಳ ಮೂಲಕ ತನ್ನ ನಿಲುವನ್ನು ತೆರೆದಿಡುವ ಪ್ರಯತ್ನ ಮಾಡಿದ್ದಾರೆ. ಉಷಾ ಕೆ.ವಿ. ಧೈರ್ಯಶಾಲಿ ಮಹಿಳೆ ಎಂದು ಪ್ರಶಂಶಿಸಿದರು.

ಅಧ್ಯಕ್ಷತೆ ವಹಿಸಿದ್ದ ಪುತ್ತೂರು ಉಮೇಶ್ ನಾಯಕ್, ಸಾಹಿತ್ಯ ಪರಿಷತ್ತಿನ ವೇದಿಕೆ ಮಕ್ಕಳಿಂದ ಹಿಡಿದು ಹಿರಿಯರ ತನಕ ಎಲ್ಲರನ್ನು ಒಗ್ಗೂಡಿಸುವ ಸಂವಾದ ವೇದಿಕೆಯಾಗುತ್ತಿದೆ. ಸಾಹಿತ್ಯ ಹಾಗೂ ಸಾಹಿತಿಗಳ ಸೇವೆಗೆ ಪರಿಷತ್ತು ಸದಾ ಕಟಿಬದ್ಧವಾಗಿದೆ ಎಂದು ತಿಳಿಸಿದರು.

'ಆಯುರ್ವೇದದಲ್ಲಿ ಯೋಗ' ವಿಷಯದ ಕುರಿತು ಕೋಡಿಂಬಾಡಿಯ ಅತ್ರಿವನ ಆಯುರ್ವೇದಿಕ್ ಆಸ್ಪತ್ರೆಯ ಮುಖ್ಯಸ್ಥ ಹಾಗೂ ಆಯುರ್ವೇದ ವೈದ್ಯ ಡಾ. ದತ್ತಾತ್ರೇಯ ಅವರು ಉಪನ್ಯಾಸ ನೀಡಿ, ಯೋಗ ಮತ್ತು ಆಯುರ್ವೇದ ಪರಸ್ಪರ ಪೂರಕವಾಗಿದ್ದು, ಮನುಷ್ಯನಿಗೆ ಇರುವ ವಿವೇಚನಾ ಶಕ್ತಿಯನ್ನು ಸದುಪಯೋಗಪಡಿಸಿಕೊಂಡರೆ ಮಾತ್ರ ಆರೋಗ್ಯಕರ ಜೀವನ ಸಾಧ್ಯವೆಂದು ವಿವರಿಸಿದರು.

ಹಿರಿಯ ಸಾಹಿತಿಗಳಾದ ಪ್ರೊ.ವಿ.ಬಿ. ಅರ್ತಿಕಜೆ, ಡಾ.ಎಚ್.ಜಿ. ಶ್ರೀಧರ್, ಡಾ. ಶ್ರೀಶ ಕುಮಾರ್, ಡಾ. ವಿಷ್ಣು ಭಟ್, ಶಂಕರಿ ಶರ್ಮ, ಸುಬ್ರಹ್ಮಣ್ಯ ಶರ್ಮ, ಮಲ್ಲಿಕಾ ಜೆ. ರೈ ಉಪಸ್ಥಿತರಿದ್ದರು. ಕೃತಿಕಾರರಾದ ಉಷಾ ಕೆ.ವಿ. ಪ್ರಾಸ್ತಾವಿಸಿದರು. ಕೃತಿಕಾರರ ಪುತ್ರಿ ಡಾ. ಧೃತಿ ಸ್ವಾಗತಿಸಿ, ವನಮಾಲಿ ಭಟ್ ವಂದಿಸಿದರು. ರಮೇಶ್ ನಾಯಕ್ ನಿಡ್ಯ ಕಾರ್ಯಕ್ರಮ ನಿರ್ವಹಿಸಿದರು.

ಲೇಖಕಿಯ ಪರಿಚಯ

ಶಿಕ್ಷಣ ಕ್ಷೇತ್ರದಲ್ಲಿ ಕಳೆದ 35 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಉಷಾ ಕೆ.ವಿ. ಅವರು ಸುಳ್ಯದ ಸರಕಾರಿ ಜೂನಿಯರ್ ಕಾಲೇಜ್ ಹಾಗೂ ಕಬಕದ ಸರಕಾರಿ ಪ್ರೌಢ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸಿದ್ದರು. ಪ್ರಸ್ತುತ ಕೋಡಿಂಬಾಡಿಯಲ್ಲಿ ವಾಸವಾಗಿರುವ ಅವರು, ವಿವೇಕಾನಂದ ಪದವಿ ಕಾಲೇಜಿನಲ್ಲಿ ಸಂಸ್ಕೃತ , ಹಿಂದಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದ ಡಾ. ವಿಷ್ಣು ಭಟ್ ಅವರ ಪತ್ನಿ. ತಮ್ಮ ಅಧ್ಯಯನ-ಅನುಭವಗಳ ಸಾರವನ್ನು ಸಾಹಿತ್ಯ ರೂಪದಲ್ಲಿ ಓದುಗರಿಗೆ ಅರ್ಪಿಸಿರುವುದು ಕಾರ್ಯಕ್ರಮದಲ್ಲಿ ಸರ್ವ ಅತಿಥಿಗಳಿಂದ ವಿಶೇಷವಾಗಿ ಪ್ರಶಂಸಿಸಲಾಯಿತು.



ಸಂಭ್ರಮಿಸಿದ ಪುಟಾಣಿಗಳು

ಲೇಖಕರ ಮೊಮ್ಮಕ್ಕಳಾದ ಸಾಧ್ವಿ ಮತ್ತು ತನಿಶಿ, ಮಾ. ಅಕ್ಷಜ್ ಹಾಗೂ 3 ವರ್ಷದ ಪುಟಾಣಿ ಅಗಸ್ತ್ಯ ಅವರ ಮಧುರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತ್ತು. ಪುಟಾಣಿ ಮಕ್ಕಳೇ ಖುಷಿ ಖುಷಿಯಾಗಿ ಕುಣಿಯುತ್ತಾ ವೇದಿಕೆಗೆ ಬಂದು ಅತಿಥಿಗಳಿಗೆ ಕನ್ನಡದ ಶಾಲು ಹೊದಿಸಿ ಸ್ಮರಣಿಕೆಗಳನ್ನು ಅರ್ಪಿಸಿರುವುದು, ಜೊತೆಗೆ ಪ್ರತಿ ಬಿಡುಗಡೆ ಸಮಾರಂಭದಲ್ಲಿ ಈ ಎಲ್ಲಾ ಪುಟಾಣಿಗಳು ನೂತನ ಕೃತಿಯನ್ನು ಹಿಡಿದು ಸಂಭ್ರಮಿಸಿದ್ದು ಸಮಾರಂಭದ ಅತ್ಯಂತ ಮನಮುಟ್ಟುವ ಕ್ಷಣವಾಗಿತ್ತು



ಮಂಗಳೂರಿನ ಗೋಲ್ಡ್‌ಫಿಂಚ್ ಮೈದಾನದಲ್ಲಿ ಕೋಟಿ ಚೆನ್ನಯ ಸೇವಾ ಬ್ರಿಗೇಡ್ ಆಶ್ರಯದಲ್ಲಿ ನಡೆದ ಅಂತಾರಾಜ್ಯ ಮಟ್ಟದ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಕುಂಜತ್ತೂರು ಶ್ರೀಮಹಾಲಿಂಗೇಶ್ವರ ಮಹಿಳಾ ತಂಡಗಳು ಪ್ರಥಮ ಮತ್ತು ದ್ವಿತೀಯ ಬಹುಮಾನ ಪಡೆದವು.

ಬೀದಿನಾಯಿಗಳ ಶಸ್ತ್ರಚಿಕಿತ್ಸೆ ಕೇಂದ್ರ ಸ್ಥಾಪನೆ: ಗ್ರಾಮಸ್ಥರಿಂದ ವಿರೋಧ

ಕುಶಾಲನಗರ: ಕುಶಾಲನಗರ ಪುರಸಭೆಯ ವತಿಯಿಂದ ಕೊಡಿಗೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಭುವನಗಿರಿ ಗ್ರಾಮದಲ್ಲಿ ನೂತನವಾಗಿ ಬೀದಿ ನಾಯಿಗಳ ಶಸ್ತ್ರಚಿಕಿತ್ಸೆ ಕೇಂದ್ರವನ್ನು ಆರಂಭಿಸಲು ಮುಂದಾದ ಸಂದರ್ಭದಲ್ಲಿ ಭುವನಗಿರಿ, ಸೀಗೆಹೊಸೂರು ಜೇನುಕಲ್ಲು ಬೆಟ್ಟ ವ್ಯಾಪ್ತಿಯ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದ ಪ್ರಸಂಗ ನಡೆಯಿತು.

ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಬೀದಿ ನಾಯಿಗಳನ್ನು ಹಿಡಿದು ಅವುಗಳಿಗೆ ಶಸ್ತ್ರಚಿಕಿತ್ಸೆ ಮಾಡಿ ಎರಡು ದಿನಗಳ ನಂತರ ಅವುಗಳು ಇದ್ದ ಜಾಗದಲ್ಲಿ ಬಿಡುವ ವ್ಯವಸ್ಥೆ ಅಡಿಯಲ್ಲಿ ಕೊಡಿಗೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಭುವನಗಿರಿ ಕಸ ವಿಲೇವಾರಿ ಘಟಕ ಸಮೀಪದಲ್ಲಿರುವ ವಿಶಾಲವಾದ ಕಟ್ಟಡದಲ್ಲಿ ಕೇಂದ್ರ ಆರಂಭಿಸಲು ಮುಂದಾದಾಗ ಸ್ಥಳೀಯ ಗ್ರಾಮಸ್ಥರು ತೀವ್ರವಾದ ವಿರೋಧ ವ್ಯಕ್ತಪಡಿಸಿದರು.



ಸ್ಥಳಕ್ಕೆ ಆಗಮಿಸಿದ ಕುಶಾಲನಗರ ಪುರಸಭೆಯ ಮುಖ್ಯಾಧಿಕಾರಿ ಗಿರೀಶ್ ಕುಮಾರ್ ಮತ್ತು ಅಧಿಕಾರಿ ವರ್ಗದವರನ್ನು ತರಾಟೆಗೆ ತೆಗೆದುಕೊಂಡ ಗ್ರಾಮಸ್ಥರು, ಈಗಾಗಲೇ ಕಸ ವಿಲೇವಾರಿ ಘಟಕದಿಂದ ಅನೇಕ ತೊಂದರೆಗಳು ಆಗುತ್ತಿವೆ. ಬೀದಿ ನಾಯಿ ಶಸ್ತ್ರಚಿಕಿತ್ಸೆ ಕೇಂದ್ರವನ್ನು ಆರಂಭಿಸಿದರೆ ಸಮೀಪದಲ್ಲಿರುವ ಕಾಡು ಪ್ರಾಣಿಗಳು ಗ್ರಾಮದೊಳಗೆ ಬರಲು ಅನುಕೂಲವಾಗುತ್ತದೆ. ಇದರಿಂದಾಗಿ ಭಾರೀ ತೊಂದರೆಗಳು, ಅನಾಹುತಗಳಾವುದರಿಂದ ಸ್ಥಗಿತ ಗೊಳಿಸುವಂತೆ ಒತ್ತಾಯಿಸಿದರು.

ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮಸ್ಥರು ಶಾಸಕರ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ಶಾಸಕರು ಬದಲಿ ಜಾಗ ಗುರುತಿಸುವಂತೆ ಸೂಚಿಸಿದ ಮೇರೆಗೆ, ಕೇಂದ್ರವನ್ನು ಸ್ಥಗಿತಗೊಳಿಸುವುದಾಗಿ ಮುಖ್ಯಾಧಿಕಾರಿ ತಿಳಿಸಿದರು.

ಈ ಸಂದರ್ಭ ಕೊಡಿಗೆ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಅನಂತ, ಚಂದ್ರ, ಗ್ರಾಮದ ಪ್ರಮುಖರಾದ ಪುಟ್ಟಗೌಡ, ಗೌರಮ್ಮ, ಕುಮಾರ, ಟ್ರಸ್ಟ್ ಸಂಘದ ನಿರ್ದೇಶಕ ರಮೇಶ್, ಸಣ್ಣಸ್ವಾಮಿ, ನಾಗರಾಜ್, ಲೋಹಿತ್, ದೊಡ್ಡಯ್ಯ, ದಶರಥ, ಭುವನಗಿರಿ ರಮೇಶ್, ಸೇರಿದಂತೆ ಹಲವಾರು ಗ್ರಾಮಸ್ಥರು ಹಾಜರಿದ್ದರು.

ಕಿರು ಸುದ್ದಿ

ವೆನ್ಲಾಕ್ ಮೇಲ್ದರ್ಜೆಗೆ: 2 ಕೋಟಿ ರೂ. ವೆಚ್ಚದ ಕಾಮಗಾರಿಗೆ ಅನುಮೋದನೆ

ಮಂಗಳೂರು: ನಗರದ ವೆನ್ಲಾಕ್ ಆಸ್ಪತ್ರೆ ಎಸ್‌ಟಿಪಿ ಘಟಕ ಮೇಲ್ದರ್ಜೆಗೇರಿಸಲು 2 ಕೋಟಿ ರೂ. ವೆಚ್ಚದ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ. ಮಂಗಳೂರಿನ ಪ್ರಮುಖ ಆಸ್ಪತ್ರೆಗಳಲ್ಲಿ ಒಂದಾದ ವೆನ್ಲಾಕ್ ಆಸ್ಪತ್ರೆ 905 ಹಾಸಿಗೆಯ ಸಾಮರ್ಥ್ಯ ಹೊಂದಿದ್ದು, ಒಟ್ಟು 21 ಕಟ್ಟಡಗಳನ್ನು ಹೊಂದಿದೆ. ಇಲ್ಲಿನ ಎಸ್‌ಟಿಪಿ ಘಟಕವು 350 ಕೆಎಲ್ ಡಿ ಸಾಮರ್ಥ್ಯ ಹೊಂದಿದ್ದು, ಯುಎಸ್‌ಬಿ ವಿಧಾನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದರ ನಿರ್ವಹಣೆಯಲ್ಲಿ ಹಲವಾರು ಸಮಸ್ಯೆ ಇರುವುದರಿಂದ ಇದನ್ನು ಮೇಲ್ದರ್ಜೆಗೆ ಏರಿಸಲು ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ತೀರ್ಮಾನ ಕೈಗೊಂಡಿದ್ದರು. ಪ್ರಸ್ತುತ ಆಸ್ಪತ್ರೆಯ ಅವಶ್ಯಕತೆಗೆ ಅನುಗುಣವಾಗಿ ಈಗ ಇರುವ ಸಿವಿಲ್ ಮೂಲಸೌಕರ್ಯ ಬಳಸಿಕೊಂಡು, ಹೆಚ್ಚುವಾರಿಯಾಗಿ ಬೇಕಾಗುವ ಎಸ್ ಬಿಆರ್ ಟ್ಯಾಂಕ್ ಮತ್ತು ಕಲೆಕ್ಷನ್ ಟ್ಯಾಂಕ್ ಹೊಸದಾಗಿ ನಿರ್ಮಿಸಲು, ಎಸ್ ಟಿಪಿ ಘಟಕ್ಕೆ ಬೇಕಾಗುವ ಯಂತ್ರೋಪಕರಣಗಳೊಂದಿಗೆ 500 ಕೆಎಲ್ ಡಿ ಘಟಕವಾಗಿ ಮೇಲ್ದರ್ಜೆಗೆ ಏರಿಸಲು ರೂ. 2 ಕೋಟಿ ಅನುದಾನಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಟೆಂಡರ್ ಆಹ್ವಾನಿಸಲು ಆದೇಶ ಮಾಡಲಾಗಿದೆ.



ರಿಕ್ಷಾ ಡಿಕ್ಕಿ: ವೃದ್ಧ ಸಾವು

ಮಂಗಳೂರು: ನಗರದ ಬೊಂದೇಲ್ ಜಂಕ್ಷನ್ ಬಳಿಕ ಆಟೋ ರಿಕ್ಷಾವೊಂದು ಡಿಕ್ಕಿಯಾದ ಪರಿಣಾಮ ಗಂಭೀರ ಗಾಯಗೊಂಡ ವೃದ್ಧ ಸಾವನ್ನಪ್ಪಿದ್ದಾರೆ. ಭಾಸ್ಕರ್ ಆಚಾರ್ಯ (83) ಮೃತಪಟ್ಟವರು. ಫೆ.1ರಂದು ರಾತ್ರಿ 8ಗಂಟೆ ಸುಮಾರಿಗೆ ಭಾಸ್ಕರ್ ಆಚಾರ್ಯ ಅವರು ಪಚ್ಚನಾಡಿ ಕ್ರಾಸ್ ಬಳಿ ರಸ್ತೆ ದಾಟುತ್ತಿದ್ದಾಗ ಬೊಂದೇಲ್ ಜಂಕ್ಷನ್ ಕಡೆಯಿಂದ ಪದವಿನಂಗಡಿ ಕಡೆಗೆ ಬರುತ್ತಿದ್ದ ರಿಕ್ಷಾವೊಂದು ಢಿಕ್ಕಿ ಹೊಡೆದಿದೆ. ಪರಿಣಾಮ ಭಾಸ್ಕರ್ ಅವರು ಗಂಭೀರ ಗಾಯಗೊಂಡು ನಗರದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಕಳೆದ ಹಲವು ದಿನಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಸೋಮವಾರ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ದಕ್ಷಿಣ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ನಿವೃತ್ತ ಭೂಸೇನಾಧಿಕಾರಿ ಕರ್ನಲ್ ಎನ್. ಬಾಲಕೃಷ್ಣ

ಮಂಗಳೂರು: ಭಾರತೀಯ ಭೂಸೇನೆಯ ಕಾಪ್ಸ್ ಆಫ್ ಸಿಗ್ನಲ್ ವಿಭಾಗದಲ್ಲಿ 32 ವರ್ಷ ದೇಶಸೇವೆಗೈದು ನಿವೃತ್ತರಾಗಿದ್ದ, ಮಂಗಳೂರಿನ ಮೇರಿಹಿಲ್ ನಿವಾಸಿ ಕರ್ನಲ್ ಎನ್. ಬಾಲಕೃಷ್ಣ (70) ಅವರು ಸ್ವಗೃಹದಲ್ಲಿ ಫೆ.23 ರಂದು ನಿಧನ ಹೊಂದಿದರು. ಅವರು ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಆಗಲಿದ್ದಾರೆ. ಸೇನಾ ನಿವೃತ್ತಿಯ ಬಳಿಕ ಕರ್ನಲ್ ಬಾಲಕೃಷ್ಣ ಅವರು ಮಂಗಳೂರಿನ ಉರ್ವಸ್ಟೋರ್‌ನಲ್ಲಿರುವ ಇ.ಸಿ.ಎಚ್.ಎಸ್ ಪೊಲಿಕ್ಲಿನಿಕ್ ಕಚೇರಿಯಲ್ಲಿ ಆಫೀಸರ್ ಇನ್ ಚಾರ್ಜ್ ಆಗಿ 7 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು.



ಕ. ಬಾಲಕೃಷ್ಣ ಅವರ ನಿಧನಕ್ಕೆ ಮಂಗಳೂರಿನ ಇ.ಸಿ.ಎಚ್.ಎಸ್ ಪೊಲಿಕ್ಲಿನಿಕ್‌ನ ಪ್ರಸ್ತುತ ಒ.ಐ.ಸಿ ಕರ್ನಲ್ ನಿತಿನ್ ಆರ್.ಭಿಡೆ ಮತ್ತು ಸಿಬ್ಬಂದಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಮಹಾಬಲ ರೈ

ಕಡಬ: ಮೂಲತಃ ಕಡಬ ತಾಲೂಕಿನ ಹಳೆನೇರೆಂಕಿ ಗ್ರಾಮದ ರಾಮಜಾಲು ನಿವಾಸಿ, ಪ್ರಸ್ತುತ ಮಂಗಳೂರು ಕಿನ್ನಿಗೋಳಿಯಲ್ಲಿ ವಾಸ್ತವ್ಯವಿದ್ದ ನಿವೃತ್ತ ಕಂದಾಯ ನಿರೀಕ್ಷಕ ಆರ್.ಮಹಾಬಲ ರೈ (74) ಅವರು ಫೆ.23ರಂದು ಕಿನ್ನಿಗೋಳಿಯ ಸ್ವಗೃಹದಲ್ಲಿ ನಿಧನಹೊಂದಿದರು. ಮೃತರು ಪುತ್ರಿ, ಅಳಿಯ, ಮೊಮ್ಮಕ್ಕಳನ್ನು ಆಗಲಿದ್ದಾರೆ. ಮಹಾಬಲ ರೈ ಅವರು ಬಂಟ್ವಾಳದಲ್ಲಿ ಗ್ರಾಮಕರಣಿಕರಾಗಿ ಸೇವೆ ಆರಂಭಿಸಿ ಬಳಿಕ ಗ್ರಾಮ ಪಂಚಾಯತ್ ಕಾರ್ಯದರ್ಶಿಯಾಗಿ ಭಡ್ತಿ ಪಡೆದು ಕಂದಾವರ ಗ್ರಾಮ ಪಂಚಾಯತ್‌ಗೆ ವರ್ಗಾವಣೆಗೊಂಡಿದ್ದರು. ಅಲ್ಲಿಂದ ಕಂದಾಯ ನಿರೀಕ್ಷಕ ಹುದ್ದೆಗೆ ಭಡ್ತಿಗೊಂಡು ಮೂಲ್ಕಿಗೆ ವರ್ಗಾವಣೆಗೊಂಡಿದ್ದರು. ಅವರು ಒಟ್ಟು 34ವರ್ಷ ಕಂದಾಯ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಕಿನ್ನಿಗೋಳಿ ಜೇಸಿಐ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರು ಕಿನ್ನಿಗೋಳಿ ಲಯನ್ಸ್ ಕ್ಲಬ್, ರೋಟರಿ ಕ್ಲಬ್‌ನಲ್ಲಿ ಸದಸ್ಯರಾಗಿದ್ದರು. ಶ್ರೀ ರಾಮಕುಂಜೇಶ್ವರ ಕ್ರೀಡಾ ಟ್ರಸ್ಟ್ ಸ್ಥಾಪಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಅವರು ಇತ್ತೀಚೆಗೆ ಶತಮಾನೋತ್ಸವ ಸಂಭ್ರಮ ಆಚರಿಸಿಕೊಂಡ ಹಳೆನೇರೆಂಕಿ ಸರಕಾರಿ ಶಾಲೆಗೆ ತಮ್ಮ ತಂದೆ ಹಾಗೂ ತಾಯಿಯ ಸ್ಮರಣಾರ್ಥ ದಿ! ಲಕ್ಷ್ಮೀ ಕರಿಯಪ್ಪ ರೈ ರಂಗಮಂದಿರ ನಿರ್ಮಾಣ ಮಾಡಿ ಕೊಡುಗೆಯಾಗಿ ನೀಡಿದ್ದರು.




ಶರಣ್ಯ ಆಡಿಂಜ

ಸುಳ್ಯ: ಆಲೆಟ್ಟಿ ಗ್ರಾಮದ ವಿಕಲಚೇತನ ಮೇಲ್ವಿಚಾರಕಿ ಶರಣ್ಯ ಆಡಿಂಜ (28) ಅನಾರೋಗ್ಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಆಸ್ಪತ್ರೆಯಲ್ಲಿ ನಿಧನರಾದರು. ಶರಣ್ಯ ಅವರಿಗೆ ಅನಾರೋಗ್ಯ ಕಾಣಿಸಿಕೊಂಡಾಗ ಸುಳ್ಯದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿ ಬಳಿಕ ಆರೋಗ್ಯದಲ್ಲಿ ಮತ್ತಷ್ಟು ಏರು ಪೇರು ಕಾಣಿಸಿಕೊಂಡ ಹಿನ್ನಲೆಯಲ್ಲಿ ವೈದ್ಯರ ಸಲಹೆ ಮೇರೆಗೆ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಕೊನೆಯುಸಿರೆಳೆದರು. ಮೃತರು ತಂದೆ, ತಾಯಿ, ಸಹೋದರ ಹಾಗೂ ಬಂಧು ಮಿತ್ರರನ್ನು ಆಗಲಿದ್ದಾರೆ. ಮೃತರು ಕಳೆದ ಎರಡು ವರ್ಷಗಳಿಂದ ಆಲೆಟ್ಟಿ ಗ್ರಾಮ ಪಂಚಾಯತ್ ವಿಕಲಚೇತನ ಮೇಲ್ವಿಚಾರಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.



ಲೋಕನಾಥ ಸಪಲಿಗ


ಬಂಟ್ವಾಳ: ಪಾಣೆಮಂಗಳೂರಿನ ಕುರ್ಚಿಪಳ್ಳ ದಿವಂಗತ ಲಕ್ಷ್ಮಣ್ ಸಪಲ್ಯರ ಪುತ್ರ ಲೋಕನಾಥ ಸಪಲಿಗ (52) ಅವರು ಅಸೌಖ್ಯದಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಮೃತರು ತಾಯಿ, ಪತ್ನಿ, ಓರ್ವ ಪುತ್ರ ಆಗಲಿದ್ದಾರೆ.



ಕಾಸರಗೋಡು ಜಿಲ್ಲೆಯಲ್ಲಿ ರಾ. ಹೆದ್ದಾರಿ ಅಭಿವೃದ್ಧಿ ಯೋಜನೆ

ಎರಡು ಮೇಲ್ಸೇತುವೆಗಳ ಮಂಜೂರು

ಕಾಸರಗೋಡು: ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 66ರ ಅಭಿವೃದ್ಧಿ ಯೋಜನೆಯು ತ್ವರಿತಗತಿಯಲ್ಲಿ ಸಾಗುತ್ತಿದೆ. ಅದರಂತೆ ತಲಪಾಡಿ – ಕಾಸರಗೋಡು – ಚೆಂಗಳ ತನಕದ ಪ್ರಥಮ ರೀಚ್‌ನ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಇದೀಗ ಅಡ್ಕತ್ತಬೈಲು ಮತ್ತು ನುಳ್ಳಿಪ್ಪಾಡಿಯಲ್ಲಿ ಪಾದಚಾರಿ ಮೇಲ್ಸೇತುವೆಗಳನ್ನು ಮಂಜೂರುಗೊಳಿಸಿ ಆದೇಶ ಹೊರಡಿಸಲಾಗಿದೆ.



ಅಡ್ಕತ್ತಬೈಲಿನಲ್ಲಿ ಪಾದಚಾರಿ ಮೇಲ್ಸೇತುವೆಯನ್ನು ನಿರ್ಮಿಸುವಂತೆ ನಾಗರಿಕರು ಕೇಂದ್ರ ಭೂ ಸಾರಿಗೆ ಇಲಾಖೆ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಸಲ್ಲಿಸಿದ್ದರು. ಅಡ್ಕತ್ತಬೈಲು ಶ್ರೀ ಸುಬ್ರಹ್ಮಣ್ಯ ಸ್ವಾಮಿ ಕ್ಷೇತ್ರ ಸಮಿತಿ ಮತ್ತು ಅಡ್ಕತ್ತಬೈಲು ಮುಹಿಯುದ್ದೀನ್ ಜಮಾಅತ್ ಸಮಿತಿ ಜಂಟಿಯಾಗಿ ಕ್ರಿಯಾ ಸಮಿತಿ ರೂಪಿಸಿ ಕೇಂದ್ರ ಸಚಿವರನ್ನು ಭೇಟಿಯಾಗಿದ್ದು, ಈ ನಿಟ್ಟಿನಲ್ಲಿ ಸಚಿವರು ಭರವಸೆ ನೀಡಿದ್ದರು.

ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಸಂದರ್ಭದಲ್ಲಿ ಕ್ಷೇತ್ರ ಹಾಗೂ ಮಸೀದಿ ಇರುವ ಅಡ್ಕತ್ತಬೈಲಿನಲ್ಲಿ ಕೆಳ ಸೇತುವೆ ಅಥವಾ ಮೇಲ್ಸೇತುವೆ ಮಂಜೂರುಗೊಳಿಸಬೇಕು ಎಂದು ಆಗ್ರಹಿಸಿ ಒತ್ತಡ ಹೇರಲಾಗಿತ್ತು. ಆದರೆ ಕೆಳ ಸೇತುವೆ ಮಂಜೂರುಗೊಳಿಸಿದ್ದು ಅಡ್ಕತ್ತಬೈಲು ಪ್ರೌಢಶಾಲೆ ಸಮೀಪವಾಗಿತ್ತು. ಇದರಿಂದಾಗಿ ದೂರ ಪರಿಗಣಿಸಿ ಅಡ್ಕತ್ತಬೈಲಿನಲ್ಲಿ ಫೂಟ್ ಓವರ್ ಬ್ರಿಡ್ಜ್ ನಿರ್ಮಿಸುವಂತೆ ಒತ್ತಾಯಿಸಿ ನಾಗರಿಕರು ಕ್ರಿಯಾ ಸಮಿತಿ ರಚಿಸಿ ರಂಗಕ್ಕಿಳಿದಿದ್ದರು.

ಈ ಮಧ್ಯೆ ಕಾಸರಗೋಡು ಹೊಸ ಬಸ್ ನಿಲ್ದಾಣ ಸಮೀಪವಿರುವ ನುಳ್ಳಿಪ್ಪಾಡಿಯಲ್ಲಿ ಕೂಡಾ ಇದೇ ಬೇಡಿಕೆಯನ್ನು ಮುಂದಿರಿಸಿ ಸಾರ್ವಜನಿಕರು ಪ್ರತಿಭಟನೆಗಿಳಿದಿದ್ದರು. ವಿವಿಧ ಜನಪರ ಹೋರಾಟಗಳನ್ನು ಕೂಡಾ ರೂಪಿಸಲಾಗಿತ್ತು.

ನುಳ್ಳಿಪ್ಪಾಡಿ ಪ್ರದೇಶದ ನಿವಾಸಿಗಳಿಗೆ ರಸ್ತೆ ದಾಟಲು ಕಾಸರಗೋಡು ಪೇಟೆ ಅಥವಾ ಅಣಂಗೂರಿನಲ್ಲಿರುವ ಕೆಳ ಸೇತುವೆ ಇದೀಗ ಆಶ್ರಯವಾಗಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಥಮ ರೀಚ್‌ನ ಕಾಮಗಾರಿ ಗುತ್ತಿಗೆ ವಹಿಸಿರುವ ಯುಎಲ್‌ಸಿಸಿಎಸ್ ಅಧಿಕಾರಿಗಳು, ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ಕಾಸರಗೋಡು ಶಾಸಕರು ಸೇರಿದಂತೆ ಇನ್ನಿತರ ಜನಪ್ರತಿನಿಧಿಗಳು ಹಾಗೂ ವಿವಿಧ ವಲಯಗಳ ಪ್ರಮುಖರು ನುಳ್ಳಿಪ್ಪಾಡಿ ಭಾಗವನ್ನು ಸಂದರ್ಶಿಸಿದ್ದು, ಈ ಸಂದರ್ಭದಲ್ಲಿ ಫೂಟ್ ಓವರ್ ಬ್ರಿಡ್ಜ್ ನಿರ್ಮಿಸುವ ಯೋಜನೆ ಸದ್ಯದಲ್ಲೇ ಕಾರ್ಯಗತಗೊಳ್ಳಲಿದೆ ಎಂದು ತಿಳಿಸಿದ್ದಾರೆ. ಇದರೊಂದಿಗೆ ಪ್ರಯಾಣ ಸಮಸ್ಯೆ ಎದುರಿಸುತ್ತಿರುವ ಮೊಗ್ರಾಲ್ ಪುತ್ತೂರು ಕುನ್ನಿಲ್ ಪ್ರದೇಶಕ್ಕೂ ಫೂಟ್ ಓವರ್ ಬ್ರಿಡ್ಜ್ ಯೋಜನೆಯನ್ನು ಮಂಜೂರುಗೊಳಿಸಲು ನಿರ್ಧರಿಸಲಾಗಿದೆ.

ತೊಂದರೆಯಾಗದಂತೆ ಕೇಂದ್ರ ಸರಕಾರ ಕ್ರಮ

ಇದೇ ವೇಳೆ ಪ್ರಥಮ ರೀಚ್ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದರೂ ಮಧ್ಯ ಪ್ರವೇಶಿಸಿದ ಕೇಂದ್ರ ಸರಕಾರದ ಭೂ ಸಾರಿಗೆ ಇಲಾಖೆ ಸಚಿವ ನಿತಿನ್ ಗಡ್ಕರಿ ಅವರು ನಾಗರಿಕರಿಗೆ ಎಲ್ಲಿಯೂ ತೊಂದರೆ ಎದುರಾಗದಂತೆ ಕ್ರಮ ಕೈಗೊಳ್ಳಬೇಕೆಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಹೈವೇ ದಾಟಲು ಆವಶ್ಯಕತೆ ಇರುವಲ್ಲಿ ಪಾದಚಾರಿ ಮೇಲ್ಸೇತುವೆಯನ್ನು ಆದಷ್ಟು ಶೀಘ್ರದಲ್ಲೇ ಪೂರ್ತಿಗೊಳಿಸುವಂತೆ ಕೇಂದ್ರ ಸರಕಾರವು ಸೂಚಿಸಿದೆ.

ಅಗತ್ಯವಿರುವಲ್ಲಿ ರಸ್ತೆದಾಟುವ ವ್ಯವಸ್ಥೆಯಿಲ್ಲ ಎಂಬ ಆರೋಪ

ತಲಪಾಡಿಯಿಂದ ಚೆಂಗಳ ವರೆಗಿನ ರಾಷ್ಟ್ರೀಯ ಹೆದ್ದಾರಿಯ ಪ್ರಥಮ ರೀಚ್‌ನ ಕಾಮಗಾರಿ ಹೆಚ್ಚು ಕಡಿಮೆ ಪೂರ್ಣಗೊಂಡಿದೆ. ಆದರೆ ರಾಷ್ಟ್ರೀಯ ಹೆದ್ದಾರಿ ಮತ್ತು ಸರ್ವೀಸ್ ರಸ್ತೆಗಳಲ್ಲಿ ಕೆಲವೊಂದು ಸಮಸ್ಯೆಗಳು ಎದುರಾಗಿದ್ದು, ಮುಖ್ಯವಾಗಿ ಹೈವೇಯನ್ನು ದಾಟಲು ಪಾದಚಾರಿ ಮೇಲ್ಸೇತುವೆ ಅಗತ್ಯವಿರುವಲ್ಲಿ ನಿರ್ಮಿಸಲಾಗಿಲ್ಲ ಎಂಬ ಆರೋಪ ಸಾರ್ವಜನಿಕರದ್ದಾಗಿದೆ. ಜನವಾಸ ಪ್ರದೇಶಗಳಿರುವ ಭಾಗದಲ್ಲಿ ಫೂಟ್ ಓವರ್ ಬ್ರಿಡ್ಜ್ ಸ್ಥಾಪಿಸದೆ ಅನ್ಯಾಯ ಮಾಡಲಾಗಿದೆ ಎಂದು ದೂರಲಾಗಿದೆ.

ಶಕ್ತಿ ವಿದ್ಯಾಸಂಸ್ಥೆಯಲ್ಲಿ ವಿಶ್ವ ಚಿಂತನಾ ದಿನಾಚರಣೆ



ಮಂಗಳೂರು: ಶಕ್ತಿನಗರದಲ್ಲಿರುವ ಶಕ್ತಿ ರೆಸಿಡೆನ್ಶಿಯಲ್ ಶಾಲೆಯ ರೇಷ್ಮಾ ಮೆಮೋರಿಯಲ್ ಸಭಾಂಗಣದಲ್ಲಿ ವಿಶ್ವ ಚಿಂತನಾ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಭಾರತ್ ಸ್ಕೌಟ್ ಮತ್ತು ಗೈಡ್ ಹಾಗೂ ಕಬ್ ಮತ್ತು ಬುಲ್ ಬುಲ್ ಸಮವಸ್ತ್ರ ಧರಿಸಿದ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸರ್ವ ಧರ್ಮ ಪ್ರಾರ್ಥನೆಯನ್ನು ನೆರವೇರಿಸಿ ಕೊಡುವ ಮೂಲಕ ಸ್ಕೌಟಿಂಗ್ ಮತ್ತು ಗೈಡಿಂಗ್‌ನ ಸ್ಥಾಪಕರಾದ ಲಾರ್ಡ್ ರಾಬರ್ಟ್ ಬೇಡನ್ ಪೊವೆಲ್ ಮತ್ತು ಅವರ ಪತ್ನಿ ಮತ್ತು ವಿಶ್ವ ಮುಖ್ಯ ಮಾರ್ಗದರ್ಶಿ ಲೇಡಿ ಒಲೇವ್ ಬೇಡನ್ ಪೊವೆಲ್ ಅವರ ಜನ್ಮದಿನ ಮತ್ತು ವಿಶ್ವ ಚಿಂತನಾ ದಿನಾಚರಣೆಯನ್ನು ಆಚರಿಸಲಾಯಿತು.



ವಿದ್ಯಾರ್ಥಿಗಳು ಸರ್ವ ಧರ್ಮ ಗ್ರಂಥಗಳ ಪಠಣವನ್ನು ಮಾಡಿದ್ದು ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ಶಾಲಾ ಪ್ರಾಂಶುಪಾಲೆ ಬಬಿತಾ ಸೂರಜ್ ಹಾಗೂ ಸ್ಕೌಟ್ ಮತ್ತು ಗೈಡ್ ವಿಭಾಗದ ಮುಖ್ಯಸ್ಥರಾದ ಭವ್ಯಶ್ರೀ, ಸುರೇಖಾ, ಸುಪ್ರಿಯ ಮತ್ತು ಕಬ್ ವಿಭಾಗದ ಮುಖ್ಯಸ್ಥರಾದ ಶರಣಪ್ಪ, ಬುಲ್ ಬುಲ್ ವಿಭಾಗದ ಮುಖ್ಯಸ್ಥರಾದ ಪ್ರೇಮಲತಾ, ಸುನೀತ ಉಪಸ್ಥಿತರಿದ್ದರು.

ಕಬ್ ಮಾಸ್ಟರ್ ಶರಣಪ್ಪ ದಿನದ ಪ್ರಾಮುಖ್ಯತೆಯನ್ನು ವಾಚಿಸಿದರು.

ಆಳ್ವಾಸ್‌ನಲ್ಲಿ 'ತರಗತಿಯಿಂದ ಸಮ್ಮೇಳನದವರೆಗೆ ನನ್ನ ಉದ್ಯಮಶೀಲತಾ ಪ್ರಯಾಣ' ಉಪನ್ಯಾಸ

ಮೂಡುಬಿದಿರೆ: ಜೀವನದಲ್ಲಿ ಶಿಸ್ತು ಎಂದರೆ ಕೇವಲ ನಿಯಮಗಳನ್ನು ಪಾಲಿಸುವುದು ಮಾತ್ರವಲ್ಲ; ಅದು ವ್ಯಕ್ತಿಯ ಚಿಂತನೆ, ವರ್ತನೆ ಮತ್ತು ಕಾರ್ಯ ಪದ್ಧತಿಯಲ್ಲಿರುವ ಸುವ್ಯವಸ್ಥೆ ಎಂದು ಚೆನ್ನೈ ಮೂಲದ 11 ವರ್ಷದ ಉದ್ಯಮಿ ಹಾಗೂ ಜೋಜೋ ಕನೆಕ್ಟ್ ಸ್ಥಾಪಕ ಆರ್ಥಿಕ್ ಅಮಿತ್ ಕುಮಾರ್ ಹೇಳಿದರು.



ಅವರು ಆಳ್ವಾಸ್‌ನ ವಿ. ಎಸ್. ಆಚಾರ್ಯ ಸಭಾಂಗಣದಲ್ಲಿ ರೋಸ್ಟ್ರಂ ಸ್ಪೀಕರ್ಸ್ ಕ್ಲಬ್ ವತಿಯಿಂದ ನಡೆದ 'ತರಗತಿಯಿಂದ ಸಮ್ಮೇಳನದ ವರೆಗೆ ನನ್ನ ಉದ್ಯಮಶೀಲತಾ ಪ್ರಯಾಣ' ಪ್ರೇರಣಾದಯಕ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ತನ್ನ ತಂದೆಯ ಉದ್ಯಮಕ್ಕೆ ಸಂಬಂಧಿಸಿದ ಸಭೆಗಳಲ್ಲಿ ಭಾಗಿಯಾದ್ದರಿಂದ ತನ್ನದೇ ಆದ ಉದ್ಯಮವನ್ನು ಪ್ರಾರಂಭಿಸಲು ಸ್ಫೂರ್ತಿಯಾಯಿತು ಎಂದ ಅವರು, ಝೋಝೋ ಕನೆಕ್ಟ್ ವೃತ್ತಿಪರ ನೆಟ್‌ವರ್ಕಿಂಗ್ ಸೇವೆಗಳನ್ನು ಒದಗಿಸುವ ಸಂಸ್ಥೆಯಾಗಿದೆ, ಸಾಂಪ್ರದಾಯಿಕ ಬ್ಯುಸಿನೆಸ್ ಕಾರ್ಡ್‌ಗಳ ಬದಲಾಗಿ ಸ್ಕ್ಯಾನ್ ಮಾಡುವ ಮೂಲಕ ಡಿಜಿಟಲ್ ಕಾರ್ಡ್ ಆಗಿ ಪರಿವರ್ತಿಸುವ ಮೂಲಕ ಜೋಜೋ ಬ್ಯುಸಿನೆಸ್ ಕಾರ್ಡ್ ಕಾರ್ಯನಿರ್ವಹಿಸುತ್ತದೆ ಎಂದರು.

ನಾನು ವ್ಯವಹಾರಿಕ ಸಮ್ಮೇಳನಗಳಲ್ಲಿ ಭಾಗಿಯಾಗವುದರ ಮೂಲಕ ಜಾಗತಿಕ ಹೂಡಿಕೆದಾರರು, ಉದ್ಯಮಿಗಳನ್ನು ವಿವಿಧ ಕಂಪನಿಗಳ ಸ್ಥಾಪಕರ ಪರಿಚಯ ಮಾಡಿಕೊಂಡೆ. ಆದರೆ ನಂತರದ ದಿನಗಳಲ್ಲಿ ಆ ಸಂಪರ್ಕ ಉಳಿದುಕೊಳ್ಳಲಿಲ್ಲ. ಇದರಿಂದ ಹಲವು ಅವಕಾಶ ಕೈ ತಪ್ಪಿ ಹೋಯಿತು. ಆದ್ದರಿಂದ ನಾನು ಜೋಜೋ ಕನೆಕ್ಟ್ ಅನ್ನು ಸ್ಥಾಪಿಸಿದೆ ಎಂದರು. ಇದು ಉದ್ಯಮಿಗಳನ್ನು, ಹೂಡಿಕೆದಾರರನ್ನು ಸಂಪರ್ಕ ಮಾಡಲು ಸಹಾಯ ಮಾಡಿತು ಎಂದರು.

ನಂತರ ನಡೆದ ಪ್ರಶ್ನಾವಳಿಯಲ್ಲಿ ಶಿಕ್ಷಣ ಮತ್ತು ಉದ್ಯಮವನ್ನು ಹೇಗೆ ಜೊತೆಗೆ ನಿಭಾಯಿಸುತ್ತಾರೆ. ವ್ಯವಹಾರದಲ್ಲಿ ಅವರಿಗೆ ಉತ್ಸಾಹಬರಲು ಕಾರಣವೇನು ಇಂತಹ ಪ್ರಶ್ನೆಗಳಿಗೆ ಉತ್ತರಿಸಿದರು. ಯುವಕರು ತಮ್ಮ ಯೋಚನೆಗಳನ್ನು ಕಾರ್ಯಗತಗೊಳಿಸುವಂತೆ ಸಲಹೆ ನೀಡಿದರು. ಕೇವಲ ನಮ್ಮ ಯೋಜನೆಗಳ ಬಗ್ಗೆ ಯೋಚಿಸುವುದರ ಬದಲು ಅದನ್ನು ಪರಿಹಾರ ಮಾಡುವಂತಹ ಕೆಲಸ ಮಾಡಬೇಕು ಎಂದರು. ಆರಂಭಿಕ ಹಂತಗಳಲ್ಲಿ ಯುವ ಉದ್ಯಮಿಗಳು ಎದುರಿಸುವ ತೊಂದರೆಗಳು ಮತ್ತು ವೈಫಲ್ಯಗಳ ಬಗ್ಗೆಯೂ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ, ರೋಸ್ಟ್ರಮ್ ಸ್ಪೀಕರ್ಸ್ ಕ್ಲಬ್‌ನ ಅಧ್ಯಕ್ಷೆ ಡಾ. ದೀಪಾ ಕೊಠಾರಿ ಉಪಸ್ಥಿತರಿದ್ದರು. ನಿಯತಿ ಅಮೀನ್ ಕಾರ್ಯಕ್ರಮ ನಿರೂಪಿಸಿದರು.

ಕೇಂದ್ರ, ರಾಜ್ಯ ಸರಕಾರಗಳ ಜನಪರ ಯೋಜನೆ ಜನರಿಗೆ ತಲುಪಲಿ: ಕೋಟ

ಉಡುಪಿ: ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನಪರ ಯೋಜನೆಗಳನ್ನು ಬದ್ಧತೆಯಿಂದ ಜನ ಸಾಮಾನ್ಯರಿಗೆ ತಲುಪಿಸುವ ಕೆಲಸವನ್ನು ಅಧಿಕಾರಿಗಳು ಮಾಡಬೇಕು ಎಂದು ಉಡುಪಿ ಸಂಸದ ಶ್ರೀನಿವಾಸ ಪೂಜಾರಿ ಹೇಳಿದರು.



ಭಾರತ ಸರಕಾರದ ವಾರ್ತಾ ಶಾಖೆಯು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಡುಪಿ ಇವುಗಳ ಸಹಯೋಗದಲ್ಲಿ ಉಡುಪಿಯ ಮಾಧ್ಯಮ ಪ್ರತಿನಿಧಿಗಳಿಗೆ ಮಣಿಪಾಲದ ಜಿಪಂನ ಡಾ.ವಿ.ಎಸ್.ಆಚಾರ್ಯ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಕೇಂದ್ರ ಪುರಸ್ಕೃತ ಯೋಜನೆಗಳ ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಕೇಂದ್ರದ ಆಯುಷ್ಮಾನ್ ಭಾರತ, ಜನೌಷಧಿ, ಕೃಷಿ ಸಮ್ಮಾನ್ ಯೋಜನೆ, ಫಸಲ್‌ಭಿಮಾ ಯೋಜನೆಗಳು, ಮೀನುಗಾರರಿಗೆ ಜಾರಿಗೊಳಿಸಲಾದ ಯೋಜನೆಗಳು ಸರಿಯಾಗಿ ಜನರಿಗೆ ಸಿಗುವಂತಾಗಬೇಕು ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ.ಗಫೂರ್ ಮಾತನಾಡಿ, ಮತ್ಸ್ಯ ಸಂಪದ ಯೋಜನೆ ಕರಾವಳಿ ಜಿಲ್ಲೆಗಳಲ್ಲಿ ಸಮರ್ಪಕವಾಗಿ ಜಾರಿಗೊಳ್ಳಬೇಕಿದೆ. ಅದೇ ರೀತಿ ವಾಟರ್ ಮೆಟ್ರೋ ಯೋಜನೆ, ಸ್ವರಾಜ್ ದರ್ಶನ್ ಯೋಜನೆಗಳು ಪರಿಣಾಮಕಾರಿಯಾಗಿ ಜನತೆಗೆ ತಲುಪಬೇಕಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಜಿರಾಮ್ ಜಿ ಕುರಿತು ಮಾಹಿತಿ ನೀಡಿದರು. ಜಿಪಂನ ಸಹಾಯಕ ಜಿಲ್ಲಾ ಕಾರ್ಯಕ್ರಮ ಸಂಯೋಜಕ ವಿಜಯ ಶ್ಯಾಮ್ ಜಿರಾಮ್ ಜಿ ವಿಷಯ ಮಂಡನೆ ಮಾಡಿದರು. ಉಡುಪಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಕಾರ್ಯಕ್ರಮ ಅಭಿವೃದ್ಧಿ ಅಧಿಕಾರಿ ಡಾ.ಪ್ರಶಾಂತ್ ಭಟ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಗಳ ಅನುಷ್ಠಾನದ ಕುರಿತು ಮಾತನಾಡಿದರು.

ನೂತನ ಕಾರ್ಮಿಕ ಕಾನೂನುಗಳ ಕುರಿತು ಇಎಸ್‌ಐಸಿಯ ಮಂಗಳೂರು ಉಪ ಪ್ರಾದೇಶಿಕ ಕಚೇರಿಯ ಜಂಟಿ ನಿರ್ದೇಶಕ ವಿಜಯ ಆನಂದ್, ಪಿಎಂ ಸೂರ್ಯಘರ್: ಮುಫ್ ಬಿಜ್ಲಿ ಯೋಜನೆ ಕುರಿತು ಉಡುಪಿ ಮೆಸ್ಕಾಂನ ಅಧೀಕ್ಷಕ ಅಭಿಯಂತರ ನರಸಿಂಹ, ಹಣಕಾಸು, ಸುರಕ್ಷತೆ ಮತ್ತು ಆರ್ಥಿಕ ಸಬಲೀಕರಣ ಕುರಿತು ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ಹರೀಶ್ ಜಿ. ಅವರು ಮಾಹಿತಿಗಳನ್ನು ಹಂಚಿಕೊಂಡರು.

ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಉಡುಪಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಮಂಜುನಾಥ ಬಿ., ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಜಿ.ಕುರ್ಯ ಅವರು ಉಪಸ್ಥಿತರಿದ್ದರು.

ಭಾರತ ವಾರ್ತಾ ಶಾಖೆಯ ಸಹಾಯಕ ನಿರ್ದೇಶಕ ಎಂ.ಮಧು ಪ್ರಾಸ್ತಾವಿಕ ಮಾತುಗಳನ್ನಾಡಿದರೆ, ನಿತೀಶ್ ಸ್ವಾಗತಿಸಿದರು.

ಕುತ್ತಾರು ಕೊರಗಜ್ಜನ ಆದಿಕ್ಷೇತ್ರದಲ್ಲಿ 'ಸೇವಾ ಕ್ಲಿನಿಕ್' ಉದ್ಘಾಟನೆ | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅಭಿಮತ

ಗ್ರಾಮೀಣ ಭಾಗಗಳಲ್ಲಿ ಆರೋಗ್ಯ ಸೇವಾ ಕೇಂದ್ರಗಳ ಪಾತ್ರ ಹಿರಿದು

ಉಳ್ಳಾಲ: ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವಾ ಕೇಂದ್ರಗಳ ಅಗತ್ಯತೆಯಿದ್ದು, ಸಮಾಜಮುಖಿ ಆರೋಗ್ಯ ಯೋಜನೆಗಳು ಸಾರ್ವಜನಿಕ ಆರೋಗ್ಯದ ಬೆಳವಣಿಗೆಗೆ ನೆರವಾಗುತ್ತವೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಹೆಚ್.ಆರ್ ತಿಮ್ಮಯ್ಯ ಅಭಿಪ್ರಾಯಪಟ್ಟರು.



ಕುತ್ತಾರಿನ ಗ್ರಾಮೀಣ ಭಾಗದ ಜನರು ಹಾಗೂ ಕೊರಗಜ್ಜನ ಆದಿ ಕ್ಷೇತ್ರಕ್ಕೆ ದೇಶದ ನಾನಾ ಕಡೆಗಳಿಂದ ಆಗಮಿಸುವ ಭಕ್ತಾದಿಗಳಿಗೆ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ದೇರಳಕಟ್ಟೆಯ ಜಸ್ಟೀಸ್ ಕೆ.ಎಸ್ ಹೆಗ್ಡೆ ಚಾರಿಟೇಬಲ್ ಆಸ್ಪತ್ರೆ, ನಿಟ್ಟೆ ಪರಿಗಣಿಸಲ್ಪಟ್ಟ ವಿಶ್ವವಿದ್ಯಾಲಯದ ಸಹಯೋಗ ಹಾಗೂ ಕುತ್ತಾರು ಶ್ರೀ ಪಂಜಂದಾಯ, ಬಂಟ, ವೈದ್ಯನಾಥ ಮತ್ತು ಆದಿ ಕೊರಗತನಿಯ ದೈವಸ್ಥಾನದ ಸಹಕಾರದಲ್ಲಿ ಕುತ್ತಾರಿನ ಸ್ವಾಮಿ ಕೊರಗಜ್ಜ ಆದಿ ಕ್ಷೇತ್ರದ ಪರಿಸರದಲ್ಲಿ ಸ್ಥಾಪಿಸಲಾದ 'ಆದಿಸ್ಥಳ ಕೊರಗಜ್ಜ ಸೇವಾ ಕ್ಲಿನಿಕ್' ಅನ್ನು ಮಂಗಳವಾರದಂದು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಕೆ.ಎಸ್.ಹೆಗ್ಡೆ ವೈದ್ಯಕೀಯ ಅಕಾಡೆಮಿಯ ಡೀನ್ ಡಾ.ಬಿ.ಸಂದೀಪ್ ರೈ ಮಾತನಾಡಿ, ಉನ್ನತ ಮಟ್ಟದ ವೈದ್ಯಕೀಯ ಸಂಸ್ಥೆಗಳು ಮತ್ತು ಗ್ರಾಮೀಣ ಸಮುದಾಯಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ಸೇತುವೆಯಾಗಿ ಈ ಕ್ಲಿನಿಕ್ ಕಾರ್ಯನಿರ್ವಹಿಸಲಿದೆ. ಸಂಜೆ 4 ರಿಂದ 6 ಗಂಟೆಯವರೆಗೆ ಕ್ಲಿನಿಕ್ ಕಾರ್ಯಾಚರಿಸಲಿದ್ದು, ವೈದ್ಯಕೀಯ ಚಿಕಿತ್ಸೆ ಜೊತೆಗೆ ಔಷಧಿಯನ್ನು ಉಚಿತವಾಗಿ ಒದಗಿಸಲಾಗುವುದು. ಈ ಕ್ಲಿನಿಕ್‌ನಿಂದ ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುವವರಿಗೆ ಶುಲ್ಕದಲ್ಲಿ ಇಪ್ಪತ್ತು ಶೇಕಡ ರಿಯಾಯಿತಿ ನೀಡಲಾಗುವುದೆಂದರು.

ಈ ಸಂದರ್ಭ ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪಕ್ಕಳ, ಜಸ್ಟಿಸ್ ಕೆ.ಎಸ್.ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಸುಮಲತಾ ಆರ್.ಶೆಟ್ಟಿ, ಸೇವಾ ಕ್ಲಿನಿಕ್‌ನಲ್ಲಿ ವೈದ್ಯರಾಗಿರುವ ಡಾ.ಪ್ರಕಾಶ್, ಉಪ ವೈದ್ಯಕೀಯ ಅಧೀಕ್ಷಕ ಡಾ.ಶಿರಾಲ್ ಹೆಗ್ಡೆ, ಡಾ.ಅನಿಲ್ ಸನಿಲ್, ಅರುಣ್ ಪೂಂಜ, ಸಾರ್ವಜನಿಕ ಸಂಪರ್ಕ ಅಧಿಕಾರಿ ಹೇಮಂತ್ ಶೆಟ್ಟಿ, ಶ್ರೀ ಪಂಜಂದಾಯ, ಬಂಟ, ವೈದ್ಯನಾಥ, ಆದಿ ಕೊರಗತನಿಯ ದೈವಸ್ಥಾನದ ಮಹಾಬಲ ಹೆಗ್ಡೆ, ವಿನೋದ್ ಶೆಟ್ಟಿ ಬೊಳ್ಯ, ಮುನ್ನೂರು ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಮಹಾಬಲ ಟಿ. ದೆಪ್ಪೆಲಿಮಾರ್, ದೈವ ನರ್ತಕರಾದ ಮಾಯಿಲ, ಸತೀಶ್ ಮಿತ್ತಗೆಲ, ಮೂಲ್ಯಣ್ಣರಾದ ಬಾಲಕೃಷ್ಣ ಮೂಲ್ಯ, ಪ್ರಮುಖರಾದ ಹರೀಶ್ ಭಂಡಾರಬೈಲ್, ಗಣೇಶ್ ಪೂಜಾರಿ, ಮೋನಪ್ಪ ಗೌಡ, ಲಕ್ಷ್ಮಣ್ ಗೌಡ ಹಾಗೂ ದೈವದ ಚಾಕರಿ ವರ್ಗದವರು ಉಪಸ್ಥಿತರಿದ್ದರು.

ನನಸಾಯಿತು ಅನುವಂಶಿಕ ಆಡಳಿತ ಮೊಕ್ತೇಸರರ ಕನಸು

ಕೊರಗಜ್ಜನ ಬಳಿ ಬರುವ ಭಕ್ತಾದಿಗಳಿಗೆ ಉಚಿತ ಆರೋಗ್ಯ ಸೇವೆ ದೊರಕಬೇಕು. ಅದೇ ರೀತಿ ಗ್ರಾಮಸ್ಥರಿಗೂ ಸಮಾನವಾಗಿ ಉಚಿತ ಚಿಕಿತ್ಸೆ ಸಿಗಬೇಕೆಂಬುದು ಪಂಜಂದಾಯ, ಬಂಟ, ವೈದ್ಯನಾಥ, ಆದಿ ಕೊರಗತನಿಯ ಕ್ಷೇತ್ರದ ಅನುವಂಶಿಕ ಆಡಳಿತ ಮೊಕ್ತೇಸರರಾದ ಬಿ. ಶ್ರೀಧರ ಶೆಟ್ಟಿ ಮಾಗಣತ್ತಡಿ ಅವರ ಕನಸಾಗಿತ್ತು. ಆ ಮಹತ್ತದ ಉದ್ದೇಶದಿಂದ ಕೆ.ಎಸ್. ಹೆಗ್ಡೆ ಆಸ್ಪತ್ರೆ ಆಡಳಿತದೊಂದಿಗೆ ನಿರಂತರವಾಗಿ ಒಂದು ವರ್ಷದ ಕಾಲ ಸಭೆ-ಸಂವಹನಗಳನ್ನು ನಡೆಸಿದ ಪರಿಣಾಮ ಕೊರಗಜ್ಜನ ಆದಿ ಕ್ಷೇತ್ರದಲ್ಲಿ ಇದೀಗ ಸೇವಾ ಕ್ಲಿನಿಕ್ ಆರಂಭಗೊಂಡಿದೆ.

ಕಿರುಸುದ್ದಿ

ಹುಬ್ಬಳ್ಳಿ: ಪೆವಿಲಿಯನ್‌ಗೆ ಸುನೀಲ್ ಜೋಶಿ ಹೆಸರು



ಹುಬ್ಬಳ್ಳಿ: ಇಲ್ಲಿಯ ರಾಜನಗರ ಕೆಎಸ್‌ಸಿಎ ಮೈದಾನದ ಪೆವಿಲಿಯನ್ ಬ್ಲಾಕ್‌ಗೆ ದಿಗ್ಗಜ ಕ್ರಿಕೆಟಿಗ, ಕೋಚ್ ಸುನೀಲ್ ಜೋಶಿ ಅವರ ಹೆಸರು ಮಂಗಳವಾರ ನಾಮಕರಣ ಮಾಡಲಾಯಿತು. ಈ ಸುಂದರ ಕ್ಷಣವನ್ನು ಕಂಡ ದಿಗ್ಗಜ ಕ್ರಿಕೆಟಿಗ ಸುನೀಲ್ ಜೋಶಿ ಅವರು ಭಾವುಕರಾಗಿ ಕೆಲಹೊತ್ತು ಮೂಕ ವಿಸ್ಮಿತರಾದರು. ಅವರ ಕಣ್ಣಿನಲ್ಲಿ ಆನಂದ ಹನಿಗಳು ತುಂಬಿ ಬಂದವು. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ಮಿಥುನ್ ಮನ್ಹಾಸ್, ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ ಪ್ರಸಾದ್, ಕಾರ್ಯದರ್ಶಿ ಸಂತೋಷ ಮೆನನ್, ಜಂಟಿ ಕಾರ್ಯದರ್ಶಿ ಬಿ.ಕೆ.ರವಿ., ಖಜಾಂಚಿ ಮಧುಕರ, ಉಪಾಧ್ಯಕ್ಷ ಸುಜೀತ ಸೋಮಸುಂದರ, ಕೆಎಸ್‌ಸಿಎ ಧಾರವಾಡ ವಲಯದ ನಿಮಂತ್ರಕ ವೀರಣ್ಣ ಸವಡಿ, ಜೋಶಿ ಅವರ ಪತ್ನಿ ಡಾ.ರವನೀತ ಜೋಶಿ ಸಮಾರಂಭದಲ್ಲಿ ಭಾಗವಹಿಸಿದ್ದರು. ಬಳಿಕ ಮಾತನಾಡಿದ ದಿಗ್ಗಜ ಆಟಗಾರ ಸುನೀಲ್ ಜೋಶಿ, ಇದು ನನಗೆ ಅವಿಸ್ಮರಣೀಯ ದಿನವಾಗಿದೆ. ನಾನು ಆಟವಾಡಿ, ನನನ್ನು ಈ ಮಟ್ಟಕ್ಕೆ ಬೆಳೆಸಿದ ಮೈದಾನ ಪೆವಿಲಿಯನ್ ಬಾಕ್ಸ್‌ಗೆ ನನ್ನ ಹೆಸರು ನಾಮಕರಣ ಮಾಡುತ್ತಿರುವುದು ಜೀವನದಲ್ಲಿ ಮರೆಯಲಾಗದು. ಬಿಸಿಸಿಐ, ಕೆಎಸ್‌ಸಿಎ ಹಾಗೂ ಧಾರವಾಡ ವಲಯಕ್ಕೆ ನಾನು ಧನ್ಯವಾದ ಅರ್ಪಿಸುತ್ತೇನೆ ಎಂದರು. ಜನ್ಮ ಪಡೆದ ಸ್ಥಳ ಗದಗ ಆದರೂ, ಕ್ರಿಕೆಟ್ ಲೋಕಕ್ಕೆ ಪರಿಚಯಿಸಿದ, ಭವಿಷ್ಯ ರೂಪಿಸಿದ ಊರು ಹುಬ್ಬಳ್ಳಿ. ಕರ್ನಾಟಕ ಹಾಗೂ ಭಾರತ ತಂಡದಲ್ಲಿ ಆಡುತ್ತೇನೆ ಎಂಬ ಕನಸ್ಸು ಸಹ ಕಂಡಿರಲಿಲ್ಲ. ಪಾಲಕರು, ಪತ್ನಿ, ಸಹೋದರ, ಸ್ನೇಹಿತರು, ಹಿತೈಷಿಗಳ ಸಹಕಾರದಿಂದ ಈ ಮಟ್ಟಕ್ಕೆ ಬೆಳೆದಿದ್ದೇನೆ ಎಂದು ಸಂತಸ ವ್ಯಕ್ತಪಡಿಸಿದರು.

ಟಿಟಿ: ಕ್ವಾರ್ಟರ್‌ಗೆ ಭಾರತ ಜೋಡಿ

ಹೊಸದಿಲ್ಲಿ: ಭಾರತದ ಅಗ್ರ ಶ್ರೇಯಾಂಕಿತ ಆಟಗಾರರಾದ ಮನುಶ್ ಶಾಹ್ ಮತ್ತು ಮಾನವ್ ಠಕ್ಕರ್ ತಮ್ಮ ವಿಶೇಷ ಪ್ರದರ್ಶನ ಮುಂದುವರಿಸಿ ಸಿಂಗಾಪೂರ ಸ್ಮ್ಯಾಷ್ ಟೇಬಲ್ ಟೆನಿಸ್ ಪಂದ್ಯಾವಳಿಯ ಕ್ವಾರ್ಟರ್ ಫೈನಲ್ ಪ್ರವೇಶ ಪಡೆದರು. ಸಿಂಗಲ್ಸ್ ವಿಭಾಗದಲ್ಲಿ ಭಾರತದ ಶಟ್ಲರ್‌ಗಳು ಹಿನ್ನಡೆ ಅನುಭವಿಸಿರುವ ನಂತರ ಡಬಲ್ಸ್ ವಿಭಾಗದತ್ತ ಎಲ್ಲರ ಚಿತ್ತ ಸಾಗಿದೆ.



ಮಂಗಳವಾರದಂದು ಆರನೇ ಸೀಡ್‌ನ ಬ್ರೆಜಿಲ್ ಮೂಲದ ಟಿಯೊಟೊನೊ ಹಾಗೂ ಲಿಯೋನಾರ್ಡೊ ಅವರನ್ನು ಎದುರಿಸಿದ್ದ ಭಾರತ ಜೋಡಿ 3-0(11-7, 11-5, 11-9)ರಿಂದ ಗೆದ್ದು ಮುನ್ನಡೆದರು. ಮುಂದಿನ ಸುತ್ತಿನಲ್ಲಿ ಈ ಜೋಡಿ, ಬೆಲ್ಜಿಯಂನ ಮಾರ್ಟಿನ್ ಮತ್ತು ಅಡಿರೀನ್ ಅವರನ್ನು ಎದುರಿಸಲಿದೆ. ಮಹಿಳೆಯರ ವಿಭಾಗದಲ್ಲಿ ದಿವ್ಯಾ ಚಿಟಲೆ ಮತ್ತು ಯಶಸ್ವಿನಿ ಗೋರ್ಪಡೆ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 0-3(9-11, 4-11, 5-11)ರಿಂದ ಸೋತರು.

ರಣಜಿ ಫೈನಲ್ ಪಂದ್ಯ | ಬೃಹತ್ ಮೊತ್ತದತ್ತ ಜಮ್ಮು, ಕಾಶ್ಮೀರ ತಂಡ | ಹಸನ್ 88, ಸಮದ್ 52 ರನ್

ಕರ್ನಾಟಕಕ್ಕೆ ಕಾಡಿದ ಪುಂಡಿರ್ ಶತಕ

▸ ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಇದೇ ಮೊದಲ ಬಾರಿಗೆ ರಣಜಿ ಟ್ರೋಫಿಯ ಅತ್ಯಂತ ನಿರ್ಣಾಯಕ ಹಂತಕ್ಕೆ ಪ್ರವೇಶಿಸಿರುವ ಜಮ್ಮು ಮತ್ತು ಕಾಶ್ಮೀರ ತಂಡದ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಇಲ್ಲಿ ಮಂಗಳವಾರ ಆರಂಭವಾದ ರಣಜಿ ಫೈನಲ್ ಪಂದ್ಯದ ಮೊದಲ ದಿನದಾಟದಲ್ಲಿ ಕರ್ನಾಟಕದ ಬೌಲರ್‌ಗಳ ಬೆವರಿಳಿಸಿ ಮೇಲುಗೈ ಸಾಧಿಸಿದರು. ದಿನವಿಡೀ ಕರ್ನಾಟಕ ಪಡೆಗೆ ಕಾಟ ನೀಡಿದ ಅವರು, ಮೊದಲ ದಿನವನ್ನು ತಮ್ಮ ತಂಡದ ಹೆಸರಿನಲ್ಲಿ ಬರೆದಿಟ್ಟರು.

ರಾಜನಗರದಲ್ಲಿರುವ ಕೆಎಸ್‌ಸಿಎ ಮೈದಾನದಲ್ಲಿ ಮಂಗಳವಾರ ನಡೆಯುತ್ತಿರುವ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡುತ್ತಿರುವ ಜಮ್ಮು-ಕಾಶ್ಮೀರ ತಂಡ ದಿನದಾಟದ ಅಂತ್ಯದಲ್ಲಿ 87 ಓವರ್‌ಗಳಲ್ಲಿ 2 ವಿಕೆಟ್‌ಗೆ 284 ರನ್ ಗಳಿಸಿ ಕರ್ನಾಟಕ ಮೇಲೆ ಮುನ್ನಡೆ ಸಾಧಿಸು ದಿಕ್ಕಿನತ್ತಿದೆ.

ಮುನ್ನಡೆ ಕಸಿದುಕೊಂಡ ಜಮ್ಮು: ಆರಂಭಿಕ ಖಮ್ರಾನ್ ಇಕ್ಬಾಲ್ ಕಾಶ್ಮೀರ ತಂಡವು ಕೇವಲ 18 ರನ್ ಗಳಿಸಿದಾಗ ವೇಗಿ ಪ್ರಸಿದ್ಧ ಕೃಷ್ಣ ಅವರ ಎಸೆತದಲ್ಲಿ ಎರಡನೇ ಸ್ಲಿಪ್‌ನಲ್ಲಿದ್ದ ಕೆ.ಎಲ್. ರಾಹುಲ್‌ಗೆ ಕ್ಯಾಚ್ ನೀಡಿ ಪೆವಿಲಿಯಿನ್‌ಗೆ ಮರಳಿದಾಗ ರಾಜ್ಯ ತಂಡ ದಿನದ ಗೌರವವನ್ನು ಪಡೆಯಬಹುದು ಎಂಬ ಲೆಕ್ಕಾಚಾರದಲ್ಲಿತ್ತು. 3ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಶುಭಂ ಸಿಂಗ್ ಪುಂಡಿರ್ (117ರನ್, 221 ಎಸೆತ, 12 ಬೌಂಡರಿ, 2 ಸಿಕ್ಸರ್) ಲೆಕ್ಕಾಚಾರವನ್ನು ಉಲ್ಟಾ ಮಾಡಿದರು.

ಆಕರ್ಷಕ ಶತಕ ಗಳಿಸಿದ ಅವರು ಆರಂಭಿಕ ಆಟಗಾರ ಯಾವರ್ ಹಸನ್ (88 ರನ್, 150 ಎಸೆತ, 13 ಬೌಂಡರಿ) ಅವರೊಂದಿಗೆ ಮೂರನೇ ವಿಕೆಟ್‌ಗೆ 139 ರನ್ ಗಳಿಸುವ ಮೂಲಕ ತಂಡಕ್ಕೆ ಭದ್ರ ಬುನಾದಿ ಹಾಕಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಲು ನಿರ್ಧರಿಸಿದ ನಾಯಕನ ನಿರ್ಧಾರ ಅತ್ಯಂತ ಸೂಕ್ತ ಎಂದು ತೋರಿಸಿಕೊಟ್ಟರು.



ಪುಂಡಿರ್ ಮಿಂಚಿನಾಟ

ಒಂದು, ಎರಡು ರನ್ ಗಳಿಸುತ್ತಲೇ ತಂಡದ ಮೊತ್ತವನ್ನು ಹೆಚ್ಚಿಸುತ್ತ ಸಾಗಿದ ಪುಂಡಿರ್, ಅವಕಾಶ ಸಿಕ್ಕಾಗಲೆಲ್ಲ ರಾಜ್ಯದ ಬೌಲರ್‌ಗಳ ಎಸೆತಗಳನ್ನು ಬೌಂಡರಿಯಿಂದ ಆಚೆ ಕಳಿಸಿದರು. ಇವರಿಗೆ ಯಾವರ್ ಹಸನ್ ಸಾಥ್ ನೀಡಿದರು. ಲೇಗ್ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಎಸೆದ 26ನೇ ಓವರ್‌ನಲ್ಲಿ ಒಂದು ರನ್ ಪಡೆಯುವ ಮೂಲಕ ಯಾವರ್ ಹಸನ್ ಅರ್ಧಶತಕ ಪೂರೈಸಿದರು. ಇದಕ್ಕಾಗಿ ಅವರು ಎದುರಿಸಿದ್ದು 77 ಎಸೆತ. ಇನ್ನೊಂದೆಡೆ ನಿಧಾನಗತಿಯಲ್ಲಿ ಬ್ಯಾಟ್ ಮಾಡಿದ ಪುಂಡಿರ್, ವಿದ್ಯಾಧರ ಪಾಟೀಲ್ ಎಸೆದ 44ನೇ ಓವರ್‌ನಲ್ಲಿ ಬೌಂಡರಿ ಹೊಡೆದು ಅರ್ಧ ಶತಕ ಪೂರೈಸಿ ದೊಡ್ಡ ಇನ್ನಿಂಗ್ಸ್ ಕಟ್ಟುವ ಸಂದೇಶ ನೀಡಿದ್ದರು. ಕ್ರೀಸ್‌ಗೆ ಅಂಟಿಕೊಂಡಿದ್ದ ಪುಂಡಿರ್ ಅವರನ್ನು ಶಿಖರ್ ಶೆಟ್ಟಿ ಎಸೆತದಲ್ಲಿ ಸ್ಟಂಪಿಂಗ್ ಮೂಲಕ ಪೆವಿಲಿಯನ್‌ಗೆ ಕಳುಹಿಸುವ ಉತ್ತಮ ಅವಕಾಶವನ್ನು ವಿಕೆಟ್ ಕೀಪರ್ ಕೃತಿಕ್ ಕೃಷ್ಣ ಕೈಚೆಲ್ಲಿದರು. ಇದರ ಸಂಪೂರ್ಣ ಲಾಭ ಪಡೆದ ಪುಂಡಿರ್ ಶತಕ ಪೂರೈಸಿ ಅಜೇಯರಾಗಿ ಉಳಿದರು.

ಸಂಕ್ಷಿಪ್ತ ಸ್ಕೋರ್

ಜಮ್ಮು ಕಾಶ್ಮೀರ: 284/7(87 ಓವರ್)
ಶುಭಂ ಸಿಂಗ್ ಪುಂಡಿರ್ (117 ರನ್ 221 ಎಸೆತ, ಬೌಂಡರಿ 12, ಸಿಕ್ಸ್ 2)
ಯಾವರ್ ಹಸನ (88ರನ್, 150 ಎಸೆತ, 13 ಬೌಂಡರಿ) ಅಬ್ದುಲ್ ಸಮದ್ (52 ರನ್, 67 ಎಸೆತ, 5 ಬೌಂಡರಿ, 1 ಸಿಕ್ಸ್)
ಬೌಲಿಂಗ್:
ಪ್ರಸಿದ್ಧ ಕೃಷ್ಣ16 ಓವರ್, 36 ರನ್ 2 ವಿಕೆಟ್

ಎರಡನೇ ವಿಕೆಟ್ ಜೊತೆಯಾಟ ನೂರರ ಗಡಿ ದಾಟಿದ ಮೇಲೆ ಹಸನ್ ವಿಕೆಟ್ ಒಪ್ಪಿಸಿದರು. ಇದರೊಂದಿಗೆ 139 ರನ್‌ಗಳ ಮತ್ತೊಂದು ದೊಡ್ಡ ಜೊತೆಯಾಟ ಮುರಿದು ಬಿತ್ತು.

ಲೀಲಾಜಾಲವಾಗಿ ಬ್ಯಾಟ್ ಬೀಸಿದ ಶುಭಂ ಸಿಂಗ್ ಪುಂಡಿರ್ ಆಗಾಗ ಡೀಪ್ ಮಿಂಡ್ ವಿಕೆಟ್, ಕವರ್ಸ್, ಲಾಂಗ್ ಆನ್, ಲಾಂಗ್ ಆಫ್ ಗಳತ್ತ ಆಕರ್ಷಕ ಬೌಂಡರಿ ಹೊಡೆದರು. ಶಿಖರ್ ಶೆಟ್ಟಿ ಎಸೆತದಲ್ಲಿ ಡೀಪ್ ಮಿಡ್ ವಿಕೆಟ್ ಮೇಲೆ ಸಿಕ್ಸ್ ಬಾರಿಸುವ ಮೂಲಕ ಶತಕ ಗಳಿಸಿ ಮಿಂಚಿದ ಇವರು ನಾಯಕ ಪಾರಸ್ ಡೋಗ್ರಾ ವೈಶಾಕ್ ವಿಜಯಕುಮಾರ ಅವರ ಎಸೆತದಲ್ಲಿ ಬೆರಳಿಗೆ ಆದ ಗಾಯದಿಂದ ರಿಟೈರ್ಡ್ ಹರ್ಟ್ ಆಗಿದ್ದರಿಂದ ಕ್ರೀಸ್‌ಗೆ ಬಂದ ಅಬ್ದುಲ್ ಸಮದ್ (52 ರನ್, 67 ಎಸೆತ, 5 ಬೌಂಡರಿ, 1 ಸಿಕ್ಸ್) ಜೊತೆ 105 ರನ್‌ಗಳ ಜೊತೆಯಾಟದಲ್ಲಿ ಪಾಲ್ಗೊಂಡಿದ್ದಾರೆ.

ಕಾಶ್ಮೀರದ ಶುಭಂ ಖಜೂರಿಯಾ ಹಾಗೂ ವಂಶಜ್ ಶರ್ಮಾ ಗಾಯಗೊಂಡಿದ್ದರಿಂದ ಅವರ ಬದಲಿಗೆ ಖಮ್ರಾನ್ ಇಕ್ಬಾಲ್ ಹಾಗೂ ಸಾಹಿಲ್ ಲೋತ್ರಾ ಹನ್ನೊಂದರ ಬಳಗದಲ್ಲಿ ಸ್ಥಾನ ಪಡೆದಿದ್ದಾರೆ. ಕರ್ನಾಟಕ ಸೆಮಿ ಫೈನಲ್ ಆಡಿದ್ದ ತಂಡವನ್ನೇ ಫೈನಲ್‌ನಲ್ಲೂ ಮುಂದುವರಿಸಿದೆ.

ಟಿ20 ಗೆದ್ದ ಭಾರತಕ್ಕೆ ಭಾರೀ ಆಘಾತ | ಮಂಧಾನ ಹೋರಾಟ ವ್ಯರ್ಥ

ಮೊದಲ ಏಕದಿನ: ಆಸೀಸ್‌ಗೆ ಗೆಲುವು

ಬ್ರಿಸ್ಬೇನ್(ಆಸ್ಟ್ರೇಲಿಯಾ): 10 ವರ್ಷಗಳ ಬಳಿಕ ಆಸ್ಟ್ರೇಲಿಯಾ ಮಣ್ಣಿನಲ್ಲಿ ಟಿ20 ಸರಣಿ ಗೆದ್ದ ದಾಖಲೆ ಮಾಡಿದ್ದ ಭಾರತ ಮಹಿಳೆಯರ ತಂಡ ಮೂರು ದಿನಗಳ ಬಳಿಕ ಆಘಾತ ಎದುರಿಸಿದೆ. ಮಂಗಳವಾರವಷ್ಟೇ ಆರಂಭವಾಗಿರುವ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಪರಾಭವಗೊಂಡಿದೆ.

3 ಟಿ20 3 ಏಕದಿನ ಮತ್ತು 1 ಟೆಸ್ಟ್ ಪಂದ್ಯಕ್ಕಾಗಿ ಆಸ್ಟ್ರೇಲಿಯಾ ಪ್ರವಾಸದಲ್ಲಿರುವ ಭಾರತ ತಂಡವು ಟಿ20 ಸರಣಿಯಲ್ಲಿ ಭರ್ಜರಿ ಗೆಲುವು ಸಾಧಿಸಿತ್ತು. ಈ ಬೆನ್ನಲ್ಲೇ ಮಂಗಳವಾರದಂದು ನಡೆದ ಮೊದಲ ಏಕದಿನ ಪಂದ್ಯದಲ್ಲಿ 6 ವಿಕೆಟ್‌ಗಳ ಸೋಲನುಭವಿಸಿದೆ.

ಬೌಲರ್‌ಗಳು ಮತ್ತು ಬ್ಯಾಟಿಗರು ಸಮಾನ ಪ್ರದರ್ಶನ ನೀಡಿದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 48.3 ಓವರ್ ಗಳಲ್ಲಿ 214 ರನ್ ಗಳಿಸಿ ಪತನಗೊಂಡಿತು. ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 38.2 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 217 ರನ್ ಗಳಿಸಿ ಗೆದ್ದಿತು.

ಬೆಥ್ ಮೂನಿ 76 ರನ್ ಗಳಿಸಿ ಪಂದ್ಯದ ಬೆಸ್ಟ್ ಬ್ಯಾಟರ್ ಎನಿಸಿದರು. ಭಾರತದಲ್ಲಿ ಇಬ್ಬರು ಮತ್ತು ಆಸ್ಟ್ರೇಲಿಯಾದಲ್ಲಿ ಒಬ್ಬರು ಸೇರಿದಂತೆ ಒಟ್ಟು ನಾಲ್ವರು ಅರ್ಧಶತಕ ಬಾರಿಸಿದರು. 3 ವಿಕೆಟ್ ಕಿತ್ತ ಗಾರ್ಡನರ್ ಬೆಸ್ಟ್ ಬೌಲರ್ ಎನಿಸಿದರು. ಮುಂದಿನ ಪಂದ್ಯ ಶುಕ್ರವಾರದಂದು ನಡೆಯಲಿದೆ.



ಸಂಕ್ಷಿಪ್ತ ಸ್ಕೋರ್

ಭಾರತ 48.3 ಓವರ್‌ಗಳಲ್ಲಿ 214/10: ಮಂಧಾನ 58, ಕೌರ್ 53; ಗಾರ್ಡನರ್ 33/3
ಆಸ್ಟ್ರೇಲಿಯಾ 38.2 ಓವರ್ ಗಳಲ್ಲಿ 217/4: ಮೂನಿ 76, ಹೀಲಿ; ಚಾರಣಿ 41/2

ಮಂಧಾನ ಹೋರಾಟ ವ್ಯರ್ಥ: ಮೊದಲು ಬ್ಯಾಟಿಂಗ್ ಮಾಡಿದ ಭಾರತಕ್ಕೆ ಮತ್ತೊಮ್ಮೆ ಮಂಧಾನ ಆಸರೆಯಾದರು. ಕೊನೆಯ ಟಿ20 ಪಂದ್ಯವನ್ನು ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರು, 68 ಬಾಲ್‌ಗಳಲ್ಲಿ 58 ರನ್ ಗಳಿಸಿದರು. ಕೌರ್ 53 ರನ್ ಗಳಸಿದರು. ಕಾಶ್ವೀ ಗೌತಮ್ ಕೊನೆಯಲ್ಲಿ 43 ರನ್ ಗಳಿಸಿದರು. ಆಸ್ಟ್ರೇಲಿಯಾ ಪರ ಗಾರ್ಡನರ್ 3, ಮೆಗನ್ ಶಟ್ 2 ವಿಕೆಟ್ ಪಡೆದರು.

ಮೂನಿಯದ್ದೇ ಆಟ: ಗುರಿ ಬೆನ್ನತ್ತುವಾಗ ಆಸ್ಟ್ರೇಲಿಯಾ ಯಾವುದೇ ಹಿನ್ನಡೆ ಅನುಭವಿಸಲಿಲ್ಲ. ಭಾರತವಿಟ್ಟ ಗುರಿ ಪೇರಿಸುವಾಗ ಆರಂಭಿಕ ಆಟಗಾರ್ತಿ ಹೀಲಿ ಮೊದಲಿನಿಂದಲೂ ತಮ್ಮ ಅತ್ಯುನ್ನತ ಬ್ಯಾಟಿಂಗ್ ಪ್ರದರ್ಶನದೊಂದಿಗೆ ಮಿಂಚಿದರು. 32 ರನ್ ಗಳಿಸಿ ಲಿಚ್‌ಫೀಲ್ಡ್ ವಿಕೆಟ್ ಒಪ್ಪಿಸಿದರು. ವಾಲ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಬಂದ ಬೆಥ್ ಮೂನಿ ವಿಸ್ಫೋಟಕ ಬ್ಯಾಟಿಂಗ್ ಮಾಡಿದರು. ಗುರಿ ಬೆನ್ನತ್ತುವಾಗ ತಂಡವನ್ನು ಮುನ್ನಡೆಸಿದ ಅವರು, ಗೆಲ್ಲಿಸುವ ಜವಾಬ್ದಾರಿ ಹೊತ್ತಿಕೊಂಡರು. ಕ್ರಮೇಣವಾಗಿ ಬೌಂಡರಿಗಳನ್ನು ಬಾರಿಸುತ್ತಾ ಭಾರತದಿಂದ ಪಂದ್ಯ ಕಸಿದುಕೊಂಡರು. ಅನಾಬೆಲ್ ಸುದರ್ ಲೆಂಡ್ ಅಜೇಯ 48 ರನ್‌ಗಳಿಸಿದರು. ಮೂನಿ 76 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಭಾರತದಿಂದ ಪಂದ್ಯ ಹೋಯಿತು, ಆಸ್ಟ್ರೇಲಿಯಾ ಮೊದಲ ಪಂದ್ಯದಲ್ಲಿ ಗೆದ್ದು ಮುನ್ನಡೆ ಸಾಧಿಸಿತು.

ಮಹಿಳೆಯರ ಟಿ20 ವಿಶ್ವಕಪ್ ವೇಳಾಪಟ್ಟಿ ಪ್ರಕಟ

ಜೂ.14ಕ್ಕೆ ಭಾರತ Vs ಪಾಕ್

ಹೊಸದಿಲ್ಲಿ: ಜೂನ್ 14ರಂದು ಭಾರತ ಮತ್ತು ಪಾಕಿಸ್ತಾನ ತಂಡಗಳು ಮತ್ತೊಂದು ವಿಶ್ವಕಪ್ ನಲ್ಲಿ ಮುಖಾಮುಖಿಯಾಗಲಿವೆ. ಪುರುಷರ ವಿಶ್ವಕಪ್ ಮುಕ್ತಾಯವಾದ ನಂತರ ಐಪಿಎಲ್ ಆರಂಭವಾಗಲಿದೆ. ನಂತರ ಮಹಿಳೆಯರ ಟಿ20 ವಿಶ್ವಕಪ್ ಆರಂಭವಾಗಲಿದೆ. ಕ್ರಿಕೆಟ್ ಪ್ರಿಯರಿಗೆ ಮನರಂಜನೆಯ ರಸದೌತಣ, ಪ್ರಸಾರ ಅಧಿಕಾರ ಹೊಂದಿರುವ ಚಾನಲ್‌ಗಳಿಗೆ ಸಕ್ಕತ್ ಟಿಆರ್‌ಪಿ ಸಿಗಲಿದೆ.



ಪುರುಷರ ವಿಶ್ವ ಕಪ್‌ನ ಸೂಪರ್ -8ರ ಪಂದ್ಯಗಳು ನಡೆಯುತ್ತಿರುವ ಮಧ್ಯೆ ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ವೇಳಾಪಟ್ಟಿ ಪ್ರಕಟಿಸಿರುವ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ಹೊಸದೊಂದು ಹುರುಪು ನೀಡಿದೆ. ಇಂಗ್ಲೆಂಡಿನಲ್ಲಿ ನಡೆಯಲಿರುವ ಈ ಕೂಟದ ಮೊದಲ ಪಂದ್ಯ ಶ್ರೀಲಂಕಾ ಹಾಗೂ ಇಂಗ್ಲೆಂಡ್ ನಡುವೆ ನಡೆಯಲಿದೆ. ಜೂನ್ 12ಕ್ಕೆ ಪಂದ್ಯಾಟ ಶುರುವಾಗಲಿದೆ. ಇದೇ ಮೊದಲ ಬಾರಿಗೆ ಅರ್ಹತೆ ಪಡೆದಿರುವ ನೆದರ್ಲೆಂಡ್ಸ್ ತಂಡವು ಭಾರತ ಹಾಗೂ ಆಸ್ಟ್ರೇಲಿಯಾ ತಂಡದೊಂದಿಗೆ ಮೊದಲನೇ ಗುಂಪಿನಲ್ಲಿ ಅವಕಾಶ ಪಡೆದಿದೆ.

ಮೊದಲನೇ ಗುಂಪಿನಲ್ಲಿ ಭಾರತ: ಆಸ್ಟ್ರೇಲಿಯಾ ಮತ್ತು ಪಾಕಿಸ್ತಾನ ತಂಡಗಳು ಭಾರತಕ್ಕೆ ಗುಂಪು ಹಂತದ ಪಂದ್ಯದಲ್ಲೇ ಮುಖಾಮುಖಿಯಾಗಲಿವೆ. ಮೊದಲನೇ ಗುಂಪಿನಲ್ಲೇ ಹರ್ಮನ್‌ಪ್ರೀತ್ ಕೌರ್ ಪಡೆ ಸ್ಥಾನ ಪಡೆದಿದೆ. ಮೊದಲ ಬಾರಿಗೆ ಟಿ20 ವಿಶ್ವಕಪ್ ಆಡುತ್ತಿರುವ ನೆದರ್ಲೆಂಡ್ಸ್ ಮಹಿಳೆಯರ ತಂಡ ಕೂಡ ಮೊದಲನೇ ಗುಂಪಿನಲ್ಲೇ ಇದೆ. ಎರಡನೇ ಗುಂಪಿನಲ್ಲಿ ದ.ಆಫ್ರಿಕಾ, ನ್ಯೂಜಿಲೆಂಡ್ ತಂಡಗಳಿವೆ.

ಜುಲೈ-5ಕ್ಕೆ ಫೈನಲ್: ವಿಶ್ವಕಪ್ ಪಂದ್ಯಾವಳಿಯಲ್ಲಿ ಒಟ್ಟು 12 ತಂಡಗಳಿವೆ. ಇದೇ ಮೊದಲ ಬಾರಿಗೆ ತಂಡದ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. 33 ಪಂದ್ಯಗಳು ನಡೆಯಲಿವೆ. 12 ತಂಡಗಳನ್ನು 6ರಂತೆ ಎರಡು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ನಾಲ್ಕು ತಂಡಗಳು ನೇರವಾಗಿ ಸೆಮಿಫೈನಲ್‌ಗೇರಲಿವೆ. ಜೂನ್-5ಕ್ಕೆ ಫೈನಲ್ ಪಂದ್ಯ ನಡೆಯಲಿವೆ.

ಭಾರತದ ಪಂದ್ಯಗಳು

ದಿನಾಂಕ	ಎದುರಾಳಿ	ಸ್ಥಳ
ಜೂನ್ 14	ಪಾಕಿಸ್ತಾನ	ಎಜ್‌ಬಾಸ್ಟನ್
ಜೂನ್ 17	ನೆದಲೆಂಡ್ಸ್	ಹೆಡ್ಡಿಂಗ್ಲೆ
ಜೂನ್ 21	ದ.ಆಫ್ರಿಕಾ	ಟ್ರಾಫರ್ಡ್
ಜೂನ್ 25	ಬಾಂಗ್ಲಾದೇಶ	ಟ್ರಾಫರ್ಡ್
ಜೂನ್ 28	ಆಸ್ಟ್ರೇಲಿಯಾ	ಲಾರ್ಡ್ಸ್

ಗುಂಪುಗಳು

- 1: ಆಸ್ಟ್ರೇಲಿಯಾ, ದ.ಆಫ್ರಿಕಾ, ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ನೆದರ್ಲೆಂಡ್ಸ್
- 2: ವೆಸ್ಟ್ ಇಂಡೀಸ್, ಇಂಗ್ಲೆಂಡ್, ನ್ಯೂಜಿಲೆಂಡ್, ಶ್ರೀಲಂಕಾ, ಐರ್ಲೆಂಡ್, ಸ್ಕಾಟ್ಲೆಂಡ್

ಬ್ರೂಕ್ ಅಬ್ಬರ, ಸೆಮಿಗೆ ಇಂಗ್ಲೆಂಡ್

ಪಲ್ಲೆಕೆಲೆ: ಇಂಗ್ಲೆಂಡ್ ತಂಡದ ನಾಯಕ ಹ್ಯಾರಿ ಬ್ರೂಕ್ ಸೂಪರ್-8ರ ಪಂದ್ಯದಲ್ಲಿ ಪಾಕಿಸ್ತಾನದ ವಿರುದ್ಧ ಪಟ್ಟ ಶತಕದ ಹರಸಾಹಸದ ನೆರವಿನಿಂದ ಇಂಗ್ಲೆಂಡ್ ಸೆಮಿಗೆ ತಲುಪಿತು. ಪಾಕಿಸ್ತಾನ ಸೆಮಿ ಹಾದಿ ತೀರಾ ಕಠಿಣವಾಯಿತು.

ಆರಂಭಿಕ ಶಹಬಾಜ್ ಫರ್ಹಾನ್ ಅವರ ಉತ್ತಮ ಬ್ಯಾಟಿಂಗ್‌ಗೆ ಮಧ್ಯಮ ಕ್ರಮಾಂಕದಲ್ಲಿ ಸಾಥ್ ಸಿಕ್ಕ ನಂತರ ಪಾಕಿಸ್ತಾನ 165ರ ಸ್ಪರ್ಧಾತ್ಮಕ ಗುರಿ ನೀಡಲು ಶಕ್ಯವಾಯಿತು. ಗುರಿ ಬೆನ್ನತ್ತಿದ ಇಂಗ್ಲೆಂಡ್ ವಿಕೆಟ್ ಗಳನ್ನು ಬೇಗನೇ ಕಳೆದುಕೊಂಡರೂ ಬ್ರೂಕ್ ಅವರ ಬಿಟ್ಟುಕೊಡದ ಮನಸ್ಥಿತಿ ಆಂಗ್ಲರಿಗೆ 3 ವಿಕೆಟ್‌ಗಳ ಭರ್ಜರಿ ಜಯ ತಂದುಕೊಟ್ಟಿತು.



ಬೌಲರ್‌ಗಳು ಮತ್ತು ಬ್ಯಾಟಿಗರು ಸಮಾನ ಪಾರಮ್ಯ ಸಾಧಿಸಿದ ಪಂದ್ಯದಲ್ಲಿ ಪಾಕಿಸ್ತಾನ ಬ್ಯಾಟಿಂಗ್‌ಗಿಳಿಯುವ ನಿರ್ಧಾರ ಮಾಡಿತು. ಕುಸಿತ, ಚೇತರಿಕೆ ಮತ್ತು ವಿವಿಧ ತಿರುವುಗಳನ್ನು ಕಂಡ ನಂತರ 19.1 ಓವರ್‌ಗಳಲ್ಲಿ 164 ರನ್ ಗಳಿಸಿತು. ಇಂಗ್ಲೆಂಡ್ ಬ್ರೂಕ್ ಶತಕದ ಆಟದಿಂದ 20 ಓವರ್ ಗಳಲ್ಲಿ 8 ವಿಕೆಟ್ ಕಳೆದುಕೊಂಡು ಗುರಿ ಪೇರಿಸಿತು.

ಬ್ರೂಕ್ ಪರಾಕ್ರಮ: ಗುರಿ ಬೆನ್ನತ್ತಿದ ಇಂಗ್ಲೆಂಡ್ ಆರಂಭ ಸೊಗಸಾಗಿರಲಿಲ್ಲ. ಸಾಲ್ಟ್ ಶೂನ್ಯ ಸುತ್ತಿದರು, ಬಟ್ಲರ್ 2 ರನ್‌ಗೆ ವಿಕೆಟ್ ಒಪ್ಪಿಸಿದರು. ಬ್ಯಾಥೆಲ್ ಮತ್ತು ಬ್ಯಾಟನ್‌ನಿಂದ ಹೇಳಿಕೊಳ್ಳುವ ಇನ್ನಿಂಗ್ಸ್ ಬರಲಿಲ್ಲ. ವಿಕೆಟ್ ಕಡಿತಗೊಂಡಂತೆ ಅತ್ತ ಬೇಕಾದ ರನ್‌ರೇಟ್ ಹೆಚ್ಚುತ್ತಿತ್ತು. ಈ ವೇಳೆ ಗೆಲ್ಲಿಸುವ ಜವಾಬ್ದಾರಿ ಮೈಗೆತ್ತಿಕೊಂಡ ಬ್ರೂಕ್ ನಾಯಕನಂತೆ ಮುಂದೆ ನಿಂತು ಗೆಲ್ಲಿಸಿದರು. ಅವರಿಗೆ ಜ್ಯಾಕ್ಸ್ ಸಾಥ್ ಕೂಡ ಸಿಕ್ಕಿತು. ಒಟ್ಟು 51 ಬಾಲ್ ಎದುರಿಸಿದ ಬ್ರೂಕ್ 100 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಜ್ಯಾಕ್ಸ್ 28 ರನ್‌ಗಳಿಸಿದರು. ಕೊನೆಯಲ್ಲಿ ಪಾಕಿಸ್ತಾನ ವಿಕೆಟ್‌ಗಳನ್ನು ಕಿತ್ತಿ ಗೆಲುವಿನತ್ತ ಸಾಗಿದರೂ ಗೆಲ್ಲಲಾಗಲಿಲ್ಲ.

ಫರ್ಹಾನ್ ಆಸರೆ: ನಿಸ್ಸಂಶಯವಾಗಿ ಪಾಕಿಸ್ತಾನಕ್ಕೆ ಫರ್ಹಾನ್ ಆಸರೆ ಸಿಕ್ಕರೂ ಆಯೂಬ್ ಹಾಗೂ ಆಘಾ ಬೇಗನೇ ವಿಕೆಟ್ ಒಪ್ಪಿಸಿದರು. ತೀರಾ ಹಿನ್ನಡೆಯಿಂದ ಬಳಲುತ್ತಿದ್ದ ಪಾಕಿಸ್ತಾನಕ್ಕೆ ಫರ್ಹಾನ್ ಆಸರೆಯಾದಾಗ ಅವರಿಗೆ ಬಾಬರ್ ಆಜಂ 25 ರನ್‌ಗಳ ತಮ್ಮ ನಿಧಾನಗತಿಯ ಸಾಮಾನ್ಯವಾಗಿ ಆಡುವ ಬ್ಯಾಟಿಂಗ್ ಅನ್ನೇ ಮತ್ತೊಮ್ಮೆ ಪ್ರದರ್ಶಿಸಿ ಪೆವಿಲಿಯನ್ ಹೊರಟರು. ಇದೇ ಮೊದಲ ಬಾರಿಗೆ ಕಣಕ್ಕಿಳಿದ ಫಕರ್ ಜಮಾನ್ 2 ಬೌಂಡರಿ/ ಸಿಕ್ಸರ್‌ಗಳನ್ನು ಬಾರಿಸಿ 25 ರನ್ ಗಳಿಸಿ ಮಿಂಚುತ್ತಿದ್ದಂತೆ ಸ್ಪಿನ್ನರ್ ಆದೀಲ್ ರಶೀದ್ ಖೆಡ್ಡಾ ತೋಡಿಬಿಟ್ಟರು. ಮುಂದಿನ ಬ್ಯಾಟರ್‌ಗಳು ಹೆಚ್ಚಿನ ಕೊಡುಗೆ ನೀಡಲೇ ಇಲ್ಲ.

ಇಂದಿನ ಪಂದ್ಯ

ನ್ಯೂಜಿಲೆಂಡ್ Vs ಶ್ರೀಲಂಕಾ
ಸಂಜೆ 7 (ಕೊಲಂಬೋ)

ಸೂಪರ್-8 ಅಂಕಪಟ್ಟಿ

ಗುಂಪು 1

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ವಿಂಡೀಸ್	0	0	0	0	2	+5.350
ದ.ಆಫ್ರಿಕಾ	1	1	0	0	2	+3.80
ಭಾರತ	1	0	1	0	0	-3.80
ಜಿಂಬಾಬ್ವೆ	0	0	0	0	0	-5.350

ಗುಂಪು 2

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಇಂಗ್ಲೆಂಡ್ (Q)	2	2	0	0	4	+1.491
ಕಿವೀಸ್	1	0	0	1	1	0.00
ಪಾಕಿಸ್ತಾನ	2	0	1	1	1	-0.461
ಶ್ರೀಲಂಕಾ	1	0	1	0	0	-2.55

ಲಖನೌ ತಂಡದ ಲೋಗೊ ಬಿಡುಗಡೆ

ಲಖನೌ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಆರಂಭಕ್ಕೂ ಮುನ್ನ ಫ್ರಾಂಚೈಸಿ ಲಖನೌ ಸೂಪರ್ ಜೈಂಟ್ಸ್ ತನ್ನ ತಂಡದ ಲೋಗೊ ಬದಲಾಯಿಸಿಕೊಂಡಿದೆ. ವಿಶ್ವಕಪ್ ಪಂದ್ಯಾವಳಿಯ ನಂತರ ಕೂಟ ನಡೆಯಲಿದೆ. ವೇಳಾಪಟ್ಟಿ ಪ್ರಕಟವಾಗಬೇಕಿದೆ. ಈ ನಡುವೆ ರಿಷಭ್ ಪಂತ್ ನೇತೃತ್ವದಲ್ಲಿ ಆಡುವ ಲಖನೌ ಸೂಪರ್ ಜೈಂಟ್ಸ್ ತಂಡವು ಮಂಗಳವಾರದಂದು ತನ್ನ ವಿಭಿನ್ನ ಹೊಸ ಲೋಗೊ ಅನಾವರಣಗೊಳಿಸಿತು.

ನೀಲಿ ಬಣ್ಣದ ಬ್ಯಾಕ್‌ಗ್ರೌಂಡ್‌ನಲ್ಲಿ ಬ್ಯಾಟ್ ಮತ್ತು ಗರುಡಿನ ಚಿತ್ರವಿದ್ದ ಲಖನೌ ಲೋಗೊ ಈಗ ಕೆಂಪು ಬಣ್ಣದ್ದಾಗಿದೆ. ಅದರ ನಡುವೆ ಆನೆ, ಗರುಡ ಮತ್ತು ಕಿರೀಟ ಇಡಲಾಗಿದೆ. ಈ ಬಗ್ಗೆ ಪತ್ರಿಕಾ ಪ್ರಕಟಣೆ ಬಿಡುಗಡೆಗೊಳಿಸಿರುವ ಎಲ್‌ಎಸ್‌ಜಿ, ನೂತನ ಲಾಂಛನ ನಮ್ಮ ಸಿಟಿ, ರಾಜ್ಯ ಮತ್ತು ನಮ್ಮೊಂದಿಗೆ ಸದಾ ನಿಲ್ಲುವ ಲಖನೌ ಅಭಿಮಾನಿಗಳನ್ನು ಪ್ರತಿಬಿಂಬಿಸುತ್ತದೆ. ಗರುಡ, ಆನೆ ಮತ್ತು ಕಿರೀಟ ನಮ್ಮ ರಾಜ್ಯದ ಇತಿಹಾಸ ಹೇಳುತ್ತದೆ ಎಂದಿದೆ.



ಪ್ರಾಗ್ ಅಂ.ರಾ. ಚೆಸ್‌ನಲ್ಲಿ ಗುಕೇಶ್ ಭಾಗಿ

ಹೊಸದಿಲ್ಲಿ: ವಿಶ್ವಕಪ್‌ನಲ್ಲಿ ನಿರಾಶೆಯ ನಿರ್ಗಮನ ಮತ್ತು ಟಾಟಾ ಸ್ಟೀಲ್ ಮಾಸ್ಟರ್ಸ್ ಪಂದ್ಯಾವಳಿಯಲ್ಲಿ ಸಾಧಾರಣ ಪ್ರದರ್ಶನದ ನಂತರ, ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರು, ಇದೀಗ ಪ್ರಾಗ್ ಅಂತಾರಾಷ್ಟ್ರೀಯ ಚೆಸ್ ಫೆಸ್ಟಿವಲ್‌ನಲ್ಲಿ ಭಾರತದ ಸವಾಲಿಗೆ ಮುನ್ನಡೆ ನೀಡಲು ಸಜ್ಜಾಗಿದ್ದಾರೆ. ಬುಧವಾರದಿಂದ ಆರಂಭವಾಗಲಿರುವ ಈ ಟೂರ್ನಿಯಲ್ಲಿ ಗುಕೇಶ್ ಪುನರಾಮನದ ನಿರೀಕ್ಷೆಯಲ್ಲಿದ್ದಾರೆ.

ಯುವ ಪ್ರತಿಭೆಗಳಿದ್ದ ಬಲಿಷ್ಠ ಮಾಸ್ಟರ್ಸ್' ವಿಭಾಗದಲ್ಲಿ ದ್ವಿತೀಯ ಸೀಡ್ ಆಗಿರುವ ಗುಕೇಶ್ ಅವರಿಗೆ ಕಠಿಣ ಸವಾಲು ಎದುರಾಗಲಿದೆ. ಅಗ್ರ ಸೀಡ್ ಜರ್ಮನಿಯ ವಿನ್ಸೆಂಟ್ ಕೀಮರ್ ಹಾಗೂ ಉಜ್ಬೇಕಿಸ್ತಾನದ ನೋಡಿರ್‌ಬೇಕ್ ಅಬ್ದುಸತ್ತೋರೋವ್ ಅವರನ್ನು ಎದುರಿಸಲಿದ್ದಾರೆ.


ಲೈವ್ ರೇಟಿಂಗ್ ಪಟ್ಟಿಯಲ್ಲಿ ಕೀಮರ್ ವಿಶ್ವದ ನಾಲ್ಕನೇ ಸ್ಥಾನದಲ್ಲಿದ್ದರೆ, ಅಬ್ದುಸತ್ತೋರೋವ್ ಅದಕ್ಕಿಂತ ಸ್ವಲ್ಪ ಹಿಂದಿದ್ದಾರೆ. ಗುಕೇಶ್ 10ನೇ ಸ್ಥಾನದಲ್ಲಿದ್ದು, ಪ್ರಸ್ತುತ ಭಾರತದ ಅಗ್ರ ರೇಟೆಡ್ ಆಟಗಾರರಾಗಿದ್ದಾರೆ. ಒಮ್ಮೆ ವಿಶ್ವ ಟಾಪ್-10 ಪಟ್ಟಿಯಲ್ಲಿ ಮೂವರು ಭಾರತೀಯರು ಇದ್ದರು. ಆದರೆ ಅರ್ಜುನ್ ಎರಿಗೈಸಿ ಮತ್ತು ಆರ್. ಪ್ರಜ್ಞಾನಂದ ಇತ್ತೀಚೆಗೆ ಸ್ಥಾನ ಕಳೆದುಕೊಂಡ ಹಿನ್ನೆಲೆಯಲ್ಲಿ, ಸ್ಥಿರ ಪ್ರದರ್ಶನ ನೀಡುತ್ತಿದ್ದ ಗುಕೇಶ್ ಇದೀಗ ಲೈವ್ ರ್‍ಯಾಂಕಿಂಗ್‌ನಲ್ಲಿ ಇಂಡಿಯಾ ನಂ.1 ಆಗಿದ್ದಾರೆ.



ಇಬ್ಬರು ಭಾರತೀಯರು: ಗುಕೇಶ್‌ಗೆ ಮತ್ತೊಬ್ಬ ಭಾರತೀಯರಾಗಿ ಹಾಲಿ ಚಾಂಪಿಯನ್ ಅರ್ವಿಂದ್ ಚಿಥಂಬರಂ ಜೊತೆಯಾಗಿದ್ದಾರೆ. ಇದೇ ಟೂರ್ನಿಯೇ ಅರವಿಂದ್ ಅವರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೊದಲ ದೊಡ್ಡ ಬ್ರೇಕ್ ನೀಡಿತ್ತು. ಟಾಟಾ ಸ್ಟೀಲ್ ಟೂರ್ನಿಯಲ್ಲಿ ಸಾಧಾರಣ ಪ್ರದರ್ಶನ ನೀಡಿದ ಅವರು, ಮತ್ತೆ 2700 ರೇಟಿಂಗ್ ಕ್ಲಬ್‌ಗೆ ಮರಳುವ ಸಂಕಲ್ಪದೊಂದಿಗೆ ಕಣಕ್ಕಿಳಿಯಲಿದ್ದಾರೆ. ಏಳನೇ ಸೀಡ್ ಆಗಿರುವ ಅರವಿಂದ್‌ಗೆ ಇಲ್ಲಿ ಪುನರಾವರ್ತನೆ ಸಾಧಿಸುವುದು ಸುಲಭವಲ್ಲ. ಇತ್ತೀಚೆಗೆ ಟಾಟಾ ಸ್ಟೀಲ್ ಮಾಸ್ಟರ್ಸ್ ಜಯಿಸಿದ ಅಬ್ದುಸತ್ತೋರೋವ್ ಮತ್ತೊಂದು ಪ್ರಶಸ್ತಿ ಸೇರ್ಪಡೆಗೆ ಫೇವರಿಟ್ ಎನಿಸಿಕೊಂಡಿದ್ದಾರೆ. ಕೇಮರ್ ಕೂಡ ಪ್ರತಿಯೊಬ್ಬರಿಗೆ ಕಠಿಣ ಪೈಪೋಟಿ ನೀಡಬಲ್ಲ ಆಟಗಾರ. ಚಾಲೆಂಜರ್ಸ್ ವಿಭಾಗದಲ್ಲಿ ಭಾರತದ ಸವಾಲಿಗೆ ಸೂರ್ಯ ಶೇಖರ್ ಗಂಗೂಳಿ ಸ್ಪರ್ಧಿಸಲಿದ್ದು, ಮಹಿಳಾ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಕೂಡ ಸ್ಪರ್ಧಿಸಲಿದ್ದಾರೆ.

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



5906

ಎಡದಿಂದ ಬಲಕ್ಕೆ
2.ಪ್ರಿಯವ್ಯಕಿಯಿಂದ ದೂರವಿರುವ ದುಃಖ (3)
5.ಸುತನು ಈ ನಡುವೆ ಹೇಳಿದ ನೀತಿವಾಕ್ಯ (4)
6.ವಿಕಾರ-ಅತಿ ಭೀಕರವಾದುದು (4)
7.ನವರಸಗಳಲ್ಲೊಂದಾದ ಕನಿಕರ (3)
8.ಅಡಿಗೆಗೆ ಬಳಸಿದ ಮಣ್ಣಿನಪಾತ್ರೆ (3)
10.ಈತ ಹಡಗಿನ ಮುಖ್ಯಾಧಿಕಾರಿ (3)
12.ಉಪಾಯದಿಂದ ಮಾಡಿದರೂ ಬಂದ ವಿಪತ್ತು (3)
15.ಕಾಡಿನ ಜೀವನ (4)
16.ವಾಲ್ಮೀಕಿಕೃತ ಮಹಾಕಾವ್ಯ (4)
17.ದೃಢಕಾಯ-ತೂಕವಾಗಿರುವುದು ತಿರುಗಿದೆ (3)

ಮೇಲಿನಿಂದ ಕೆಳಕ್ಕೆ
1.ಮುಖ ಮರೆಮಾಚಿಕೊಳ್ಳುವ ಬಟ್ಟೆ (3)
2.ಈ ತರ ನಡುವೆ ಇರುವ ಹಂಚುವಿಕೆ (4)
3.ದೇವತೆಗಳಿಗೆ ಕೊಡುವ ಹವಿಸ್ಸಿನ ಪಾಲು (4)
4.ರೋಮಾಂಚನಗೊಂಡ ಸ್ಥಿತಿ (3)
7.ಲಂಕೆಯ ಮೇಲಿರುವ ಅಪವಾದ (3)
9.ಹಳೆಯ ಸುದ್ದಿ ಹೇಳಿದ ಮಿತ್ರ (3)
11.ಇದೀಗ ಮದುವೆಯಾಗಿ ಬಂದವಳು (4)
12.ಅಪರೂಪಕ್ಕೆ ರಾಧೆ ಮಾಡಿದ್ದ ತಪ್ಪು (4)
13.ದಾರಿಯೊಡೆದು ಬೇರೆಯಾಗಿದೆ (3)
14. ಅಪ್ಪಣೆ-ಆಜ್ಞೆಯ ಸಮಾನಪದ (3)

5905 ಉತ್ತರ

ಎಡದಿಂದ ಬಲಕ್ಕೆ:
2.ಬಡಿತ 5.ಗೋಣಿತಾಟು
6.ಕರತ್ರಾಣ 7.ದಿಗಂತ
8.ಕಮರು 10.ರಜತ
12.ಗಂಡಸು 15.ದಾರಿದೀಪ
16.ಪತ್ತೆದಾರ 17.ಅತಂತ್ರ
ಮೇಲಿನಿಂದ ಕೆಳಕ್ಕೆ :
1.ಪಗೋಡ 2.ಬಲವಂತ
3.ತಕರಾರು 4.ಅಣಬೆ
7.ರಸೀದಿ 9.ಕಡಸು
11.ಅಪಕೃತ 12.ಗಂಧಪತ್ರ
13.ಗೋದಾಮು 14.ಅರಳು

ಕಿರುಸುದ್ದಿ

ಕಾರಿನಲ್ಲಿ ಸಾಗಿಸುತ್ತಿದ್ದ 29 ಲಕ್ಷ ರೂ., 97 ಗ್ರಾಂ ಚಿನ್ನ ಸಹಿತ ಇಬ್ಬರು ಸೆರೆ

ಕಾಸರಗೋಡು: ನಗರದಲ್ಲಿ ಕಾಸರಗೋಡು ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಸರಿಯಾದ ದಾಖಲುಪತ್ರಗಳಿಲ್ಲದೆ ಕಾರಿನಲ್ಲಿ ಸಾಗಿಸುತ್ತಿದ್ದ 29 ಲಕ್ಷ ರೂ. ಹಾಗೂ 97 ಗ್ರಾಂ ಚಿನ್ನ ಪತ್ತೆಹಚ್ಚಿ ವಶಕ್ಕೆ ತೆಗೆದುಕೊಂಡಿದ್ದಾರೆ. ಇದಕ್ಕೆ ಸಂಬಂಧಿಸಿ ಮೂಲತಃ ಮಹಾರಾಷ್ಟ್ರ ನಿವಾಸಿಗಳಾದ ಇಬ್ಬರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ಅವರ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಕಾಸರಗೋಡು ಪೊಲೀಸ್ ಠಾಣೆ ಪರಿಸರದಲ್ಲಿ ಸೋಮವಾರ ಸಂಜೆ ಪೊಲೀಸ್ ಕಾರ್ಯಾಚರಣೆ ನಡೆಸಿದ್ದು, ನಗ ನಗದು ಸಾಗಿಸುತ್ತಿದ್ದ ಬಗ್ಗೆ ಲಭಿಸಿದ ರಹಸ್ಯ ಮಾಹಿತಿಯಂತೆ ಈ ದಾರಿಯಾಗಿ ಬಂದ ಕಾರನ್ನು ತಡೆದು ನಿಲ್ಲಿಸಿ ತಪಾಸಣೆಗೊಳಪಡಿಸಿದಾಗ ಹಣ ಹಾಗೂ ಚಿನ್ನ ಪತ್ತೆಯಾಗಿವೆ. ಈ ಸಂಬಂಧ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಮೂಲತಃ ಮಹಾರಾಷ್ಟ್ರ ನಿವಾಸಿ ಹಾಗೂ ಹೊಸದುರ್ಗ ಕೋಟಚ್ಚೇರಿಯಲ್ಲಿ ವಾಸಿಸುತ್ತಿರುವ ತುಕಾರಾಮ್ ಮತ್ತು ಹೊಸದುರ್ಗ ಮೇಲಂಗೋಡ್‌ನಲ್ಲಿ ವಾಸವಾಗಿರುವ ರೋಹಿತ್ ಎಂಬವರನ್ನು ವಶಕ್ಕೆ ತೆಗೆದು ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದಾರೆ. ಸರಿಯಾದ ದಾಖಲು ಪತ್ರಗಳನ್ನು ಹಾಜರುಪಡಿಸಿದಲ್ಲಿ ಅದನ್ನು ಹಿಂತಿರುಗಿಸಬಹುದು ಇಲ್ಲವಾದರೆ ಸರಕಾರಿ ಖಜಾನೆಗೆ ಸೇರಲಿವೆ ಎಂದು ಪೊಲೀಸರು ತಿಳಿಸಿದರು. ಈ ತಂಡವು ನಗರದ ಚಿನ್ನದಂಗಡಿಗೆ ಚಿನ್ನ ಮಾರಾಟ ಮಾಡಿ ಅದರಿಂದ ಲಭಿಸಿದ ಹಣ ಇದಾಗಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ.

ಮಂಗಳೂರು ಜೈಲಿನಲ್ಲಿ ಮತ್ತೆ ಮೊಬೈಲ್ ಪತ್ತೆ

ಮಂಗಳೂರು: ನಗರದ ಜಿಲ್ಲಾ ಕಾರಾಗೃಹದಲ್ಲಿ ಮತ್ತೆ ಮೊಬೈಲ್ ಪತ್ತೆಯಾಗಿದೆ. ಸದಾ ಸುದ್ದಿಯಲ್ಲಿರುವ ಕಾರಾಗೃಹದಲ್ಲಿ ಕೈದಿಯೊಬ್ಬನ ಬಳಿ ಮೊಬೈಲ್ ಪತ್ತೆಯಾಗಿದೆ. ಫೆ.23ರಂದು ಬೆಳಗ್ಗೆ 9.30ರ ವೇಳೆಗೆ ಜೈಲು ಅಧೀಕ್ಷಕ ಶರಣ ಬಸಪ್ಪ ಅವರು ಅಧಿಕಾರಿ ಮತ್ತು ಸಿಬಂದಿಯೊಂದಿಗೆ ತಪಾಸಣೆ ಕೈಗೊಂಡಿದ್ದಾರೆ. ಈ ವೇಳೆ ಕಾರಾಗೃಹದ 'ಬಿ' ವಿಭಾಗದ 5ನೇ ಕೊಠಡಿಯಲ್ಲಿದ್ದ ಚಂದ್ರಹಾಸ ಪೂಜಾರಿ ಎಂಬಾತನ ಮಡಚಿಟ್ಟ ಹಾಸಿಗೆಯನ್ನು ಶೋಧನೆ ಮಾಡಿದಾಗ ಒಂದು ಕೀ ಪ್ಯಾಡ್ ಮೊಬೈಲ್ ಪತ್ತೆಯಾಗಿದೆ. ಈ ಬಗ್ಗೆ ಹಿರಿಯ ಅಧಿಕಾರಿಗಳ ಸೂಚನೆಯಂತೆ ಬರ್ಕೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾದಕ ವಸ್ತು ಸೇವನೆ : ಇಬ್ಬರ ಬಂಧನ

ಮಂಗಳೂರು: ಮಾದಕ ವಸ್ತು ಸೇವನೆ ಮಾಡಿದ ಆರೋಪದಡಿ ಕಾವೂರು ಪಂಜಿಮೊಗರು ಬಸ್ಸು ನಿಲ್ದಾಣದ ಬಳಿ ಇಬ್ಬರು ಆರೋಪಿಗಳನ್ನು ಕಾವೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ಪಂಜಿಮೊಗರು ಉರುಂದಾಡಿಗುಡ್ಡೆ ನಿವಾಸಿ ಚಂದನ್ (19) ಮತ್ತು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ನಿವಾಸಿ ಕಾನಕೇರಿ ನಿವಾಸಿ ಕಿರಣ್ ರವಿ ನಾಯ್ಕ ಬಂಧಿತರು. ಕಾವೂರು ಪೊಲೀಸ್ ನಿರೀಕ್ಷಕ ರಾಘವೇಂದ್ರ ಎಂ. ಬೈಂದೂರು ಅವರು ಗಸ್ತಿನಲ್ಲಿರುವ, ಪಂಜಿಮೊಗರು ಬಸ್ಸುನಿಲ್ದಾಣದ ಬಳಿ ಮಾದಕ ವಸ್ತು ಸೇವನೆ ಮಾಡಿದಂತೆ ಕಂಡು ಬಂದ ಆರೋಪಿಗಳನ್ನು ವಿಚಾರಣೆ ನಡೆಸಿದ್ದಾರೆ. ಬಳಿಕ ವೈದ್ಯಕಿಯ ತಪಾಸಣೆಗೆ ಒಳಪಡಿಸಿದಾಗ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿದೆ. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಕಾವೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರತ್ನಗಿರಿಯಲ್ಲಿ ಲಾರಿ ಅಪಘಾತ: ಬೋಳಿಯಾರ್‌ನ ವ್ಯಕ್ತಿ ಸಾವು

ಕೊಣಾಜೆ: ಮಹಾರಾಷ್ಟ್ರದ ರತ್ನಗಿರಿಯಲ್ಲಿ ಸಂಭವಿಸಿದ ಅಪಘಾತವೊಂದರಲ್ಲಿ ಬೋಳಿಯಾರ್‌ನ ವ್ಯಕ್ತಿಯೋರ್ವ ಸಾವನ್ನಪ್ಪಿದ ಘಟನೆ ಮಂಗಳವಾರ ನಡೆದಿದೆ. ಬೋಳಿಯಾರ್ ನಿವಾಸಿ ಬಿಎಚ್ ಕರೀಂ ಎಂಬವರ ಪುತ್ರ ಮುಹಮ್ಮದ್ ರಿಝ್ವಾನ್ (28) ಎಂಬವರೇ ಮೃತಪಟ್ಟ ವ್ಯಕ್ತಿಯಾಗಿದ್ದಾನೆ. ಮೀನಿನ ಲಾರಿಯಲ್ಲಿ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದ ರಿಝ್ವಾನ್ ಮಹಾರಾಷ್ಟ್ರಕ್ಕೆ ಮೀನಿನ ಲಾರಿಯಲ್ಲಿ ಹೊರಟಿದ್ದರು. ಮಹಾರಾಷ್ಟ್ರದ ರತ್ನಗಿರಿ ಎಂಬಲ್ಲಿ ಎರಡು ಲಾರಿಗಳ ನಡುವೆ ನಡೆದ ಅಪಘಾತದಲ್ಲಿ ಗಂಭೀರ ಗಾಯಗೊಂಡ ರಿಝ್ವಾನ್ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಮೃತರು ತಂದೆ, ತಾಯಿ, ಪತ್ನಿ, ಎರಡು ವರ್ಷದ ಮಗು ಹಾಗೂ ಸಹೋದರ, ಸಹೋದರಿಯನ್ನು ಅಗಲಿದ್ದಾರೆ. ಮೃತದೇಹವು ಬುಧವಾರ ಬೆಳಿಗ್ಗೆ ಊರಿಗೆ ತಲುಪಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.









ಡಾ.ಎಂ.ಎನ್.ರಾಜೇಂದ್ರಕುಮಾರ್ 77ನೇ ಹುಟ್ಟುಹಬ್ಬ ಸಂಭ್ರಮ | 77 ಮಂದಿಗೆ ಸವಲತ್ತು ವಿತರಣೆ

ಸಹಕಾರ ಕ್ಷೇತ್ರದ ಧ್ರುವ ನಕ್ಷತ್ರ: ಮೊಯ್ಲಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರಕುಮಾರ್ ಅವರು ದೇಶಕಂಡ ಸಮರ್ಥ ಸಹಕಾರಿ ನಾಯಕರಾಗಿ ಶೃಂಗ ಶ್ರೇಣಿಯಲ್ಲಿ ನಿಂತಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಅವರು ವಿಶ್ವರೂಪ ಸ್ಥಾಪಿಸಿದ್ದಾರೆ. ಡಾ. ಎಂ.ಎನ್. ರಾಜೇಂದ್ರಕುಮಾರ್ ಅವರು ಭರತಖಂಡದ ಸಹಕಾರ ಕ್ಷೇತ್ರದ ಧ್ರುವ ನಕ್ಷತ್ರ ಎಂದು ಮಾಜಿ ಮುಖ್ಯಮಂತ್ರಿ ಡಾ.ಎಂ. ವೀರಪ್ಪ ಮೊಯ್ಲಿ ಬಣ್ಣಿಸಿದರು.

ಸಹಕಾರ ರತ್ನ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಅಭಿವಂದನಾ ಸಮಿತಿ ವತಿಯಿಂದ ನಗರದ ಎಸ್‌ಸಿಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಮಂಗಳವಾರ ಡಾ. ಎಂ. ಎನ್. ರಾಜೇಂದ್ರಕುಮಾರ್ ಅವರ 77ನೇ ಹುಟ್ಟುಹಬ್ಬ ಸಂಭ್ರಮ ಅಭಿವಂದನಾ ಕಾರ್ಯಕ್ರಮ ಹಾಗೂ ಸವಲತ್ತುಗಳ ವಿತರಣಾ ಸಮಾರಂಭದಲ್ಲಿ ಅವರು ಅಭಿವಂದನಾ ಭಾಷಣ ಮಾಡಿದರು.

ಡಾ.ಎಂ.ಎನ್. ರಾಜೇಂದ್ರಕುಮಾರ್ ಅವರು ಸಮಾಜಸೇವೆಯ ಆಕಾಂಕ್ಷೆಯಿಂದ ಎಸ್‌ಸಿಡಿಸಿಸಿ ನಿರ್ದೇಶಕ, ಅಧ್ಯಕ್ಷರಾಗಬೇಕು ಎಂದು ನನ್ನ ಬಳಿಗೆ ಆಗಮಿಸಿದ್ದರು. ನಾನು ಅವರನ್ನು ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷತೆಗೆ ಶಿಫಾರಸು ಮಾಡಿದ್ದೆ. ಅದರಂತೆ ಅಧ್ಯಕ್ಷರಾದ ಡಾ.ಎಂಎನ್‌ಆರ್ ಅವರು ಸ್ಥಾನಕ್ಕೆ ನ್ಯಾಯ ನೀಡಿದ್ದಾರೆ, 33 ವರ್ಷಗಳ ಕಾಲ ಅಧ್ಯಕ್ಷರಾಗಿ ದಾಖಲೆ ನಿರ್ಮಿಸಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಪ್ರತಿಭಾನ್ವಿತರನ್ನು ಸಮಾಜಕ್ಕೆ ನೀಡಿದ್ದಾರೆ. ಮೊಬೈಲ್ ಬ್ಯಾಂಕಿಂಗ್ ಸಹಿತ ಹೊಸ ತಂತ್ರಜ್ಞಾನವನ್ನು ಬ್ಯಾಂಕ್‌ನಲ್ಲಿ ಪರಿಚಯಿಸಿದ್ದಾರೆ. ಕಳೆದ 45 ವರ್ಷಗಳ ಕಾಲದ ಅವರ ನಾಯಕತ್ವದಲ್ಲಿ ಅವರು ಕೈ ಇರಿಸಿದ ಕ್ಷೇತ್ರ ಕಲ್ಪವೃಕ್ಷವಾಗಿದೆ. ಜನ ಸಂಘಟನೆ ಯಾವ ರೀತಿ ಮಾಡಬೇಕು, ಜನರ ಹೃದಯ ತಲುಪುವುದು ಹೇಗೆ ಎಂಬುದನ್ನು ರಾಜಕೀಯ ಪಕ್ಷಗಳು ಕೂಡ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಅವರಿಂದ ಕಲಿಯುವುದು ಬಹಳಷ್ಟಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಡಾ.ಎಂಎನ್‌ಆರ್ ಅವರು ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ 25ರಷ್ಟು ಇದ್ದ ಬ್ಯಾಂಕ್‌ನ ಶಾಖೆಯನ್ನು 113ಕ್ಕೆ ಹೆಚ್ಚಳ ಮಾಡಿದ್ದಾರೆ. 64 ಕೋಟಿ ರೂ. ಇದ್ದ ಠೇವಣಾತಿ 7982.76 ಕೋಟಿ ರೂ.ಆಗಿದೆ. ಲಾಭಾಂಶ 42 ಲಕ್ಷ ರೂ.ನಿಂದ 110.40 ಕೋಟಿ ರೂ.ಗೆ ದಾಖಲೆಯ ಏರಿಕೆ ಆಗಿದೆ. ಕೃಷಿಕರ ಅಭಿವೃದ್ಧಿಗೆ ನೆರವಾಗುವ ಜತೆಗೆ ನವೋದಯ ಸ್ವಸಹಾಯ ಸಂಘಗಳ ಮೂಲಕ ಗ್ರಾಮೀಣ ಮಹಿಳೆಯರ ಬದುಕಿಗೆ ಬೆಳಕಾಗಿದ್ದಾರೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳದೇ ಇರುವಲ್ಲಿ ಎಸ್‌ಸಿಡಿಸಿಸಿ ಬ್ಯಾಂಕ್ ಹಾಗೂ ಡಾ.ಎಂ. ಎನ್. ರಾಜೇಂದ್ರಕುಮಾರ್ ಅವರು ಪಾತ್ರ ಮಹತ್ವದ್ದಾಗಿದೆ. ಈ ಎಲ್ಲ ಕಾರಣಗಳಿಂದಲೇ ಡಾ.ರಾಜೇಂದ್ರ ಕುಮಾರ್ ಅವರನ್ನು ಅಭಿನವ ಮೊಳಹಳ್ಳಿ ಎಂದು ಕರೆಯಲಾಗಿದೆ. ಬ್ಯಾಂಕ್ ಶೀಘ್ರದಲ್ಲಿ ಎಐ ತಂತ್ರಜ್ಞಾನ ಅಳವಡಿಸಿಕೊಳ್ಳುವ ವಿಶ್ವಾಸವಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸ್ಪೀಕರ್ ಯು.ಟಿ. ಖಾದರ್, ಸಮಾಜ ಯಾರನ್ನು ಪ್ರೀತಿಯಿಂದ ಸ್ವೀಕರಿಸುತ್ತದೆಯೋ ಅವರೇ ನಿಜವಾದ ನಾಯಕ. ದೀರ್ಘಕಾಲದ ಸಾಮಾಜಿಕ, ಸಹಕಾರ ಕ್ಷೇತ್ರದ ಬದುಕಿನಲ್ಲಿ ಡಾ.ಎಂ.ಎನ್. ರಾಜೇಂದ್ರಕುಮಾರ್ ಅವರು ಸರ್ವರ ಪ್ರೀತಿಗೆ ಪಾತ್ರರಾಗಿದ್ದಾರೆ. ಮುಂದಿನ ಜನಾಂಗಕ್ಕೆ ಅವರ ವ್ಯಕ್ತಿತ್ವ ಪ್ರೇರಣೆ. ಹಠ ಮತ್ತು ಚಾಕಚಕ್ಯತೆ ಮೂಲಕ ಸಹಕಾರ ಕ್ಷೇತ್ರಕ್ಕೆ ಅವರು ಗೌರವ ತಂದಿದ್ದಾರೆ. ನೇರ, ನಿಷ್ಠುರತೆ ಮೂಲಕ ಎಸ್‌ಸಿಡಿಸಿಸಿ ಬ್ಯಾಂಕ್‌ನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಡಿ. ವೇದವ್ಯಾಸ ಕಾಮತ್ ಮಾತನಾಡಿ, ಡಾ.ಎಂ.ಎನ್.ರಾಜೇಂದ್ರ ಕುಮಾರ್ ಅವರು ಸಹಕಾರ ಕ್ಷೇತ್ರ ಮಾತ್ರವಲ್ಲದೆ ಸಮಾಜದಲ್ಲಿ ಅನೇಕ ಸಾಧನೆ ಮಾಡಿದ್ದಾರೆ. ಗ್ರಾಮೀಣ ಭಾಗದ ಮಹಿಳೆಯರಿಗೆ ಆರ್ಥಿಕ ಶಕ್ತಿ ನೀಡಿದ್ದಾರೆ. ರಾಜೇಂದ್ರಕುಮಾರ್ ಅವರ ಬಗ್ಗೆ ಸಮಾಜ ವಿಶ್ವಾಸ ಇರಿಸಿದೆ. ಕೊರೋನಾ ಸಂದರ್ಭ ದಲ್ಲಿ ಆ್ಯಂಬುಲೆನ್ಸ್ ಸಹಿತ ವಿವಿಧ ಸೇವಾ ಕಾರ್ಯ ನಡೆಸುವಲ್ಲಿ ಜಿಲ್ಲಾಡಳಿತ ಹಾಗೂ ನಮ್ಮ ಜತೆ ಅವರು ಸಹಕಾರ ನೀಡಿದ್ದಾರೆ. ಪ್ರತಿದಿನ, ಕ್ಷಣ ಇನ್ನೊಬ್ಬರಿಗೆ ನೆರವಾಗುವ ವ್ಯಕ್ತಿತ್ವ ಅವರದ್ದು ಎಂದು ಪ್ರಶಂಶಿಸಿದರು.

ಕಟೀಲು ದೇವಸ್ಥಾನದ ಅರ್ಚಕ ಅನಂತಪದ್ಮನಾಭ ಆಸ್ರಣ್ಣ, ದ.ಕ. ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ಅಧ್ಯಕ್ಷ ರವಿರಾಜ್ ಹೆಗ್ಡೆ, ಕಣಚೂರು ಎಜುಕೇಶನ್ ಟ್ರಸ್ಟ್ ಸಿಎಂಡಿ ಕಣಚೂರು ಮೋನು, ಆಕಾಶ್ ಎಜುಕೇಶನ್ ಟ್ರಸ್ಟ್ ಬೆಂಗಳೂರು ಸಿಎಂಡಿ ಮುನಿರಾಜು, ಸಹಕಾರ ಇಲಾಖೆ ಅಪರ ನಿಬಂಧಕ ಬಾಲಶೇಖರ್, ನಬಾರ್ಡ್ ಡಿಜಿಎಂ ಕೆ.ಜಗದೀಶ್, ಅಪೆಕ್ಸ್ ಬ್ಯಾಂಕ್ ಬೆಂಗಳೂರು ಎಂ.ಡಿ. ದೇವರಾಜ್, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಎಂ.ಡಿ. ಲಿಂಗರಾಜು, ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ ಮೆನೇಜಿಂಗ್ ಟ್ರಸ್ಟಿ ಮೇಘರಾಜ್ ಜೈನ್, ಬ್ಯಾಂಕಿನ ಉಪಾಧ್ಯಕ್ಷ ವಿನಯ್ ಕುಮಾರ್ ಸೂರಿಂಜೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್, ನಿರ್ದೇಶಕರಾದ ಭಾಸ್ಕರ್ ಎಸ್.ಕೋಟ್ಯಾನ್, ವಾದಿರಾಜ ಶೆಟ್ಟಿ, ಮಹೇಶ್ ಹೆಗ್ಡೆ ಎಂ., ಅಶೋಕ್ ಕುಮಾರ್ ಶೆಟ್ಟಿ, ಸದಾಶಿವ ಉಳ್ಳಾಲ್, ಮೋನಪ್ಪ ಶೆಟ್ಟಿ ಎಕ್ಕಾರು, ಎಸ್.ಬಿ.ಜಯರಾಮ್ ರೈ, ರಾಜೇಶ್ ರಾವ್, ಜೈರಾಜ್ ಬಿ.ರೈ., ಎಸ್.ಎನ್. ಮನ್ಮಥ, ಕುಶಾಲಪ್ಪ ಗೌಡ, ಉಡುಪಿ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಜಯಕರ್ ಶೆಟ್ಟಿ ಇಂದ್ರಾಳಿ, ಸಹಕಾರ ಸಂಘಗಳ ಉಪ ನಿಬಂಧಕರಾದ ರಮೇಶ್ ಎಚ್.ಎನ್., ಲಾವಣ್ಯ ಉಪಸ್ಥಿತರಿದ್ದರು.

ಬ್ಯಾಂಕ್ ನಿರ್ದೇಶಕರಾದ ದೇವಿಪ್ರಸಾದ್ ಶೆಟ್ಟಿ ಬೆಳಪು ಸ್ವಾಗತಿಸಿದರು. ಶಶಿಕುಮಾರ್ ರೈ ಬಾಲ್ಯೊಟ್ಟು ವಂದಿಸಿದರು. ನವೋದಯ ಸಿಇಒ ಪೂರ್ಣಿಮಾ ಶೆಟ್ಟಿ ನೆರವು ಫಲಾನುಭವಿಗಳ ವಿವರ ನೀಡಿದರು. ನಿತೇಶ್ ಎಕ್ಕಾರು ಕಾರ್ಯಕ್ರಮ ನಿರೂಪಿಸಿದರು.



ಡಾ.ಎಂಎನ್‌ಆರ್ ಶತಾಯುಷಿ ಆಗಲಿ: ಮೊಯ್ಲಿ

ಜನರ ಹೃದಯ ಬೆಸೆಯುವ ಕಲೆ ಡಾ.ಎಂ. ಎನ್. ರಾಜೇಂದ್ರಕುಮಾರ್ ಅವರಿಗೆ ಕರಗತ. ಅರ್ಹವಾಗಿಯೇ ಅವರಿಗೆ 24ಕ್ಕೂ ಅಧಿಕ ಪ್ರಶಸ್ತಿ ದೊರೆತಿದೆ. ಸಹಕಾರ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಎಂಬ ಉತ್ಕೃಷ್ಟ ತತ್ತ್ವವನ್ನು ಅವರು ಅಳವಡಿಸಿಕೊಂಡಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಸಮರ್ಪಣಾ ಮನೋಭಾವದ ಹತ್ತಾರು ಮಂದಿ ನಾಯಕರನ್ನು ಸೃಷ್ಟಿಸಿ ಸಹಕಾರಿ ಬ್ರಹ್ಮ ಎನಿಸಿಕೊಂಡಿದ್ದಾರೆ. ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಕ್ರಾಂತಿವೀರ ಡಾ.ಎಂಎನ್‌ಆರ್ ಅವರು ಮುಂದುವರೆಯಲಿ. ಅವರು ಶತಾಯುಷಿ ಆಗಲಿ ಎಂದು ಡಾ.ಎಂ.ವೀರಪ್ಪ ಮೊಯ್ಲಿ ಶುಭ ಹಾರೈಸಿದರು.

ಅಭಿವಂದನೆ ಸಲ್ಲಿಕೆ

ಹುಟ್ಟುಹಬ್ಬದ ಅಂಗವಾಗಿ ಡಾ.ಎಂ. ಎನ್. ರಾಜೇಂದ್ರಕುಮಾರ್ ಅವರನ್ನು ಶಾಲು, ಹಾರ, ಪೇಟ, ಬೃಹತ್ ಹೂವಿನ ಹಾರ, ಆಕರ್ಷಕ ಸ್ಮರಣಿಕೆಯೊಂದಿಗೆ ಅಭಿವಂದನೆ ಸಲ್ಲಿಸಲಾಯಿತು. ಸಾಮಾಜಿಕ, ರಾಜಕೀಯ, ಧಾರ್ಮಿಕ ಸಹಿತ ವಿವಿಧ ಕ್ಷೇತ್ರಗಳ ಗಣ್ಯರು, ವಿವಿಧ ಸಂಘಸಂಸ್ಥೆಗಳ ಪ್ರತಿನಿಧಿಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು, ನಿರ್ದೇಶಕರು, ಕಾರ್ಯ ನಿರ್ವಹಣಾಧಿಕಾರಿಗಳು, ನವೋದಯ ಸ್ವಸಹಾಯ ಸಂಘಗಳ ಪ್ರತಿನಿಧಿಗಳು ಈ ವೇಳೆ ಪುಷ್ಪಗುಚ್ಛ, ಸ್ಮರಣಿಕೆ ನೀಡಿ ಡಾ.ಎಂಎನ್‌ಆರ್ ಅವರನ್ನು ಅಭಿನಂದಿಸಿ, ಶುಭಾಶಯ ಸಲ್ಲಿಸಿದರು.



> ಜನರಿಗೆ ಸೇವೆ ನೀಡಲು ಇನ್ನುಮುಂದೆಯೂ ಬದ್ಧ. ಜನರ ಆಶೀರ್ವಾದದಿಂದ ಹುಟ್ಟುಹಬ್ಬದಂದು ದೇವಸ್ಥಾನ, ಬಸದಿಗಳ ಪ್ರಸಾದವನ್ನು ನನಗೆ ನೀಡಿದ್ದಾರೆ. ಬಡವರ ಕಣ್ಣೀರು ಒರೆಸುವ ಕಾರ್ಯ ಮುಂದುವರೆಸುತ್ತೇನೆ.
>
> ■ **ಡಾ.ಎಂ.ಎನ್. ರಾಜೇಂದ್ರಕುಮಾರ್**
> ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರು

77 ಮಂದಿಗೆ ವಿವಿಧ ಸವಲತ್ತು ವಿತರಣೆ

ಡಾ.ಎಂ.ಎನ್. ರಾಜೇಂದ್ರಕುಮಾರ್ ಅವರ 77ನೇ ಹುಟ್ಟುಹಬ್ಬ ಅಂಗವಾಗಿ 77 ಮಂದಿಗೆ ವಿವಿಧ ಸವಲತ್ತು ವಿತರಣೆ ಮಾಡಲಾಯಿತು. ವೈದ್ಯಕೀಯ ನೆರವು, ವಿದ್ಯಾರ್ಥಿವೇತನ, ಸ್ವ ಉದ್ಯೋಗಕ್ಕೆ ಹೊಲಿಗೆ ಯಂತ್ರ ವಿತರಣೆ ನಡೆಯಿತು.

ಸ್ವಸಹಾಯ ಸಂಘಗಳಿಗೆ ಅತಿ ಕಡಿಮೆ ಬಡ್ಡಿದರದಲ್ಲಿ ಸಾಲ

ಹುಟ್ಟುಹಬ್ಬದ ಅಭಿವಂದನೆ ಸ್ವೀಕರಿಸಿ ಮಾತನಾಡಿದ ಡಾ.ಎಂ.ಎನ್. ರಾಜೇಂದ್ರ ಕುಮಾರ್, ದೇಶದ 459 ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಪ್ರಥಮ ಸ್ಥಾನದಲ್ಲಿದೆ ಎಂದು ನಬಾರ್ಡ್ ಅಧಿಕಾರಿಗಳು ತಿಳಿಸಿದ್ದಾರೆ. ವಾಣಿಜ್ಯ ಬ್ಯಾಂಕ್‌ಗಳು ಪರಸ್ಪರ ವಿಲೀನಗೊಳ್ಳುತ್ತಿದ್ದರೆ, ಸಹಕಾರಿ ಬ್ಯಾಂಕ್‌ಗಳು ಪ್ರತಿ ಗ್ರಾಮದಲ್ಲಿ ಶಾಖೆ ತೆರೆಯುತ್ತಿವೆ, ಸ್ವಂತ ಕಟ್ಟಡದಲ್ಲಿ ಹವಾನಿಯಂತ್ರಿತ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ವಾಣಿಜ್ಯ ಬ್ಯಾಂಕ್‌ಗಳಲ್ಲಿ ಭಾಷೆ ಬಾರದ, ಸಂಸ್ಕೃತಿ ತಿಳಿಯದವರು ಇದ್ದಾರೆ. ಸಹಕಾರಿ ಬ್ಯಾಂಕ್‌ಗಳು ಮದುವೆಗೂ ಸಾಲ ನೀಡುತ್ತಿವೆ. ರಾಜ್ಯದಲ್ಲಿ ಅತಿ ಹೆಚ್ಚು ಕೃಷಿ ಸಾಲ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀಡಲಾಗಿದೆ ಎಂದರು. ಸಹಕಾರಿ ಕ್ಷೇತ್ರ ಜನರಿಗಾಗಿ ಕೆಲಸ ಮಾಡುತ್ತಿದೆ. ಶೇ.95ರಷ್ಟು ಸಹಕಾರಿ ಸಂಘಗಳಲ್ಲಿ ಚುನಾವಣೆ ಇಲ್ಲದೆ ಅವಿರೋಧ ಆಯ್ಕೆ ನಡೆಯುತ್ತಿದೆ. ಸ್ವಸಹಾಯ ಸಂಘಗಳಿಗೆ ಅತಿ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತಿದೆ. ಶೇ.99.5ರಷ್ಟು ಸಾಲ ಮರುಪಾವತಿ ಆಗುತ್ತಿದೆ. ರೈತರಿಗೆ, ಸಕ್ಕರೆ ಕಾರ್ಖಾನೆಗಳಿಗೆ ನಾವು ಸಾಲ ನೀಡುತ್ತಿದ್ದೇವೆ ಎಂದು ಡಾ.ಎಂಎನ್‌ಆರ್ ಹೇಳಿದರು.



ವಟಪುರಕ್ಷೇತ್ರ ಮಲ್ಲಿಗೆ ಪ್ರಿಯ ಬಂಟ್ವಾಳ ತಿರುಮಲ ಶ್ರೀವೆಂಕಟರಮಣ ದೇವಳದ ಬ್ರಹ್ಮರಥೋತ್ಸವವು ಮಂಗಳವಾರ ಸಂಜೆ ಸಂಭ್ರಮ, ಸಡಗರದಿಂದ ನಡೆಯಿತು. ಸಾವಿರಾರು ಮಂದಿ ಭಗವದ್ಭಕ್ತರು ದೇವರ ದರ್ಶನ ಪಡೆದು, ದೇವರಿಗೆ ಮಲ್ಲಿಗೆ ಸಮರ್ಪಿಸಿ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಸೋಮವಾರ ರಾತ್ರಿ, ನೇತ್ರಾವತಿ ನದಿಯಲ್ಲಿ ಜಲಕ್ರೀಡೆ, ಮೃಗಬೇಟೆ, ಬೆಳ್ಳಿಲಾಲಕಿಯಲ್ಲಿ ದೇವರ ಪೇಟೆ ಸವಾರಿ, ಸಣ್ಣರಥೋತ್ಸವ ನೆರವೇರಿತು.

ಸಿದ್ದಾಪುರ ಪೊಲೀಸರಿಂದ ಕಾರ್ಯಾಚರಣೆ | ಇಬ್ಬರು ಮಾರಾಟಗಾರರ ಸೆರೆ

ಗಾಂಜಾ ನಶೆಯಲ್ಲಿ ಗಲಾಟೆ: ಕೇಸ್ ದಾಖಲು

ಮಡಿಕೇರಿ: ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿರುವ ಸಿದ್ದಾಪುರ ಪೊಲೀಸರು, ಗಾಂಜಾ ಸೇವಿಸಿ ಗಲಾಟೆ ಮಾಡುತ್ತಿದ್ದ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನೆಲ್ಲಿಹುದಿಕೇರಿ ನಿವಾಸಿ ಅಸ್ಸದ್ ಹಾಗೂ ಸಿದ್ದಾಪುರ ನಿವಾಸಿ ಅಫ್ರಿದ್ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದಡಿ ಬಂಧನಕ್ಕೊಳಗಾದವರಾಗಿದ್ದು, ಸಿದ್ದಾಪುರದ ನಿವಾಸಿ ಅಲಬ್ ಖಾನ್ ಎ.ಎಂ. (34) ಹಾಗೂ ನೆಲ್ಲಿಹುದಿಕೇರಿಯ ನಿವಾಸಿ ಟಿಸನ್ ಜೋಸೆಫ್ (28) ಅವರುಗಳು ಗಾಂಜಾ ಸೇವಿಸಿ ಗಲಾಟೆಮಾಡುತ್ತಿದ್ದ ಆರೋಪದಡಿ ಪ್ರಕರಣ ಎದುರಿಸುತ್ತಿದ್ದಾರೆ.

ನೆಲ್ಲಿಹುದಿಕೇರಿ ಗ್ರಾಮದ ಬೆಟ್ಟದ ಕಾಡು ದೇವಾಲಯದ ಬಳಿ ಸ್ಕೂಟರ್‌ನಲ್ಲಿ ಗಾಂಜಾವನ್ನಿಟ್ಟುಕೊಂಡು ಮಾರಾಟ ಮಾಡುತ್ತಿರುವುದಾಗಿ ದೊರೆತ ಖಚಿತ ಸುಳಿವಿನ ಮೇರೆಗೆ ಸಿದ್ದಾಪುರ ಠಾಣಾಧಿಕಾರಿ ಮಂಜುನಾಥ್ ಹಾಗೂ ಸಿಬ್ಬಂದಿಗಳು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿ ಅವರಿಂದ 324 ಗ್ರಾಂ ಗಾಂಜಾ ಹಾಗೂ ಕೃತ್ಯಕ್ಕೆ ಬಳಸಿದ ಸ್ಕೂಟರ್ ವಶಪಡಿಸಿಕೊಂಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಮಾರ್ಗದರ್ಶನ, ಮಡಿಕೇರಿ ಡಿವೈಎಸ್ಪಿ ಸೂರಜ್, ವೃತ್ತ ನಿರೀಕ್ಷಕ ರಾಜು ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಿದ್ದಾಪುರ ಠಾಣಾಧಿಕಾರಿ ಮಂಜುನಾಥ್, ಸಿಬ್ಬಂದಿಗಳಾದ ರಾಜೇಶ್, ಮಣಿಕಂಠ, ಹನೀಫ್ ಪಾಲ್ಗೊಂಡಿದ್ದರು.

ಮತ್ತೊಂದೆಡೆ ಸಿದ್ದಾಪುರದ ಮಾರುಕಟ್ಟೆ ಬಳಿ ಇಬ್ಬರು ಜೋರಾಗಿ ಗಲಾಟೆ ಮಾಡುತ್ತಾ ಕಿರುಚಾಡುತ್ತಿದ್ದ ಕುರಿತು ದೂರು ಬಂದ ಹಿನ್ನೆಲೆಯಲ್ಲಿ ಪೊಲೀಸರು ಸಿದ್ದಾಪುರದ ನಿವಾಸಿ ಅಲಬ್ ಖಾನ್ ಎ.ಎಂ. (34) ಹಾಗೂ ನೆಲ್ಲಿಹುದಿಕೇರಿಯ ನಿವಾಸಿ ಟಿಸನ್ ಜೋಸೆಫ್ (28) ಅವರುಗಳನ್ನು ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ, ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

- ಆರೋಪಿಗಳನ್ನು ಬಂಧಿಸಿ ಅವರಿಂದ 324 ಗ್ರಾಂ ಗಾಂಜಾ ಹಾಗೂ ಕೃತ್ಯಕ್ಕೆ ಬಳಸಿದ ಸ್ಕೂಟರ್ ವಶಪಡಿಸಿಕೊಂಡಿದ್ದಾರೆ.
- ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿರುವುದರಿಂದ ಇಬ್ಬರ ವಿರುದ್ಧ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಧಾನಸಭಾ ಚುನಾವಣೆಗೆ ಕಾಸರಗೋಡು ಜಿಲ್ಲೆಯ ಸಹಿತ ಕೇರಳ ರಾಜ್ಯದಲ್ಲಿ ಭರ್ಜರಿ ತಯಾರಿ ಆರಂಭ

ಪೊಲೀಸ್ ಇಲಾಖೆಯಲ್ಲಿ ಸಾಮೂಹಿಕ ವರ್ಗಾವಣೆ ಪರ್ವ!

ಕಾಸರಗೋಡು: ಕೇರಳರಾಜ್ಯ ವಿಧಾನಸಭೆಗೆ ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಚುನಾವಣೆ ನಡೆಯುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಮಾತ್ರವಲ್ಲದೆ ಕಾಸರಗೋಡು ಸಹಿತ ರಾಜ್ಯದ ಎಲ್ಲಾ ಜಿಲ್ಲೆಗಳ ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆಗೊಳಿಸಿ ಆದೇಶ ಹೊರಡಿಸಲಾಗಿದೆ.

ಅದರಂತೆ ಮಂಜೇಶ್ವರ ಠಾಣೆಯ ನೂತನ ಇನ್‌ಸ್ಪೆಕ್ಟರ್ ಆಗಿ ಜಿಜೇಶ್‌ರನ್ನು ನೇಮಿಸಲಾಗಿದೆ. ಅಲ್ಲಿದ್ದ ಅಜಿತ್‌ಕುಮಾರ್ ಅವರನ್ನು ತಳಿಪರಂಬಕ್ಕೆ ವರ್ಗಾಹಿಸಲಾಗಿದೆ. ಕುಂಬಳೆ ಕರಾವಳಿ ಠಾಣೆಯಿಂದ ಕೆ.ಆರ್.ಅನೂಪ್‌ರನ್ನು ಬದಿಯಡ್ಕಕ್ಕೆ, ಕಲ್ಲಿಕೋಟೆಯಿಂದ ಬೈಜು ಕೆ.ಜೋಸ್ ಅವರನ್ನು ಕುಂಬಳೆಗೆ ವರ್ಗಾಯಿಸಲಾಗಿದೆ. ಶಿವನ್ ಚೋಡತ್ ಅವರನ್ನು ಹೊಸದುರ್ಗಕ್ಕೆ, ಎಂ.ಪಿ.ವಿನೀಶ್‌ರನ್ನು ವಿದ್ಯಾನಗರಕ್ಕೆ, ಕೆ.ಪಿ.ವಿನೋದ್‌ರನ್ನು ಬೇಡಗಕ್ಕೆ, ಸಿ.ಶಾಜು ಅವರನ್ನು ಅಂಬಲತ್ತರಕ್ಕೆ, ಉಮೇಶ್‌ರನ್ನು ಚಿತ್ತಾರಿಕ್ಕಲ್‌ಗೆ, ಎಂ.ವಿ.ಶಿಜು ಅವರನ್ನು ಚಂದೇರಕ್ಕೆ ವರ್ಗಾಯಿಸಿ ಆದೇಶಿಸಲಾಗಿದೆ.

ಎಂ.ಕೆ.ಅನಿಲ್‌ಕುಮಾರ್‌ರನ್ನು ಬೇಡಗಕ್ಕೆ, ಕೆ.ಸಂತೋಷ್‌ರನ್ನು ರಾಜಪುರಕ್ಕೆ, ಕೆ.ಮುರಳೀಧರನ್‌ರನ್ನು ನೀಲೇಶ್ವರಕ್ಕೆ, ಅನಿಲ್ ಕುಮಾರ್‌ರನ್ನು ಬೇಕಲ ಪೊಲೀಸ್ ಠಾಣೆಗೆ ನೇಮಿಸಲಾಗಿದೆ. ಎಂ.ವಿ.ರಾಜಗೋಪಾಲ್ ಅವರನ್ನು ಚೀಮೇನಿ ಠಾಣೆಗೆ, ಆದೂರು ಠಾಣೆಯಿಂದ ಎಂ.ವಿ.ವಿಷ್ಣುಪ್ರಸಾದ್ ಅವರನ್ನು ಕಲ್ಲಿಕೋಟೆಗೆ ವರ್ಗಾಯಿಸಲಾಗಿದೆ. ಆದೂರು ಠಾಣೆಗೆ ಬದಲಿ ನೇಮಕಾತಿ ನಡೆದಿಲ್ಲ. ಈ ಠಾಣೆಗೆ ಶೀಘ್ರದಲ್ಲೇ ನೇಮಕಾತಿ ನಡೆಸಲಾಗುವುದು ಎಂದು ತಿಳಿಸಲಾಗಿದೆ.



ನ್ಯಾಯಸಮ್ಮತ ಚುನಾವಣೆಗೆ ಆದ್ಯತೆ

ಮುಂಬರುವ ವಿಧಾನಸಭಾ ಚುನಾವಣೆಯನ್ನು ಮುಕ್ತ, ದಕ್ಷ, ಯಶಸ್ವಿ ಹಾಗೂ ನ್ಯಾಯಸಮ್ಮತಗೊಳಿಸಲಿರುವ ಸಿದ್ಧತೆಗಳನ್ನು ರೂಪಿಸಲಾಗುತ್ತಿದೆ. ಅದಕ್ಕೆ ಅನುಗುಣವಾಗಿ ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾಯಿಸಲಾಗಿದೆ. ಕೇಂದ್ರ ಚುನಾವಣಾ ಆಯೋಗದ ಆದೇಶದಂತೆ ರಾಜ್ಯ ಸರಕಾರವು ಈ ವರ್ಗಾವಣೆಯನ್ನು ಜಾರಿಗೊಳಿಸಿದೆ. ಕಾಸರಗೋಡು ಜಿಲ್ಲೆಯ ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಮತಗಟ್ಟೆಗಳಿರುವ ಪ್ರದೇಶಗಳ ಠಾಣೆಗಳಿಗೆ ಪ್ರಬಲ ಮತ್ತು ದಕ್ಷ ಅಧಿಕಾರಿಗಳನ್ನು ನೇಮಿಸಲಾಗಿದೆ. ಮಾರ್ಚ್ ತಿಂಗಳಿನಲ್ಲಿ ವಿಧಾನಸಭಾ ಚುನಾವಣೆಯ ದಿನಾಂಕ ಘೋಷಣೆಯಾಗುವ ಸಾಧ್ಯತೆಯಿದ್ದು, ಅದರ ಪೂರ್ವಭಾವಿಯಾಗಿ ವರ್ಗಾವರ್ಗಿಗಳನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ.

ವಿದ್ಯಾರ್ಥಿ ಸಂಕೇತ್ ಹತ್ಯೆಯ ಹಿಂದೆ ಡ್ರಗ್ಸ್ ದಂಧೆ

ಉನ್ನತ ತನಿಖೆಗೆ ವಿಹಿಂಪ ಆಗ್ರಹ

ಮಂಗಳೂರು: ಶಿವಮೊಗ್ಗದ ಊರುಗಡೂರಿನಲ್ಲಿ ವಿದ್ಯಾರ್ಥಿ ಸಂಕೇತ್ ಹತ್ಯೆಯ ಹಿಂದೆ ಡ್ರಗ್ಸ್ ದಂಧೆಯ ಅನುಮಾನವಿದ್ದು, ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ವಿಶ್ವಹಿಂದು ಪರಿಷತ್ ಆಗ್ರಹಿಸಿದೆ.

ಶಿವಮೊಗ್ಗ ಹೊರವಲಯದ ಊರುಗಡೂರಿನಲ್ಲಿ 10ನೇ ಕ್ಲಾಸ್ ವಿದ್ಯಾರ್ಥಿ ಸಂಕೇತ್ (16) ಎಂಬಾತನನ್ನು ಅನ್ಯಕೋಮಿನ ಬಾಲಕರು ಕೊಲೆಗೈದ ಘಟನೆ ಬಹಳ ಆತಂಕಕಾರಿಯಾಗಿದೆ. ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದ ಸಂಕೇತ್ ಸೋಮವಾರ ಸ್ಪೆಷಲ್ ಕ್ಲಾಸ್ ಮುಗಿಸಿ ಬರುತ್ತಿದ್ದಂತೆ ನಾಲ್ವರು ಅನ್ಯಕೋಮಿನ ವಿದ್ಯಾರ್ಥಿಗಳು ಮಾರಣಾಂತಿಕ ಹಲ್ಲೆ ನಡೆಸಿ ಹತ್ಯೆ ಮಾಡಿದ್ದಾರೆ. ಈ ಅಮಾನವೀಯ ಕೃತ್ಯವನ್ನು ಬಲವಾಗಿ ಖಂಡಿಸುತ್ತೇವೆ.

ಅಪ್ರಾಪ್ತ ಮಕ್ಕಳು ಡ್ರಗ್ಸ್ ಸೇವಿಸಿ ಹಿಂದೂ ವಿದ್ಯಾರ್ಥಿಯನ್ನು ಕೊಲೆ ಮಾಡಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಮತ್ತು ಮಾಧ್ಯಮಗಳಲ್ಲಿ ಚರ್ಚೆ ನಡೆಯುತ್ತಿದೆ. ಈ ವಿದ್ಯಾರ್ಥಿಗಳಿಗೆ ಡ್ರಗ್ಸ್ ಪೂರೈಸಿರುವ ದೊಡ್ಡ ಜಾಲ ಇರುವ ಬಗ್ಗೆ ಸಂಶಯವಿದೆ ಮತ್ತು ಅಪ್ರಾಪ್ತ ಮಕ್ಕಳಲ್ಲಿ ಕೊಲೆ ಮಾಡುವಷ್ಟು ದ್ವೇಷ ಮಾನಸಿಕತೆಯನ್ನು ತುಂಬಿರುವ ಬಗ್ಗೆ ಕೂಡ ಸಂಶಯವಿದೆ. ಹಾಗಾಗಿ ಇವೆಲ್ಲವನ್ನೂ ಪತ್ತೆಹಚ್ಚಲು ಈ ಕೊಲೆ ಪ್ರಕರಣವನ್ನು ಉನ್ನತ ಮಟ್ಟದ ತನಿಖೆ ನಡೆಸಲು ಆಗ್ರಹಿಸುತ್ತೇವೆ ಎಂದು ವಿಶ್ವ ಹಿಂದೂ ಪರಿಷತ್ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪುವೆಲ್ ಹೇಳಿದ್ದಾರೆ.

- 10ನೇ ಕ್ಲಾಸ್ ವಿದ್ಯಾರ್ಥಿಯನ್ನು ಅನ್ಯಕೋಮಿನ ಬಾಲಕರು ಕೊಲೆಗೈದ ಘಟನೆ ಬಹಳ ಆತಂಕಕಾರಿ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 33° 22° | ಉಡುಪಿ 31° 23°

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 25, ಫೆಬ್ರವರಿ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಕ್ಷೇತ್ರಕ್ಕೆ ಮಕ್ಕಳನ್ನು ಕರೆತರುವ ಕೆಲಸ ಹಿರಿಯರಿಂದ ಆಗಬೇಕು

ಪುಟ 5



ಗರ್ಭಿಣಿ ಸಾವಿನ ತನಿಖೆ ಹೊಣೆ ವೈದ್ಯಕೀಯ ಮಂಡಳಿಗೆ: ಉಡುಪಿ ಡೀಸಿ

ಪುಟ 6

ಉಡುಪಿಯ ಭುಜಂಗ ಪಾರ್ಕ್‌ನಲ್ಲಿ ಕಲಾಸಕ್ತರಿಗೆ ರಸದೌತಣ ನೀಡಿದ 'ಜೋಕುಮಾರ ಸ್ವಾಮಿ'



ಸುಮನಸಾ ಕೊಡವೂರು ನಾಟಕೋತ್ಸವ ರಂಗಹಬ್ಬ-14ರ ಪ್ರಯುಕ್ತ ಉಡುಪಿಯ ಭುಜಂಗ ಪಾರ್ಕ್‌ನಲ್ಲಿ ಶಿವಮೊಗ್ಗದ ಸಹ್ಯಾದ್ರಿ ಕಲಾತಂಡದ 'ಜೋಕುಮಾರ ಸ್ವಾಮಿ' ಕನ್ನಡ ನಾಟಕ ಪ್ರದರ್ಶನ ಮಂಗಳವಾರ ನಡೆಯಿತು. ಈ ಸಂದರ್ಭ ಭಾರೀ ಸಂಖ್ಯೆಯಲ್ಲಿ ಕಲಾಸಕ್ತರು ಪಾಲ್ಗೊಂಡು ನಾಟಕ ವೀಕ್ಷಿಸಿ ಮೆಚ್ಚುಗೆ ಸೂಚಿಸಿದರಲ್ಲದೆ, ಕಲಾವಿದರಲ್ಲಿ ಹೊಸ ಉತ್ಸಾಹವನ್ನು ತುಂಬಿದರು.

ಸುತ್ತ ಮುತ್ತ

ದಕ್ಷಿಣ ಕನ್ನಡದಲ್ಲಿ ಹೆಚ್ಚಿದ ಬಿಸಿಲಿನ ಧಗೆ: ಗಾಳಿಯ ಗುಣಮಟ್ಟ ಮತ್ತಷ್ಟು ಕುಸಿತ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಡು ಬಿಸಿಲು ಮತ್ತಷ್ಟು ಖಾರವಾಗಿದ್ದು, ಮೈಸುಡುವ ತಾಪಮಾನ ಜನಸಾಮಾನ್ಯರನ್ನು ಹೈರಾಣಾಗಿಸಿದೆ. ಮಂಗಳವಾರ ಜಿಲ್ಲೆಯ ಗರಿಷ್ಠ ತಾಪಮಾನ ಗರಿಷ್ಠ 35 ಡಿಗ್ರಿ ಸೆಲ್ಸಿಯೆಸ್ ದಾಖಲಾಗಿತ್ತು. ಈ ನಡುವೆ ಎಕ್ಯೂಐ ಸೂಚ್ಯಂಕದಲ್ಲಿಯೂ 169 ದಾಖಲಾಗಿದ್ದು, ಇದು ಗಾಳಿಯ ಗುಣಮಟ್ಟ ಕುಸಿದಿರುವುದಕ್ಕೆ ಸಾಕ್ಷಿ ನುಡಿದಿದೆ. ಈ ಗುಣಮಟ್ಟದ ಗಾಳಿಯಿಂದ ಹಲವು ಆರೋಗ್ಯ ಸಮಸ್ಯೆ ಬಾಧಿಸುವ ಸಾಧ್ಯತೆ ಇದೆ.

ಸತತವಾಗಿ ಹೆಚ್ಚುತ್ತಿರುವ ತಾಪಮಾನ: ಮಂಜಿನ ನಗರಿ ನೆಲವೂ ಆಗುತ್ತಿದೆ ಕೆಂಡ

ಮಡಿಕೇರಿ: ಕಳೆದ ಕೆಲವು ದಿನಗಳಿಂದ ಕೊಡಗಿನಲ್ಲಿ ತಾಪಮಾನ ಸತತವಾಗಿ ಏರಿಕೆಯಾಗುತ್ತಿದ್ದು, ಜಿಲ್ಲೆಯ ಜನತೆಯನ್ನು ಆತಂಕಕ್ಕೆ ತಳ್ಳುತ್ತಿದೆ. ಮಂಜಿನ ನಗರಿ ಎಂದೇ ಹೆಸರಾಗಿರುವ ಮಡಿಕೇರಿ ಯಲ್ಲಿ ಕೂಡಾ ತಾಪ ಕೋಪ ಏರಿಕೆ ಕಂಡುಬಂದಿದೆ. ಮಂಗಳವಾರ ನಗರದ ಗರಿಷ್ಠ ತಾಪಮಾನ 30 ಡಿಗ್ರಿ ಸೆಲ್ಸಿಯೆಸ್ ದಾಖಲಾಗಿತ್ತು. ಹವಾಮಾನ ಪ್ರವಾಸೋದ್ಯಮದ ಮೇಲೆ ಪರಿಣಾಮ ಬೀರುವ ಆತಂಕ ಎದುರಾಗಿದೆ.

ಬ್ಯಾಂಕ್ ಸಿಬ್ಬಂದಿಗಳು ಚಲಿಸುತ್ತಿದ ಕಾರಿನ ಮೇಲೆ ಉರುಳಿ ಬಿದ್ದ ಮರ, ಪಾರು

ಸುಳ್ಯ: ಬ್ಯಾಂಕ್ ಸಿಬ್ಬಂದಿಗಳು ಚಲಿಸುತ್ತಿದ ಕಾರಿನ ಮೇಲೆ ಮರ ಉರುಳಿ ಬಿದ್ದು ಪ್ರಯಾಣಿಕರು ಪವಾಡ ಸದೃಶವಾಗಿ ಪರಾದ ಘಟನೆ ಸುಳ್ಯ ಬೆಳ್ಳಾರೆ ರಸ್ತೆಯ ಬೇಂಗಮಲೆ ಎಂಬಲ್ಲಿ ಸೋಮವಾರ ಸಂಜೆ ನಡೆದಿದೆ. ಉಮ್ಮರ್ ಎಂಬುವವರ ಕಾರಿನಲ್ಲಿ ಸುಳ್ಯ ಸ್ಟೇಟ್ ಬ್ಯಾಂಕ್ ವ್ಯವಸ್ಥಾಪಕ ಉತ್ಸವ್ ಚಕ್ರವರ್ತಿ ಹಾಗೂ ಇನ್ನೋರ್ವ ಫೀಲ್ಡ್ ಸ್ಟಾಫ್ ಸಾಲ ವಸೂಲಾತಿಗಾಗಿ ಬಾಡಿಗೆ ಕಾರಲ್ಲಿ ಪಂಜ ಕಡೆಗೆ ಹೋಗಿ ಬೆಳ್ಳಾರೆಯಿಂದ ಸುಳ್ಯಕ್ಕೆ ವಾಪಸ್ಸಾಗುತ್ತಿದ್ದ ವೇಳೆ ಈ ಘಟನೆ ನಡೆದಿದೆ.

ಅಕ್ರಮ ದಾಸ್ತಾನಿರಿಸಿದ್ದ 5.4 ಲೀ. ಕರ್ನಾಟಕ ಮದ್ಯ ಸಹಿತ ಆರೋಪಿಯ ಸೆರೆ

ಕುಂಬಳೆ: ಕರ್ನಾಟಕ ಮದ್ಯ ದಾಸ್ತಾನಿರಿಸಿದ್ದ ಆರೋಪದಲ್ಲಿ ಓರ್ವನನ್ನು ಕುಂಬಳೆ ಅಧಿಕಾರಿಗಳು ಬಂಧಿಸಿದ್ದಾರೆ. ನಾಯ್ಕಾಪು ನಾರಾಯಣಮಂಗಲ ನಿವಾಸಿ ಅಕ್ಷಿತ್ ಕೆ. ಬಂಧಿತ ವ್ಯಕ್ತಿ. ಈತನಿಂದ 5.4 ಲೀ. ಕರ್ನಾಟಕ ನಿರ್ಮಿತ ಮದ್ಯ ವಶಪಡಿಸಲಾಗಿದೆ.

ಶೀಘ್ರವೇ ಲೈಟ್ಸ್ ಆ್ಯಂಡ್ ಸೌಂಡ್ಸ್ ಶೋ ಶುರು

ಝಗಮಗ ಬೇಕಲ!

ಬರೋಬ್ಬರಿ 1 ಕೋ.ರೂ. ವೆಚ್ಚದಲ್ಲಿ ಸಿದ್ಧತೆ

ಕಾಸರಗೋಡು: ಅಂತಾರಾಷ್ಟ್ರೀಯ ಪ್ರವಾಸೋದ್ಯಮ ಕೇಂದ್ರ ಇಲ್ಲಿನ ಬೇಕಲ ಕೋಟೆಯಲ್ಲಿ ಆಕರ್ಷಕ ರೀತಿಯಲ್ಲಿ ಲೈಟ್ಸ್ ಆ್ಯಂಡ್ ಸೌಂಡ್ಸ್ ಶೋ ಆರಂಭಿಸಲು ಯೋಜನೆ ರೂಪಿಸಲಾಗಿದೆ.

ಕಳೆದ ಐದು ವರ್ಷಗಳಿಂದ ಸ್ಥಗಿತಗೊಂಡ ಈ ಯೋಜನೆಯನ್ನು ಪುನರಾರಂಭಿಸಲು ಕ್ರಮ ಕೈಗೊಳ್ಳಲಾಗಿದ್ದು, ಈ ನಿಟ್ಟಿನಲ್ಲಿ ಸುಮಾರು ಒಂದು ಕೋ.ರೂ. ವೆಚ್ಚ ತಗುಲಬಹುದೆಂದು ಅಂದಾಜಿಸಲಾಗಿದೆ.

ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರ

ಬೇಕಲಕೋಟೆ ನವೀಕರಣ ಯೋಜನೆ ಭಾಗವಾಗಿ ಬೆಂಗಳೂರಿನಲ್ಲಿರುವ ಖಾಸಗಿ ಏಜೆನಿಯೊಂದು ಈಗಾಗಲೇ ಸಲ್ಲಿಸಿದ ಅಂದಾಜು ಪಟ್ಟಿಯನ್ನು ಜಿಲ್ಲಾ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಕೇರಳ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳಿಗೆ ಈಗ ಹಸ್ತಾಂತರಿಸಿದ್ದಾರೆ. »ಪುಟ 6



- 2020ರ ಡಿ. 20ರಿಂದ ಇಲ್ಲಿ ಈ ಶೋ ಆರಂಭವಾಗಿತ್ತು
- **ಬೆಂಗಳೂರಿನ ಏಜೆನ್ಸಿ ಮೂಲಕ 4 ಕೋಟಿ ರೂ. ವೆಚ್ಚದಲ್ಲಿ ಶೋ ವ್ಯವಸ್ಥೆ ಇತ್ತು**
- ಸಂದರ್ಶಕರ ಸಂಖ್ಯೆಯಲ್ಲಿ ಸತತ ಇಳಿಮುಖವಾದ ಪರಿಣಾಮ 2021ರ ಮಾರ್ಚ್ 28ರಿಂದ ಪ್ರದರ್ಶನ ರದ್ದಾಯಿತು.

ಪ್ರದರ್ಶನದಲ್ಲಿ ಆಗಲಿದೆ ಸಮಗ್ರ ಬದಲಾವಣೆ

ಕಳೆದ 5 ವರ್ಷಗಳಿಂದ ಸ್ಥಗಿತಗೊಂಡಿರುವ ಈ ಶೋ ಪುನರಾರಂಭಿಸಲು ಕೆಲವೊಂದು ಬದಲಾವಣೆ ಅನಿವಾರ್ಯವಾಗಿದೆ. ಉಪಯೋಗಿಸದಿರುವ ಜನರೇಟರ್, ಸೌಂಡ್ ಬಾಕ್ಸ್ ಕಾರ್ಯಪ್ರವೃತ್ತಗೊಳಿಸುವುದು, 58 ನಿಮಿಷ ದೀರ್ಘ ಶೋವನ್ನು 28 ನಿಮಿಷಕ್ಕೆ ಕಡಿತಗೊಳಿಸಿ ಪ್ರದರ್ಶನ ಸಂಖ್ಯೆ ಹೆಚ್ಚಿಸಿ ಅಧಿಕ ಮಂದಿಗೆ ವೀಕ್ಷಿಸಲು ಸಿಸ್ಟಂನಲ್ಲಿ ಬದಲಾವಣೆ ತರಲು ಉದ್ದೇಶಿಸಲಾಗಿದೆ.

ಹೀಗಿದೆ ಇದುವರೆಗಿನ ಖರ್ಚುವೆಚ್ಚಗಳ ಪಟ್ಟಿ

ವಿದ್ಯುತ್ ಖರ್ಚು ರೂಪದಲ್ಲಿ 2020ರ ಡಿಸೆಂಬರ್‌ನಿಂದ 2021ರ ಡಿಸೆಂಬರ್ ತನಕ 2 ಲಕ್ಷ ರೂ.



ವಿನಿಯೋಗಿಸಲಾಗಿದೆ. 2020ರ ಡಿಸೆಂಬರ್‌ನಲ್ಲಿ 25,264 ರೂ., 2021ರ ಜನವರಿಯಲ್ಲಿ 39,511 ರೂ., ಏಪ್ರಿಲ್‌ನಲ್ಲಿ 17,821 ರೂ., ಮೇ, ಜೂನ್, ಜುಲೈ ತಿಂಗಳುಗಳಲ್ಲಿ ಒಟ್ಟು 32,479 ರೂ., ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬಗಳಲ್ಲಿ ಒಟ್ಟು 47,309 ರೂ. ಮೊತ್ತ ಕೆಎಸ್‌ಇಬಿಗೆ ಪಾವತಿಸಲಾಗಿದೆ.

ಬ್ಯಾನರ್‌ನಲ್ಲಿ ಅನಾಮಿಕರ ಠಕ್ಕರ್

ಕಸ ಎಸೆವ ಮಂದಿಗೆ ಶ್ರದ್ಧಾಂಜಲಿ ಗೌರವ!

ವೈರಲ್ ಆಗುತ್ತಿದೆ ವಿಶಿಷ್ಟ 'ಎಚ್ಚರಿಕೆ'





ಕೈಕಂಬ: ಇಲ್ಲಿನ ಅಮ್ಮ ಕ್ಯಾಂಟೀನ್, ದುರ್ಗಾ ನಗರ ಸೇರಿದಂತೆ ಕುಪ್ಪೆಪದವು-ಎಡಪದವು ರಾಜ್ಯ ಹೆದ್ದಾರಿಯ ಉದ್ದಕ್ಕೂ ರಾಶಿ ರಾಶಿ ಕಸ ಎಸೆದು ಪರಾರಿಯಾಗುತ್ತಿದ್ದು, ಇದರಿಂದ ರೋಸಿ ಹೋದ ಸ್ಥಳೀಯ ಅನಾಮಿಕರು ಅಮ್ಮ ಕ್ಯಾಂಟೀನ್, ದುರ್ಗಾ ನಗರದಲ್ಲಿ ಬ್ಯಾನರ್‌ಗಳನ್ನು ಹಾಕಿ ಕಸ ಎಸೆಯುವವರ ವಿರುದ್ಧ 'ಭಾವಪೂರ್ಣ ಶ್ರದ್ಧಾಂಜಲಿ' ಅರ್ಪಿಸಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ಅಮ್ಮ ಕ್ಯಾಂಟೀನ್ ಬಳಿ ಹಾಕಲಾಗಿರುವ ಬ್ಯಾನರ್ ನಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ತುಳುವಿನಲ್ಲಿಯೇ ಭಾವಪೂರ್ಣ ಶ್ರದ್ಧಾಂಜಲಿ ಇಲ್ಲಿ ಕಸ ಬಿಸಾಡುವ ದಿವ್ಯ ಆತ್ಮಗಳಿಗೆ ಅರ್ಪಣೆ ಎಂದು ಬರೆಯಲಾಗಿದೆ. »ಪುಟ 6

ಅಪಾಯಕ್ಕೆ ಆಹ್ವಾನ ನೀಡುತ್ತಿದೆ ರೈಲ್ವೆ ನಿಲ್ದಾಣ ರಸ್ತೆ ಕಾಲು ದಾರಿ

ಕುಸಿತದ ಭೀತಿ ಹುಟ್ಟಿಸಿದೆ ಕಾಂಕ್ರಿಟ್ ಸ್ಲ್ಯಾಬ್

ಮಂಗಳೂರು: ನಗರದ ರೈಲ್ವೆ ನಿಲ್ದಾಣಕ್ಕೆ ಹೋಗುವ ಕಾಲು ದಾರಿ ಕಾಂಕ್ರಿಟ್ ರಸ್ತೆ ಕುಸಿಯುವ ಭೀತಿಯಲ್ಲಿದ್ದು, ನಿತ್ಯ ಅಪಾಯಕ್ಕೆ ಆಹ್ವಾನ ನೀಡುತ್ತಿದೆ.

ನಗರದ ಪುರಭವನದ ಬಳಿಯಿಂದ ಅಡ್ಡರಸ್ತೆ ಮುಖಾಂತರ ಮಂಗಳೂರಿನ ಪ್ರಧಾನ ರೈಲ್ವೆ ನಿಲ್ದಾಣಕ್ಕೆ ಹೋಗುವ ರಸ್ತೆ ಬದಿಯ ಪಾದಚಾರಿಗಳು ನಡೆದಾಡುವ ಕಾಲುದಾರಿಯ ಕಾಂಕ್ರೀಟ್ ಸ್ಲಾಬ್‌ಗಳು ಬಿರುಕು ಬಿಟ್ಟಿದ್ದು, ಯಾವುದೇ ಕ್ಷಣದಲ್ಲಿ ಕುಸಿಯುವ ಸ್ಥಿತಿಯಲ್ಲಿದೆ.

ಅಪಾಯದಲ್ಲಿ ಪ್ರಯಾಣಿಕರು

ಈ ಕಾಲು ದಾರಿಯಲ್ಲಿಯೇ ರೈಲ್ವೆ ನಿಲ್ದಾಣಕ್ಕೆ ಹೋಗುವ ಸಾವಿರಾರು ಪ್ರಯಾಣಿಕರು ನಡೆದುಕೊಂಡು ಹೋಗುತ್ತಿದ್ದು, ಅಪಾಯಕಾರಿಯಾಗಿ ಪರಿಣಮಿಸಿದೆ.



ಗಮನಕ್ಕೆ ತರಲಾಗಿದೆ

ಈ ಬಗ್ಗೆ ಹಲವಾರು ಭಾರಿ ಸಂಬಂಧ ಪಟ್ಟ ಇಲಾಖೆಯ ಅಧಿಕಾರಿಗಳ ಗಮನ ಸೆಳೆದಿದ್ದರೂ ಇದುವರೆಗೂ ದುರಸ್ತಿ ಪಡಿಸಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಾಳೆಯಿಂದ ವಾಹನ ಸಂಚಾರಗಳ ಸಮೀಕ್ಷೆ

ಫೆ.26ರ ಬೆಳಿಗ್ಗೆ 6 ಗಂಟೆಯಿಂದ ಫೆ.28 ಬೆಳಿಗ್ಗೆ 6 ಗಂಟೆಯ ತನಕ

ಮಂಗಳೂರು: ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಓಡಾಡುವ ವಾಹನಗಳ ಸಂಚಾರ ಸಮೀಕ್ಷೆಯನ್ನು ಫೆ.26ರ ಬೆಳಿಗ್ಗೆ 6 ಗಂಟೆಯಿಂದ ಫೆ.28 ರ ಬೆಳಿಗ್ಗೆ 6 ಗಂಟೆಯವರೆಗೆ 2 ದಿನಗಳ ಕಾಲ ನಡೆಸಲಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖಾ ವತಿಯಿಂದ ಈ ಸಮೀಕ್ಷೆಗೆ ಸುಮಾರು 139 ಗಣತಿ ಕೇಂದ್ರಗಳನ್ನು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಆಯ್ಕೆ ಮಾಡಲಾಗಿದೆ. ಈ ವಾಹನ ಸಂಚಾರ ಸಮೀಕ್ಷೆಯನ್ನು ಯಶಸ್ವಿಯಾಗಿ ನಡೆಸಲು ವಾಹನ ಚಾಲಕರು ಮತ್ತು ಸಾರ್ವಜನಿಕರು ಸಹಕರಿಸಬೇಕು ಎಂದು ಮಂಗಳೂರು ವಿಭಾಗದ ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಹನ ಚಾಲಕರಿಗೆ ಬಿ.ಸಿ.ರೋಡು-ಅಡ್ಡಹೊಳೆ ಹೆದ್ದಾರಿ ಚತುಷ್ಪಥ ಕಾಮಗಾರಿ worry

ತಿರುವು ಪಡೆಯಲು ಕಿಲೋ ಮೀಟರ್ ಸುತ್ತಾಟ!

ಬಂಟ್ವಾಳ: ಬಿ.ಸಿ. ರೋಡು-ಅಡ್ಡಹೊಳೆ ಹೆದ್ದಾರಿ ಚತುಷ್ಪಥ ಕಾಮಗಾರಿಯಿಂದಾಗಿ ಕೆಲವೊಂದು ಪ್ರದೇಶಗಳಲ್ಲಿ ಸ್ಥಳೀಯ ನಿವಾಸಿಗಳು ವಾಹನ ತಿರುವು ಪಡೆಯಲು ಕಿಲೋ ಮೀಟರ್‌ಗಳಷ್ಟು ದೂರ ಕ್ರಮಿಸಬೇಕಾದ ಸಮಸ್ಯೆ ಎದುರಾಗಿದೆ ಎಂಬ ದೂರು ಈಗ ಕೇಳಿಬಂದಿದೆ.

ಮನೆಗಳಿಗೆ ತೆರಳಲು ಸುತ್ತಾಟ

ಇಲ್ಲಿನ ಮೆಲ್ಕಾರ್ ಸಮೀಪದಲ್ಲೇ ಇರುವ ಬೋಳಂಗಡಿ ಪ್ರದೇಶದಲ್ಲಿ ಸರ್ಕಾರಿ ಖಾಸಗಿ ಶಾಲೆ, ಧಾರ್ಮಿಕ ಕೇಂದ್ರಗಳು, ಅಂಗನವಾಡಿ ಕೇಂದ್ರ ಸಹಿತ ಹಲವಾರು ವಾಸ್ತವ್ಯದ ಮನೆಗಳಿವೆ. ಇಲ್ಲಿನ ಸ್ಥಳೀಯರು ಇಲ್ಲಿಗೆಮಾತ್ರವಲ್ಲ, ಖುದ್ದು ತಮ್ಮ ಮನೆಗಳಿಗೆ ತೆರಳಬೇಕು ಎಂದಾದರೂ ಒಂದೆರಡು ಕಿಲೋ ಮೀಟರ್ ಕ್ರಮಿಸುವ ಅನಿವಾರ್ಯತೆ ಇದೆ.

ಊರು ಸಮಸ್ಯೆಗಳು ನೂರು





ತಿರುವು ಪಡೆಯಲು ಪರದಾಟ

ಇಲ್ಲಿನ ನಿವಾಸಿಗಳು ತಿರುವು ಪಡೆಯ ಬೇಕಾದರೆ ಒಂದು ಬದಿಯ ಕೆ.ಸಿ. ರೋಡ್ ಜಂಕ್ಷನ್‌ಗೆ ಬರಬೇಕು ಅಥವಾ ಇನ್ನೊಂದು ಕಡೆಯ ಲ್ಲಿನ ಮೆಲ್ಕಾರ್ ಜಂಕ್ಷನ್‌ಗೆ ಬರಬೇಕು. »ಪುಟ 6

- ಹೆದ್ದಾರಿ ಮಧ್ಯೆ ತಿರುವು ಪಡೆಯುವ ಅವಕಾಶವಿಲ್ಲದೆ ಸ್ಥಳೀಯರಿಗೆ ಕಷ್ಟ
- ಅಗತ್ಯ ಕಾರ್ಯಗಳಿಗೆ ಸಂಚರಿಸಲು ಭರಿಸಬೇಕಿದೆ ಈಗ ದುಬಾರಿ ವೆಚ್ಚ

ಹೆದ್ದಾರಿ ದಾಟಲೂ ಸಾಧ್ಯವಾಗದ ಪರಿಸ್ಥಿತಿ

ಇಲ್ಲಿ ಹಲವು ಕಡೆಗಳಲ್ಲಿ ಬಸ್ಸುಗಳನ್ನು ಆಶ್ರಯಿಸಲೂ ಕೂಡಾ ಸ್ಥಳೀಯರು ಒಂದು ಬದಿಯಿಂದ ಇನ್ನೊಂದು ಬದಿಗೆ ಹೆದ್ದಾರಿ ದಾಟಲೂ ಸಾಧ್ಯವಾಗದ ಪರಿಸ್ಥಿತಿ ಇದೆ. ಹೆದ್ದಾರಿ ದಾಟುವಾಗಲು ವಯೋವೃದ್ಧರು, ಅಶಕ್ತರು, ಹರಸಾಹಸ ಪಡುತ್ತಿದ್ದಾರೆ. ಅಲ್ಲದೆ ರಾಷ್ಟ್ರೀಯ ಹೆದ್ದಾರಿಯ ಒಂದು ಬದಿಯಲ್ಲಿ ಮಾತ್ರ ಪ್ರಯಾಣಿಕರ ತಂಗುದಾಣ ಇದ್ದು, ಇನ್ನೊಂದು ಬದಿಯಲ್ಲಿ ಪ್ರಯಾಣಿಕರು ಬಿಸಿಲ ಝಳದಲ್ಲಿಯೇ ಬೆಂದು ಬಸ್ಸಿಗಾಗಿ ಕಾದು ನಿಲ್ಲಬೇಕಾಗಿದೆ.

ಸುತ್ತ ಮುತ್ತ

ಸರ್ವಿಸ್ ಬಸ್ ನಿಲ್ದಾಣದ ಅವ್ಯವಸ್ಥೆ ಸರಿಪಡಿಸಲು ಸುವಂತೆ ಆಗ್ರಹ

ಉಡುಪಿ: ಉಡುಪಿ ಸರ್ವಿಸ್ ಬಸ್ ನಿಲ್ದಾಣದ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ಜಿಲ್ಲಾಧ್ಯಕ್ಷ ಸುಜಯ್ ಪೂಜಾರಿ ಆಗ್ರಹಿಸಿದ್ದಾರೆ. ಉಡುಪಿ ನಗರದ ಸರ್ವಿಸ್ ಬಸ್ ನಿಲ್ದಾಣಕ್ಕೆ ಸಾವಿರಾರು ಪ್ರಯಾಣಿಕರು ಆಗಮಿಸುತ್ತಾರೆ. ಆದರೆ ಬಸ್ ನಿಲ್ದಾಣ ಮಾತ್ರ ಅವ್ಯವಸ್ಥೆಯ ಆಗರವಾಗಿದೆ.
ಬಸ್ ನಿಲ್ದಾಣದಲ್ಲಿ ಯಾವುದೇ ಮೂಲ ಸೌಕರ್ಯಗಳಿಲ್ಲದೇ ಇರುವುದ ರಿಂದ ಪ್ರಯಾಣಿಕರು ಪರದಾಡುತ್ತಿದ್ದಾರೆ. ಕುಡಿಯುವ ನೀರಿನ ಘಟಕ ಶುಚಿತ್ವವಿಲ್ಲದೇ ಪ್ರಯಾಣಿಕರು ದುಡ್ಡು ಕೊಟ್ಟು ನೀರು ಕುಡಿಯಬೇಕಾದ ಪರಿಸ್ಥಿತಿ ಎದುರಾಗಿದೆ. ಪ್ರಯಾಣಿಕರು ಕುಳಿತುಕೊಳ್ಳುವ ಕೆಲವೊಂದು ಕುರ್ಚಿ ಮುರಿದು ಬಿದ್ದಿದ್ದು ಆಸನದ ವ್ಯವಸ್ಥೆ ಇಲ್ಲದೆ ಪ್ರಯಾಣಿಕರು ಪರದಾಡುತ್ತಿದ್ದಾರೆ.
ಬಸ್ ನಿಲ್ದಾಣದಲ್ಲಿ ಅಲ್ಲಲ್ಲಿ ಕಸದ ರಾಶಿ ತಿಂಡಿ ಪೊಟ್ಟಣಗಳು ಬಿದ್ದಿರುವುದನ್ನು ದಿನನಿತ್ಯ ನೋಡಬಹುದು. ಅದೇ ಕಸದ ರಾಶಿಯ ಮಧ್ಯೆ ಜನರು ನಿಂತಿರಬೇಕು. ಅಧಿಕಾರಿಗಳು ಸಾರ್ವಜನಿಕರಿಗೆ ಅವಶ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸದೆ ಜಾಣ ಕುರುಡು ಪ್ರದರ್ಶಿಸುತ್ತಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಉಬಾರ್ ಡೋನರ್ಸ್ ಹೆಲ್ಪ್‌ಲೈನ್: ಆಹಾರ ಕಿಟ್ ವಿತರಣೆ

ಉಪ್ಪಿನಂಗಡಿ: ಉಬಾರ್ ಡೋನರ್ಸ್ ಹೆಲ್ಪ್‌ಲೈನ್ ಉಪ್ಪಿನಂಗಡಿ ಇದರ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯೂ ರಂಜಾನ್ ಸಮಯದಲ್ಲಿ ಅರ್ಹರಿಗೆ ಆಹಾರದ ಕಿಟ್ ವಿತರಣೆ ಹಾಗೂ ಎರಡನೇ ಹಂತದ ಹೊಲಿಗೆ ಯಂತ್ರ ವಿತರಣಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉಪ್ಪಿನಂಗಡಿಯ ಮಾಲೀಕುದ್ದಿನಾರ್ ಜುಮಾ ಮಸೀದಿ ಅಧ್ಯಕ್ಷ ಎಚ್. ಯೂಸುಫ್ ಹಾಜಿ ಮಾತನಾಡಿ, ಅರ್ಹರಿಗೆ ಆಹಾರವನ್ನು ತಲುಪಿಸುವ ಜೊತೆಗೆ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಬಡ ಹೆಣ್ಣು ಮಕ್ಕಳ ಮದುವೆಯನ್ನು ಮಾಡಿಸುವುದರ ಮೂಲಕ ದೇವರ ಕೃಪೆಗೆ ಪಾತ್ರರಾಗಬೇಕೆಂದು ಹೇಳಿದರು.
ಕಡವಿನಬಾಗಿಲು ಬಿಲಾಲ್ ಮಸೀದಿಯ ಖತೀಬ್ ಇಸ್ಮಾಯಿಲ್ ರಿಝ್ವಿ ಪ್ರಾರ್ಥನೆಗೈದರು. ಸಮಾರಂಭದಲ್ಲಿ ನಿವೃತ್ತ ಶಿಕ್ಷಕ ವಿನ್ಸೆಂಟ್ ಫೆರ್ನಾಂಡಿಸ್, ನಝೀರ್ ಹೊಸಮೊಗ್ರು, ಉಪ್ಪಿನಂಗಡಿ ಗ್ರಾಮ ಪಂಚಾಯತ್‌ನ ನಿಕಟಪೂರ್ವ ಉಪಾಧ್ಯಕ್ಷೆ ವಿದ್ಯಾಲಕ್ಷ್ಮಿ ಪ್ರಭು, ಪ್ರಮುಖರಾದ ಇಸುಬು ಪೆದಮಲೆ, ಹಮೀದ್ ಎಂ.ಜಿ., ಮಹಮ್ಮದ್ ಮುಸ್ತಫಾ, ಇಸ್ಮಾಯಿಲ್ ತಂಙಳ್, ಅಶ್ರಫ್ ಹಾಜಿ ಸಿಟಿ, ಹಾರೂನ್ ಅಗ್ನಾಡಿ, ರವೂಫ್ ಹಾಜಿ ಯು.ಟಿ., ಮತ್ತಿತರರು ಪಾಲ್ಗೊಂಡಿದ್ದರು.
ಉಪ್ಪಿನಂಗಡಿ, ಮಠ, ಬೆದ್ರೋಡಿ, ಗೋಳಿತ್ತೊಟ್ಟು, ಪೆರಿಯಡ್ಕ, ಕೆಮ್ಮಾರ, ಕೊಯಿಲ, ಆತೂರು, 34 ನೆಕ್ಕಿಲಾಡಿ, ಶಾಂತಿನಗರ, ಕೋಡಿಂಬಾಡಿ, ಕರ್ವೇಲು, ಬಿಳಿಯೂರು, ಕರಾಯ, ಕಲ್ಲೇರಿ, ತಣ್ಣೀರುಪಂಥ, ಕಳೆಂಜಿಬೈಲು, ತೆಕ್ಕಾರು, ಇಳಂತಿಲ, ಬಂದಾರು, ಅಂಡೆತ್ತಡ್ಕ, ಬಟ್ಲಡ್ಕ ಪ್ರದೇಶದ ಅರ್ಹ ಮನೆಗಳಿಗೆ ತೆರಳಿ 624 ಆಹಾರ ಸಾಮಗ್ರಿಗಳನ್ನೊಳಗೊಂಡ ಕಿಟ್ ವಿತರಿಸಲಾಯಿತು. 2ನೇ ಹಂತವಾಗಿ 24 ಮಂದಿಗೆ ಹೊಲಿಗೆ ಯಂತ್ರ ವಿತರಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಶಬೀರ್ ಕೆಂಪಿ, ಗೌರವ ಸಲಹೆಗಾರರಾದ ಮಹಮ್ಮದ್ ತೌಸೀಫ್ ಯು.ಟಿ., ಇರ್ಷಾದ್ ಯು.ಟಿ. ಹಾಗೂ ಜಲೀಲ್ ಮುಕ್ರಿ ವಿವಿಧ ಕಾರ್ಯಕ್ರಮಗಳನ್ನು ನಿರ್ವಹಿಸಿದರು.

ಅಶೋಕ್ ರೈ ದಲಿತ ಸಮುದಾಯವನ್ನು ನಿಂದಿಸಿಲ್ಲ: ಎಸ್‌ಸಿ ಘಟಕ

ಪುತ್ತೂರು: ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರು ಉಪ್ಪಿನಂಗಡಿಯಲ್ಲಿ ಶಾಸಕ ಅಶೋಕ್ ರೈ ವಿರುದ್ಧ ರಾಜಕೀಯ ಹೇಳಿಕೆ ನೀಡಿ ಲೇವಡಿ ಮಾಡಿದ್ದರು. ಇದಕ್ಕೆ ಶಾಸಕರು ಕೂಡ ರಾಜಕೀಯ ಹೇಳಿಕೆ ಮೂಲಕ ಪ್ರತ್ಯುತ್ತರ ನೀಡಿದ್ದಾರೆಯೇ ಹೊರತು ಎಲ್ಲೂ ಕೂಡ ಅವರು ದಲಿತ ಸಮುದಾಯವನ್ನು ನಿಂದಿಸುವ ಹೇಳಿಕೆ ನೀಡಿಲ್ಲ ಎಂದು ಪುತ್ತೂರು ಕಾಂಗ್ರೆಸ್ ಎಸ್‌ಸಿ ಘಟಕ ಹೇಳಿದೆ.
ಪುತ್ತೂರು ಬ್ಲಾಕ್ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ಬಾಬು ಮರಿಕೆ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಶೋಕ್ ರೈ ಅವರು ತಮ್ಮ ಮಾತಿನಲ್ಲಿ ಎಲ್ಲೂ ದಲಿತ ಶಬ್ದದ ಉಲ್ಲೇಖ ಮಾಡಿಲ್ಲ, ನಾಯಿಗಳು ಒಳ್ಳೆಯವರನ್ನು ಕಂಡರೂ ಬೊಗಳುತ್ತವೆ. ಕೆಟ್ಟವರನ್ನು ಕಂಡರೂ ಬೊಗಳುತ್ತವೆ. ಅದಕ್ಕೆ ಉತ್ತರ ನೀಡಬೇಕಾಗಿಲ್ಲ, ನಾರಾಯಣ ಸ್ವಾಮಿ ಅವರು ನಾಲಾಯಕ್ ಸ್ವಾಮಿ ಎಂದು ಅಶೋಕ್ ರೈ ಹೇಳಿದ್ದಾರೆ. ಇದೊಂದು ರಾಜಕೀಯ ಹೇಳಿಕೆಯಾಗಿದೆ. ಇಲ್ಲಿ ಎಲ್ಲೂ ದಲಿತ ಸಮುದಾಯದ ಹೆಸರು ಉಲ್ಲೇಖವಿಲ್ಲ. ನಾರಾಯಣ ಸ್ವಾಮಿ ಪ್ರತಿಪಕ್ಷದ ನಾಯಕ ಎಂಬ ಕಾರಣಕ್ಕೆ ಅವರನ್ನು ಪುತ್ತೂರಿನ ಬಿಜೆಪಿಗರು ಭಾಷಣ ಮಾಡಲು ಕರೆದಿದ್ದರೇ ಹೊರತು ದಲಿತ ಮುಖಂಡ ಎಂಬ ಕಾರಣಕ್ಕಲ್ಲ. ಅದೇ ರೀತಿ ತಮ್ಮ ವಿರುದ್ಧ ಮಾತನಾಡಿದ ಕಾರಣ ಶಾಸಕರು ಕೂಡ ರಾಜಕೀಯ ಉತ್ತರ ನೀಡಿದ್ದಾರೆ. ಅವರು ಎಲ್ಲಿಯೂ ದಲಿತ ಶಬ್ದ ಉಲ್ಲೇಖ ಮಾಡಿಲ್ಲ ಎಂದರು.

ಅಗನತ್ಯ ವಿವಾದ

ಬಿಜೆಪಿ ನಾಯಕರು ಅಗನತ್ಯ ವಿವಾದ ಸೃಷ್ಟಿಸಲು ಯತ್ನಿಸಿದ್ದಾರೆ. ದಲಿತರನ್ನು ಶಾಸಕರ ವಿರುದ್ಧ ಎತ್ತಿ ಕಟ್ಟಲು ವಿಫಲ ಯತ್ನ ನಡೆಸಿದ್ದಾರೆ. ಆದರೆ, ಪುತ್ತೂರು ಕ್ಷೇತ್ರದ ದಲಿತ ಸಮಾಜ ಶಾಸಕರ ಜತೆಯಲ್ಲಿದೆ. ದಲಿತರ ಹೆಸರು ಬಳಸಿಕೊಂಡು ಬಿಜೆಪಿ ನಾಯಕರು ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿದ್ದಾರೆ ಎಂದು ಬಾಬು ಮರಿಕೆ ಹೇಳಿದರು.
ಸುದ್ದಿಗೋಷ್ಠಿಯಲ್ಲಿ ಪಕ್ಷದ ಹಿರಿಯ ಮುಖಂಡ ಸೋಮನಾಥ್, ನಾಯಕರಾದ ಮುಕೇಶ್ ಕೆಮ್ಮಿಂಜೆ, ಪ್ರಕಾಶ್ ಹಾರಾಡಿ, ರಾಮಣ್ಣ ಪಿಲಿಂಜ ಉಪಸ್ಥಿತರಿದ್ದರು.

500 ಅಡಿ ಎತ್ತರದಲ್ಲಿರುವ ದೇಗುಲ | ಮಾ.1ರಿಂದ 6ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮ

ಬ್ರಹ್ಮಕಲಶ ಸಂಭ್ರಮದಲ್ಲಿ ಮಲೆಂಗಲ್ಲು ಶ್ರೀಕ್ಷೇತ್ರ

ಬೆಳ್ತಂಗಡಿ: ಸುಮಾರು 500 ಅಡಿ ಎತ್ತರದಲ್ಲಿರುವ ಏಕ ಶಿಲೆಯ ನಂದಿ ಆಕಾರದ ಕಲ್ಲಿನ ಮೇಲೆ ನೆಲೆಯಾಗಿ ತನ್ನ ಮಹಿಮೆಯ ಮೂಲಕ ಭಕ್ತ ಗಣವನ್ನು ಸಲಹುತ್ತಿರುವ ಮಲೆಂಗಲ್ಲು ಉಮಾಮಹೇಶ್ವರ ದೇವರ ಸನ್ನಿಧಿಯಲ್ಲಿ ನಾಲ್ಕನೇ ಬ್ರಹ್ಮಕಲಶೋತ್ಸವದ ಕಳೆ ತುಂಬುತ್ತಿದೆ. ಆಪತ್ತುಗಳನ್ನು ನಿವಾರಿಸಿ ಮಂಗಲ ಕಾರ್ಯಗಳನ್ನು ಅನುಗ್ರಹಿಸುವ ಶಿವಪಾರ್ವತಿಯರ ಆಲಯವು ಅಷ್ಟಬಂಧ ಬ್ರಹ್ಮಕಲಶೋತ್ಸವದ ಗತವೈಭವಕ್ಕೆ ತಾಲೂಕಿನ ಪದ್ಮುಂಜದ ಮಲೆಂಗಲ್ಲು ಕ್ಷೇತ್ರ ಸಜ್ಜುಗೊಳ್ಳುತ್ತಿದೆ.

ಆಕರ್ಷಣೀಯ ಸ್ಥಳ

ಮಲೆ ಎಂದರೆ ಕಾಡು, ಈ ಕಾನನದ ನಡುವೆವಿರುವ ನಂದಿ ಆಕಾರದ ಕಲ್ಲಿನ ಮೇಲೆ ಉಮಾಮಹೇಶ್ವರ ದೇಗುಲವಿದೆ. ಹೀಗಾಗಿ ಇಲ್ಲಿಗೆ ಮಲೆಂಗಲ್ಲು ಹೆಸರು ಬಂದಿದೆ. ಪುಣ್ಯ ಕ್ಷೇತ್ರವು ತನ್ನ ಮಹಿಮೆಯೊಂದಿಗೆ ಭಕ್ತರನ್ನು ಸಲಹುವುದರೊಂದಿಗೆ ಪ್ರವಾಸಿತಾಣವಾಗಿ ಆಕರ್ಷಿಸುತ್ತಿದೆ. 500 ಅಡಿ ಎತ್ತರದಲ್ಲಿರುವ ಈ ಪುಣ್ಯಕ್ಷೇತ್ರಕ್ಕೆ ಬಂದು ಸುತ್ತಲು ಕಣ್ಣು ಹಾಯಿಸಿದರೆ ಸುತ್ತಲು ಹಚ್ಚಹಸಿರಿನಿಂದ ಕೂಡಿರುವ ಪ್ರಕೃತಿಯ ಸಿರಿ ಕಣ್ಣಿಗೆ ಮುದ, ಮನಸ್ಸಿಗೆ ಹಿತ ನೀಡುತ್ತದೆ.

ಶಿವಪಾರ್ವತಿಯ ಕ್ಷೇತ್ರ

ಬಂಟ್ವಾಳ ತಾಲೂಕಿನ ಕಾರಿಂಜದಲ್ಲಿ ನೆಲೆಗೊಂಡಿದ್ದ ಶಿವಪಾರ್ವತಿಯರು ಇತಿಹಾಸ ಪ್ರಕಾರ ವಿಹಾರಕ್ಕೆಂದು ಹೊರಟು ಅವರು ಪ್ರಕೃತಿಯ ರಮಣೀಯತೆಯನ್ನು ನೋಡಿ ಇಲ್ಲಿ ನೆಲಸಬೇಕೆಂಬ ಉದ್ದೇಶದಿಂದ ದೌಮ್ಯಾ ಮಹರ್ಷಿಗಳ ತಪಸ್ಸಿಗೆ ಮೆಚ್ಚಿ ಉಮಾಮಹೇಶ್ವರ ದೇವರು ಮಲೆಂಗಲ್ಲಿನಲ್ಲಿ ನೆಲೆಗೊಂಡಿದ್ದಾರೆ. ಕಾರಿಂಜದಲ್ಲಿ ಶಿವಪಾರ್ವತಿಯರು ಗುಡಿ ಬೇರೆ ಬೇರೆಯಿದ್ದರೆ ಇಲ್ಲಿ ಒಂದೇ ಗುಡಿಯಲ್ಲಿ ಶಿವಪಾರ್ವತಿ ಇದ್ದಾರೆ. ವೀರಶಂಭು ಕಲ್ಕುಡ ಶಿಲ್ಪಿ ಕಾರ್ಕಳದ ಬೈರವ ಅರಸರ ಆಳ್ವಿಕೆ ಕಾಲಘಟ್ಟದಲ್ಲಿ ಶಿವಾಲಯ ನಿರ್ಮಾಣ ಮಾಡುವ ಸಂದರ್ಭ ಈ ಮಲೆಂಗಲ್ಲು ಕ್ಷೇತ್ರವು ವೀರಶಂಭು ಕಲ್ಕುಡನ ಜೀವಿತಾವಧಿಯಲ್ಲಿ ನಿರ್ಮಾಣ ಮಾಡಿರುವುದಾಗಿ ಹಿರಿಯರು ತಿಳಿಸಿರುವ ಪ್ರತೀತಿಯೂ ಇದೆ.

ದೈವೀ ಶಕ್ತಿಯ ಸನ್ನಿಧಿ

ಬೈರವ ಅರಸರ ಕಾಲದ ಬಳಿಕ ವೀರಶಂಭು ಕಲ್ಕುಡನ ನೆನೆಪಿಗಾಗಿ ಪದ್ಮುಂಜದಲ್ಲಿ ಶಿಲಾಸ್ತಂಭ ಸ್ಥಾಪನೆ ಮಾಡಿ ಕಲ್ಕುಡ ಮಾಡ, ಇಂತಹ ಐತಿಹಾಸಿಕ ಘಟನೆಗಳು ಈ ಕ್ಷೇತ್ರದಲ್ಲಿದೆ. ಕಾರಿಂಜ ಕ್ಷೇತ್ರದಿಂದ ದೇವರು ಇಲ್ಲಿಗೆ ವಿಹಾರ ಬಂದ ಸಂದರ್ಭದಲ್ಲಿ ವೀರಶಂಭು ಕಲ್ಕುಡ ದೈವ, ಪಿಲಿಚಾಮುಂಡಿ, ಕೊಡಮಣಿತ್ತಾಯ ದೈವಗಳು ಬಂದು ನೆಲೆಸಿರುವ ಪುಣ್ಯದ ಗ್ರಾಮ ಕಣಿಯೂರು. ಧರ್ಮಸ್ಥಳದಲ್ಲಿ ನ್ಯಾಯ ಕೊಡುವ ವ್ಯವಸ್ಥೆ, ಅದೇ ರೀತಿ ಸತ್ಯದ ಊರು ಕಣಿಯೂರು ಎಂಬ ಪ್ರತೀತಿ ಇದೆ. ಕಲ್ಕುಡ ಮತ್ತು ಉಮಾಮಹೇಶ್ವರ ದೇವರ ಅನುಗ್ರಹದಿಂದ ಕಣಿಯೂರಿಗೆ ಈ ವಿಶೇಷ ಹೆಸರು ಬಂದಿದೆ. ಮಲೆಂಗಲ್ಲು ನಾಡಿನ ಕಾರಣೀಕ ಕ್ಷೇತ್ರಗಳಲ್ಲಿ ಒಂದಾಗಿದೆ. ಈ ಹಿಂದೆ ಬೇಟೆಗೆ ಹೋಗುವವರು ಇಲ್ಲಿಗೆ ಬಂದು ಪ್ರಾರ್ಥಿಸಿ ಹೋಗುತ್ತಿದ್ದರು ಎಂಬುದು ಪ್ರತೀತಿ.

ದಾಳಿ ನಡೆದಿತ್ತು

ವೀರ ಶಂಭುಕಲ್ಕುಡ ಶಿಲಾಮಯ ದೇವಸ್ಥಾನ ನಿರ್ಮಾಣ ಮಾಡುವ ಸಂದರ್ಭದಲ್ಲಿ ಒಂದು ಮನುಷ್ಯನಷ್ಟು ಎತ್ತರವಿರುವ ಶಿವ ಮತ್ತು ಪಾರ್ವತಿಯರ ಪ್ರತ್ಯೇಕ ಒಂದು ಮೂರ್ತಿ ಇತ್ತು. ಕಾಲಾನಂತರದಲ್ಲಿ ಟಿಪ್ಪು ಸುಲ್ತಾನರ ಆಡಳಿತ ಸಂದರ್ಭದಲ್ಲಿ ದೇಗುಲಗಳಿಗೆ ದಾಳಿ ಆಗುವ ಸಮಯದಲ್ಲಿ ಮಲೆಂಗಲ್ಲು ಕ್ಷೇತ್ರವು ದಾಳಿಗೆ ಒಳಗಾಗಿತ್ತು ಎನ್ನುತ್ತಾರೆ ಅರ್ಚಕ ವಿಜಯ್ ಕುಮಾರ್.

ನಾಲ್ಕನೇ ಬ್ರಹ್ಮಕಲಶದ ವೈಭವ

1945ರ ಮೊದಲು ವರ್ಷಕ್ಕೊಮ್ಮೆ ಪೂಜೆ ಊರಿನವರು ಸೇರಿ ಒಂದು ರಾಶಿ ಪೂಜೆ ನಡೆಸುತ್ತಿದ್ದರು. ಪ್ರಾಚೀನ ಕಾಲದಲ್ಲಿ ಈ ದೇವಸ್ಥಾನವನ್ನು ಪಿಲಿಕುಡೇಲು ಜೈನಮನೆತನದವರು ಮುನ್ನಡೆಸುತ್ತಿದ್ದರು. 1945ರಲ್ಲಿ ಕೊಲ್ಲಾಜೆ ರಾಘವೇಂದ್ರಯ್ಯನವರು ಶ್ರೀ ಉಮಾಮಹೇಶ್ವರ ದೇವರ ಪ್ರತಿಷ್ಠಾಪನೆ ಮಾಡಿದರು. 1985ರಲ್ಲಿ ಗಾಳಿ ಮಳೆಯ ಹೊಡೆತದಿಂದ ದೇವಾಲಯದ ನಮಸ್ಕಾರ ಮಂಟಪ ಧರೆಗೆ ಉರುಳಿದಾಗ, ಆಡಳಿತ ಮತ್ತು ಊರವರ ಸಹಕಾರದಿಂದ 1988ರಲ್ಲಿ ಜೀರ್ಣೋದ್ಧಾರ ಕಾರ್ಯಗಳನ್ನು ಆರಂಭಿಸಿ, 1996ರಲ್ಲಿ ಬ್ರಹ್ಮಕಲಶೋತ್ಸವವು ನಡೆದಿರುತ್ತದೆ. ಪ್ರಕೃತಿ ವಿಕೋಪದಿಂದಾಗಿ 1999ರಲ್ಲಿ ಎರಡನೇ ಬ್ರಹ್ಮಕಲಶೋತ್ಸವ ನಡೆದಿರುತ್ತದೆ. 2012ರಲ್ಲಿ ಮೂರನೇ ಬ್ರಹ್ಮಕಲಶ ನಡೆದಿದ್ದು ಇದೀಗ 2026ರ ಮಾರ್ಚ್ 1ರಿಂದ 6 ರವರೆಗೆ ಬ್ರಹ್ಮಕಲಶೋತ್ಸವ ಜರುಗಲಿದೆ. ಭಕ್ತಾದಿಗಳಾದ ತಾವೆಲ್ಲರೂ ತನು-ಮನ-ಧನಗಳಿಂದ ಸಹಕಾರವನ್ನು ನೀಡಿ ಶ್ರೀದೇವರ ಕೃಪೆಗೆ ಪಾತ್ರರಾಗಬೇಕೆಂದು ಸಮಿತಿ ಆಶಿಸಿದೆ.





ಒಂದೇ ಮೂರ್ತಿಯಲ್ಲಿ ಶಿವಪಾರ್ವತಿಯರು

ರಾಜ್ಯದಲ್ಲಿ ಶಿವಲಿಂಗ ಹೊರತು ಪಡಿಸಿ ಶಿವನ ಶಿಲಾಮೂರ್ತಿವಿರುವ ಕ್ಷೇತ್ರ ಮಲೆಂಗಲ್ಲು ಮಾತ್ರ. ಇಲ್ಲಿ ಒಂದೇ ಗರ್ಭಗುಡಿಯ ಪಾಣಿಪೀಠದಲ್ಲಿ ಶಿವ ಮತ್ತು ಪಾರ್ವತಿ ಒಂದೇ ಮೂರ್ತಿಯಲ್ಲಿದ್ದು ಆರಾಧನೆ ಮಾಡಲಾಗುತ್ತಿದೆ.

ಏಕಶಿಲೆಯ ಮೇಲೆ ದೇವಸ್ಥಾನ

ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನವು 300 ವರ್ಷಗಳ ಐತಿಹಾಸಿಕ ಹಿನ್ನೆಲೆ ಹೊಂದಿದ್ದು, ದಟ್ಟ ಕಾನನದ ಮಧ್ಯೆ 500 ಅಡಿ ಎತ್ತರದ ಏಕಶಿಲೆಯ ಮೇಲೆ ನಿರ್ಮಿತವಾಗಿದೆ. ಈ ದೇವಾಲಯದ ಸುತ್ತಲೂ ಪ್ರಕೃತಿ ರಮಣೀಯ ದೃಶ್ಯಗಳನ್ನು ಹೊಂದಿದ್ದು, ಪಶ್ಚಿಮ ಘಟ್ಟಗಳ ಸಾಲು ಮತ್ತು ಶ್ರೀ ಕಾರಿಂಜೇಶ್ವರ ದೇವಸ್ಥಾನದ ಸೊಬಗಿನ ನೋಟವನ್ನು ಕಾಣಬಹುದು.

ಅಭೀಷ್ಟಗಳು ಈಡೇರಿಕೆ

ಈ ದೇವಾಲಯದಲ್ಲಿ ಅನೇಕ ಭಕ್ತರ ಅಭೀಷ್ಟಗಳು ನೇರವೇರಿದ ನಿದರ್ಶನಗಳಿವೆ. ಶಾರೀರಿಕ ಆಪತ್ತುಗಳಿಗೆ ಒಳಗಾಗಿ ಮರಣದಶಯದಲ್ಲಿರುವರು ಇಲ್ಲಿಗೆ ಬಂದು ಶಿವನನ್ನು ಪ್ರಾರ್ಥಿಸಿ ಚೇತರಿಸಿಕೊಂಡು ಕ್ಷೇತ್ರದ ಮಹಿಮೆಯಿಂದ ನವ ಜೀವನ ಆರಂಭಿಸಿದವರು ಅನೇಕ ಮಂದಿ. ಜಿಲ್ಲೆ, ರಾಜ್ಯದಿಂದ ಅನೇಕ ಮಂದಿ ಭಕ್ತರು ಆಗಮಿಸಿ ದೇವರಲ್ಲಿ ತಮ್ಮ ಹರಕೆ, ಇಷ್ಟಾರ್ಥ, ವಿವಾಹ, ಸಂತಾನ ಭಾಗ್ಯ, ಅನಾರೋಗ್ಯ ನಿವಾರಣೆಗೆ, ಸುಖ ದಾಂಪತ್ಯ ಜೀವನ, ಮಂಗಲ ಕಾರ್ಯಗಳಿಗೆ ದೇವರ ಮೊರೆ ಹೋದಲ್ಲಿ ಈಡೇರಿದ ಪುರಾವೆಗಳಿವೆ.

25 ಸಾವಿರಕ್ಕೂ ಅಧಿಕ ಭಕ್ತರು ಆಗಮಿಸುವ ನಿರೀಕ್ಷೆ



ಇತಿಹಾಸದ ನಾಲ್ಕನೇ ಬ್ರಹ್ಮಕಲಶೋತ್ಸವ ಕ್ಷೇತ್ರದಲ್ಲಿ ನಡೆಯುತ್ತಿದ್ದು ಅಂದಾಜು 70 ಲಕ್ಷ ರೂ.ಗಳಲ್ಲಿ ಈ ಬ್ರಹ್ಮಕಲಶೋತ್ಸವ ಜರುಗಲಿದೆ. ಸುಮಾರು 25 ಸಾವಿರ ಭಕ್ತರು ಕ್ಷೇತ್ರಕ್ಕೆ ಆಗಮಿಸುವ ನಿರೀಕ್ಷೆಯಿದ್ದು 1.15 ಕೋಟಿ ರೂ. ವೆಚ್ಚದಲ್ಲಿ ಜೀರ್ಣೋದ್ಧಾರ ಕಾರ್ಯಗಳನ್ನು ಕೈಗೆತ್ತಿಕೊಂಡು ಶಿಲಾಮಯ ಮಹಾಗಣಪತಿ ದೇವರ ಮತ್ತು ವ್ಯಾಘ್ರಚಾಮುಂಡಿಯ ಗರ್ಭಗುಡಿ, ಅನ್ನಛತ್ರ, ಅರ್ಚಕರ ಕೊಠಡಿ, ಗ್ರ್ಯಾನೈಟ್-ಇಂಟರ್ ಲಾಕ್ ಅಳವಡಿಕೆ, ಶೌಚಾಲಯ ಸಹಿತ ನಾನಾ ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗಿದೆ.

- ವಿಠಲ ಶೆಟ್ಟಿ ಕೊಲ್ಲೊಟ್ಟು, ಅಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ

ಎಲ್ಲಾ ಕಾರ್ಯಗಳಿಗೂ ಭಕ್ತಾದಿಗಳು ಸಹಕಾರ ನೀಡಿ



ಮಾರ್ಚ್ 1ರಿಂದ 6 ರವರೆಗೆ ಅಷ್ಟಬಂಧ ಬ್ರಹ್ಮಕಲಶೋತ್ಸವ ಜರುಗಲಿದೆ. ಅದಕ್ಕೆ ನಾನಾ ಕೆಲಸಗಳೊಂದಿಗೆ ಶ್ರೀಕ್ಷೇತ್ರವು ಸಜ್ಜುಗೊಳ್ಳುತ್ತಿದೆ. ನಮ್ಮೂರಿನ ದೇವರ ಉತ್ಸವವನ್ನು ಎಲ್ಲರೂ ಒಗ್ಗೂಡಿ ಸೇರಿ ಅದ್ದೂರಿಯಿಂದ ನಡೆಸಲಿದ್ದು, ಭಕ್ತರು ತನು-ಮನ-ಧನಗಳಿಂದ ಸಹಕಾರವನ್ನು ನೀಡಿ ದೇವರ ಕೃಪೆಗೆ ಪಾತ್ರರಾಗಬೇಕು.

- ಸದಾನಂದ ಮೇಲಾಂಟ ಮೊಗರೋಡಿ, ಅಧ್ಯಕ್ಷರು ಆಡಳಿತ ಮಂಡಳಿ

ನಾಳೆ ಜೈನ ಕಾಶಿ ಮೂಡುಬಿದಿರೆಯಲ್ಲಿ ಸಂತ ಸಮ್ಮೇಳನ

ಮೂಡುಬಿದಿರೆ: ಜೈನ ಕಾಶಿ ಮೂಡುಬಿದಿರೆಯ ಮಹಾವೀರ ಭವನದಲ್ಲಿ ಫೆ.26ರಂದು ಸನಾತನ ಧರ್ಮದ ಏಕತೆಗಾಗಿ ವಿರಾಟ್ ಸಂತ ಸಮಾವೇಶ ಹಮ್ಮಿಕೊಳ್ಳಲಾಗಿದೆ.
ಮೂಡುಬಿದಿರೆ ಧವಳತ್ರಯ ಟ್ರಸ್ಟ್ ಆಯೋಜನೆಯಲ್ಲಿ ಮೂಡುಬಿದಿರೆ ಜೈನ ಮಠಾಧೀಶರಾದ ಸ್ವಸ್ತಿ ಶ್ರೀ ಡಾ. ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳ ಸಾರಥ್ಯದಲ್ಲಿ ಸಮ್ಮೇಳನ ನಡೆಯಲಿದೆ ಎಂದು ಸಂಚಾಲಕ ಬಾಹುಬಲಿ ಪ್ರಸಾದ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.
ಮೂಡುಬಿದಿರೆ ಜೈನಮಠದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಯಿತು. ಸಮಿತಿಯ ಪ್ರಧಾನ ಕಾರ್ಯದರ್ಶಿ ಎಂ. ಶಾಂತಾರಾಂ ಕುಡ್ವ, ದಯಾನಂದ ಪೈ ಹಾಗೂ ಎಂ ರಾಘವೇಂದ್ರ ಭಂಡಾರ್ಕಾರ್ ಉಪಸ್ಥಿತರಿದ್ದರು. ಜೈನಮಠದ ಶ್ರೀಗಳು ಮಾಹಿತಿ ನೀಡಿ, ನಾಲ್ಕು ಜಿಲ್ಲೆಯ 50 ಕ್ಕೂ ಹೆಚ್ಚಿನ ಸಂತರುಗಳು ಆಗಮಿಸಲಿದ್ದು, ಬಡಗು ಬಸದಿ ಬಳಿಯಿಂದ ಬೆಳಿಗ್ಗೆ 9.00 ಕ್ಕೆ ಸರಿಯಾಗಿ ಮೂಡುಬಿದಿರೆ ಜೈನ ಮಠದ ವರೆಗೆ ಸಕಲ ಬಿರುದು ಬಾವಲಿ, ಕುಣಿತ ಭಜನೆ, ಮಂಗಳ ವಾದ್ಯಗಳ ಸಹಿತ ಸಾಗಲಿರುವ ಸಂತರಿಗೆ ಭವ್ಯ ಸ್ವಾಗತ ಕೋರಲಿರುವ ಶೋಭಾಯಾತ್ರೆ ನಡೆಯಲಿದೆ. ನಂತರ ಶ್ರೀ ಮಹಾವೀರ ಭವನದಲ್ಲಿ ಸಂತ ಸಮಾವೇಶ ನೆರವೇರಲಿದೆ. ಸನಾತನ ಧರ್ಮದ ಸಂಸ್ಕೃತಿ, ಧಾರ್ಮಿಕತೆ ವಿಚಾರ, ಒಗ್ಗೂಡುವಿಕೆ ಏಕತೆಗಾಗಿ ಸಮಾವೇಶವನ್ನು ಹಮ್ಮಿಕೊಂಡಿದ್ದು ಧರ್ಮ ಬಂಧುಗಳೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಶೋಭಾಯಾತ್ರೆಗೆ ಆಗಮಿಸಿ ಧರ್ಮ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಾಗಿ ವಿನಂತಿಸಿದ್ದಾರೆ.



ಕಾರ್ಕಡ ಗೆಳೆಯರ ಬಳಗದ 38ನೇ ವಾರ್ಷಿಕೋತ್ಸವದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ನಿಧಿ ಪೈ ಮಣೂರು, ನೀಶ ಭಟ್ ಕಾರ್ಕಡ ಹಾಗೂ ಅದ್ವೈತ ಉಪಾಧ್ಯ, ಕಾರ್ಕಡ ಅವರುಗಳನ್ನು ವಿಶೇಷ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಲಾಯಿತು.

ಎಲ್ಲಾ ವಾರ್ಡ್‌ಗಳ ಅಭಿವೃದ್ಧಿ ಕಾರ್ಯಕ್ಕೂ ಆದ್ಯತೆ: ಶಾಸಕ ಕೋಟ್ಯಾನ್



ಕಿನ್ನಿಗೋಳಿ: ಕಿನ್ನಿಗೋಳಿ ಪಟ್ಟಣ ಪಂಚಾಯತ್ ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಅಭಿವೃದ್ಧಿ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಅಗತ್ಯತೆಯನ್ನು ಮನಗಂಡು ಕಾಂಕ್ರೀಟ್ ರಸ್ತೆ ಮಾಡಲಾಗಿದೆ ಎಂದು ಶಾಸಕ ಉಮನಾಥ ಕೋಟ್ಯಾನ್ ಹೇಳಿದರು.

ರಸ್ತೆ ಕಾಮಗಾರಿ ಉದ್ಘಾಟನೆ

ಅವರು ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ಮುಕ್ಕ 2ನೇ ಅಡ್ಡ ರಸ್ತೆಯಲ್ಲಿ ಪಟ್ಟಣ ಪಂಚಾಯತ್ 4.10 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಉದ್ಘಾಟಿಸಿ ಮಾತನಾಡಿದರು.
ಈಗಾಗಲೇ ಪಟ್ಟಣ ಪಂಚಾಯತ್‌ನಲ್ಲಿ ಬಿಜೆಪಿ ಅಧಿ ಕಾರ ವಹಿಸಿದ್ದು ಜನರ ಬೇಡಿಕೆ ಹಾಗೂ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿ ಕೆಲಸಗಳಿಗೆ ಒತ್ತು ನೀಡಲಿದ್ದೇವೆ. ಎಲ್ಲಾ ವಾರ್ಡ್ ಗಳ ಅಭಿವೃದ್ಧಿಗೆ ಒತ್ತು ನೀಡಲಿದ್ದು ಇನ್ನೂ ಸಾಕಷ್ಟು ಅಭಿವೃದ್ಧಿ ಕೆಲಸ ಕಾರ್ಯ ನಡೆಯಲಿದೆ. ಸಾರ್ವಜನಿಕರು ಇದಕ್ಕೆ ಸಹಕಾರ ನೀಡಬೇಕು ಎಂದು ತಿಳಿಸಿದರು.
ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ, ಉಪಾಧ್ಯಕ್ಷೆ ಪದ್ಮಲತಾ ರಾವ್, ಬಿಜೆಪಿ ಮುಖಂಡರಾದ ಈಶ್ವರ್ ಕಟೀಲ್, ಭುವನಾಭಿರಾಮ ಉಡುಪ, ಕೇಶವ ಕರ್ಕೇರಾ, ಅಭಿಲಾಷ್ ಶೆಟ್ಟಿಕಟೀಲ್, ಸ್ಟೇನಿ ಪಿಂಟೋ, ಸದಸ್ಯರಾದ ದಾಮೋದರ ಶೆಟ್ಟಿ, ಪ್ರಣೀಕ್, ಧನುಷ್ ಶೆಟ್ಟಿಗಾರ್, ಮಲ್ಲಿಕಾ ಗುತ್ತಕಾಡು, ಗ್ರಾಮಸ್ಥರಾದ ಭೋಜ ಪೂಜಾರಿ, ವಿಮಲಾಕ್ಷಿ, ಅಂಬಿಕಾ ಆಚಾರ್ಯ, ಕೇಶವ ಆಚಾರ್ಯ ಸಹಿತ ಮೊದಲಾದವರು ಉಪಸ್ಥಿತರಿದ್ದರು.

ಅಕ್ಷಯ ಕಾಲೇಜಿನ ರಾಷ್ಟ್ರೀಯ ಎನ್ನೆಸ್ಸೆಸ್ ಸೇವಾ ಶಿಬಿರದ ಉದ್ಘಾಟನೆ



ಪುತ್ತೂರು: ಅಕ್ಷಯ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ (ಎನ್ನೆಸ್ಸೆಸ್) ನೇತೃತ್ವದಲ್ಲಿ 'ನನ್ನ ಭಾರತಕ್ಕಾಗಿ ಯುವ ಜನತೆ, ಡಿಜಿಟಲ್ ಸಾಕ್ಷರತೆಗಾಗಿ ಯುವ ಜನತೆ' ಎಂಬ ಶಿರೋನಾಮೆಯೊಂದಿಗೆ ವಾರ್ಷಿಕ ವಿಶೇಷ ಶಿಬಿರ 2025-26 ಪ್ರಾರಂಭಗೊಂಡಿತು.
ಪೆರ್ನೆಯ ಅಯೋಧ್ಯಾ ನಗರದ ಶ್ರೀ ರಾಮಚಂದ್ರ ಪದವಿ ಪೂರ್ವ ವಿದ್ಯಾಲಯದಲ್ಲಿ ಆಯೋಜಿಸಲಾದ ಈ ಶಿಬಿರವನ್ನು ಕರ್ನಾಟಕ ಉಚ್ಚನ್ಯಾಯಾಲಯದ ವಕೀಲ, ಶ್ರೀ ರಾಮಚಂದ್ರ ವಿದ್ಯಾಲಯದ ಸಂಚಾಲಕ ಹರೀಶ್ ಭಂಡಾರಿ ಟಿ. ಉದ್ಘಾಟಿಸಿ ಶುಭ ಕೋರಿದರು.
ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಜಯಂತ ನಡುಬೈಲು ಅಧ್ಯಕ್ಷತೆ ವಹಿಸಿ, ಎನ್ನೆಸ್ಸೆಸ್‌ನಲ್ಲಿ ಸಕ್ರಿಯರಾಗಿದ್ದ ತಮ್ಮ ಕಾಲೇಜಿನ ವಿದ್ಯಾರ್ಥಿಗಳು ಪ್ರಸ್ತುತ ಉನ್ನತ ಮಟ್ಟದ ಸ್ಥಾನದಲ್ಲಿದ್ದು ಯಶಸ್ವಿ ಜೀವನವನ್ನು ಸಾಗಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಶಿಬಿರಾರ್ಥಿಗಳಿಗೆ ಎನ್ನೆಸ್ಸೆಸ್ ಇನ್ನಷ್ಟು ಪ್ರೇರಣೆಯನ್ನು ನೀಡಲಿ ಎಂದು ಆಶಿಸಿದರು.
ಮುಖ್ಯ ಅತಿಥಿಗಳಾಗಿ ಶ್ರೀ ರಾಮಚಂದ್ರ ವಿದ್ಯಾಲಯದ ಪ್ರಾಂಶುಪಾಲ ಶೇಖರ್ ರೈ ಕೆ., ಶ್ರೀ ರಾಮಚಂದ್ರ ಪ್ರೌಢ ಶಾಲೆಯ ಮುಖ್ಯ ಗುರು ಸತ್ಯನಾರಾಯಣ ರೈ ಕೆ.ಎಂ., ಅಕ್ಷಯ ಕಾಲೇಜಿನ ಪ್ರಾಂಶುಪಾಲ ಸಂಪತ್ ಕೆ. ಪಕ್ಕಳ ಶುಭಾಶಂಸನೆಗೈದರು.
ವೇದಿಕೆಯಲ್ಲಿ ಅಕ್ಷಯ ಕಾಲೇಜಿನ ಆಡಳಿತ ನಿರ್ದೇಶಕಿ ಕಲಾವತಿ ಜಯಂತ, ಆಡಳಿತ ಅಧಿಕಾರಿ ಅರ್ಪಿತ್ ಟಿ.ಎ. ಉಪಸ್ಥಿತರಿದ್ದರು. ಶಿಬಿರಾಧಿಕಾರಿ ರಾಕೇಶ್ ಕೆ. ಪ್ರಸ್ತಾವಿಸಿದರು. ಶಿಬಿರಾಧಿಕಾರಿ ಮೇಘಶ್ರೀ ಸ್ವಾಗತಿಸಿ, ಘಟಕ 1ರ ನಾಯಕ ಸುಹಾಸ್ ವಂದಿಸಿದರು. ಸ್ವಯಂಸೇವಕಿ ವಿಂಧುಶ್ರೀ ಕಾರ್ಯಕ್ರಮ ನಿರ್ವಹಿಸಿದರು.



ಕಳೆದ ಎರಡು ದಿನಗಳಲ್ಲಿ ಮಡಿಕ್ಕೈ ಕಕ್ಕಾಟ್ ಪನಕ್ಕೂಲ್ ತರವಾಡು ಎರಿಞ್ಞಿಕ್ಕಾಲ್ ಭಗವತೀ ಕ್ಷೇತ್ರದಲ್ಲಿ ನಡೆದ ಕಳಿಯಾಟ ಮಹೋತ್ಸವವು ಸಮಾಪ್ತಿಗೊಂಡಿತು. ಚೆರಿಯ ಭಗವತಿ, ಅಚ್ಚನ್ ದೈವ, ಪಳ್ಳಕ್ಕರುವಾಳನ್ ದೈವ, ರಕ್ತಚಾಮುಂಡಿ, ಕುರುಟ್ಟ ಚಾಮುಂಡಿ, ಪಾಡಾರ್ ಕುಳಂಗರ ಭಗವತಿ, ಭಂಡ್ಯಾಂಗಾನತ್ ಭಗವತಿ, ವಿಷ್ಣುಮೂರ್ತಿ, ಎರಿಂಞಿಕ್ಕಾಲ್ ಭಗವತಿ, ಗುಳಿಗನ್ ಎಂಬೀ ದೈವಗಳ ನರ್ತನವು ಜರಗಿತು.



ಉಡುಪಿ ಜಿಲ್ಲಾಡಳಿದ 'ಸ್ವಚ್ಛ ಶನಿವಾರ' ಯೋಜನೆಯಡಿ ಕೋಡಿ ಗ್ರಾಮ ಪಂಚಾಯತ್ ವತಿಯಿಂದ ಶನಿವಾರ ಕೋಡಿ ಸೇತುವೆ ಬಳಿ ತ್ಯಾಜ್ಯ ತೆರವುಗೊಳಿಸಿ, ಜಿಲ್ಲಾಡಳಿತದ ಕಾರ್ಯಕ್ರಮಕ್ಕೆ ಸಾಥ್ ನೀಡಲಾಯಿತು. ಈ ಸಂದರ್ಭದಲ್ಲಿ ತ್ಯಾಜ್ಯ ಎಸೆದ ವ್ಯಕ್ತಿಯ ವಿಳಾಸದ ಆಧಾರದ ಮೇಲೆ ಪಂಚಾಯತ್‌ಗೆ ಕರೆಸಿ ದಂಡ ವಿಧಿಸಿ ಎಚ್ಚರಿಕೆ ನೀಡಲಾಯಿತು. ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವೀಂದ್ರ ರಾವ್, ಎಸ್ ಎಲ್‌ಆರ್‌ಎಂ ಘಟಕದ ಪ್ರಮುಖರು ಇದ್ದರು.

ಮದನಾಡಿನಲ್ಲಿ 'ಹಿಂದೂ ಸಂಗಮ' | ಗಮನ ಸೆಳೆದ ಆಕರ್ಷಕ ಶೋಭಾಯಾತ್ರೆ, ನೂರಾರು ಕಾರ್ಯಕರ್ತರು ಭಾಗಿ

ಹಿಂದು ಸಂಘಟನೆಗಳು ರಾಷ್ಟ್ರ ಕಟ್ಟುವ ಕಾರ್ಯ ಮಾಡುತ್ತಿದೆ: ಮಿರನ್ ಕುಟ್ಟಪ್ಪ

ನಾಪೋಕ್ಲು: ಹಿಂದೂ ಸಂಘಟನೆಗಳು ರಾಷ್ಟ್ರವನ್ನು ಕಟ್ಟುವ ಕೆಲಸವನ್ನು ಮಾಡುತ್ತಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಜಿಲ್ಲಾ ಸಹ ಕಾರ್ಯವಾಹ ಮಿರನ್ ಕುಟ್ಟಪ್ಪ ಹೇಳಿದರು.
ಸಮೀಪದ ಮದನಾಡಿನಲ್ಲಿ ಭಾನುವಾರ ಆಯೋಜಿಸಿದ್ದ 'ಹಿಂದೂ ಸಂಗಮ'ದಲ್ಲಿ ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡು ಮಾತನಾಡಿದರು.
ರಾಷ್ಟ್ರದ ಅನೇಕ ಸವಾಲು ಮತ್ತು ಸಮಸ್ಯೆಗಳಿಗೆ ಉತ್ತರ ನೀಡುತ್ತಾ ನೂರು ವರ್ಷಗಳು ತುಂಬುವ ಸಂದರ್ಭ ವಿಶ್ವವೇ ಭಾರತವನ್ನು ತಿರುಗಿ ನೋಡು ವಂತೆ ಬಲಾಢ್ಯ ಭಾರತವನ್ನು ಕಟ್ಟಿದೆ. ಭವಿಷ್ಯದಲ್ಲಿ 'ವಸುದೈವ ಕುಟುಂಬಕಂ' ಎನ್ನುವ ಕಲ್ಪನೆ ಸಾಕಾರ ಗೊಳಿಸುವ ಸಲುವಾಗಿ ಜಗತ್ತೇ ಒಂದು ಕುಟುಂಬ ಇದು ಹಿಂದುತ್ವದ ಪರಿಕಲ್ಪನೆ ಕೇವಲ ಒಂದು ಸಂಘಟನೆ ಒಂದು ರಾಷ್ಟ್ರ ಕಟ್ಟಲು ಸಾಧ್ಯವಿಲ್ಲ ಎಂದರು.
ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಭಾರತವನ್ನು ಪ್ರೀತಿಸಬೇಕು. ಆ ಮೂಲಕ ರಾಷ್ಟ್ರಕಟ್ಟುವ ಕಾರ್ಯದಲ್ಲಿ ತಮ್ಮಿಂದಾಗುವ ಕೆಲಸವನ್ನು ಕೈಗೊಳ್ಳಬೇಕು ಸಂಘಕ್ಕೆ ನೂರು ವರ್ಷ ತುಂಬಿರುವ ಈ ಸಂದರ್ಭ ಪಂಚ ವಿಷಯಗಳಲ್ಲಿ ಪರಿವರ್ತನೆಯನ್ನು ಸಂಗ್ರಹಿಸಿದೆ ಕುಟುಂಬ ಪ್ರಬೋಧನ, ಸಾಮಾಜಿಕ ಪರಿವರ್ತನೆ, ಸ್ವದೇಶಿ ಭಾವನೆ, ಪರಿಸರ ಕಾಳಜಿ, ನಾಗರಿಕ ಶಿಷ್ಟಾಚಾರ ದೇಶದ ಪ್ರತಿಯೊಂದು ಮನೆಯೂ ಕುಟುಂಬ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕು ಮನೆಯ ಮಕ್ಕಳು ದೇಶದ ಸಂಸ್ಕೃತಿ ಸನಾತನ ಪರಂಪರೆಯ ಬಗ್ಗೆ ಗೌರವ ಭಾವನೆಯನ್ನು ಬೆಳೆಸಿಕೊಳ್ಳಬೇಕು ನಮ್ಮೆಲ್ಲ ಜಾತಿ ಮತ ಪಕ್ಷ ಪಂಥಗಳನ್ನು ಮರೆತು ನಾವೆಲ್ಲ ಬಂದು ನಾವೆಲ್ಲ ಹಿಂದೂ ಎನ್ನುವ ಭಾವನೆಯನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.
ನಾಗರಿಕರಾಗಿ ಸಮಾಜದಲ್ಲಿ ಶಿಷ್ಟಾಚಾರದಲ್ಲಿ ತೊಡೆದುಕೊಳ್ಳಬೇಕು ಪ್ರಕೃತಿ ಇದ್ದರೆ ಮಾತ್ರ ನಾವು ನಮ್ಮಿಂದ ಪ್ರಕೃತಿಯಲ್ಲ ಪರಿಸರವನ್ನು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿ ಅದೇ ರೀತಿಯಲ್ಲಿ ಸ್ವದೇಶಿ ಭಾವನೆ ಸ್ವದೇಶಿ ಉಡುಪು, ಸ್ವದೇಶಿ ಭಾಷೆ ಬಳಸುವುದರ ಮೂಲಕ ದೇಶದವನು ಕಟ್ಟುವ ಪಂಚ ಪರಿವರ್ತನೆಯಲ್ಲಿ ಪ್ರತಿಯೊಬ್ಬ ಹಿಂದೂ ಪಾಲ್ಗೊಳ್ಳಬೇಕೆಂಬ ಕರೆಯನ್ನು ನೀಡಿದರು.
ನಿವೃತ್ತ ಮುಖ್ಯ ಶಿಕ್ಷಕ ಶಿವ ರಾವ್ ಮಾತನಾಡಿದರು. ಗಿರೀಶ್ ತಾಳ್ತಮನೆ ಅಧ್ಯಕ್ಷತೆ ವಹಿಸಿ, ಮನೆಯಲ್ಲಿರುವ ಮಕ್ಕಳು ದೇಶದ ಹಿರಿಯರ ಬಗ್ಗೆ ಸನಾತನ ಸಂಸ್ಕೃತಿಯ ಬಗ್ಗೆ ಹಿಂದುತ್ವದ ಬಗ್ಗೆ ತಿಳಿದುಕೊಳ್ಳಬೇಕು. ಹಿರಿಯರು ಇವರಿಗೆ ತಿಳಿಸಿ ಹೇಳಬೇಕು ಪ್ರತಿ ಮನೆಯಲ್ಲೂ ಈ ಕಾರ್ಯ ನಡೆಯಲೇಬೇಕು. ಹಾಗಿದ್ದರೆ ಮಾತ್ರ ಭವಿಷ್ಯದ ಭಾರತ ಸುಭದ್ರವಾಗಿರಲು ಸಾಧ್ಯ ಎಂದರು. ಸುರೇಶ್ ಸ್ವಾಗತಿಸಿ, ಧನಂಜಯ ಅಗೋಳಿಕಜೆ ವಂದಿಸಿದರು. ಯೋಗೇಶ್ ಬಿಂದು ಹುಲಿ ಮನೆ ಮತ್ತು ವಿಠ್ಠಲ್ ಹಾಡಿದರು. ಇದಕ್ಕು ಮೊದಲು ನಡೆದ ಭವ್ಯವಾದ ಶೋಭ ಯಾತ್ರೆಯಲ್ಲಿ ನಡೆಯಿತು. ಕುಣಿತ ಭಜನೆ, ಸಿಂಗಾರಿ ಮೇಳ ಗಮನ ಸೆಳೆಯಿತು. ಕಾರ್ಯಕ್ರಮದಲ್ಲಿ ನೂರಾರು ಕಾರ್ಯಕರ್ತರು ಭಾಗವಹಿಸಿದರು.



ಸುತ್ತಮುತ್ತ

ಶ್ರೀ ನಾಗರಾಜ ಸನಿಧಿ: ಇಂದು ಸಿದ್ದತಾ ಸಭೆ

ಕಾಸರಗೋಡು: ಕಾಸರಗೋಡು ನಗರದ ಬ್ಯಾಂಕ್ ರಸ್ತೆ ಬಳಿಯ ಶ್ರೀ ನಾಗರಾಜ ಸನ್ನಿಧಿಯ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವವನ್ನು ವಿಜೃಂಭಣೆಯಿಂದ ನಡೆಸಲು ತೀರ್ಮಾನಿಸಲಾಗಿದೆ. ಈ ಪ್ರಯುಕ್ತ ಫೆ.25ರಂದು ಸಂಜೆ 5.30ಕ್ಕೆ ಶ್ರೀ ನಾಗರಾಜ ಸನ್ನಿಧಿ ಸಮೀಪದ ಮಡತ್ತಿಲ್ ತರವಾಡು ಮನೆ ಪರಿಸರದಲ್ಲಿ ಭಕ್ತಜನರ ಮಹಾಸಭೆಯನ್ನು ಆಯೋಜಿಸಲಾಗಿದೆ.

ಇಂದು ಕಲ್ಲಡ ಭಾಗದಲ್ಲಿ ವಿದ್ಯುತ್ ವ್ಯತ್ಯಯ

ಬಂಟ್ವಾಳ: ಮೆಸ್ಕಾಂನ ಕಲ್ಲಡ್ಕ ವಿದ್ಯುತ್ ಉಪಕೇಂದ್ರದಲ್ಲಿ ತುರ್ತುನಿರ್ವಹಣಾ ಕಾರ್ಯ ಇರುವ ಹಿನ್ನೆಲೆ ಫೆ.25ರಂದು ಕಲ್ಲಡ್ಕ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ. ಕಲ್ಲಡ್ಕ ಮತ್ತು ಸುತ್ತಮುತ್ತಲಿನ ಪ್ರದೇಶಗಳಾದ ಶಂಭೂರು, ನರಿಕೊಂಬು, ಬಾಳ್ತಿಲ, ಬೋಳಂತೂರು, ವೀರಕಂಭ, ಅಮ್ಮೂರು ಗ್ರಾಮಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆ ವ್ಯತ್ಯಯವಾಗಲಿದೆ ಎಂದು ಪ್ರಕಟಣೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ಫೆ.27ರಂದು ನಿರಂಜನರ ಜನ್ಮ ಶತಮಾನೋತ್ಸವ: ವಿಚಾರ ಸಂಕಿರಣ

ಮಂಗಳೂರು: ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ ಸಹಯೋಗದಲ್ಲಿ ಫೆ.27 ರಂದು ಸಾಹಿತಿ, ಪತ್ರಕರ್ತ ಹಾಗೂ ಹೋರಾಟಗಾರ ನಿರಂಜನರ ಜನ್ಮ ಶತಮಾನೋತ್ಸವದ ಅಂಗವಾಗಿ ವಿಚಾರ ಸಂಕಿರಣ ಕಾರ್ಯಕ್ರಮ ಬೆಳಿಗ್ಗೆ 10.30 ಗಂಟೆಗೆ ಮಂಗಳಗಂಗೋತ್ರಿ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಪ್ರೊ.ಬಿ. ಎ. ವಿವೇಕ ರೈ ವಿಚಾರ ವೇದಿಕೆಯಲ್ಲಿ ಆಯೋಜಿಸಲಾಗಿದೆ.
ಮಂಗಳೂರು ವಿಶ್ವವಿದ್ಯಾನಿಲಯ ಕುಲಪತಿ ಪಿ.ಎಲ್. ಧರ್ಮ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಾಹಿತ್ಯ ಅಕಾಡೆಮಿ ಸಲಹಾ ಮಂಡಳಿ ಸದಸ್ಯ ಮನು ಬಳಿಗಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ವಿದ್ವಾಂಸರು ಹಾಗೂ ವಿಮರ್ಶಕರು ಸಂಪನ್ಮೂಲ ವ್ಯಕ್ತಿಗಳಾಗಿ ವಿಚಾರ ಮಂಡನೆ ಮಾಡಲಿದ್ದಾರೆ. ಈ ವಿಚಾರ ಸಂಕಿರಣದಲ್ಲಿ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆಯ ವಿದ್ಯಾರ್ಥಿಗಳು ಹಾಗೂ ತೆಂಕನಿಡಿಯೂರು, ಹಿರಿಯಡ್ಕ, ಬೆಳ್ತಂಗಡಿ, ಉಪ್ಪಿನಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕನ್ನಡ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು ಮತ್ತು ಕೇರಳದ ಕಾಸರಗೋಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಪೆರಿಯಾದಲ್ಲಿರುವ ಕೇಂದ್ರೀಯ ವಿವಿ ಕನ್ನಡ ಎಂ.ಎ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ ಅಧ್ಯಕ್ಷ ಪ್ರೊ. ನಾಗಪ್ಪಗೌಡ ಆರ್.ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಕ್ಷಿಣ ಭಾರತ ಮಿಕ್ಸ್ ಬಾಕ್ಸಿಂಗ್ ಸಂಸ್ಥೆಯ ಉಪಾಧ್ಯಕ್ಷರಾಗಿ ಎನ್.ಸಿ. ಸುದರ್ಶನ್ ಆಯ್ಕೆ

ಮಡಿಕೇರಿ: ದಕ್ಷಿಣ ಭಾರತ ಮಿಕ್ಸ್ ಬಾಕ್ಸಿಂಗ್ ಸಂಸ್ಥೆಯ ಉಪಾಧ್ಯಕ್ಷರಾಗಿ ಮಾದಾಪುರದ ಎನ್.ಸಿ.ಸುದರ್ಶನ್ ಆಯ್ಕೆಯಾಗಿದ್ದಾರೆ.



ಕರ್ನಾಟಕ ರಾಜ್ಯ ಮಿಕ್ಸ್ ಬಾಕ್ಸಿಂಗ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವ ಎನ್.ಸಿ.ಸುದರ್ಶನ್ ಅವರು ಕೊಡಗು ಜಿಲ್ಲೆಯ ನೂರಾರು ವಿದ್ಯಾರ್ಥಿ ಗಳಿಗೆ ಮಿಕ್ಸ್ ಬಾಕ್ಸಿಂಗ್ ತರಬೇತಿ ನೀಡಿದ್ದಾರೆ. ಅಲ್ಲದೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಪದಕಗಳನ್ನು ಗೆಲ್ಲಲು ಕಾರಣಕರ್ತರಾಗಿದ್ದಾರೆ. ಇಂಡಿಯನ್ ಮಿಕ್ಸ್ ಬಾಕ್ಸಿಂಗ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರಾಕೇಶ್ ಎಸ್. ಮಾಸ್ಕರ್ ಅವರು ಎನ್.ಸಿ.ಸುದರ್ಶನ್ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಆದೇಶ ಪತ್ರ ನೀಡಿದ್ದಾರೆ.

ಶಿವಾಜಿ ಜಯಂತಿ ಆಚರಣೆ

ಸುಳ್ಯ: ಸುಳ್ಯ ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಮರಾಠ ಕ್ಷತ್ರಿಯ ಸೇವಾ ಸಂಘ ಸುಳ್ಯ ಇವುಗಳ ಜಂಟಿ ಆಶ್ರಯದಲ್ಲಿ 399ನೇ ಶಿವಾಜಿ ಜಯಂತಿ ಆಚರಣೆ ಕಾರ್ಯಕ್ರಮವು ಮರಾಠ ಕ್ಷತ್ರಿಯ ಸೇವಾ ಸಂಘ ಕಾಂತಮಂಗಲದ ನಿವೇಶನದಲ್ಲಿ ಇತ್ತೀಚೆಗೆ ನಡೆಯಿತು. ಉಪ ತಹಶೀಲ್ದಾರ್ ಚಂದ್ರಕಾಂತ ಎಂ.ಆರ್. ಕಾರ್ಯಕ್ರಮ ಉದ್ಘಾಟಿಸಿದರು.
ಕಾರ್ಮಿಕ ಕನಿಷ್ಠ ವೇತನಾ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಹೀದ್ ತೆಕ್ಕಿಲ್ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಅರೆಭಾಷೆ ಸಂಸ್ಕೃತಿ –ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಮರಾಠ ಕ್ಷತ್ರಿಯ ಸೇವಾ ಸಂಘದ ಅಧ್ಯಕ್ಷ ಮಾಧವ ರಾವ್ ಜಾಧವ ಮೊದಲಾದವರು ಉಪಸ್ಥಿತರಿದ್ದರು.

ಸ್ತನ ಕ್ಯಾನ್ಸರ್ ಸಂಶೋಧನೆಗಾಗಿ ಕೊಡಗಿನ ಸಾಧಕಿಗೆ ಯುಕೆಯ ಅತ್ಯುನ್ನತ ಶೈಕ್ಷಣಿಕ ಗೌರವ

ಡಾ.ನವಿತಾ ಸೋಮಯ್ಯಗೆ 'ಕ್ವೀನ್ ಎಲಿಜಬೆತ್' ಪ್ರಶಸ್ತಿ

ಮಡಿಕೇರಿ: ಅತ್ಯುನ್ನತ ಶೈಕ್ಷಣಿಕ ಸಾಧನೆಗಾಗಿ ಅಂತಾರಾಷ್ಟ್ರೀಯ ಖ್ಯಾತಿಯ ವೈದ್ಯೆ ಹಾಗೂ ವಿಜ್ಞಾನಿ ಕೊಡಗು ಜಿಲ್ಲೆಯ ಡಾ.ನವಿತಾ ಸೋಮಯ್ಯ ಅವರಿಗೆ ಯುನೈಟೆಡ್ ಕಿಂಗ್‌ಡಮ್‌ನ ಶೈಕ್ಷಣಿಕ ಮತ್ತು ಸಂಶೋಧನಾ ವಲಯದ ಅತ್ಯುನ್ನತ ರಾಷ್ಟ್ರೀಯ ಗೌರವವಾದ ಕ್ವೀನ್ ಎಲಿಜಬೆತ್ ಪ್ರಶಸ್ತಿ ದೊರೆತ್ತಿದೆ.
ಕ್ವೀನ್ ಎಲಿಜಬೆತ್ ಪ್ರಶಸ್ತಿಯು ಜಾಗತಿಕ ಕ್ಯಾನ್ಸರ್ ಆರೈಕೆಯಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಕ್ಯಾನ್ಸರ್ ರಿಸರ್ಚ್ (ಐಸಿಆರ್) ನ ಪರಿವರ್ತಕ ಪಾತ್ರವನ್ನು ಗುರುತಿಸುತ್ತದೆ. ಬದುಕುಳಿಯುವಿಕೆಯನ್ನು ಸುಧಾರಿಸುವುದು, ಆರೋಗ್ಯ ವೆಚ್ಚವನ್ನು ಕಡಿಮೆ ಮಾಡುವುದು ಮತ್ತು ಅಂತಾರಾಷ್ಟ್ರೀಯ ಚಿಕಿತ್ಸಾ ಮಾನದಂಡಗಳನ್ನು ರೂಪಿಸುವ ಅಂಶವನ್ನು ಒಳಗೊಂಡಿದೆ. ಸ್ತನ ಕ್ಯಾನ್ಸರ್ ಸಂಶೋಧನೆಯನ್ನು ಪ್ರತಿನಿಧಿಸುವ ಭಾಗವಾಗಿ ಡಾ.ನವಿತಾ ಸೋಮಯ್ಯ ಈ ಗೌರವವನ್ನು ಸ್ವೀಕರಿಸಿದ್ದಾರೆ.
ಕಿಂಗ್ ಚಾರ್ಲ್ಸ್ ಹಾಗೂ ಕ್ವೀನ್ ಕ್ಯಾಮಿಲ್ಲಾ ಅವರು ಪ್ರಶಸ್ತಿಯನ್ನು ಸ್ವೀಕರಿಸಲು ಡಾ.ನವಿತಾ ಸೋಮಯ್ಯ ಅವರನ್ನು ಐಸಿಆರ್ ತಂಡದ ಭಾಗವಾಗಿ ಅವರನ್ನು ಆಹ್ವಾನಿಸಿದ್ದರು.ಪ್ರಶಸ್ತಿಗಾಗಿ ಆಯ್ಕೆಯಾದ ಐಸಿಆರ್‌ನ ಎಂಟು ವಿಜ್ಞಾನಿಗಳಲ್ಲಿ ಇವರೂ ಒಬ್ಬರಾಗಿದ್ದರು.
ಸ್ತನ, ಪ್ರಾಸ್ಟೇಟ್, ತಲೆ ಮತ್ತು ಕುತ್ತಿಗೆ ಕ್ಯಾನ್ಸರ್‌ಗಳ ಕುರಿತು ಬೋಧನೆ, ಸಂಶೋಧನೆ ಹಾಗೂ ಅಭ್ಯಾಸ, ಅಲ್ಲದೆ ಬದಲಾಯಿಸುವ ಕ್ಲಿನಿಕಲ್ ಪ್ರಯೋಗಗಳಿಗೆ ಐಸಿಆರ್‌ನ ಪ್ರವರ್ತಕ ಕೊಡುಗೆಗಳನ್ನು ಈ ಪ್ರತಿಷ್ಠಿತ ಪ್ರಶಸ್ತಿ ಗುರುತಿಸುತ್ತದೆ, ಇದು ವಿಶ್ವಾದ್ಯಂತ ಕ್ಯಾನ್ಸರ್ ಆರೈಕೆಯನ್ನು ಪರಿವರ್ತಿಸಿದೆ.

ಐಸಿಆರ್‌ನಲ್ಲಿ ಕ್ಲಿನಿಷಿಯನ್ ವಿಜ್ಞಾನಿ



ಪ್ರಸ್ತುತ ಡಾ.ನವಿತಾ ಸೋಮಯ್ಯ ಅವರು ಐಸಿಆರ್‌ನಲ್ಲಿ ಕ್ಲಿನಿಷಿಯನ್ ವಿಜ್ಞಾನಿ ಹಾಗೂ ಗ್ರೂಪ್ ಲೀಡರ್ ಆಗಿದ್ದಾರೆ. ಲಂಡನ್‌ನ ರಾಯಲ್ ಮಾರ್ಸ್ಡೆನ್ ಎನ್‌ಎಚ್‌ಎಸ್ ಫೌಂಡೇಶನ್ ಟ್ರಸ್ಟ್ ನಲ್ಲಿ ಸಲಹೆಗಾರ ಕ್ಲಿನಿಕಲ್ ಆಂಕೊಲಾಜಿಸ್ಟ್ ಆಗಿದ್ದಾರೆ. ಸ್ತನ ರೇಡಿಯೊಥೆರಪಿಗಾಗಿ ಕ್ಲಿನಿಕಲ್ ಯುನಿಟ್ ಸಂಶೋಧನಾ ಅಧಿಕಾರಿಯಾಗಿದ್ದಾರೆ. ಅವರ ಸಂಶೋಧನೆ ರೇಡಿಯೊಥೆರಪಿಯನ್ನು ವೈಯಕ್ತೀಕರಿಸುವುದು, ಅಡ್ಡಪರಿಣಾಮ ಕಡಿಮೆ ಮಾಡುವಾಗ ಗೆಡ್ಡೆಯ ನಿಯಂತ್ರಣ ಸುಧಾರಿಸುವುದರ ಮೇಲೆ ಕೇಂದ್ರೀಕರಿಸಿದೆ. ಪ್ರಯೋಗಾಲಯ ವಿಜ್ಞಾನ 'ಬೆಂಚ್-ಟು- ಬೆಡ್ ಸೈಡ್' ವಿಧಾನದ ಮೂಲಕಕ್ಲಿನಿಕಲ್ ಅಭ್ಯಾಸದೊಂದಿಗೆ ಸಂಯೋಜಿಸಲಾಗಿದೆ.

ಕೊಡಗಿನ ಪ್ರತಿಭೆಗೆ ಜಾಗತಿಕ ಮನ್ನಣೆ

ಕನ್ನಂಡ ಪೊನಪ್ಪ ಸೋಮಯ್ಯ ಹಾಗೂ ಡಾ.ಕನ್ನಂಡ ನಿರ್ಮಲಾ ಸೋಮಯ್ಯ (ತಾಮನೆ : ನಾಯಕಂಡ) ದಂಪತಿಯ ಪುತ್ರಿ ಡಾ.ನವಿತಾ ಸೋಮಯ್ಯ ಅವರ ಬದುಕಿನ ಪಯಣ ಅಚಲ, ಸಮರ್ಪಣಾ ಮನೋಭಾವ, ಶೈಕ್ಷಣಿಕ ಸಾಧನೆ ಮತ್ತು ಮಾನವೀಯ ಸೇವೆಗೆ ಹೆಸರಾಗಿದೆ. ದೆಹಲಿಯ ಸ್ಪ್ರಿಂಗ್‌ಡೇಲ್ಸ್ ಶಾಲೆಯಲ್ಲಿ ತಮ್ಮ ಶಾಲಾ ಶಿಕ್ಷಣವನ್ನು ಪ್ರಾರಂಭಿಸಿದ ಅವರು 10 ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಅಗ್ರಸ್ಥಾನ ಪಡೆದರು. ನಂತರ ದೆಹಲಿಯ ಪಬ್ಲಿಕ್ ಸ್ಕೂಲ್ ನಲ್ಲಿ 12ನೇ ತರಗತಿಯಲ್ಲಿ ಜೀವಶಾಸ್ತ್ರ ಮತ್ತು ಗಣಿತದಲ್ಲಿ ರಾಷ್ಟ್ರ ಮಟ್ಟದಲ್ಲಿ ಅಗ್ರಸ್ಥಾನದಲ್ಲಿ ತೇರ್ಗಡೆಯಾದರು. ರಾಷ್ಟ್ರೀಯ ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 3 ನೇ ರ್‍ಯಾಂಕ್ ಪಡೆದು ಭಾರತದ ಅತ್ಯಂತ ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಗಳಲ್ಲಿ ಒಂದಾದ ಮೌಲಾನಾ ಆಜಾದ್ ವೈದ್ಯಕೀಯ ಕಾಲೇಜಿಗೆ ಸೇರಿದರು. ಆಕ್ಸ್‌ಫರ್ಡ್ ವಿವಿ ಸೇರಿದಂತೆ ಪ್ರಮುಖ ಜಾಗತಿಕ ಕೇಂದ್ರಗಳಲ್ಲಿ ಸುಧಾರಿತ ತರಬೇತಿ ಮತ್ತು ಸಂಶೋಧನೆ ಮುಂದುವರಿಸಿದರು.
ಭಾರತ ಮತ್ತು ಯುಕೆಯಲ್ಲಿ ಜಂಟಿಯಾಗಿ ನಡೆಸಿದ ಮೊದಲ ಯುಕೆ ಪ್ರಾಯೋಜಿತ ಶೈಕ್ಷಣಿಕ ಔಷಧ–ಪ್ಲಸ್ –ರೇಡಿಯೊಥೆರಪಿ ಪ್ರಯೋಗವಾದ ಏಔಖಖಿಗಅ ಯ ಮುಖ್ಯ ಅಧಿಕಾರಿಯಾಗಿ ಅಂತಾರಾಷ್ಟ್ರೀಯ ಸಂಶೋಧನಾ ಸಹಯೋಗ ಬಲಪಡಿಸಿದ್ದಾರೆ. 65ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು, ಆರು ಅಧ್ಯಯನದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 50ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಆಹ್ವಾನಿತ ಉಪನ್ಯಾಸಗಳನ್ನು ನೀಡಿದ್ದಾರೆ. ಪ್ರಮುಖ ಜಾಗತಿಕ ಸಂಶೋಧನಾ ಸಮಿತಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಡಾ.ನವಿತಾ ಸೋಮಯ್ಯ ಪ್ರಸ್ತುತ ಪ್ರಮುಖ ಅಂತಾರಾಷ್ಟ್ರೀಯ ಆಂಕೊಲಾಜಿ ಮತ್ತು ರೇಡಿಯೊಥೆರಪಿ ಸಂಸ್ಥೆಗಳಲ್ಲಿ ನಾಯಕತ್ವದ ಪಾತ್ರ ಹೊಂದಿದ್ದಾರೆ.

ಭಾರತ ದೇಶಕ್ಕೆ ಕೀರ್ತಿ ತಂದಿದ್ದಾರೆ

ಪ್ರಸೂತಿ ಮತ್ತು ಭ್ರೂಣ ಔಷಧದಲ್ಲಿ ಸಲಹೆಗಾರರಾಗಿರುವ ಡಾ.ರಮೇಶ್ ಗಣಪತಿ ಅವರನ್ನು ವಿವಾಹ ವಾಗಿರುವ ಡಾ.ನವಿತಾ ಸೋಮಯ್ಯ ಅವರು ಪರಿಶ್ರಮ, ಶ್ರೇಷ್ಠತೆ ಮತ್ತು ಸೇವೆಯ ಮೂಲಕ ಕೊಡಗಿಗೆ ಮಾತ್ರವಲ್ಲ ಭಾರತ ದೇಶಕ್ಕೆ ಕೀರ್ತಿ ತಂದಿದ್ದಾರೆ. ಈ ಸಾಧನೆ ಕೇವಲ ವೈಯುಕ್ತಿಕ ವಿಜಯವಲ್ಲ, ಇದು ಕೊಡಗು, ಭಾರತ ಮತ್ತು ಡಾ.ನವಿತಾ ಸೋಮಯ್ಯ ಅವರ ಸೇವೆಯಿಂದ ತಮ್ಮ ಜೀವನವನ್ನು ಪರಿವರ್ತಿಸಿಕೊಂಡ ಲಕ್ಷಾಂತರ ಕ್ಯಾನ್ಸರ್ ರೋಗಿಗಳಿಗೆ ಸಂದ ಜಯವಾಗಿದೆ ಎಂದು ತಜ್ಞರು ಬಣ್ಣಿಸಿದ್ದಾರೆ.

ಬಂಟ್ವಾಳದಲ್ಲಿ 'ಸೀರೆ ಗೊಂಡೆ , ಸೀರೆ ಫೋಲ್ಡಿಂಗ್' ತರಬೇತಿ ಕಾರ್ಯಾಗಾರ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಬಂಟ್ವಾಳ ಹಾಗೂ ಗ್ರಾಮೀಣ ಶ್ರೇಷ್ಠತಾ ತರಬೇತಿ ಕೇಂದ್ರ ಬೆಳ್ತಂಗಡಿ ಇದರ ಸಂಯುಕ್ತಾಶ್ರಯದಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಸಂಘದ ಸದಸ್ಯರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ 5 ದಿನಗಳ ಕಾಲ ಉಚಿತ ವಾಗಿ 'ಸೀರೆ ಗೊಂಡೆ ಮತ್ತು ಸೀರೆ ಫೋಲ್ಡಿಂಗ್' ತರಬೇತಿ ಕಾರ್ಯಾಗಾರ ಗ್ರಾಮಾಭಿವೃದ್ಧಿ ಯೋಜನೆ ಬಂಟ್ವಾಳ ಯೋಜನಾ ಕಚೇರಿ ಉನ್ನತಿ ಸೌಧದಲ್ಲಿ ನಡೆಯಿತು.
ಯೋಜನೆಯ ಜಿಲ್ಲಾ ನಿರ್ದೇಶಕರಾದ ಡಿ. ದಿನೇಶ್ ಪೂಜಾರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಗ್ರಾಮೀಣ ಶ್ರೇಷ್ಠತಾ ಕೇಂದ್ರದ ಉಪನ್ಯಾಸಕರಾದ ಧರಣಿ, ಯೋಜನಾಧಿಕಾರಿ ಜಯಾನಂದ ಪಿ., ತರಬೇತಿ ಶಿಕ್ಷಕಿ ವಿಜಯ, ಕೋಣಾಜೆ ಒಕ್ಕೂಟದ ವಲಯ ಅಧ್ಯಕ್ಷರಾದ ರವಿ ಮತ್ತಿತರರಿದ್ದರು. ಜ್ಞಾನವಿಕಾಸ ಸಮನ್ವಯಾಧಿಕಾರಿ ಸವಿತಾ ಕಾರ್ಯಕ್ರಮ ನಿರೂಪಿಸಿದರು. ಸೇವಾಪ್ರತಿನಿಧಿ ಉಷಾ ಸಹಕರಿಸಿದರು.

ಪ್ರಯೋಜನ ಪಡೆಯಿರಿ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಮಾಜಕ್ಕೆ ಉತ್ತಮ ಸೇವೆ ನೀಡುತ್ತಿದ್ದು, ಸಮಾಜದಲ್ಲಿ ಅದೆಷ್ಟೋ ಕುಟುಂಬ ಸ್ವಾವಲಂಬಿ ಜೀವನ ನಡೆಸಲು ಸ್ಫೂರ್ತಿದಾಯಕವಾಗಿದೆ., ಶಿಬಿರಾರ್ಥಿಗಳು ತರಬೇತಿ ಪ್ರಯೋಜನ ಪಡೆದುಕೊಳ್ಳಬೇಕು.
● ಡಿ. ದಿನೇಶ್ ಪೂಜಾರಿ

ನಿಡಿಗಲ್ ಅಂಗನವಾಡಿ ಕೇಂದ್ರದ ನೂತನ ಕಟ್ಟಡ ಕಾಮಗಾರಿಗೆ ಶಾಸಕರಿಂದ ಶಿಲಾನ್ಯಾಸ



ಬೆಳ್ತಂಗಡಿ: ಕಳೆದ ಎರಡೂವರೆ ವರ್ಷಗಳಿಂದ ಸರಕಾರದಿಂದ ಯಾವುದೇ ಅಂಗನವಾಡಿ ಕೇಂದ್ರಗಳು ಮಂಜೂರುಗೊಂಡಿಲ್ಲ, ಜಿ.ಪಂ. ಮತ್ತು ತಾ.ಪಂ.ನಿಂದ ಮಂಜೂರುಗೊಂಡಿರುವ ಅನುದಾನವನ್ನು ಆದ್ಯತೆ ಮೇರೆಗೆ ನಿಡಿಗಲ್ ಮತ್ತು ಮರೋಡಿಗೆ ಇಡುವ ಕೆಲಸವನ್ನು ಮಾಡಿದ್ದೇನೆ ಎಂದು ಶಾಸಕ ಹರೀಶ್ ಪೂಂಜ ಹೇಳಿದರು.
ಅವರುಸೋಮವಾರನಿಡಿಗಲ್ ಅಂಗನವಾಡಿ ಕೇಂದ್ರದ ನೂತನ ಕಟ್ಟಡ ಕಾಮಗಾರಿ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು. ರೂ.17 ಲ. ಅನುದಾನದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣವಾಗಲಿದ್ದು, ಕಲ್ಮಂಜ ಶಾಲೆಗೆ ರೂ. 12 ಲ., ಪ್ರೌಢ ಶಾಲಾ ಅಭಿವೃದ್ಧಿಗೆ ರೂ.17 ಲ.ಅನುದಾನ ನೀಡಲಾಗಿದೆ. ಗುಮ್ಮಟಬೈಲು ತಡೆಗೋಡೆ ರೂ.30 ಲ., ಗುತ್ತುಬೈಲು ಸೇತುವೆ ತಡೆಗೋಡೆ ರೂ.35 ಲಕ್ಷ, ಆರ್ಲ ರಸ್ತೆ ಮರುಡಾಮರೀಕರ ರೂ.6 ಲಕ್ಷ, ಜೊತೆಗೆ 3 ಸೇತುವೆ ನಿರ್ಮಾಣಕ್ಕೆ 3.75 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಯುತ್ತಿದೆ ಎಂದರು.
ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಗೀತಾ, ಕಾರ್ಯದರ್ಶಿಸರೋಜಿನಿ,ಶಾಲಾಮುಖ್ಯೋಪಾಧ್ಯಾಯಿನಿ ಮಂಜುಳಾ, ಸಹಾಯಕ ಕಾರ್ಯಪಾಲಕ ಅಭಿಯಂತರ ರಾದ ಜನಾರ್ದನ ಕೆ.ಬಿ., ಇಂಜಿನಿಯರ್ ಸಂದೀಪ್ ಶೆಟ್ಟಿ, ಎಸ್‌ಡಿಎಂಸಿ ಅಧ್ಯಕ್ಷರು, ಗುತ್ತಿಗೆದಾರರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ, ಪಂ.ಮಾಜಿ ಸದಸ್ಯರು, ತಾ.ಪಂ.ಮಾಜಿ ಸದಸ್ಯ ಶಶಿಧರ್ ಕಲ್ಮಂಜ, ಕಲ್ಮಂಜ ಗ್ರಾ.ಪಂ.ಮಾಜಿ ಅಧ್ಯಕ್ಷ ಶ್ರೀಧರ್, ಗ್ರಾಮಸ್ಥರಾದ ಶ್ರೀಧರ್ ಎಂ ಪಿಲತಬೆಟ್ಟು, ಹರೀಶ್ ದೇವಾಡಿಗ ನಿಡಿಗಲ್, ಸತ್ಯನಾರಾಯಣ ಭಜನಾ ಮಂಡಳಿ ಸಂತೋಷ್ ಹೆಗ್ಡೆ, ಹಿರಿಯರಾದ ಮೋನಪ್ಪ ಗೌಡ, ಮೋನಪ್ಪ ಟಿ, ಧರ್ಮಪ್ಪ ಕಿರಣ್ ಟಿ., ಸಚಿನ್, ಪೂರ್ಣಿಮಾ, ರಾಘವೇಂದ್ರ, ಹರೀಶ್, ಸುಧೀರ್, ಭದ್ರಯ್ಯ ಮತ್ತಿತರರಿದ್ದರು. ನಳಿನಾಕ್ಷಿ ಸ್ವಾಗತಿಸಿದರು.

ಶ್ರೀನಿವಾಸ ವಿವಿ ಕುಲಾಧಿಪತಿ ಡಾ. ರಾಘವೇಂದ್ರ ರಾವ್‌ಗೆ ಶ್ರದ್ಧಾಂಜಲಿ



ಮಂಗಳೂರು: ಶ್ರೀನಿವಾಸ ವಿವಿ ಕುಲಾಧಿಪತಿ, ಹೋಟೆಲ್ ಶ್ರೀನಿವಾಸ, ಶ್ರೀನಿವಾಸ ವಿದ್ಯಾ ಸಂಸ್ಥೆ ಹಾಗೂ ಶ್ರೀನಿವಾಸ ಆಸ್ಪತ್ರೆ ಸ್ಥಾಪಕ ಡಾ. ಸಿಎ ಎ. ರಾಘವೇಂದ್ರ ರಾವ್‌ಗೆ ಸಾರ್ವಜನಿಕ ಶ್ರದ್ಧಾಂಜಲಿ ಸಭೆ ನಗರದ ಶಾರದಾ ವಿದ್ಯಾಲಯದ ಸಭಾಂಗಣದಲ್ಲಿ ಮಂಗಳವಾರ ನಡೆಯಿತು.
ನುಡಿ ನಮನ ಸಲ್ಲಿಸಿದ ಶಾರದಾ ಸಮೂಹ ವಿದ್ಯಾ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕ್ , ರಾಘವೇಂದ್ರ ರಾವ್ ಉತ್ತಮ ಸಂಸ್ಕಾರವನ್ನು ಬಾಲ್ಯದಿಂದಲೇ ಪಡೆದಿದ್ದಾರೆ.ತಂದೆಯ ಮಾರ್ಗದರ್ಶನದಂತೆ ಆದಾಯದ ಒಂದು ಪಾಲನ್ನು ಸಮಾಜಕ್ಕೆ ನೀಡಲು ವಿದ್ಯಾಸಂಸ್ಥೆಗಳನ್ನು ನಿರ್ಮಿಸಿದ್ದಾರೆ. ನೇರನುಡಿ ಹೊಂದಿದ್ದ ಅವರು, ಧಾರ್ಮಿಕಚಿಂತನೆಹೊಂದಿದ್ದರು. ಅವರ ಒಳ್ಳೆಯ ಗುಣ, ಆದರ್ಶ ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು.
ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ, ರಾಘವೇಂದ್ರ ರಾವ್ ಪರಿಶ್ರಮದಿಂದ ತಮ್ಮ ಬದುಕನ್ನು ಕಟ್ಟಿಕೊಂಡವರು. ದೂರದರ್ಶಿತ ಹೊಂದಿರುವ ವಿಶಿಷ್ಠ ವ್ಯಕ್ತಿತ್ವ ಅವರದ್ದು ಎಂದರು. ವಿಧಾನ ಪರಿಷತ್ ಮಾಜಿ ಸದಸ್ಯ ಕ್ಯಾ. ಗಣೇಶ್ ಕಾರ್ಣಿಕ್, ರಾಘವೇಂದ್ರ ರಾವ್ ಸ್ಥಾಪಿಸಿದ ವಿದ್ಯಾಸಂಸ್ಥೆಗಳು, ಹೊಟೇಲ್‌ಗಳು, ಆಸ್ಪತ್ರೆಗಳು ಸಾವಿರಾರು ಜನರ ಬದುಕಿಗೆ ಬೆಳಕಾಗಿ ಮೂಡಿಬಂದಿದೆ ಎಂದರು.
ಯೆನಪೋಯ ವಿವಿ ಶ್ರೀಪತಿ ರಾವ್, ಶ್ರೀನಿವಾಸ ವಿವಿ ರಿಜಿಸ್ಟ್ರಾರ್ ಡಾ. ಅನಿಲ್ ಕುಮಾರ್, ಗುಜರಾತಿ ಸಮಾಜದ ಮುಖಂಡ ಶಿವಕುಮಾರ್ ಶರ್ಮ, ಎಸ್. ಎಲ್. ಶೇಟ್ ಜ್ಯುವೆಲರ್ಸ್‌ನ ಪ್ರಶಾಂತ್ ಶೇಟ್, ಡಾ. ಹರಿಕೃಷ್ಣ ಪುನರೂರು, ಕರ್ನಾಟಕ ಬ್ಯಾಂಕ್ ಮಾಜಿ ಎಂಡಿ ಎಂ.ಎಸ್. ಮಹಾಬಲೇಶ್ವರ, ಕೆನರಾ ಚೇಂಬರ್ಸ್‌ಆಫ್‌ಕಾಮರ್ಸ್‌ನಸಿ.ಒ.ಒ ಮೈತ್ರೇಯ, ಸುಧಾಕರ್ ರಾವ್ ಪೇಜಾವರ, ಲೀಲಾಕ್ಷ ಕರ್ಕೇರ, ಡಾ. ಅಣ್ಣಯ್ಯ ಕುಲಾಲ್,ದಯಾನಂದ್ ಕಟೀಲ್, ವಿಠ್ಠಲದಾಸ್, ಬನ್ನಂಜೆ ವಿನಯ್ ಆಚಾರ್ಯ, ಭುವನಾಭಿರಾಮ ಉಡುಪ ಕಿನ್ನಿಗೋಳಿ, ಲತಾ, ಭಾರ್ಗವ ತಂತ್ರಿ, ಎಂ.ಆರ್. ವಾಸುದೇವ ಭಟ್, ಹುಸನ್ ಕಾಟಿಪಳ್ಳ, ಜನಾರ್ದನ ಹೆಗ್ಡೆ ಆರೂರು ಕಿಶೋರ್ ರಾವ್ ಉಪಸ್ಥಿತರಿದ್ದರು.
ಸುರೇಶ್ ರಾವ್ ಅತ್ತೂರು ಹಾಗೂ ರಾಘವೇಂದ್ರ ರಾವ್ ಗಮಕ ವಾಚನ, ಪ್ರವಚನ ಮಾಡಿದರು. ಮಂಜುಳಾ–ರಜನಿ ಗಾನ ನಮನ ಸಲ್ಲಿಸಿದರು.

ಮಾನಂಪಾಡಿ ಶ್ರೀ ವೀರಭದ್ರ ದೇವಳ: ವರ್ಷಾವಧಿ ಸಂಭ್ರಮ, ಚಂಡಿಕಾಯಾಗ



ಮುಲ್ಕಿ: ಇತಿಹಾಸ ಪ್ರಸಿದ್ಧ ಮುಲ್ಕಿ ಸೀಮೆಯ ಒಂಬತ್ತು ಮಾಗಣೆಯ ಮಾನಂಪಾಡಿ ಶ್ರೀ ವೀರಭದ್ರ ಮಹಮ್ಮಾಯಿ ದೇವಸ್ಥಾನದಲ್ಲಿ ವರ್ಷಾವಧಿ ಮಹೋತ್ಸವ ಹಾಗೂ ಚಂಡಿಕಾಯಾಗ ಮಂಗಳಬಾರ ನಡೆಯಿತು.
ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಮಂಗಳವಾರ ಬೆಳಿಗ್ಗೆ ಕಾರ್ನಾಡು ಕಟ್ಟೆಯಲ್ಲಿ ಶ್ರೀ ದೇವಿ ಪ್ರತಿಬಿಂಬ ಪ್ರತಿಷ್ಠೆ ನಡೆಯಿತು.
ಬೆಳಿಗ್ಗೆ ದೇವಳದಲ್ಲಿ ಕ್ಷೇತ್ರದ ತಂತ್ರಿಗಳಾದ ಶಿಬರೂರು ವೇದವ್ಯಾಸ ತಂತ್ರಿ ಹಾಗೂ ಅರ್ಚಕ ವೇದಮೂರ್ತಿ ವೆಂಕಟೇಶ ಭಟ್ ನೇತೃತ್ವದಲ್ಲಿ ಚಂಡಿಕಾಯಾಗ, ಬಪ್ಪನಾಡು ಕ್ಷೇತ್ರಕ್ಕೆ ಫಲಪುಷ್ಪ ಕಾಣಿಕೆ ಸಮರ್ಪಣೆ, ಶ್ರೀ ಮಹಾಗಣಪತಿ ದೇವರಿಗೆ ಮಹಾಪೂಜೆ ಶ್ರೀ ವೀರಭದ್ರ ದೇವರಿಗೆ ಮಹಾಪೂಜೆ, ಚಂಡಿಕಾಯಾಗ ಪೂರ್ಣಾಹುತಿ, ಪ್ರಸಾದ ವಿತರಣೆ, ಮಹಮ್ಮಾಯಿ ಸನ್ನಿಧಿಯಲ್ಲಿ ಮಹಾ ಪೂಜೆ, ದರ್ಶನ, ಮಧ್ಯಾಹ್ನ ಶ್ರೀ ಧೂಮಾವತಿ ದೈವದ ಭಂಡಾರ ಇಳಿದು, ಅನ್ನಸಂತರ್ಪಣೆ ನಡೆಯಿತು.

ಶ್ರೀ ದೇವಿ ಪ್ರತಿಬಿಂಬದ ಮೆರವಣಿಗೆ

ಸಂಜೆ ಕಾರ್ನಾಡು ಕಟ್ಟೆಯಿಂದ ಶ್ರೀ ದೇವಿ ಪ್ರತಿಬಿಂಬದ ಮೆರವಣಿಗೆ ಹೊರಟು ಮುಲ್ಕಿ ಬಸ್‌ಸ್ಟಾಂಡ್, ಪಂಚಮಹಲ್ ಮಾರ್ಗದಿಂದ ಅಕ್ಕಸಾಲಿಗರಕೇರಿಯ ಮಾರ್ಗವಾಗಿ ಶ್ರೀ ಕ್ಷೇತ್ರಕ್ಕೆ ತಲುಪುವುದು. ರಾತ್ರಿ ಶ್ರೀ ವೀರಭದ್ರ ದೇವರಿಗೆ ರಂಗಪೂಜೆ. ಶ್ರೀ ಧೂಮಾವತಿ ದೈವದ ನೇಮ, ಶ್ರೀ ಮಹಾಮ್ಮಾಯ ಸನ್ನಿಧಿಯಲ್ಲಿ ಮಹಾಪೂಜೆ, ದರುಶನ ನಡೆಯಿತು.
ಈ ಸಂದರ್ಭ ಕ್ಷೇತ್ರದ ಗುರಿಕಾರರಾದ ಯಶವಂತ ಯಾನೆ ಚಂದಪ್ಪ ಗುರಿಕಾರ, ಸದಾಶಿವ ಗುರಿಕಾರ್ ಸಾಣೂರು, ರುಕ್ಕಯ ಗುರಿಕಾರ್ ಕಡಂದಲೆ, ರಾಮ ಗುರಿಕಾರ್ ತಾಳಿಪಾಡಿ ಮತ್ತಿತರರು ಉಪಸ್ಥಿತರಿದ್ದರು

ಜೀವನ ಮೌಲ್ಯಗಳ ಅರಿತುಕೊಂಡು ಆಧುನಿಕತೆಗೆ ಪೂರಕವಾಗಿ ಬೆಳೆಯಿರಿ



ಕೊಣಾಜೆ: ಇಂದಿನ ಸ್ಪರ್ಧಾತ್ಮಕ ಕಾಲಘಟ್ಟದಲ್ಲಿ ಶಿಕ್ಷಣದೊಂದಿಗೆ ಸಮಸ್ಯೆ ನಿವಾರಣೆಯ ಕೌಶಲ್ಯ, ಮೌಲ್ಯ ವರ್ಧನೆ, ಉನ್ನತ ಮಟ್ಟದ ಚಿಂತನೆಯೊಂದಿಗೆ ಜೀವನದ ಬಗೆಗಿನ ಪ್ರಾಯೋಗಿಕ ಮೌಲ್ಯಗಳ ಅರಿತು ಕೊಂಡು ಆಧುನಿಕತೆಗೆ ಪೂರಕವಾಗಿ ಬೆಳೆಯಬೇಕು ಎಂದು ಯುಕೆ ಪೆಂಟಗ್ರಾಮ್ ಸಿಸ್ಟಮ್‌ನ ನಿರ್ದೇಶಕ ಆಶೀಶ್ ರೈ ಹೇಳಿದರು.
ಅವರು ಮಂಗಳೂರು ವಿವಿಯ ಎಂಬಿಎ ವಿಭಾಗದ ವತಿಯಿಂದ ಶಾಮ್ ಸಂಸ್ಥೆಯ ಸಹಯೋಗದೊಂದಿಗೆ ಸೋಮವಾರ ಮಂಗಳವಾರ ನಡೆದ ಕ್ರಾಸ್ ರೋಡ್ಸ್–2026 'ಇಂಪೀರಿಯಾ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.
ನಮಗೆ ಬದುಕಿನ ಪಥವನ್ನು ನಾವೇ ಅನ್ವೇಷಣೆ ಮಾಡಬೇಕು. ನಮ್ಮ ಶಿಕ್ಷಣ, ಜ್ಞಾನ ಈ ದಾರಿಗೆ ಅನುಕೂಲತೆ ಮಾಡಿಕೊಡುತ್ತದೆ ಎಂದರು.
ಮಂಗಳೂರು ವಿವಿ ಕುಲಸಚಿವರಾದ ಪ್ರೊ. ಗಣೇಶ್‌ಸಂಜೀವ್ ಅಧ್ಯಕ್ಷತೆವಹಿಸಿಮಾತನಾಡಿದರು. ವಾಣಿಜ್ಯ ವಿಭಾಗದ ಡೀನ್ ಪುಟ್ಟಣ್ಣ ಕೆ., ಕಾರ್ಯಕ್ರಮದ ಕಾರ್ಯದರ್ಶಿ ಜೇಮ್ಸ್, ಉತ್ಸವದ ಸಂಯೋ ಜಕಿ ಭಾವನಾ ಉಪಸ್ಥಿತರಿದ್ದರು. ಎಂಬಿಎ ವಿಭಾಗದ ಅಧ್ಯಕ್ಷ ಪ್ರೊ.ಶೇಖರ್ ನಾಯ್ಕ್ ಸ್ವಾಗತಿಸಿ, ಕೀರ್ತಿ ನಾಯರ್ ನಿರೂಪಿಸಿದರು.

ಗೌರವಿಸೋಣ

ಅವಕಾಶಗಳು ಬರುತ್ತಾ ಇರುತ್ತವೆ ಆದರೆ ಅದರ ಸದ್ಬಳಕೆಯ ಕೌಶಲ್ಯತೆ ನಮ್ಮಲ್ಲಿರಬೇಕು. ನಮ್ಮ ಪೋಷಕರ ಸಲಹೆ ಎಂದಿಗೂ ನಿರ್ಲಕ್ಷಿಸದೆ ಗೌರವಿಸೋಣ. ಯಾಕೆಂದರೆ ಅವರು ಅನುಭವದ ಸಲಹೆಗಳು ಜೀವನದಲ್ಲಿ ಎಡವದಂತೆ ಮಾಡುತ್ತದೆ.
● ಪ್ರೊ.ಗಣೇಶ್ ಸಂಜೀವ್

ಕೋಡಿ ಕನ್ಯಾನದಲ್ಲಿ ಬಿಜೆಪಿ ಶಕ್ತಿ ಕೇಂದ್ರದ ಪುನರಚನೆ ಆಯ್ಕೆ ಪ್ರಕ್ರಿಯೆ ಕಾರ್ಯಕ್ರಮ



ಕೋಟ: ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೋಟ ಮಹಾಶಕ್ತಿ ಕೇಂದ್ರದ ಕೋಡಿ ಕನ್ಯಾನದಲ್ಲಿ ಬಿಜೆಪಿ ಶಕ್ತಿಯ ಕೇಂದ್ರದ ಪುನರಚನೆ ಆಯ್ಕೆ ಪ್ರಕ್ರಿಯೆ ಕಾರ್ಯಕ್ರಮ ಕೋಡಿ ಕನ್ಯಾಣದ ಶ್ರೀರಾಮ ಮಂದಿರದ ಮುಂಭಾಗದ ಸಭಾಂಗಣದಲ್ಲಿ ಜರಗಿತು. ಪಕ್ಷ ಸಂಘಟನೆ ಹಾಗೂ ಶಕ್ತಿ ಕೇಂದ್ರದ ಪ್ರಮುಖ ಮತ್ತು ಸಹ ಪ್ರಮುಖ ಆಯ್ಕೆ ಪ್ರಕ್ರಿಯು ಕುಂದಾಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ 'ಎ' ಕಿರಣ್ ಕುಮಾರ್ ಕೊಡ್ಗಿ ಉಪಸ್ಥಿತಿಯಲ್ಲಿ ಮತ್ತು ಕ್ಷೇತ್ರಾಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು.
ವೇದಿಕೆಯಲ್ಲಿ ಮಂಡಲ ಪ್ರಧಾನ ಕಾರ್ಯದರ್ಶಿ ಸುಧೀರ್ ಕೆ.ಎಸ್. ಕೋಟ ಮಹಾಶಕ್ತಿ ಅಧ್ಯಕ್ಷ ಸುರೇಶ್ ಕುಂದರ್, ಪ್ರಧಾನ ಕಾರ್ಯದರ್ಶಿ ಅಜಿತ್ ಶೆಟ್ಟಿ ಕೊತ್ತಾಡಿ, ಕೋಡಿಕನ್ಯಾನ ಶಕ್ತಿ ಕೇಂದ್ರದ ಅಧ್ಯಕ್ಷ ಮಹಾಬಲ ಕುಂದರ್, ಕಾರ್ಯದರ್ಶಿ ಸುಧೀರ್ ಕುಂದರ್, ಪಕ್ಷದ ಪ್ರಮುಖರು ಗ್ರಾಮಸ್ಥರು ಉಪಸ್ಥಿತರಿದ್ದರು.

ಮಾ.1: ಕಟೀಲಿನ ನಂದಿನಿ ನದಿ ಮಧ್ಯದ ಕುದ್ರುವಿನಲ್ಲಿ ಮೂಲ್ಕಿ ತಾಲೂಕು ಸಾಹಿತ್ಯ ಸಮ್ಮೇಳನ

ಕಟೀಲು: ಕಟೀಲು ದೇಗುಲದ ನಂದಿನೀ ನದಿ ಮಧ್ಯದ ಕುದ್ರುವಿನಲ್ಲಿ ಮಾರ್ಚ್ 1ರಂದು ಮೂಲ್ಕಿ ತಾಲೂಕು 3ನೇ ಕನ್ನಡ ಸಾಹಿತ್ಯ ಸಮ್ಮೇಳನ ಮೂರು ವೇದಿಕೆಗಳಲ್ಲಿ ನಡೆಯಲಿದೆ. ಖ್ಯಾತ ರಂಗಕರ್ಮಿ ಕೃಷ್ಣಮೂರ್ತಿ ಕವತ್ತಾರು ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಸಮ್ಮೇಳನ ಬೆಳಿಗ್ಗೆ 8.45ಕ್ಕೆ ಕಟೀಲು ರಥಬೀದಿಯಿಂದ ಕನ್ನಡ ಭುವನೇಶ್ವರಿಯ ಮೆರವಣಿಗೆಯೊಂದಿಗೆ ಆರಂಭವಾಗಲಿದೆ. ವಾಸುದೇವ ಆಸ್ರಣ್ಣ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ.
ಧ್ವಜಾರೋಹಣದ ಬಳಿಕ ಶಾಸಕ ಉಮಾನಾಥ ಕೋಟ್ಯಾನ್ ಸಮ್ಮೇಳನ ಉದ್ಘಾಟಿಸಲಿದ್ದಾರೆ. 40ಕ್ಕೂ ಹೆಚ್ಚು ಖ್ಯಾತ ಹಾಗೂ ಯುವ ಚಿತ್ರ ಕಲಾವಿದರು ನಂದಿನಿ ನದಿ ಹಾಗೂ ಕಟೀಲು ಕ್ಷೇತ್ರದ ಕುರಿತಾಗಿ ಚಿತ್ರಗಳನ್ನು ರಚಿಸಲಿದ್ದು ಈ ಚಿತ್ರಕೂಟಕ್ಕೆ ಪರಿಸರ ಪ್ರವಾಸೋದ್ಯಮ ಮಂಡಳಿಯ ಶಾಲೆಟ್ ಪಿಂಟೋ ಚಾಲನೆ ನೀಡಲಿದ್ದಾರೆ. ಸಮಾನಾಂತರ



ವೇದಿಕೆಯಲ್ಲಿ ಮೂಲ್ಕಿ ತಾಲೂಕಿನ ಕವಿಗಳಿಂದ ಕವಿಗೋಷ್ಠಿ, ಕಥಾಗೋಷ್ಠಿ ಮಕ್ಕಳ ಕಥೆಗಳ ಓದು ನಡೆಯಲಿದ್ದು, ಕಸಾಪ ಮಾಜಿ ರಾಜ್ಯಾಧ್ಯಕ್ಷ ಡಾ. ಹರಿಕೃಷ್ಣ ಪುನರೂರು ಉದ್ಘಾಟಿಸಲಿದ್ದು, ಚರ್ಚೆ, ಸಂವಾದಗಳ ಪಟ್ಟಾಂಗಕಟ್ಟೆಯನ್ನು ದಯಾನಂದ ಕಟೀಲ್ ಉದ್ಘಾಟಿಸಲಿದ್ದಾರೆ. ಕಸಾಪ ಜಿಲ್ಲಾಧ್ಯಕ್ಷ ಡಾ. ಎಂ.ಪಿ.ಶ್ರೀನಾಥ್, ನಿ.ಪೂ. ಸಮ್ಮೇಳಾನಾಧ್ಯಕ್ಷ ಶ್ರೀಧರ ಡಿ.ಎಸ್., ಕಥೆಗಾರ ಹಂಝ ಮಲಾರ್, ತಹಶೀಲ್ದಾರ್ ಶ್ರೀಧರ ಮುಂದಲಮನಿ ಭಾಗವಹಿಸಲಿದ್ದಾರೆ ಎಂದು ಸಮ್ಮೇಳನ ಸಮಿತಿ ಅಧ್ಯಕ್ಷ ಶ್ರೀ ಹರಿನಾರಾಯಣದಾಸ ಆಸ್ರಣ್ಣ ತಿಳಿಸಿದ್ದಾರೆ.
ಸಮ್ಮೇಳನದಲ್ಲಿ ಹಿರಿಯ ಸಾಹಿತಿಗಳ ನೆನಪು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಹರಿದಾಸ ಪಾವಂಜೆ ಲಕ್ಷ್ಮೀನಾರಾಯಣಪ್ಪಯ್ಯರ ಕುರಿತು ಡಾ.ಬಿ. ಜನಾರ್ದನ ಭಟ್, ಖ್ಯಾತ ಕಥೆಗಾರ ಬಾಗಲೋಡಿ ದೇವರಾಯರ ಬಗ್ಗೆ ಪ್ರೊ. ಅರವಿಂದ ಹೆಬ್ಬಾರ್, ಖ್ಯಾತ ಸಾಹಿತಿ ಎಂ. ಎನ್. ಕಾಮತ್‌ರ ಕುರಿತು ದೇವು ಹನೇಹಳ್ಳಿ, ಕಥೆಗಾರ ಎಂ. ವ್ಯಾಸ ಅವರ ಬಗ್ಗೆ ವರದರಾಜ ಚಂದ್ರಗಿರಿ, ಸೇಡಿಯಾಪು ಕೃಷ್ಣ ಭಟ್ಟರ ಕುರಿತು ಪಾದೇಕಲ್ಲು ವಿಷ್ಣು ಭಟ್ ಮಾತನಾಡಲಿದ್ದಾರೆ. ಹಿರಿಯ ಸಾಹಿತಿಗಳ ಕಾವ್ಯಗಾಯನ, ಕಥಾವಾಚನ ನಡೆಯಲಿದೆ. ಡಾ. ವಾಸುದೇವ ಬೆಳ್ಳೆ ಸಮ್ಮೇಳನಾಧ್ಯಕ್ಷ ಕೃಷ್ಣಮೂರ್ತಿಯವರ ಜೊತೆ ಸಂವಾದ ನಡೆಸಲಿದ್ದಾರೆ.

ಐದು ಕೃತಿಗಳ ಬಿಡುಗಡೆ

ಕಮಲಾದೇವಿಪ್ರಸಾದ ಆಸ್ರಣ್ಣ ಅವರ ಲೇಖನಗಳ ಸಂಗ್ರಹ ಯಕ್ಷಾಕೃತಿ, ಉದಯಕುಮಾರ ಹಬ್ಬು ಅವರ ನೆರೋದಾನ ಇಪ್ಪತ್ತು ಪ್ರೇಮಗೀತೆಗಳು ಹಾಗೂ ಛತ್ರಪತಿ ಶಿವಾಜಿ ಮಹಾರಾಜ್, ಡಾ. ಸೋಂದಾ ಭಾಸ್ಕರ ಭಟ್ಟರ ಶ್ಲೋಕಸಾಗರ ಭಾಗ ಮೂರು, ಎಕ್ಕಾರು ಗ್ರಂಥಾಲಯದ ಸಂಚಿಕೆ ಪುಸ್ತಕಮನೆ ಹೀಗೆ ಐದು ಕೃತಿಗಳ ಬಿಡುಗಡೆ ಸಮ್ಮೇಳನದಲ್ಲಿ ನಡೆಯಲಿದೆ.

ಸಮಾರೋಪ ಸಮಾರಂಭ

ಸಮಾಪನ ಕಾರ್ಯಕ್ರಮದಲ್ಲಿ ಸಾಹಿತಿ ಬಾಬು ಕೊರಗ ಸಮಾಪನದ ನುಡಿಗಳನ್ನಾಡಲಿದ್ದಾರೆ. ಖ್ಯಾತ ಕವಿ ವಿಲ್ಸನ್ ಕಟೀಲ್ ಸಮ್ಮೇಳನದ ಸಲುವಾಗಿ ಆಯೋಜಿಸಲಾದ ಸಾಹಿತ್ಯ ಸ್ಪರ್ಧೆಗಳ ಬಹುಮಾನ ವಿತರಿಸಲಿದ್ದಾರೆ. ಬರಹಗಾರ ಪ್ರಥ್ವೀರಾಜ ಕವತ್ತಾರು, ಅಜಾರು ನಾಗರಾಜ ರಾಯ ಭಾಗವಹಿಸಲಿದ್ದಾರೆ.

ಮುಕ್ತ ಅವಕಾಶ

ಸಮಾನಾಂತರ ವೇದಿಕೆ ಹಾಗೂ ಪಟ್ಟಾಂಗಕಟ್ಟೆಯಲ್ಲಿ ತಾಲೂಕಿನ ಸಾಹಿತ್ಯಾಸಕ್ತರಿಗೆ, ಯುವ ಸಾಹಿತಿಗಳಿಗೆ, ವಿದ್ಯಾರ್ಥಿಗಳಿಗೆ ಭಾಗವಹಿಸಲು ಮುಕ್ತ ಅವಕಾಶ ನೀಡಲಾಗಿದೆ. ತಮ್ಮ ಸ್ವರಚಿತ ಕವನ, ಕಥೆಗಳನ್ನು ಓದಬಹುದಾಗಿದೆ.

ಎಲ್ಲರಿಗೂ ಪುಸ್ತಕ

ಸಮ್ಮೇಳನಕ್ಕೆ ಬಂದವರಿಗೆಲ್ಲರಿಗೂ ಕನ್ನಡದ ಶಾಲು, ತರಕಾರಿ ಗಿಡ, ಪುಸ್ತಕ ನೀಡಲಾಗುತ್ತದೆ. ಪರಿಸರ ಪೂರಕ ವಸ್ತುಗಳು, ಖಾದಿ ಬಟ್ಟೆ, ಪುಸ್ತಕಗಳ ಮಾರಾಟ ವ್ಯವಸ್ಥೆ ರುತ್ತದೆ ಎಂದು ಗುರುರಾಜ್ ತಿಳಿಸಿದ್ದಾರೆ.

ಪ್ರಕೃತಿ ಸೌಂದರ್ಯದ ಮಧ್ಯೆ ಸಮ್ಮೇಳನ

ಕಟೀಲು ದೇಗುಲ ನಂದಿನೀ ನದಿಯ ದ್ವೀಪದಲ್ಲಿರುವುದು ಜನಜನಿತ. ಇದರ ಪಕ್ಕದ ಮತ್ತೊಂದು ಪುಟ್ಟ ದ್ವೀಪವಾಗಿರುವ ಕುದ್ರು ಕಿಂಡಿ ಅಣೆಕಟ್ಟುಗಳಿಂದಾಗಿ ಅರ್ಧ ಭಾಗ ನೀರಿನಿಂದ ತುಂಬಿ ಆಕರ್ಷಕವಾಗಿದೆ. ಯಾಜ್ಞಿಕ ವೃಕ್ಷಗಳು, ಉದ್ಯಾನವನಗಳಿಂದ ಈ ಕುದ್ರು ಕಂಗೊಳಿಸುತ್ತಿದ್ದು, ಈ ಪ್ರಕೃತಿ ಸೌಂದರ್ಯದ ಮಧ್ಯೆ ತೆರೆದ ಸಭಾಂಗಣಗಳಲ್ಲಿ ಸಮ್ಮೇಳನ ಆಯೋಜಿಸಲಾಗಿದೆ. ಊಟ ಉಪಾಹಾರ ಸೇರಿದಂತೆ ಎಲ್ಲ ಸಹಕಾರವನ್ನು ಕಟೀಲು ದೇಗುಲ ನೀಡುತ್ತಿದೆ.
● ಗುರುರಾಜ್ ಮಲ್ಲಿಗೆಯಂಗಡಿ, ಸಮ್ಮೇಳನ ಸಂಚಾಲಕ,

ಸುತ್ತಮುತ್ತ

ದಕ್ಷಿಣ ಕನ್ನಡ ಜಿಲ್ಲಾ ದಿವ್ಯಾಂಗ ಸಮ್ಮೇಳನ

ಬಂಟ್ವಾಳ: ಸಕ್ಷಮ ದಕ್ಷಿಣ ಕನ್ನಡ ಜಿಲ್ಲಾ ಘಟಕ ಮಂಗಳೂರು ಆಶ್ರಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ದಿವ್ಯಾಂಗ ಸಮ್ಮೇಳನ ಮಾರ್ಚ್ 1ರಂದು ಬಿ.ಸಿ.ರೋಡಿನ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ. ಬೆಳಗ್ಗೆ 10ರಿಂದ ಕಾರ್ಯಕ್ರಮ ಆರಂಭಗೊಳ್ಳಲಿದ್ದು, ಮಂಗಳೂರು ಪ್ರಸಾದ್ ನೇತ್ರಾಲಯದ ಎಂ.ಡಿ ಡಾ. ಕೃಷ್ಣಪ್ರಸಾದ ಕೂಡ್ಲು ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಸಕ್ಷಮ ದ.ಕ. ಜಿಲ್ಲಾ ಘಟಕ ಅಧ್ಯಕ್ಷ ರಾಜಶೇಖರ ಭಟ್ ಕಾಕುಂಜೆ ವಹಿಸುವರು. ಮುಖ್ಯ ಅತಿಥಿಗಳಾಗಿ ಬಿಎಎಸ್ ಎಫ್ ಇಂಡಿಯಾ ಲಿಮಿಟೆಡ್ ಮಾನವ ಸಂಪನ್ಮೂಲ ಅಧಿಕಾರಿ ಸಂತೋಷ್ ರೈ, ತಾಲೂಕು ಹಿರಿಯ ನಾಗರಿಕರ ಸಬಲೀಕರಣ ಹಾಗೂ ವಿಶೇಷ ಚೇತನರ ಕಲ್ಯಾಣ ಇಲಾಖೆ ಎಂ.ಆರ್.ಡಬ್ಲ್ಯು ಗಿರೀಶ್ ಕುಮಾರ್ ಎ, ಮಂಗಳೂರು ಯನಪೋಯ ಆಯುರ್ವೇದ ಮಹಾವಿದ್ಯಾಲಯ ಉಪನ್ಯಾಸಕ ಡಾ. ಬಾಲಕೃಷ್ಣ ಕುಮಾರ್ ಭಾಗವಹಿಸುವರು. ಈ ಸಂದರ್ಭ ಸಕ್ಷಮ ಕರ್ನಾಟಕ ದಕ್ಷಿಣ ಪ್ರಾಂತ ಅಧ್ಯಕ್ಷ ಕೇಶವ ಕುಮಾರ್, ವಿಕಾಸಂ ಸೇವಾ ಫೌಂಡೇಶನ್ ಸಹಸಂಸ್ಥಾಪಕ ಗೋಪಾಲ್ ಗೋವಿಂದತೋಟ ಹಾಗೂ ಧರ್ಮಪ್ರಸಾದ್ ರೈ, ಸಕ್ಷಮ ದ.ಕ. ಜಿಲ್ಲಾ ಘಟಕ ಕಾರ್ಯದರ್ಶಿ ಹರೀಶ್ ಪ್ರಭು ಉಪಸ್ಥಿತರಿರುವರು. ಈ ವೇಳೆ ಲೋಲಾಕ್ಷ ಅವರಿಂದ ಜಾದೂ ಪ್ರದರ್ಶನ, ದಿವ್ಯಾಂಗರ ಕುರಿತು ಆರಂಭಿಕ ಗುರುತಿಸುವಿಕೆ ಮತ್ತು ಆರಂಭಿಕ ಹಸ್ತಕ್ಷೇಪ ಕುರಿತು ವಿಕಾಸಂ ಸಹಸಂಸ್ಥಾಪಕ ಗಣೇಶ್ ಭಟ್ ವಾರಣಾಸಿ, ಪ್ರಸ್ತುತ ವ್ಯವಸ್ಥೆಯಲ್ಲಿ ದಿವ್ಯಾಂಗರು ಎದುರಿಸುವ ಸವಾಲುಗಳ ಕುರಿತು ಹಿರಿಯ ಪತ್ರಕರ್ತ ಹರೀಶ್ ಮಾಂಬಾಡಿ, ನಿರಾಮಯ, ಕಾನೂನು ಪೋಷಕತ್ವ ಯುಡಿಐಡಿ ಕಾರ್ಡ್ ಕುರಿತು ಚೇತನ ಬಾಲವಿಕಾಸ ಕೇಂದ್ರದ ಗಣರಾಜ ಭಟ್ ವಿಚಾರ ಮಂಡಿಸುವರು. ವಿಶೇಷಚೇತನ ವಿದ್ಯಾರ್ಥಿ ಕೌಶಿಕ್ ಆಚಾರ್ಯ ಅವರಿಂದ ಪ್ರತ್ಯಕ್ಷ ಚಿತ್ರಕಲಾಪ್ರದರ್ಶನ ಇರಲಿದೆ. ವಿಶೇಷಚೇತನ ಸಾಧಕರಿಗೆ ಸನ್ಮಾನ ಮತ್ತು ಅರ್ಹ ದಿವ್ಯಾಂಗರಿಗೆ ದಿವ್ಯಾಂಗ ಉಪಯೋಗಿ ಉಪಕರಣಗಳ ವಿತರಣೆ ನಡೆಯಲಿದೆ ಎಂದು ಸಕ್ಷಮ ಪ್ರಕಟಣೆ ತಿಳಿಸಿದೆ.

ಫೆ.26: ವಿದ್ಯುತ್ ನಿಲುಗಡೆ

ಪುತ್ತೂರು: 333 ಕೆ.ವಿ. ನೆಟ್ಟ ಸವಣೂರು–ನೆಲ್ಯಾಡಿ ವಿದ್ಯುತ್ ಮಾರ್ಗಗಳಲ್ಲಿ ನಗರ ಮತ್ತು ಬನ್ನೂರು ಎಂಬಲ್ಲಿ ದುರಸ್ತಿ ಕಾರ್ಯ ಹಮ್ಮಿಕೊಂಡಿರುವುದರಿಂದ ಫೆ.26ರ ಪೂರ್ವಾಹ್ನ 9.30ರಿಂದ ಸಂಜೆ 5.30 ಗಂಟೆಯವರೆಗೆ 33 ಕೆ.ವಿ. ಪುತ್ತೂರು–ಸವಣೂರು–ನೆಲ್ಯಾಡಿ ವಿದ್ಯುತ್ ಮಾರ್ಗದ ವಿದ್ಯುತ್ ನಿಲುಗಡೆ ಮಾಡಲಾಗುವುದು. ಆದುದರಿಂದ 33/11 ಕೆ.ವಿ. ನೆಲ್ಯಾಡಿ ಮತ್ತು 33/11 ಕೆ.ವಿ. ಸವಣೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ ಎಲ್ಲಾ 11 ಕೆ.ವಿ. ಫೀಡರ್‌ಗಳಿಂದ ವಿದ್ಯುತ್ ಸರಬರಾಜಾಗುವ ವಿದ್ಯುತ್ ಬಳಕೆದಾರರು ಗಮನಿಸಿ ಸಹಕರಿಸಬೇಕೆಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಫೆ.26-27: ನಿಡ್ಪಳ್ಳಿ ಕರ್ನಪಾಡಿಯಲ್ಲಿ ಕೊಡಮಣಿತ್ತಾಯ ದೈವದ ಪ್ರತಿಷ್ಠೆ

ನಿಡ್ಪಳ್ಳಿ: ಕರ್ನಪಾಡಿ ನಿಡ್ಪಳ್ಳಿಯ ಶ್ರೀ ಬ್ರಹ್ಮಬೈದರ್ಕಳ ಗರಡಿ ಶ್ರೀ ಕ್ಷೇತ್ರದಲ್ಲಿ ನೂತನವಾಗಿ ನಿರ್ಮಾಣಗೊಂಡ ಚಾವಡಿಯಲ್ಲಿ



ಕೊಡಮಣಿತ್ತಾಯ ದೈವಸ್ಥಾನದ ಪ್ರತಿಷ್ಠೆ ಮತ್ತು ನಾಗ ಬಿರ್ಮೆರ್ ಪುನರ್ ಪ್ರತಿಷ್ಠೆ ಕಾರ್ಯಕ್ರಮ ಫೆ.26 ಮತ್ತು 27ರಂದು ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ನಡೆಯಲಿದೆ. ಫೆ.26ರಂದು ಸಂಜೆ ಗಂಟೆ 6.30ಕ್ಕೆ ದೇವತಾ ಪ್ರಾರ್ಥನೆ, ಆಚಾರ್ಯ ವರಣೆ, ಸ್ವಸ್ತಿ ಪುಣ್ಯಾಹ ವಾಚನ, ಖನನಾದಿ ಸ್ಥಳ ಶುದ್ಧಿ, ಪ್ರಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಪೂಜೆ ಬಲಿ, ಪ್ರಾಕಾರ ದಿಕ್ಬಲಿ, ಪ್ರಸಾದ ವಿತರಣೆ ನಡೆಯಲಿದೆ. ಫೆ.27ರಂದು ಬೆಳಗ್ಗೆ ಗಂಟೆ 8.05ರ ನಂತರ ಮೀನ ಲಗ್ನ ಶುಭ ಮುಹೂರ್ತದಲ್ಲಿ ಕೊಡಮಣಿತ್ತಾಯ ದೈವದ ಪ್ರತಿಷ್ಠೆ ಸಾನಿಧ್ಯ ಕಲಶಾಭಿಷೇಕ, ತಂಬಿಲ ಸೇವೆ, ಮಂಗಳಾರತಿ, ಪ್ರಸಾದ ವಿತರಣೆ ನಡೆಯಲಿದೆ.
ಫೆ.27ರಂದು ಬೆಳಗ್ಗೆ 10.30ಕ್ಕೆ ಧಾರ್ಮಿ ಕ ಸಭಾ ಕಾರ್ಯಕ್ರಮ ನಡೆಯಲಿದೆ.
ಮಧ್ಯಾಹ್ನ ಗಂಟೆ 1ರಿಂದ ನಡೆಯುವ ಸಾಂಸ್ಕ ೃತಿಕ ಕಾರ್ಯಕ್ರಮದಲ್ಲಿ ಸ್ಥಳೀಯ ವಿದ್ಯಾರ್ಥಿ ಗಳಿಂದ ಸಾಂಸ್ಕ ೃತಿಕ ವೈಭವ, 1.30ರಿಂದ ಭಕ್ತಿ ಭಾವ ಲಹರಿ–2026 ನಡೆಯಲಿದೆ ಎಂದು ದೈವಸ್ಥಾನ ಪ್ರತಿಷ್ಠಾ ಸಮಿತಿ ಅಧ್ಯಕ್ಷ ಜನಾರ್ದನ ಪೂಜಾರಿ ಪದಡ್ಕ ಮತ್ತು ಶ್ರೀ ಬ್ರಹ್ಮ ಬೈದರ್ಕಳ ಗರಡಿ ಸೇವಾ ಸಮಿತಿ ಅಧ್ಯಕ್ಷ ಶಿವಪ್ಪ ಪೂಜಾರಿ ನುಳಿಯಾಲು ತಿಳಿಸಿದ್ದಾರೆ.

ಸುಳ್ಯದ ನೆಹರೂ ಸ್ಮಾರಕ ಕಾಲೇಜಿನಲ್ಲಿ ಅರೆಭಾಷೆ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಡಾ. ಚಿದಾನಂದ ಸಲಹೆ

ಭಾಷಾ ಬೆಳವಣಿಗೆಗೆ ಸಾಹಿತ್ಯಕ್ಕೆ ಪ್ರೋತ್ಸಾಹಿಸುವುದು ಅತ್ಯಗತ್ಯ

ಸುಳ್ಯ/ನಾಪೋಕ್ಲು: ನಮ್ಮ ಭಾಷೆಗಳು ನಶಿಸಿ ಹೋಗದಂತೆ ಉಳಿಸಿ ಬೆಳೆಸಿ ಅಭಿವೃದ್ಧಿಪಡಿಸಬೇಕು. ಜೊತೆಗೆ ಭಾಷೆಯ ಬೆಳವಣಿಗೆಗೆ ಸಾಹಿತ್ಯವನ್ನು ಪ್ರೋತ್ಸಾಹಿಸಬೇಕು. ಅರೆಭಾಷೆ ಅಕಾಡೆಮಿ ಸ್ಥಾಪನೆಯಾದ ಬಳಿಕ ಭಾಷೆಯ ವೈಭವ ಹೆಚ್ಚಿದೆ ಎಂದು ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಷನ್‌ನ ಅಧ್ಯಕ್ಷ ಡಾ. ಕೆ.ವಿ. ಚಿದಾನಂದ ಹೇಳಿದರು.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಸುಳ್ಯದ ನೆಹರೂ ಸ್ಮಾರಕ ಕಾಲೇಜಿನ ಸುವರ್ಣ ಮಹೋತ್ಸವ ಸಂಭ್ರಮಾಚರಣೆಯ ಪ್ರಯುಕ್ತ ಮಂಗಳವಾರ ನೆಹರೂ ಸ್ಮಾರಕ ಕಾಲೇಜಿನ ಕೆವಿಜಿ ಷಷ್ಟ್ಯಬ್ಧ ರಂಗ ಮಂದಿರದಲ್ಲಿ ಏರ್ಪಡಿಸಲಾಗಿದ್ದ ಅರೆಭಾಷೆ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಅಕಾಡೆಮಿಯಿಂದ ಹಲವು ಕಾರ್ಯಕ್ರಮ

ಅಧ್ಯಕ್ಷತೆ ವಹಿಸಿದ್ದ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸದಾನಂದ ಮಾವಜಿ ಮಾತನಾಡಿ, ಅರೆಭಾಷೆಯು ರಾಜ್ಯದ ಗಡಿ ಮೀರಿ ದೇಶದೆಲ್ಲೆಡೆ ಪಸರಿಸಬೇಕು ಎಂಬುದು ಅಕಾಡೆಮಿಯ ಆಶಯ. ಅದಕ್ಕಾಗಿ ಅಕಾಡೆಮಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಭಾಷೆ, ಸಂಸ್ಕೃತಿಯನ್ನು ಬೆಳೆಸಿ ಮುಂದಿನ ತಲೆಮಾರಿಗೆ ಹಸ್ತಾಂತರ ಆಗಬೇಕು ಎಂದು ಹೇಳಿದರು.

ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಷನ್‌ನ ಪ್ರಧಾನ ಕಾರ್ಯದರ್ಶಿ ಅಕ್ಷಯ್ ಕೆ.ಸಿ. ಮುಖ್ಯ ಅತಿಥಿಯಾಗಿದ್ದರು. ಅರೆಭಾಷೆ ಅಕಾಡೆಮಿ



ಸದಸ್ಯರಾದ ಡಾ.ಎನ್.ಎ. ಜ್ಞಾನೇಶ್, ಚಂದ್ರಶೇಖರ ಪೇರಾಲು, ಗೋಪಾಲ ಪೆರಾಜೆ, ಚಂದ್ರಾವತಿ ಬಡ್ಡಡ್ಕ, ಕುದ್ವಾಜೆ ಪ್ರಕಾಶ್, ತೇಜಕುಮಾರ್ ಬಡ್ಡಡ್ಕ, ಲತಾ ಪ್ರಸಾದ್ ಕುದ್ವಾಜೆ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಮಿಥಾಲಿ ಪಿ. ರೈ, ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ.ಟಿ. ವಿಶ್ವನಾಥ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮ ಸದಸ್ಯ ಸಂಚಾಲಕ ಚಂದ್ರಶೇಖರ ಪೇರಾಲು ಸ್ವಾಗತಿಸಿ, ನೆಹರೂ ಸ್ಮಾರಕ ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ರುದ್ರ ಕುಮಾರ್ ಎಂ.ಎಂ. ವಂದಿಸಿದರು. ಉಪನ್ಯಾಸಕಿ ಡಾ. ಅನುರಾಧಾ ಕುರುಂಜಿ ನಿರ್ವಹಿಸಿದರು.

ವಿಚಾರ ಸಂಕಿರಣ, ವಿಚಾರ ಮಂಡನೆ

ಸಭಾ ಕಾರ್ಯಕ್ರಮದ ಬಳಿಕ ಭಾಷಾ ವಿಚಾರ ಸಂಕಿರಣದ ಉದ್ಘಾಟಿಸಲಾಯಿತು.

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಕಾಣುತ್ತಿದ್ದು ಪ್ರತಿಯೊಂದು ಭಾಷೆ ರಾಷ್ಟ್ರೀಯ ಭಾಷೆಗಳೇ ಆಗಿವೆ. ಅಲ್ಲದೆ, ಒಂದು ಭಾಷೆಯಲ್ಲಿಯೇ ವಿವಿಧ ಬದಲಾವಣೆಗಳು ಕಾಣಿಸುತ್ತಿದ್ದು ಇಂತಹ ಒಂದೊಂದು ಗೋಷ್ಠಿ ಹಾಗೂ ಅಕಾಡೆಮಿಗಳ ಮೂಲಕ ಭಾಷೆ ಸಂಸ್ಕೃತಿಗಳನ್ನು ಉಳಿಸಲು ಸಾಧ್ಯ ಎಂದು ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ. ಧನಂಜಯ ಕುಂಬ್ಳೆ ಹೇಳಿದರು.

ಸುಳ್ಯ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ಮಂಗಳವಾರ ನಡೆದ ಅರೆ ಭಾಷೆ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ 'ಪ್ರಾದೇಶಿಕ ಭಾಷೆಗಳು ಎದುರಿಸುತ್ತಿರುವ ಸವಾಲುಗಳು' ವಿಷಯದ ಕುರಿತು ಅವರು ಮಾತನಾಡಿದರು.

ಭಾಷಾ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ವಿಶ್ರಾಂತ ಉಪ ಕುಲಪತಿ ಡಾ.ಕೆ. ಚಿನ್ನಪ್ಪ ಗೌಡ ವಹಿಸಿದ್ದರು. 'ಜಾಗತೀಕರಣ ಮತ್ತು ಸಾಂಸ್ಕೃತಿಕ

> ಅರೆಭಾಷೆಯ ಸೊಗಡು ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಉಳಿಸಿ ಬೆಳೆಸಬೇಕಿದೆ. ಈ ನಿಟ್ಟಿನಲ್ಲಿ ಇಂತಹ ವಿಚಾರ ಸಂಕಿರಣ ಅವಶ್ಯಕ. ಅಲ್ಲದೇ ಮುಂದಿನ ಪೀಳಿಗೆಗೆ ಭಾಷೆಯನ್ನು ಪರಿಚಯಿಸುವಲ್ಲಿ ಇಂತಹ ಕಾರ್ಯಕ್ರಮಗಳು ಮಹತ್ತರ ಪಾತ್ರ ವಹಿಸುತ್ತವೆ.
> ● ಡಾ. ಕೆ.ವಿ. ಚಿದಾನಂದ

ಪಲ್ಲಟಗಳು' ವಿಷಯದ ಕುರಿತು ಮಾತನಾಡಿದ ವಿಶ್ರಾಂತ ಪ್ರಾಧ್ಯಾಪಕ ಡಾ. ನರೇಂದ್ರ ರೈ ದೇರ್ಲ, ಇಂದು ತಂತ್ರಜ್ಞಾನಗಳು ಬಂದ ಬಳಿಕ ಎಲ್ಲಾ ವಿಚಾರಗಳು ಪಲ್ಲಟಗೊಂಡಿದೆ. ಈ ಹಿಂದೆ ಹಾಸನ ಜಿಲ್ಲೆಯಲ್ಲಿ 35 ಕುಟುಂಬಗಳು ಹಿಂದಿನ ಕಾಲದ ಪದ್ಧತಿಯ ಎತ್ತಿನ ಗೆಜ್ಜೆ ನೃತ್ಯಕ್ಕೆ ಬೇಕಾಗುವ ಗೆಜ್ಜೆಗಳನ್ನು ತಯಾರಿಸುತ್ತಿದ್ದವು. ಆಗ ಅವರು ಕಲಾವಿದರಾಗಿದ್ದರು. ಆದರೆ, ಗೆಜ್ಜೆಗಳನ್ನು ಯಂತ್ರಗಳ ಮೂಲಕ ತಯಾರಿಸಲು ಆರಂಭಿಸಿದ ಬಳಿಕ ಅವರು ಬಿದಿರಿನ ಬುಟ್ಟಿಯನ್ನು ಹೆಣೆಯುವ ಮೂಲಕ ವೃತ್ತಿ ನಡೆಸಿದರು. ಆ ಬಳಿಕ ಇದೀಗ ಅವರು ಗಾರೆ ಕೆಲಸಕ್ಕೆ ಹೋಗುತ್ತಿದ್ದು ಇದೀಗ ಕಾರ್ಮಿಕರಾಗಿ ಬದಲಾವಣೆಗೊಂಡಿದ್ದಾರೆ. ಇದು ಪಲ್ಲಟಗಳ ಉದಾಹರಣೆಗೆಯಾಗಿದ್ದು, ತಂತ್ರಜ್ಞಾನ ಬೆಳೆದಂತೆ ಮೂಲವನ್ನು ಮರೆಯುವಂತಾಗಿದೆ ಎಂದರು.

ಬಳಿಕ ನಡೆದ ಅರೆಭಾಷಾ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಹಿರಿಯ ಚಿಂತಕ ಕೆ.ಇ. ರಾಧಾಕೃಷ್ಣ ಬೆಂಗಳೂರು ವಹಿಸಿದ್ದರು. 'ಅರೆ ಭಾಷೆ–ಪ್ರಾದೇಶಿಕ ಭಿನ್ನತೆಗಳು' ವಿಷಯದ ಕುರಿತು ಪ್ರಾಂಶುಪಾಲ ಡಾ. ಪುರುಷೋತ್ತಮ ಕರಂಗಲ್ಲು ಮಾತನಾಡಿ, ಪ್ರದೇಶಗಳಿಗೆ ಅನುಗುಣವಾಗಿ ಅರೆ ಭಾಷೆ ಬದಲಾವಣೆಗಳು ಆಗುತ್ತಿದ್ದು, ಸಂಸ್ಕೃತಿಗಳು ಮತ್ತು ಸುಲಲಿತವಾಗಿ ಮಾತನಾಡಬಲ್ಲ ಭಾಷೆಯಾಗಿದೆ ಎಂದು ಹೇಳಿದರು. . 'ಅರೆ ಭಾಷೆಯ ಅನನ್ಯತೆಗಳು' ವಿಷಯದ ಬಗ್ಗೆ ವಿಶ್ರಾಂತ ಪ್ರಾಂಶುಪಾಲ ಕೆ.ಆರ್. ಗಂಗಾಧರ ಮಾತನಾಡಿದರು. ಅರೆಭಾಷೆ ಸಂಸ್ಕೃತಿ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಪ್ರಾಧ್ಯಾಪಕ ಪಟ್ಟಡ ಶಿವಕುಮಾರ್ ವಹಿಸಿದ್ದರು. 'ಅರೆ ಭಾಷಿಗರ ಮದುವೆ ಪದ್ಧತಿಯಲ್ಲಿ ಬದಲಾವಣೆಗಳು' ವಿಷಯದ ಕುರಿತು ಮಾತನಾಡಿದ ದೊಡ್ಡಣ್ಣ ಬರೆಮೇಲು, ಈ ಹಿಂದೆ ಅರೆ ಭಾಷಿಗರ ಮದುವೆಯು ಸಂಪೂರ್ಣವಾಗಿ ಪದ್ಧತಿಗಳ ಪ್ರಕಾರ ಮನೆಯಲ್ಲಿ ನಡೆಯುತ್ತಿದ್ದರೆ ಇಂದು ಸಭಾಂಗಣದಲ್ಲಿ ಕೇವಲ ಕೆಲವೊಂದು ವಿಧಿ ವಿಧಾನಗಳನ್ನು ಕಟ್ಟಕಟ್ಟಳೆಯಾಗಿ ಮಾಡಲಾಗುತ್ತಿದೆ. ಆಡಂಬರವನ್ನು ಕಡಿತಗೊಳಿಸಿ ಸಂಸ್ಕೃತಿ, ಸಂಪ್ರದಾಯಗಳ ಮೂಲಕ ಮದುವೆಗಳಿಗೆ ಒತ್ತು ನೀಡಬೇಕಿದೆ ಎಂದು ಹೇಳಿದರು.

'ಕೊಡಗಿನ ಅರೆ ಭಾಷಿಕರ ಹಬ್ಬ ಹರಿದಿನಗಳು' ವಿಷಯದ ಕುರಿತು ಪ್ರಾಧ್ಯಾಪಕ ಡಾ. ದಯಾನಂದ ಕೂಡಕಂಡಿ ಮಾತನಾಡಿದರು. 'ಸಿದ್ದ ವೇಷ–ಅರೆಭಾಷಿಕರ ಜಾನಪದ ನೃತ್ಯ' ವಿಷಯದ ಕುರಿತು ಜಯಪ್ರಕಾಶ್ ಕುಕ್ಕೆಟ್ಟಿ ವಿಚಾರ ಮಂಡಿಸಿದರು.

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಡ್ರಗ್ಸ್ ಕುರಿತು ಜಾಗೃತಿ

ವ್ಯಸನಗಳಿಂದ ವಿದ್ಯಾರ್ಥಿಗಳಲ್ಲಿ ಖಿನ್ನತೆ: ಲೋಕೇಶ್

ಪುತ್ತೂರು: ಇತ್ತೀಚಿನ ದಿನಗಳಲ್ಲಿ ಯುವ ಜನತೆ ಡ್ರಗ್ಸ್ ಮತ್ತು ಮಾದಕ ವ್ಯಸನದ ದಾಸರಾಗುತ್ತಿದ್ದು, ಇದರಿಂದ ಅವರ ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯವೂ ಹದಗೆಡುತ್ತದೆ ಎಂದು ಪುತ್ತೂರಿನ ಅಬಕಾರಿ ಇಲಾಖೆಯ ಇನ್ಸ್‌ಪೆಕ್ಟರ್ ಲೋಕೇಶ್ ಸಿ. ಖೇದ ವ್ಯಕ್ತಪಡಿಸಿದರು.

ಅವರು ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿದ್ಯಾರ್ಥಿ ವಿಭಾಗ, ಕಾಲೇಜಿನ ಆ್ಯಂಟಿ ರ‍್ಯಾಗಿಂಗ್ ಸಮಿತಿ ಮತ್ತು ಆ್ಯಂಟಿ ಡ್ರಗ್ ಸಮಿತಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಕಾಲೇಜಿನಲ್ಲಿ ನಡೆದ ಮಾದಕ ದ್ರವ್ಯ ತಡೆಗಟ್ಟುವಿಕೆಯ ಜಾಗೃತಿ ಕಾರ್ಯಕ್ರಮದಲ್ಲಿ ಮಾತಾಡಿದರು.

ಸಮಾಜದ ಸ್ವಾಸ್ಥ್ಯಕ್ಕೆ ಹಾನಿ

ಯಾವುದೋ ಆಮಿಶಗಳಿಗೆ ಬಲಿಯಾಗಿ ಒಮ್ಮೆ ಮಾದಕ ದ್ರವ್ಯ ಸೇವನೆ ಪ್ರಾರಂಭವಾದರೆ ಅವನ ಜೀವನ ನಾಶವಾಗುವುದಲ್ಲದೆ ಕುಟುಂಬದ ಮತ್ತು ಇಡೀ ಸಮಾಜದ ಸ್ವಾಸ್ಥ್ಯವೇ ಕದಡುತ್ತದೆ. ಇದರ ಸೇವನೆ ಚಟವಾಗಿ ಪರಿಣಮಿಸುತ್ತಾ ಹೋದಂತೆ ಮೆದುಳಿನ ನರಗಳು ನಿಶ್ಯಕ್ತಿಯನ್ನು ಹೊಂದಿ ಆತ ಖಿನ್ನತೆಗೆ ಒಳಗಾಗಿ ಜೀವನವನ್ನೇ



> ಜಾಗೃತಿ ಅಗತ್ಯ
> ಈಗಿನ ಶಾಲಾ ಮಕ್ಕಳು ಮಾದಕ ದ್ರವ್ಯ ಪಿಡುಗಿಗೆ ಬಲಿಯಾಗುತ್ತಿರುವುದು ಅಪಾಯದ ಮುನ್ಸೂಚನೆ. ಒಮ್ಮೆ ಆ ಪಿಡುಗಿಗೆ ಬಲಿಯಾದರೆ ಅದರಿಂದ ಮುಕ್ತಿ ಹೊಂದುವುದು ಬಹಳ ಕಷ್ಟಕರವಾಗಿ ಇದರ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವುದು ಉತ್ತಮ.
> ● ಲೋಕೇಶ್ ಸಿ., ಅಬಕಾರಿ ಇಲಾಖೆಯ ಇನ್ಸ್‌ಪೆಕ್ಟರ್

ಕೊನೆಗಾಣಿಸುವಂತಾಗುತ್ತದೆ ಎಂದರು.

ತಮ್ಮ ಸೇವಾ ಅನುಭವವನ್ನು ಹಂಚಿಕೊಂಡ ಅವರು ಜೀವನದ ಗುರಿ ಸಾಧನೆಗೆ ನಶಾ ಮುಕ್ತ ಸಮಾಜವನ್ನು ನಿರ್ಮಿಸುವುದು ಆವಶ್ಯಕ. ಹೀಗಾಗಿ ಕಾಲೇಜ್ ಪರಿಸರವನ್ನು ಮಾದಕ ವಸ್ತು ಮುಕ್ತವನ್ನಾಗಿಸುವಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಹೊಣೆಯರಿತು ಸಹಕರಿಸಬೇಕು ಮತ್ತು ಇದರ ಬಗ್ಗೆ ಕಾನೂನಿನ ತಿಳುವಳಿಕೆಯನ್ನೂ ಹೊಂದಬೇಕು. ಮಕ್ಕಳ ಪೋಷಕರು ಕೂಡ ಜಾಗ್ರತರಾಗಬೇಕು ಎಂದರು.

ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಅವರು ಅವರ ಸಂದೇಹಗಳಿಗೆ ಸೂಕ್ತ ಉತ್ತರವನ್ನು ನೀಡಿದರು. ಪುತ್ತೂರು ಅಬಕಾರಿ ಇಲಾಖೆಯ ಸಬ್‌ಇನ್ಸ್‌ಪೆಕ್ಟರ್ ರಾಜಶೇಖರ್ ಮತ್ತು ಇಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ವಿಭಾಗ ಮುಖ್ಯಸ್ಥ ಡಾ. ಮನುಜೇಶ್ ಬಿ.ಜೆ. ಉಪಸ್ಥಿತರಿದ್ದರು. ವಿದ್ಯಾರ್ಥಿ ನಮನ ಸ್ವಾಗತಿಸಿ, ಶಮಂತ್ ಕೆ.ಪಿ. ವಂದಿಸಿದರು. ಕೆ.ಪಿ. ವೈಷ್ಣವಿ ಕಾರ್ಯಕ್ರಮ ನಿರ್ವಹಿಸಿದರು.

ಸಾರಿ ಫೋಲ್ಡಿಂಗ್-ಸಾರಿ ಗೊಂಡೆ ಉಚಿತ ತರಬೇತಿ | ಪುಷ್ಪಲತಾ ಅಭಿಪ್ರಾಯ

ಉದ್ಯೋಗದಿಂದ ಮಹಿಳೆಯರ ಸ್ವಾವಲಂಬನೆ ಸಾಧ್ಯ

ಪುತ್ತೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ಧರ್ಮಸ್ಥಳ, ಗ್ರಾಮೀಣ ಶ್ರೇಷ್ಠತಾ ಕೇಂದ್ರ ಬೆಳ್ತಂಗಡಿ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಪುತ್ತೂರು ತಾಲೂಕು ಇದರ ಆಶ್ರಯದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿಯಡಿ ಯೋಜನೆ ಪಾಲುದಾರ ಬಂಧುಗಳಿಗೆ ಬಡಗನ್ನೂರು ಪಂಚಾಯತ್‌ನ ಹೊಸ ಕೌಶಲ್ಯಾಭಿವೃದ್ಧಿ ಕಟ್ಟಡದಲ್ಲಿ ಫೆ.24ರಿಂದ ಫೆ.28ರವರೆಗೆ ಏರ್ಪಡಿಸಲಾಗಿರುವ 5 ದಿನಗಳ ಸಾರಿ ಫೋಲ್ಡಿಂಗ್ ಹಾಗೂ ಸಾರಿ ಗೊಂಡೆ ಉಚಿತ ತರಬೇತಿ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಬಡಗನ್ನೂರು ಪಂಚಾಯತ್‌ನ ಮಾಜಿ ಅಧ್ಯಕ್ಷೆ ಪುಷ್ಪಲತಾ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಮಹಿಳೆಯರನ್ನು ಸ್ವಾವಲಂಬಿಯಾಗಿ ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಯೋಜನೆಯ ತಂದಂತಹ ಈ ಕಾರ್ಯಕ್ರಮವು ಬಹಳ ವಿಶೇಷವಾದದ್ದು. ಈ ಕಾರ್ಯಕ್ರಮದ ಸದುಪಯೋಗ ಪಡೆದು ಮಹಿಳೆಯರು ಸದೃಢರಾಗಬೇಕೆಂದು ಶುಭ ಹಾರೈಸಿದರು.

ತಾಲೂಕಿನ ಯೋಜನಾಕಾರಿ ಶಶಿಧರ್ ಮಾತನಾಡಿ, ಯೋಜನೆಯಿಂದ ನಡೆಯುವ ಪ್ರತಿಯೊಂದು ಕಾರ್ಯಕ್ರಮವು ಸಮಾಜಕ್ಕೆ ಪೂರಕವಾಗಿರುವಂತಹದ್ದು



ಡಾ.ಡಿ. ವೀರೇಂದ್ರ ಹೆಗ್ಗಡೆ ಹಾಗೂ ಮಾತೃಶ್ರೀ ಅಮ್ಮನವರ ಪರಿಕಲ್ಪನೆಯಂತೆ ಮಹಿಳೆಯರು ಸ್ವ ಉದ್ಯೋಗಿಗಳಾಗಬೇಕೆಂದು ಇಂತಹ ತರಬೇತಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಉದ್ಯೋಗವು ಒಂದು ಕುಟುಂಬದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾದದ್ದು ಮಹಿಳೆಯರು ಸಹ ಉದ್ಯೋಗವನ್ನು ಮಾಡಿ ಕುಟುಂಬಕ್ಕೆ ಬಲವನ್ನು ತರುವಂತೆ ಕೆಲಸವನ್ನು ಮಾಡುತ್ತಿದ್ದಾರೆ. ಇಂತಹ ಅವಕಾಶವನ್ನು ಪ್ರಾಮಾಣಿಕವಾಗಿ ಬಳಸಿ ಸ್ವಾವಲಂಬಿಯಾಗಿ ಬದುಕಿ ಎಂದು ಆಶಿಸಿದರು.

ಅಧ್ಯಕ್ಷತೆ ವಹಿಸಿದ್ದ ಬಡಗನ್ನೂರು ಒಕ್ಕೂಟದ ಅಧ್ಯಕ್ಷ ಸುಬ್ಬಯ್ಯ ರೈ, ಬಡಗನ್ನೂರು ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿ ಸುಬ್ಬಯ್ಯ, ಬೆಳ್ತಂಗಡಿಯ ಗ್ರಾಮೀಣ ಶ್ರೇಷ್ಠತಾ ಕೇಂದ್ರದ ಉಪನ್ಯಾಸಕಿ ಧರಣಿ ಶುಭಾಶಂಸನೆಗೈದರು. ಕಾರ್ಯಕ್ರಮದಲ್ಲಿ ಅರಿಯಡ್ಕ ವಲಯದ ಜನಜಾಗೃತಿಯ ಮಾಜಿ ವಲಯಾಧ್ಯಕ್ಷ ನಾರಾಯಣ ಕುದ್ಕಾಡಿ, ವಲಯದ ಮೇಲ್ವಿಚಾರಕ ಹರೀಶ್ ಕೆ., ತರಬೇತಿ ಶಿಕ್ಷಕಿ ದೀಕ್ಷಾ ಬೆಟ್ಟಂಪಾಡಿ ಮತ್ತಿತರರು ಉಪಸ್ಥಿತರಿದ್ದರು.

ಸದಸ್ಯೆ ತುಳಸಿ ಪ್ರಾರ್ಥಿಸಿದರು. ಸೇವಾ ಪ್ರತಿನಿಧಿ ಸಾವಿತ್ರಿ ಸ್ವಾಗತಿಸಿ, ವಿಎಲ್‌ಇ ಲತಾ ವಂದಿಸಿದರು. ಜ್ಞಾನ ವಿಕಾಸ ಸಮನ್ವಯಾಕಾರಿ ಕಾವ್ಯಶ್ರೀ ಕಾರ್ಯಕ್ರಮ ನಿರ್ವಹಿಸಿದರು.

ವಿದ್ಯಾರಶ್ಮಿಯಲ್ಲಿ ಯುಕೆಜಿ ಘಟಿಕೋತ್ಸವ



ಪುತ್ತೂರು: ಸವಣೂರಿನ ವಿದ್ಯಾರಶ್ಮಿ ವಿದ್ಯಾಲಯದಲ್ಲಿ 2025–26ನೇ ಸಾಲಿನ ಯು.ಕೆ.ಜಿ. ತರಗತಿಯ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ದಿನ (ಗ್ರಾಜ್ಯುಯೇಷನ್ ಡೇ) ಏರ್ಪಡಿಸಲಾಯಿತು.

ಎಸ್‌ಎನ್‌ಆರ್ ರೂರಲ್ ಎಜ್ಯುಕೇಶನ್ ಟ್ರಸ್ಟ್ ಸದಸ್ಯೆ ರಶ್ಮಿ ಅಶ್ವಿನ್ ಎಲ್. ಶೆಟ್ಟಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ವ್ಯಕ್ತಿತ್ವ ಬೆಳೆಸಿ ಉತ್ತಮ ಪ್ರಜೆಯನ್ನಾಗಿ ಮಾಡಿ ಎಂದರು.

ಅತಿಥಿಯಾಗಿದ್ದ ಸವಣೂರು ಕ್ಷೇತ್ರ ಸಂಪನ್ಮೂಲ ಅಧಿಕಾರಿ ಜಯಂತ್ ವೈ., ಶಾಲಾ ಆಡಳಿತಾಧಿಕಾರಿ, ನ್ಯಾಯವಾದಿ ಅಶ್ವಿನ್ ಎಲ್. ಶೆಟ್ಟಿ ಅವರು ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ, ಶುಭಾಶಂಸನೆಗೈದರು. ಪೋಷಕರಾದ ಸುಶ್ಮಿತ ಸಂಸ್ಥೆಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು. ಸಮಾರಂಭದಲ್ಲಿ ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ರಾಜಾಲಕ್ಷ್ಮಿ ಎಸ್., ವಿದ್ಯಾರಶ್ಮಿ ವಿದ್ಯಾಲಯದ ಪ್ರಾಂಶುಪಾಲೆ ಶಶಿಕಲಾ ಎಸ್. ಆಳ್ವ ಉಪಸ್ಥಿತರಿದ್ದರು.

1ನೇ ತರಗತಿಯ ಅಹಿಲ್ ಅಹಮ್ಮದ್ ಸಂವಿಧಾನದ ಪೀಠಿಕೆ ವಾಚಿಸಿದರು. ಯುಕೆಜಿಯ ದಿಯ ಸ್ವಾಗತಿಸಿ, ಯುಕೆಜಿಯ ಅಮೀರಾ ಫಾತಿಮ ವಂದಿಸಿದರು. 3ನೇ ತರಗತಿಯ ಐಶಾನಿ ಜೈನ್ ಕಾರ್ಯಕ್ರಮ ನಿರ್ವಹಿಸಿದರು. ಶಿಕ್ಷಕಿಯರಾದ ಸುನೀತಾ ಜೆ.ಕೆ. ಮತ್ತು ತಿರುಮಲೇಶ್ವರಿ ಸಹಕರಿಸಿದರು.

ಉಪ್ಪಿನಂಗಡಿ ಸಹಸ್ರಲಿಂಗೇಶ್ವರ ದೇವಳದಲ್ಲಿ ಪ್ರತಿಷ್ಠಾ ಮಹೋತ್ಸವ



ಉಪ್ಪಿನಂಗಡಿ: ಇಲ್ಲಿನ ಪುರಾಣ ಪ್ರಸಿದ್ಧ ಶ್ರೀ ಸಹಸ್ರಲಿಂಗೇಶ್ವರ ದೇವಾಲಯದಲ್ಲಿ ಮಂಗಳವಾರದಂದು ಶ್ರೀದೇವರ ಪ್ರತಿಷ್ಠಾ ಮಹೋತ್ಸವ ನಡೆಯಿತು.

ಪ್ರತಿಷ್ಠಾ ಮಹೋತ್ಸವದ ಅಂಗವಾಗಿ ಕೆಮ್ಮಿಂಜೆ ನಾಗೇಶ್ ತಂತ್ರಿಗಳ ನೇತೃತ್ವದಲ್ಲಿ ಗಣಪತಿ ಹೋಮ, ಶತರುದ್ರಾಭಿಷೇಕ, ಸಿಯಾಳಾಭಿಷೇಕ ಹಾಗೂ ಮಹಾಕಾಳಿ ಅಮ್ಮನವರಿಗೆ ಚಂಡಿಕಾ ಹೋಮ ನಡೆದು, ಮಧ್ಯಾಹ್ನ ಮಹಾಪೂಜೆಯ ಬಳಿಕ ಅನ್ನ ಸಂತರ್ಪಣೆ ನಡೆಯಿತು. ಈ ವೇಳೆ ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನಾಯ್ಕ್, ಸಮಿತಿಯ ಸದಸ್ಯರಾದ ಹರೀಶ್ ಉಪಾಧ್ಯಾಯ, ಬಿ. ಗೋಪಾಲಕೃಷ್ಣ ರೈ, ಸೋಮನಾಥ, ಡಾ. ರಮ್ಯ ರಾಜಾರಾಮ್, ಅನಿತಾ ಕೇಶವ ಗೌಡ, ಕೃಷ್ಣ ರಾವ್ ಅರ್ತಿಲ, ದೇವಿದಾಸ್ ರೈ ಬಿ., ಎಂ. ವೆಂಕಟೇಶ್ ಪೂಜಾರಿ, ಕಾರ್ಯ ನಿರ್ವಹಣಾಧಿಕಾರಿ ಕವಿತ ಎಂ., ಪ್ರಮುಖರಾದ ಕರುಣಾಕರ ಸುವರ್ಣ, ಸುಂದರ ಗೌಡ, ಯು. ರಾಮ, ಹರಿರಾಮಚಂದ್ರ, ಮಹೇಶ್ ಬಜತ್ತೂರು, ಕಂಗ್ವೆ ವಿಶ್ವನಾಥ ಶೆಟ್ಟಿ, ಜ್ಯೋತಿ ಹೇರಂಭ ಶಾಸ್ತ್ರಿ ಉಷಾ ಮುಳಿಯ, ಅಶೋಕ್ ಕುಮಾರ್ ರೈ, ಕೈಲಾರ್ ರಾಜಗೋಪಾಲ ಭಟ್, ಕೆ. ಜಗದೀಶ್ ಶೆಟ್ಟಿ, ಶರತ್ ಕೋಟೆ, ಪುಷ್ಪರಾಜ್ ಶೆಟ್ಟಿ, ದೇವಿಪ್ರಸಾದ್ ಶೆಟ್ಟಿ, ಸ್ವರ್ಣೇಶ್ ಗಾಣಿಗ ಮತ್ತಿತರರು ಉಪಸ್ಥಿತರಿದ್ದರು. ದೇವಳದ ವ್ಯವಸ್ಥಾಪಕರಾದ ವೆಂಕಟೇಶ್ ರಾವ್, ಸಿಬ್ಬಂದಿಗಳು ಸಹಕರಿಸಿದರು.



ಸ್ವರಲಹರಿಯಲ್ಲಿ ಮೂಡಿಬಂದ ಯು ಪ್ಲಸ್ ವಾಹಿನಿಯ ದಿನೇಶ್ ಕೋಟಿಯಾನ್ ಪ್ರಾಯೋಜಿಸಿದ ಉಜಿರೆ ಶ್ರೀ ಜನಾರ್ದನ ಸ್ವಾಮಿಗೆ ಸಂಬಂಧಿಸಿ ರಚಿಸಲಾದ 'ನಮ್ಮೂರ ದೇವರು' ಭಕ್ತಿಗೀತೆಯ ಸಿಡಿಯನ್ನು ದೇವಸ್ಥಾನದ ಸಭಾಂಗಣದಲ್ಲಿ ಕ್ಷೇತ್ರದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರು ಬಿಡುಗಡೆಗೊಳಿಸಿದರು. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಪ್ರತಾಪಸಿಂಹ ನಾಯಕ್, ಸಂಚಾಲಕ ಕೆ.ಮೋಹನ್ ಕುಮಾರ್, ಮೋಹನ ಶೆಟ್ಟಿಗಾರ್, ಭಾಸ್ಕರ ಹೆಗಡೆ, ಪ್ರಕಾಶ್ ಕುದ್ದಣ್ಣಾಯ , ವೆಂಕಟ್ರಮಣ ಶೆಟ್ಟಿ, ರವೀಂದ್ರ ಶೆಟ್ಟಿ ಬಳಂಜ , ದಿನೇಶ್ ಕೋಟಿಯಾನ್, ಲಕ್ಷ್ಮಣ ಸಫಲ್ಯ, ನಿರಂಜನ ಶೆಟ್ಟಿ ಇದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಫೀಡರ್‌ಗಳಲ್ಲಿ ವ್ಯವಸ್ಥೆ ಸುಧಾರಣೆ ಮತ್ತು ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಭಾರತಿನಗರ, ಚಂದ್ರಿಕಾ ಬಡಾವಣೆ ರಸ್ತೆ, ಕೊಡಿಯಾಲ್‌ಬೈಲ್, ಕೊಡಿಯಾಲ್‌ಬೈಲ್ ಗುತ್ತು, ವಿವೇಕನಗರ, ಶ್ರೀದೇವಿ ಕಾಲೇಜು ರಸ್ತೆ, ಕೆ.ಎಸ್.ಆರ್.ಟಿ.ಸಿ, ಸಿಟಿ ಕಾಮತ್ ರಸ್ತೆ, ಜೈಲ್ ರಸ್ತೆ, ಎಂ.ಜಿ ರಸ್ತೆ, ಲಾಲ್‌ಭಾಗ್ ರಸ್ತೆ, ಬಳ್ಳಾಲ್‌ಭಾಗ್, ಮಾನಸ ಟವರ್ ಎದುರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.25ಕ್ಕೆ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ತುಂಬೆ ಆತ್ಮಶಕ್ತಿ ಶಾಖೆಯ ವಾರ್ಷಿಕೋತ್ಸವದಲ್ಲಿ ಚಿತ್ತರಂಜನ್ ಮಾಹಿತಿ

ಸಂಘದಲ್ಲಿ ಒಟ್ಟು 300 ಕೋ.ರೂ. ಬಂಡವಾಳ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ತುಂಬೆ ಶಾಖೆಯ 5ನೇ ವಾರ್ಷಿ ಕೋತ್ಸವ ಹಾಗೂ ಗ್ರಾಹಕರ ಸಭೆಯು ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಅಧ್ಯಕ್ಷತೆಯಲ್ಲಿ ತುಂಬೆ ಶಾಖೆಯಲ್ಲಿ ಜರುಗಿತು.

ಬಳಿಕ ಮಾತನಾಡಿದ ಅವರು, ತುಂಬೆ ಶಾಖೆಯಲ್ಲಿ ಉತ್ತಮ ರೀತಿಯಲ್ಲಿ ನಿರಖು ಠೇವಣಿ ಸಂಗ್ರಹಣೆ ಹಾಗೂ ಆಭರಣ ಸಾಲವನ್ನು ವಿತರಿಸಿದ್ದು, ಆಭರಣ ಸಾಲದ ಮರುಪಾವತಿಯು ಉತ್ತಮ ರೀತಿಯಲ್ಲಿದೆ. ಸಂಘವು ಒಟ್ಟು ರೂ. 300 ಕೋಟಿಗೂ ಮಿಕ್ಕಿ ದುಡಿಯುವ ಬಂಡವಾಳ ಹೊಂದಿದೆ. ಸಹಕಾರಿ ಸಂಘದ ಸದಸ್ಯರಿಗೆ ಯಶಸ್ವಿನಿ ಆರೋಗ್ಯ ವಿಮೆಯ ನೋಂದಣಿಯ ಪ್ರಯೋಜನ ಸಂಘದ ಎಲ್ಲಾ ಶಾಖೆಗಳಲ್ಲಿ ಲಭ್ಯವಿದ್ದು, ಇದರ ಪ್ರಯೋಜನ



ಪಡೆಯಬೇಕೆಂದು ವಿನಂತಿಸಿದರು. ಸಂಘದ ಸದಸ್ಯರುಗಳಾದ ಗಣೇಶ್ ಸುವರ್ಣ, ಹೊನ್ನಪ್ಪ ಪೂಜಾರಿ, ಅಬ್ದುಲ್ ಹಕೀಮ್, ಅಶೋಕ್ ಕುಲಾಲ್, ಭಾಸ್ಕರ್ ಕುಲಾಲ್ ಹಾಗೂ ಭಾರತಿ ಅವರು ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾಗಿರುವ ಶ್ರೀ ಗೋಪಾಲ್ ಎಂ. ಹಾಗೂ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀಮತಿ ಸೌಮ್ಯ ವಿಜಯ್ ರವರು ಉಪಸ್ಥಿತರಿದ್ದರು.

ಶಾಖೆಯ ಸಿಬ್ಬಂದಿಯಾದ ಭವ್ಯಾ ಸ್ವಾಗತಿಸಿ, ಶಾಖಾಧಿಕಾರಿ ಧನಲಕ್ಷ್ಮಿ ವಂದಿಸಿದರು. ಶಾಖೆಯ ಸಿಬ್ಬಂದಿ ಶ್ರಾವ್ಯ ಕಾರ್ಯಕ್ರಮ ನಿರೂಪಿಸಿದರು.

ಕುಲಾಲ ಸಂಘದಿಂದ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಮನವಿ

ಅಮ್ಮೆಂಬಳ ಬಾಳಪ್ಪ ರಸ್ತೆಯನ್ನು ಅಭಿವೃದ್ಧಿಪಡಿಸಿ

ಬಂಟ್ವಾಳ: ಸ್ವಾತಂತ್ರ್ಯ ಹೋರಾಟಗಾರ ಡಾ. ಅಮ್ಮೆಂಬಳ ಬಾಳಪ್ಪ ಅವರ ಹೆಸರಿನಲ್ಲಿ ನಾಮಕರಣಗೊಂಡಿರುವ ಪೊಸಳ್ಳಿ, ಧೈಪಲ, ಕಾಮಾಜೆ ಹಾಗೂ ಕುಲಾಲ ಮಠ ರಸ್ತೆಯನ್ನು ಅಭಿವೃದ್ಧಿ ಪಡಿಸುವಂತೆ ಒತ್ತಾಯಿಸಿ ಬಂಟ್ವಾಳ ತಾಲೂಕು ಕುಲಾಲ ಸುಧಾರಕ ಸಂಘದ ಪದಾಧಿಕಾರಿಗಳು ಬಂಟ್ವಾಳ ಶಾಸಕರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಮಂಗಳವಾರ ಬಿ.ಸಿ.ರೋಡಿನಲ್ಲಿರುವ ಶಾಸಕರ ಕಚೇರಿಯಲ್ಲಿ ಶಾಸಕ ರಾಜೇಶ್ ನ್ಯಾಕ್ ಯು ಅವರಿಗೆ ಸಂಘದ ಪದಾಧಿಕಾರಿಗಳ



ನಿಯೋಗ ಭೇಟಿಯಾಗಿ ಮನವಿ ಸಲ್ಲಿಸಿ ಈ ರಸ್ತೆಯನ್ನು ಅಭಿವೃದ್ಧಿ ಪಡಿಸುವುದರಿಂದ ಸ್ಥಳೀಯ ನಾಲ್ಕೈದು ಪ್ರದೇಶಗಳು ಅಭಿವೃದ್ಧಿ ಯಾಗಲಿದೆಯಲ್ಲದೆ ಸಾರ್ವಜನಿಕರಿಗೂ ಅನುಕೂಲವಾಗಲಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಮನವಿಗೆ ಸಕರಾತ್ಮಕವಾಗಿ ಸ್ಪಂದಿಸಿದ ಶಾಸಕರು, ಆದಷ್ಟು ಶೀಘ್ರ ರಸ್ತೆ ಅಭಿವೃದ್ಧಿಗೆ ಯೋಜನೆ ರೂಪಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭ ಬಂಟ್ವಾಳ ತಾಲೂಕು ಕುಲಾಲ ಸುಧಾರಕ ಸಂಘದ ಅಧ್ಯಕ್ಷ ಬಿ.ರಮೇಶ್ ಸಾಲ್ಯಾನ್ ಸಂಚಯಗಿರಿ, ಪ್ರಧಾನ ಕಾರ್ಯದರ್ಶಿ ಯಾದವ ಕುಲಾಲ್ ಅಗ್ರಬೈಲು, ಕಾರ್ಯಕಾರಿ ಸಮಿತಿ ಸದಸ್ಯ ಮಚೇಂದ್ರ ಸಾಲ್ಯಾನ್ ಹಾಗೂ ಮಾಜಿ ಅಧ್ಯಕ್ಷ ಸತೀಶ್ ಕುಲಾಲ್ ಉಪಸ್ಥಿತರಿದ್ದರು.

ಸುತ್ತಮುತ್ತ

ಜಿ.ಕೆ.ಶೆಟ್ಟಿ, ಗೋಪಾಲಕೃಷ್ಣ ಭಟ್ ನಿಧನಕ್ಕೆ ಸಾಹಿತ್ಯ ಪರಿಷತ್ ಸಂತಾಪ

ಕಾಸರಗೋಡು: ಗಡಿನಾಡು ಕಾಸರಗೋಡಿನಲ್ಲಿ ಕನ್ನಡ ಭಾಷೆ, ಸಂಸ್ಕೃತಿಗಾಗಿ ಶ್ರಮಿಸಿದ ಹಿರಿಯ ಕನ್ನಡ ಧುರೀಣ, ರಂಗತಜ್ಞ, ನಿವೃತ್ತ ಉಪ ಜಿಲ್ಲಾಧಿಕಾರಿ ಗೋಪಾಲಕೃಷ್ಣ ಶೆಟ್ಟಿ ಮತ್ತು ಹಿರಿಯ ಕನ್ನಡ ಹೋರಾಟಗಾರ ಕೆ.ಎಂ.ಗೋಪಾಲಕೃಷ್ಣ ಭಟ್ ಅವರ ನಿಧನಕ್ಕೆ ಕನ್ನಡ ಸಾಹಿತ್ಯ ಪರಿಷತ್ ಕೇರಳ ಗಡಿನಾಡ ಘಟಕವು ತೀವ್ರ ಸಂತಾಪ ವ್ಯಕ್ತಪಡಿಸಿದೆ. ಜಿ.ಕೆ ಶೆಟ್ಟಿ ಮತ್ತು ಗೋಪಾಲಕೃಷ್ಣ ಭಟ್ ಕಾಸರಗೋಡಿನಲ್ಲಿ ಕನ್ನಡದ ಉಳಿವಿಗಾಗಿ ಅಹರ್ನಿಶಿ ದುಡಿದವರು, ಕನ್ನಡದ ಅವಗಣನೆಯನ್ನು ಪ್ರತಿಭಟಿಸಿದವರು. ಅವರ ಅಗಲುವಿಕೆ ಕಾಸರಗೋ ಡಿನ ಕನ್ನಡಕ್ಕೆ ತುಂಬಲಾರದ ನಷ್ಟವೆಂದು ಕನ್ನಡ ಸಾಹಿತ್ಯ ಪರಿಷತ್ ಕೇರಳ ಗಡಿನಾಡ ಘಟಕ ಸಂತಾಪ ವ್ಯಕ್ತಪಡಿಸಿದೆ.

ನಾಳೆ ಕಾಸರಗೋಡು ಕನ್ನಡ ಹಬ್ಬ ಕಾರ್ಯಕ್ರಮ

ಕಾಸರಗೋಡು: ಕೋಟೆಕಣಿ ರಾಮನಗರ ಶ್ರೀ ರಾಮನಾಥ ಸಾಂಸ್ಕೃತಿಕ ಭವನ ಸಮಿತಿಯ ಆಶ್ರಯದಲ್ಲಿ ಕಾಸರಗೋಡು ಕನ್ನಡ ಹಬ್ಬ ಕಾರ್ಯಕ್ರಮ ಫೆ.26ರಂದು ಸಂಜೆ 5 ಗಂಟೆಗೆ ಕೋಟೆಕಣಿ ಶ್ರೀ ರಾಮನಾಥ ಸಾಂಸ್ಕೃತಿಕ ಭವನದಲ್ಲಿ ಜರಗಲಿದೆ. ಜಿ.ಪಂ. ಸದಸ್ಯ ಎಂ.ಪಿ.ರಾಮಪ್ಪ ಮಂಜೇಶ್ವರ ಉದ್ಘಾಟಿಸುವರು. ಕನ್ನಡ ಧುರೀಣ ಸತ್ಯನಾರಾಯಣ ತಂತ್ರಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅಭ್ಯಾಗತರಾಗಿ ಶಿವರಾಮ ಕಾಸರಗೋಡು ಭಾಗವಹಿಸುವರು. ಕೆ.ಜಗದೀಶ್ ಕೂಡ್ಲು ಪ್ರಸ್ತಾವನೆಗೈವರು. ಶ್ರೀ ರಾಮನಾಥ ಸಾಂಸ್ಕೃತಿಕ ಭವನ ಸಮಿತಿ ಪ್ರಧಾನ ಸಂಚಾಲಕ ಗುರುಪ್ರಸಾದ್ ಕೋಟೆಕಣಿ, ಕಾವ್ಯಾ ಕುಶಲ, ಜಯ ಮಣಿಯಂಪಾರೆ, ಸೌಮ್ಯಾ ಶ್ರೀಕಾಂತ್ ಮೊದಲಾದವರು ಭಾಗವಹಿಸುವರು. ಸೌಮ್ಯಾ ಶ್ರೀಕಾಂತ್ ಅವರ ಶಿಷ್ಯವೃಂದದವರಿಂದ ಕರಾವಳಿ ಜಾನಪದ ನೃತ್ಯ, ತಪಸ್ಯ ನಾಟ್ಯಾಲಯ ಇದರ ನಿರ್ದೇಶಕಿ ವಿದುಷಿ ಅಂಕಿತಾ ಬದಿಯಡ್ಕ ಇವರಿಂದ ಭರತನಾಟ್ಯ ವೈಭವ, ದಿವಾಕರ ಪಿ. ಅಶೋಕನಗರ ಬಳಗದವರಿಂದ ಭಾವಗೀತೆ ಸಂಗಮ ನಡೆಯಲಿದೆ.

ಸ್ಕೌಟ್ ಗೈಡ್ ಸೋಪಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು



ಮಂಜೇಶ್ವರ: ಕಳಿಯೂರು ಸಂತ ಜೋಸೆಫರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಾದ ನಿಹಾಸ್ ಕುಲಾಲ್, ಹರ್ಷಿತ್, ಅಬ್ದುಲ್‌ರಹಿಮಾನ್, ಐಡನ್ ಶಾರೊನ್ ಪಿರೇರಾ, ಧ್ಯೇಯ, ಚಿರಂತನಾ, ಕಶ್ವಿ, ರೋಶ್ನಿ, ಸಮ್ರೀನಾ ಕೇರಳ ರಾಜ್ಯ ಭಾರತ್ ಸ್ಕೌಟ್ ಗೈಡ್ಸ್ ನಡೆಸುವ 2025–26ನೇ ಸಾಲಿನ ದ್ವಿತೀಯ ಸೋಪಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ, ಮಕ್ಕಳ ಈ ಸಾಧನೆಗೆ ಶಾಲಾ ಸಂಚಾಲಕರು, ಮುಖ್ಯ ಶಿಕ್ಷಕಿ, ರಕ್ಷಕ ಶಿಕ್ಷಕ ಸಂಘದವರು ಅಭಿನಂದನೆಯನ್ನು ಸಲ್ಲಿಸಿದ್ದಾರೆ.

ಫೆ.27ರಿಂದ ಕುಂಟಿಕಾನ ಮಠದಲ್ಲಿ ವರ್ಷಾವಧಿ ಜಾತ್ರೆ

ಬದಿಯಡ್ಕ: ಕುಂಟಿಕಾನ ಮಠ ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರೆಯು ಫೆ.27, 28 ಹಾಗೂ ಮಾರ್ಚ್ 1ರಂದು ಜರಗಲಿದೆ. ಫೆ.27ರಂದು ಬೆಳಿಗ್ಗೆ 7.30ಕ್ಕೆ ಉಷಃಪೂಜೆ, 10ರಿಂದ ದೇವಸ್ಯ ಜಯರಾಮ ಭಟ್ ಮತ್ತು ಬಳಗದವರಿಂದ ಯಕ್ಷಗಾನ ತಾಳಮದ್ದಳೆ, 10.30ರಿಂದ ನವಕಾಭಿಷೇಕ ಮತ್ತು ತುಲಾಭಾರ ಸೇವೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ರಾತ್ರಿ 7ರಿಂದ ಭಜನೆ, 9ಕ್ಕೆ ಶ್ರೀ ದೇವರ ಬಲಿ ಉತ್ಸವ, ಸಿಡಿಮದ್ದು ಪ್ರದರ್ಶನ ನಡೆಯಲಿದೆ. ಫೆ.28ರಂದು ಬೆಳಿಗ್ಗೆ 9.30ರಿಂದ ಶ್ರೀ ಭೂತಬಲಿ ಉತ್ಸವ, ಬಟ್ಟಲು ಕಾಣಿಕೆ, ಶ್ರೀಮುಡಿ ಗಂಧಪ್ರಸಾದ ವಿತರಣೆ, ಮಂತ್ರಾಕ್ಷತೆ, ರಾತ್ರಿ 8ರಿಂದ ಕಾರ್ತಿಕ ಪೂಜೆ, ದೈವಗಳ ತೊಡಂಲ್, ಅನ್ನಸಂತರ್ಪಣೆ, ಮಾ.1ರಂದು ಬೆಳಗ್ಗೆ 6ಕ್ಕೆ ಶ್ರೀ ಪೂಮಾಣಿ ಕಿನ್ನಿಮಾಣಿ ಭೂತಕೋಲ, 10 ರಿಂದ ಕುಂಟಿಕಾನ ಶ್ರೀ ಧೂಮಾವತಿ ದೈವದ ಕೋಲ, ಆರಶಿನ ಹುಡಿ ಪ್ರಸಾದ ವಿತರಣೆ ನೆರವೇರಲಿದೆ.

ಮಾ:1ರಂದು ವಿರಾಟ್ ಹಿಂದು ಸಮಾಜೋತ್ಸವ

ಬದಿಯಡ್ಕ: ಬದಿಯಡ್ಕ ಗ್ರಾಮ ಪಂಚಾಯತ್ ಮಟ್ಟದ ವಿರಾಟ್ ಹಿಂದು ಸಮಾಜೋತ್ಸವವು ಮಾರ್ಚ್ 1ರಂದು ಭಾರತೀನಗರ ಬೋಳುಕಟ್ಟೆ ಮೈದಾನದಲ್ಲಿ ಜರಗಲಿದೆ. ಸಂಜೆ 4ರಿಂದ ವಿವಿಧ ಭಜನಾ ತಂಡಗಳಿಂದ ಕುಣಿತ ಭಜನೆ, 5ರಿಂದ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಜಗದ್ಗುರು ಶಂಕರಾಚಾರ್ಯ ಸಂಸ್ಥಾನ ಶ್ರೀ ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಆಶೀರ್ವಚನ ನೀಡುವರು. ಭಾರತೀಯ ಅಭಿಭಾಷಕ ಪರಿಷತ್‌ನ ಕೇರಳ ರಾಜ್ಯ ಸಮಿತಿ ಸದಸ್ಯ, ವಕೀಲ ಎ.ವಿ.ಕೇಶವನ್ ದಿಕ್ಸೂಚಿ ಭಾಷಣ ಭಾಷಣ ಮಾಡುವರು. 6.30ಕ್ಕೆ ಮೆಗಾ ತಿರುವಾದಿರ, ರಾತ್ರಿ 7.15ರಿಂದ ಸ್ಥಳೀಯ ಪ್ರತಿಭೆಗಳಿಂದ ವೈವಿಧ್ಯಮಯ ನೃತ್ಯ ಪ್ರದರ್ಶನ ನೆರವೇರಲಿದೆ.

ತೆರುವತ್ತ್ ಶ್ರೀ ಚೀರುಂಬಾ ಭಗವತೀ ಕ್ಷೇತ್ರದಲ್ಲಿ ಬ್ರಹ್ಮಕಲಶ | ಕೊಂಡೆವೂರು ಶ್ರೀ ಆಶೀರ್ವಚನ

ಮಕ್ಕಳನ್ನು ಕ್ಷೇತ್ರಕ್ಕೆ ಕರೆತರುವ ಕೆಲಸ ಹಿರಿಯರಿಂದಾಗಲಿ

ಕಾಸರಗೋಡು: ಅಮ್ಮ ಎಂಬುದು ಇಲ್ಲದಿದ್ದರೆ ಯಾವುದೂ ಇಲ್ಲ, ಅಮ್ಮ ಇದ್ದರೆ ಎಲ್ಲವೂ ಇರುತ್ತದೆ. ಅದನ್ನು ನಾವು ಎಂದೂ ಮರೆಯಬಾರದು ಎಂದು ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಹೇಳಿದ್ದಾರೆ. ಕಾಸರಗೋಡು ತೆರುವತ್ತ್ ಶ್ರೀ ಚೀರುಂಬಾ ಭಗವತೀ ಕ್ಷೇತ್ರದಲ್ಲಿ ಬ್ರಹ್ಮಕಲಶ ಹಾಗೂ ನಡಾವಳಿ ಮಹೋತ್ಸವದ ಅಂಗವಾಗಿ ಮಂಗಳವಾರ ಜರಗಿದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.

ಪ್ರತಿಯೋರ್ವ ಮನುಷ್ಯನಿಗೆ ಸುಖ ಸೌಕರ್ಯಗಳು ಬೇಕಾಗಿವೆ. ಆದರೆ ತಾಯಿ ಎಂಬುದು ಬೇಡ ಎಂಬ ಸ್ಥಿತಿ ಎಲ್ಲೆಡೆ ಉಂಟಾಗಿದೆ. ಇದು ದುರದೃಷ್ಟಕರ. ನಮ್ಮ ಅಂತರಂಗ ಸದಾ ಶುದ್ಧವಾಗಿರಬೇಕು. ನಾವು ಯಾವಾಗಲೂ ಸದ್ವಿಚಾರಗಳ ಬಗ್ಗೆ ಮಾತ್ರ ಚಿಂತನೆ ನಡೆಸಬೇಕು. ಎಲ್ಲಾ ಹಿರಿಯರು ತಮ್ಮ ಮಕ್ಕಳನ್ನು ಕ್ಷೇತ್ರಗಳಿಗೆ ಕರೆತರುವ ವ್ಯವಸ್ಥೆ ರೂಢಿಸಿ ಕೊಳ್ಳಬೇಕು. ಮನುಷ್ಯರಾದ ನಾವು ಒಳ್ಳೆಯತನ ಬೆಳೆಸಿ ಹೃದಯವಂತ ದಾನಿಗಳಾಗಬೇಕು. ಈ ಕ್ಷೇತ್ರವು ಉತ್ಸವಗಳ ಜೊತೆ ಸೇವಾ ಚಟುವಟಿಕೆ ನಿರ್ವಹಿಸುತ್ತಿರುವುದು ಶ್ಲಾಘನೀಯ. ಇಂತಹ ಚಟುವಟಿಕೆ ದೇವರು ಮೆಚ್ಚುವುದು ಖಂಡಿತ. ನಾವು ನಮ್ಮ ಸಂಪತ್ತನ್ನು ದಾನ ಮಾಡಿದರೆ ನಮ್ಮ ಪುಣ್ಯ ಹೆಚ್ಚುತ್ತದೆ. ಸನಾತನ ಧರ್ಮ ಸದಾ ಉಳಿಯಲಿ, ಲೋಕಕ್ಕೆ ಶಾಂತಿ ಲಭಿಸಲಿ ಎಂದು ಸ್ವಾಮೀಜಿ ನುಡಿದರು.



ಈ ಸಂದರ್ಭ ಶ್ರೀ ಕ್ಷೇತ್ರದಿಂದ ನೀಡಲಾದ ಎರಡು ಗಾಲಿಕುರ್ಚಿ, ಮಡಚುವ ಮಂಚವನ್ನು ಶ್ರೀಗಳು ಸೇವಾ ಭಾರತಿಯ ಜಿಲ್ಲಾಧ್ಯಕ್ಷ ಎಂ.ಟಿ. ದಿನೇಶ್ ಅವರಿಗೆ ಹಸ್ತಾಂತರಿಸಿದರು. ಬ್ರಹ್ಮಕಲಶ , ನಡಾವಳಿ ಉತ್ಸವದ ಅಧ್ಯಕ್ಷ, ವಕೀಲ ನಾರಾಯಣ ಕೆ. ವಡಕ್ಕೆವೀಡು ಅಧ್ಯಕ್ಷತೆ ವಹಿಸಿದ್ದರು. ಕಾವುಮಠದ ಬ್ರಹ್ಮಶ್ರೀ ವಿಷ್ಣುಪ್ರಕಾಶ ತಂತ್ರಿ, ಶ್ರೀ ಕ್ಷೇತ್ರದ ರಾಘವ ಮೂತ ಚೆಟ್ಟಿಯಾರ್ ಉಪಸ್ಥಿತರಿದ್ದರು.

ಬ್ರಹ್ಮಕಲಶ ಹಾಗೂ ನಡಾವಳಿ ಮಹೋತ್ಸವದ ರಕ್ಷಾಧಿಕಾರಿ ಗೋಕುಲದಾಸ್ ಮಂಗಳೂರು, ಮಂಗಳೂರು ಕುಕ್ಕಾಡಿ ಕ್ಷೇತ್ರದ ರಕ್ಷಾಧಿಕಾರಿ ಕ್ಷಿತಿ ಮಂಗಳೂರು, ಉಪ್ಪಳ ಚೇರುಗೋಳಿ ಶ್ರೀ ಚೀರುಂಬಾ ಭಗವತೀ ಕ್ಷೇತ್ರದ ಅಧ್ಯಕ್ಷ ಕೆ.ಪಿ.ನಾರಾಯಣ, ಕುಂಬಳೆ ನಾರಾಯಣಮಂಗಲ ಶ್ರೀ ಚೀರುಂಬಾ ಭಗವತೀ ಕ್ಷೇತ್ರದ ಅಧ್ಯಕ್ಷ ಎನ್.ಪ್ರಭಾಕರನ್, ಚಂದನಡ್ಕ ಶ್ರೀ ಚೀರುಂಬಾ ಭಗವತೀ ಕ್ಷೇತ್ರದ ಅಧ್ಯಕ್ಷ ಮಧು ಪೈಕ, ತೆರುವತ್ತ್ ಶ್ರೀ ಚೀರುಂಬಾ ಭಗವತೀ ಕ್ಷೇತ್ರದ ಅಧ್ಯಕ್ಷ ಕೆ.ಎಂ.ಹರೀಶ್ ಕುಮಾರ್, ಶ್ರೀ ಕ್ಷೇತ್ರದ ಮಹಿಳಾ ಸಮಿತಿ ಅಧ್ಯಕ್ಷೆ ಲಲಿತಾ ವಿಜಯನ್ ಮಾತನಾಡಿದರು. ಬ್ರಹ್ಮಕಲಶ , ನಡಾವಳಿ ಮಹೋತ್ಸವ ಸಮಿತಿ ಗೌರವಾಧ್ಯಕ್ಷ ಡಾ.ಮಂಜುನಾಥ ಶೆಟ್ಟಿ ಪವನ್‌ಕುಮಾರ್ ಕೆ.ವಿ., ಕೆ.ಸುರೇಂದ್ರನ್ ಇದ್ದರು. ಕೆ.ಎನ್. ಕಮಲಾಕ್ಷನ್ ಸ್ವಾಗತಿಸಿ, ಟಿ.ವಿ.ವಿಜಯನ್ ವಂದಿಸಿದರು.

> **ಸಾನಿಧ್ಯ ವೃದ್ಧಿಸುತ್ತದೆ**
> ದೇವಳಗಳು ದೇವರ ಚೈತನ್ಯ ವೃದ್ಧಿಸು ತ್ತವೆ. ಅದಕ್ಕಾಗಿ ನಾವು ಹೋಮ ಹವನ ಮಾಡುತ್ತೇವೆ. ಚಂಡಿಕಾ ಹೋಮದಂತಹ ಹೋಮ, ಹವನ ಕ್ಷೇತ್ರಗಳ ಸಾನಿಧ್ಯ ವೃದ್ಧಿಗೊಳಿಸುತ್ತವೆ.
> • ಕೊಂಡೆವೂರು ಶ್ರೀ

ಮಾ.26–28ರವರೆಗೆ ಪುಳಿಕುತ್ತಿ ಬ್ರಹ್ಮಶ್ರೀ ಮೊಗೇರ ದೈವಸ್ಥಾನದಲ್ಲಿ ವಾರ್ಷಿಕ ನೇಮ

ಉಪ್ಪಳ: ಪುಳಿಕುತ್ತಿ ಬ್ರಹ್ಮಶ್ರೀ ಮೊಗೇರ ಮಹಾಕಾಳಿ ದೈವಸ್ಥಾನದಲ್ಲಿ ವಾರ್ಷಿಕ ನೇಮ ಮಾ. 26ರಿಂದ 28ರ ತನಕ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಮಾ.26ರಂದು ಬೆಳಗ್ಗೆ 5.30ರಿಂದ ಗಣಪತಿ ಹೋಮ, ಮಧ್ಯಾಹ್ನ 11ರಿಂದ ಭಂಡಾರ ಮನೆಯಲ್ಲಿ ಶ್ರೀ ಗುಳಿಗ ದೈವದ ಕೋಲ, ಅಪರಾಹ್ನ 2ರಿಂದ ಶ್ರೀ ಕೊರತಿ ದೈವದ ಕೋಲ, ಸಂಜೆ 6.30ಕ್ಕೆ ಶ್ರೀ ದೈವಗಳ ಭಂಡಾರ ಆಗಮನ, ರಾತ್ರಿ 7ಗಂಟೆಗೆ ಸ್ಥಳೀಯ ಮಕ್ಕಳಿಂದ ನೃತ್ಯ, ರಾತ್ರಿ 7.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ. ಧಾರ್ಮಿಕ ಮುಂದಾಳು ಎಂ.ಕೆ.ಅಶೋಕ್‌ಕುಮಾರ್ ಹೊಳ್ಳ ಅಧ್ಯಕ್ಷತೆ ವಹಿಸುವರು. ಧಾರ್ಮಿಕ ಮುಂದಾಳು ಶ್ರೀಕೃಷ್ಣ ಶಿವಕೃಪಾ ಕುಂಜತ್ತೂರು ಧಾರ್ಮಿಕ ಭಾಷಣ ಮಾಡುವರು.

ಗುರಿಕಾರ ರಾಮಕೃಷ್ಣ ಪುಳಿಕುತ್ತಿ, ಕರ್ನಾಟಕದ ಮಾಜಿ ಸಚಿವ ಅಂಗಾರ, ವಿಶ್ವಹಿಂದೂ ಪರಿಷತ್ ಜಿಲ್ಲಾ ಅಧ್ಯಕ್ಷ ಜಯದೇವ ಖಂಡಿಗೆ, ಉದ್ಯಮಿ ಮೋಹನ್ ಶೆಟ್ಟಿ ತೂಮಿನಾಡು, ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಶಶಿಧರ ಪೂಂಜಾ ಕೊಂಡೆವೂರು, ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ, ವಾರ್ಡ್ ಸದಸ್ಯ ವಸಂತಕುಮಾರ್ ಮಯ್ಯ, ಶಶಿಧರ ಶೆಟ್ಟಿ ಯಾಮಿನಿ ಎಸ್ಟೇಟ್ ಮುಟ್ಟಂ, ಮಾಜಿ ಸದಸ್ಯೆ ಸುಧಾ ಗಣೇಶ್, ಮನೋಜ್ ಕುಮಾರ್ ಶಾರದಾನಗರ ಮೊದಲಾದವರು ಉಪಸ್ಥಿತರಿರುವರು.



ದೈವದ ನೇಮ

ರಾತ್ರಿ ಅನ್ನಸಂತರ್ಪಣೆ, ರಾತ್ರಿ 9.30ರಿಂದ ಕೊರಗು ತನಿಯ, ಅಣ್ಣಪ್ಪ ಪಂಜುರ್ಲಿ, ಕಲ್ಲುರ್ಟಿ ದೈವದ ನೇಮ, ಪ್ರಸಾದ ವಿತರಣೆ, ಮಾ.27ರಂದು ರಾತ್ರಿ 7ರಿಂದ ಭಕ್ತಿಗಾನ ಪ್ರವಾಹ, ನೃತ್ಯ ಕಾರ್ಯಕ್ರಮ, ಅನ್ನಸಂತರ್ಪಣೆ, ರಾತ್ರಿ 11ರಿಂದ ಮಹಾಕಳಿ ದೈವದ ನೇಮ, ಪ್ರಸಾದ ವಿತರಣೆ .

ಐಲ ಬ್ರಹ್ಮಶ್ರೀ ಮೊಗೇರ ನೇಮ

ಮಾ.28ರಂದು ಸಂಜೆ 6.30ರಿಂದ ಕುಣಿತ ಭಜನೆ, ರಾತ್ರಿ 7.30ರಿಂದ ನೃತ್ಯ, ಅನ್ನಸಂತರ್ಪಣೆ, ರಾತ್ರಿ 10.30ರಿಂದ ಐಲ ಬ್ರಹ್ಮಶ್ರೀ ಮೊಗೇರ ನೇಮ, ಮಧ್ಯರಾತ್ರಿ 12ರಿಂದ ಶ್ರೀ ತನ್ನಿಮಾನಿಗ ದೈವವು ವಾದ್ಯ ಘೋಷಗಳೊಂದಿಗೆ ಭಂಡಾರ ಮನೆಯಿಂದ ಉತ್ಸವಾಂಗಣಕ್ಕೆ ಆಗಮನ, ಮರುದಿನ ಮುಂಜಾನೆ 5 ಗಂಟೆಗೆ ಹರಕೆ ಸಮರ್ಪಿಸಿ, ಪ್ರಸಾದ ಸ್ವೀಕಾರ ಬಳಿಕ ಭಂಡಾರ ಇಳಿಯುವುದು.

ನೀರ್ಚಾಲು ಬೇಳ ಶ್ರೀ ಗರೋಡಿಯಲ್ಲಿ ಸಾಹಿತ್ಯಾಮೃತ ಗಾನಾಮೃತ ಕಾರ್ಯಕ್ರಮ



ಕಾಸರಗೋಡು: ಗಡಿನಾಡ ಕನ್ನಡತಿ ಡಾ.ವಾಣಿಶ್ರೀಯವರ ಸಾರಥ್ಯದ ಕಾಸರಗೋಡಿನ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯ ವತಿಯಿಂದ 180ನೇ ಸಾಂಸ್ಕೃತಿಕ ಕಾರ್ಯಕ್ರಮ ನೀರ್ಚಾಲು ಸಮೀಪದ ಬೇಳ ಶ್ರೀ ಬ್ರಹ್ಮಬೈದರ್ಕಳ ಗರೋಡಿಯ ಬ್ರಹ್ಮಬಲಿ, ನೇಮದ ಪ್ರಯುಕ್ತ ಯಶಸ್ವಿಯಾಗಿ ನೆರವೇರಿಸಲಾಯಿತು.

ಸಂಸ್ಥೆಯ ಸಂಗೀತ ಚೈತನ್ಯಗಳಾದ ಪ್ರದೀಪ್ ಆಚಾರ್ಯ ಹಾಗೂ ಮನೋಜ್ ಅವರ ವಿಶೇಷ ಕಲೆಯಾದ ಸುಮಧುರ ಹೆಣ್ಣು ಸ್ವರದ ಭಕ್ತಿಗೀತೆಗಳು ಕಲಾಭಿಮಾನಿಗಳಿಗೆ ರಸದೌತಣ ನೀಡಿದವು. ಅನುಪಮಾ ಅವರು ತಮ್ಮ ಸುಮಧುರ ಕಂಠದ ಭಕ್ತಿಗೀತೆಗಳನ್ನು ಹಾಡಿ ವೇದಿಕೆ ಸಂಪನ್ನಗೊಳಿಸಿದರು. ಬಿಂದು ತಮ್ಮ ಕೋಗಿಲೆ ಸ್ವರದ ಹಾಡುಗಳನ್ನು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು.

ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಅಧ್ಯಕ್ಷೆ ಡಾ.ವಾಣಿಶ್ರೀ ಕಾಸರಗೋಡು ತಮ್ಮ ಶ್ರೀಮಂತ ಸಾಹಿತ್ಯದ ನುಡಿಗಳೊಂದಿಗೆ ಕಾರ್ಯಕ್ರಮ ಸಾದರಪಡಿಸಿದರು.

ಬೇಳ ಶ್ರೀ ಬ್ರಹ್ಮಬೈದರ್ಕಳ ಗರೋಡಿಯ ವ್ಯವಸ್ಥಾಪನಾ ಸಮಿತಿ ವತಿಯಿಂದ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷೆ ಡಾ.ವಾಣಿಶ್ರೀ ಅವರನ್ನು ಶ್ರೀ ಜೋಡು ದೈವಗಳ ಪ್ರಸಾದ ನೀಡಿ ಗೌರವಿಸಲಾಯಿತು.

ಭಕ್ತಿಗೀತೆಗಳ ಸುಮಧುರ ಕಾರ್ಯಕ್ರಮವನ್ನು ಆಲಿಸಿದ ಜನರು ಅಭಿನಂದನೆಗಳನ್ನು ವ್ಯಕ್ತಪಡಿಸಿದರು.

ಸನ್ಮಾನ

ಎಲ್ಲಾ ಕಲಾರತ್ನಗಳಿಗೆ ಗೌರವಧನ ಮತ್ತು ಪುಸ್ತಕವನ್ನು ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭ ನಾರಾಯಣ, ನಾರಾಯಣ ಗುರುಸ್ವಾಮಿ ಮಾನ್ಯ, ಮಹಾಲಿಂಗೇಶ್ವರ, ಶ್ರೀಧರ ಮಾಸ್ತರ್ ಬೇಳ ಮತ್ತಿತರರಿದ್ದರು.

ದೇವಳಗಳಲ್ಲಿನ ಆಚಾರ ಅನುಷ್ಠಾನ ಭಕ್ತರು ಪಾಲಿಸಬೇಕು: ಕಶೆಕೋಡಿ



ಮುಳ್ಳೇರಿಯ: ಧರ್ಮದಲ್ಲಿ ನಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡುವ ಜವಾಬ್ದಾರಿ ದೇವಾಲಯಗಳಿಗಿವೆ. ದೇವಳಗಳಲ್ಲಿನ ಆಚಾರ ಅನುಷ್ಠಾನಗಳನ್ನು ಭಕ್ತರು ಪಾಲಿಸಬೇಕೆಂದು ಸೂರ್ಯನಾರಾಯಣ ಭಟ್ ಕಶೆಕೋಡಿ ಹೇಳಿದರು.

ಮಿಂಚಿಪದವು ಶ್ರೀ ಕಾವೇರಿಯಮ್ಮ ಮಹಾಲಿಂಗೇಶ್ವರ ದೇವಳ ಬ್ರಹ್ಮಕಲಶದ ಅಂಗವಾಗಿ ಸೋಮವಾರ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಉಪನ್ಯಾಸ ನೀಡಿದರು.

ವಾಸುದೇವ ಆಸ್ರ ಉದ್ಘಾಟಿಸಿದರು. ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಮಧುಸೂದನನ್ ಆಯರ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಧ್ಯಾಪಕ ಡಾ. ರಾಧಾಕೃಷ್ಣ ಬೆಳ್ಳೂರು ವಿಶೇಷ ಉಪನ್ಯಾಸ ನೀಡಿದರು. ವಕೀಲರಾದ ರವೀಂದ್ರನಾಥ ರೈ, ರವೀಂದ್ರನಾಥ ಪಿ.ಎಸ್., ವಿಕ್ರಂ ಹೆಗ್ಡೆ, ಪಿ.ಬಾಲಕೃಷ್ಣ ರೈ, ಪೃಥ್ವಿರಾಜ್ ರೈ, ಬಲರಾಜ್ ರೈ, ಪಿ.ಕೆ.ಶೆಟ್ಟಿ ನಾಕೂರು, ದಾಮೋದರ ಮಾವಂಜಿ, ವೇಣುಗೋಪಾಲ ಪಿ.ಎಸ್. ಮತ್ತಿತರರಿದ್ದರು.


ಶಿವರಾಮ ಮಣಿಯಾಣಿ ಸ್ವಾಗತಿಸಿ, ಹೊಸಮನೆ ಸ್ಮಿತಾ ಪ್ರಿಯರಂಜನ್ ವಂದಿಸಿ, ಪ್ರವೀಣ್ ಕುಂಪಲ ನಿರೂಪಿಸಿದರು. ಪ್ರತೀಕ್, ಅಕ್ಷಯ ಚಂದ್ರಪ್ಪ, ಕೃಷ್ಣಪ್ರಿಯ, ಅಮಯ, ಅನಿಲ್ ಪ್ರಾರ್ಥಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಆರ್ಥಿಕ ಸಹಾಯ



ಕಾಸರಗೋಡು: ಅಡ್ಕತ್ತಬೈಲು ಕ್ಷೇತ್ರದ ಬೀರಂತಬೈಲು ಪುಷ್ಪಾ ಗಣಪತಿ ಆಚಾರ್ಯ ಅವರ ಮನೆಗೆ ಆಕಸ್ಮಿಕ ಬೆಂಕಿ ತಗುಲಿ ಸಂಪೂರ್ಣ ಹಾನಿಯಾಗಿರುವ ಬಗ್ಗೆ ಸಹಾಯಧನ ಕೋರಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ, ರಾಜರ್ಷಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಸಲ್ಲಿಸಿದ ಮನವಿ ಪರಿಗಣಿಸಿ ಹಾಗೂ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಮನಗಂಡು ಶ್ರೀ ಕ್ಷೇತ್ರದಿಂದ ಪ್ರಸಾದ ರೂಪವಾಗಿ ಸಹಾಯಧನವನ್ನು ಮಂಜೂರುಗೊಳಿಸಲಾಗಿದೆ.

ಈ ಮಂಜೂರಾತಿ ಪತ್ರವನ್ನು ಸಂತ್ರಸ್ತ ಮನೆಯವರಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್‌ನ ಯೋಜನಾಧಿಕಾರಿ ದಿನೇಶ್, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಭಜನಾ ಪರಿಷತ್ ಕಾಸರಗೋಡು ತಾಲೂಕು ಅಧ್ಯಕ್ಷ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ, ನಗರಸಭೆಯ 5ನೇ ವಾರ್ಡ್ ಕೌನ್ಸಿಲರ್ ಹರೀಶ್ ಕೆ.ಆರ್., ಗ್ರಾಮಾಭಿವೃದ್ಧಿ ಯೋಜನೆಯ ಮೇಲ್ವಿಚಾರಕ ಗೋಪಾಲಕೃಷ್ಣ , ಸೇವಾ ಪ್ರತಿನಿಧಿ ಶೋಭಾ ಹಾಗೂ ಒಕ್ಕೂಟದ ಸದಸ್ಯರು ಈ ಸಂದರ್ಭ ಉಪಸ್ಥಿತರಿದ್ದರು.



ಸೇವಾ ಭಾರತಿ ಬದಿಯಡ್ಕ ಘಟಕದ ಪಾಲಿಯೇಟಿವ್ ಚಟುವಟಿಕೆಗಳಿಗಾಗಿ ಸೇವಾ ಶಕ್ತಿ ಫೌಂಡೇಶನ್‌ನಿಂದ ಶಾಂತಿಮಡಂ ಪ್ರಾಯೋಜಕತ್ವದ ವಾಹನವನ್ನು ಬದಿಯಡ್ಕ ಸೇವಾ ಭಾರತಿ ಪದಾಧಿಕಾರಿಗಳಾದ ಸದಾಶಿವ ಮಾಸ್ತರ್, ನರೇಂದ್ರ ಬಿ.ಎನ್. ಮತ್ತು ಜಿಲ್ಲಾ ಕಾರ್ಯದರ್ಶಿ ಪ್ರತೀಕ್ ಆಳ್ವ ಪೆರಡಾಲ ನೇತೃತ್ವದಲ್ಲಿ ಪಡೆದುಕೊಂಡರು.

ಬದಿಯಡ್ಕ ಗ್ರಾಪಂನಲ್ಲಿ ತೆಂಗಿನ ನಾರಿನ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮ



ಬದಿಯಡ್ಕ: ನಿರೀಕ್ಷಿಸಿದ ಉದ್ಯೋಗವೇ ಲಭಿಸಬೇಕೆಂದು ಅನೇಕರು ಇಂದು ತಮ್ಮ ಜೀವನದ ಅಮೂಲ್ಯವಾದ ಸಮಯ ಹಾಳು ಮಾಡಬಾರದು. ಸ್ವ ಉದ್ಯೋಗಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕೇಂದ್ರ ಸರಕಾರವು ಅನೇಕ ಯೋಜನೆ ಹಮ್ಮಿಕೊಂಡಿದೆ. ಈ ಹಿನ್ನೆಲೆ ತೆಂಗಿನ ನಾರಿನ ಉದ್ಯಮದ ಅಭಿವೃದ್ಧಿಗೆ ಕಯರ್ ಬೋರ್ಡ್ ಉತ್ತಮವಾದ ಕಾರ್ಯ ಮಾಡುತ್ತಿದೆ ಎಂದು ಬದಿಯಡ್ಕ ಗ್ರಾ.ಪಂ.ಅಧ್ಯಕ್ಷ ಶಂಕರ ಡಿ. ಹೇಳಿದರು.

ಕೇಂದ್ರ ಎಂಎಸ್‌ಎಂಇ ಮಿನಿಸ್ಟ್ರಿ ವಿಭಾಗದ ಕಯರ್ ಬೋರ್ಡ್ ನೇತೃತ್ವದಲ್ಲಿ ದಿ ನೋರ್ತ್ ಮಲಬಾರ್ ಚೇಂಬರ್ ಆಫ್ ಕಾಮರ್ಸ್ ಕಾಸರಗೋಡು ಚಾಪ್ಟರ್‌ನ ಸಹಯೋಗದೊಂದಿಗೆ ಬದಿಯಡ್ಕ ಗ್ರಾ.ಪಂ.ನ ಮನುಕುಲ ಸಭಾಭವನದಲ್ಲಿ ಜರಗಿದ 3 ದಿನಗಳ ತೆಂಗಿನ ನಾರಿನ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬದಿಯಡ್ಕ ಗ್ರಾ.ಪಂ. ಅಧ್ಯಕ್ಷೆ ಅಶ್ವಿನಿ ಕೆ.ಎಂ. ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಡೆಪ್ಯೂಟಿ ರಿಜಿಸ್ಟ್ರಾರ್ ಡಿಐಸಿ ಸಿಂಧು ಪಿ.ಕೆ. ಪ್ರಧಾನ ಭಾಷಣ ಮಾಡಿದರು. ಬ್ಲಾಕ್ ಪಂ. ಆರೋಗ್ಯ–ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಎಂ.ಎಸ್.ಮೊಯ್ದು ಬ್ಲಾಕ್ ಪಂ.ಸದಸ್ಯರಾದ ಮಹೇಶ್ ವಳಕ್ಕುಂಜ, ಖಾದರ್ ಮಾನ್ಯ, ಗ್ರಾ.ಪಂ. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ಹಮೀದ್ ಕೆಡೆಂಜಿ, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಅವಿನಾಶ್ ರೈ ವಿ., ಪ್ರಾಜೆಕ್ಟ್ ಸಂಚಾಲಕ ಪಿ.ರಮೇಶ್, ಸದಸ್ಯರಾದ ಬಾಲಕೃಷ್ಣ ಶೆಟ್ಟಿ ಉಷಾ, ಅನ್ವರ್ ಬೀವಿ, ಶ್ಯಾಮಪ್ರಸಾದ ಸರಳಿ ವೇದಿಕೆಯಲ್ಲಿದ್ದರು.

ಎನ್‌ಎಂಸಿಸಿ ಅಧ್ಯಕ್ಷ ಶ್ಯಾಮ್‌ಪ್ರಸಾದ್ ಎ.ಕೆ. ಪ್ರಸ್ತಾವನೆಗೈದರು. ಕಯರ್ ಬೋರ್ಡ್ ಅಧಿ ಕಾರಿ ಶೈಜು ಟಿ.ಕೆ. ಸ್ವಾಗತಿಸಿ, ಎನ್‌ಎಂಸಿಸಿ ಸಂಚಾಲಕ ಪ್ರಸಾದ್ ಮಣಿಯಾಣಿ ವಂದಿಸಿದರು.

ಹಿಂದು ಸಮಾಜೋತ್ಸವದಿಂದ ಅಸ್ಪೃಶ್ಯತೆ ದೂರವಾಗಲಿ: ಶರಣ್ ಪಂಪ್‌ವೆಲ್



ಬದಿಯಡ್ಕ: ಸನಾತನ ಹಿಂದು ಧರ್ಮೀಯರು ಸಮಗ್ರವಾಗಿ ಒಗ್ಗೂಡುವುದರ ಜೊತೆ ನಮ್ಮೊಳಗಿರುವ ಅಸ್ಪೃಶ್ಯತಾ ಭಾವ ದೂರೀಕರಿಸಲು ಪ್ರಯತ್ನಿಸ ಬೇಕು. ಹಿಂದು ಸಮಾಜೋತ್ಸವದಿಂದ ಅಸ್ಪೃಶ್ಯತೆ ಅಧಃಪತನಗೊಳ್ಳುವಂತಾಗಲಿ ಎಂದು ವಿಹಿಂಪ ದಕ್ಷಿಣ ಕರ್ನಾಟಕ ಪ್ರಾಂತ್ಯ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಹೇಳಿದರು.

ಕುಂಬ್ಡಾಜೆ ಪಂ.ಮಟ್ಟದ ಹಿಂದು ಸಮಾಜೋತ್ಸವ ಸಮಿತಿ ನೇತೃತ್ವದಲ್ಲಿ ಮಾರ್ಪನಡ್ಕ ಜಯನಗರ ಮೈದಾನದಲ್ಲಿ ಆಯೋಜಿಸಲಾದ ಹಿಂದು ಸಮಾಜೋತ್ಸವವನ್ನು ಉದ್ದೇಶಿಸಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ಸಮಾಜೋತ್ಸವ ಉದ್ಘಾಟಿಸಿದ ಬ್ರಹ್ಮಶ್ರೀ ವೇ.ಮೂ. ದೇಲಂಪಾಡಿ ಗಣೇಶ ತಂತ್ರಿ, ಹಿಂದು ಧರ್ಮದ ಆಚಾರ ಸಂಸ್ಕಾರಗಳಿಂದ ಯುವ ಪೀಳಿಗೆ ದೂರ ಉಳಿಯುತ್ತಿರುವ ಸಂದರ್ಭ ಸಮಾಜದ ಸದಾ ಕಣ್ಗಾವಲಾಗಿರುವ ಆರೆಸ್ಸೆಸ್ ಶತಾಬ್ದಿ ಸಂಭ್ರಮದ ಪರ್ವಕಾಲದಲ್ಲಿ ಏರ್ಪಡಿಸಿದ ಈ ಕಾರ್ಯಕ್ರಮ ಜನತೆ ಜಾಗೃತಗೊಳಿಸುವಂತಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಹಿಂದು ಸಮಾಜೋತ್ಸವ ಸಮಿತಿ ಅಧ್ಯಕ್ಷ ಸಂತೋಷ ಕುಮಾರ್ ಗಾಡಿಗುಡ್ಡೆ, ಹಿಂದುತ್ವದ ಧರ್ಮಸಾರ ಪ್ರತಿಪಾದಿಸುವ ನಿಟ್ಟಿನಲ್ಲಿ ಪ್ರತಿ ಪಂ.ಗಳ ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ಧರ್ಮಜಾಗೃತಿ ಕಾರ್ಯಕ್ರಮ ಸಮಾಜಮುಖಿಯಾಗಿ ಆಯೋಜನೆಗೊಳ್ಳಬೇಕು ಎಂದು ತಿಳಿಸಿದರು.

ವಿಹಿಂಪ ಅಂತಾರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಭಜರಂಗ್ ಲಾಲ್ ಬಾಗಡೆಜಿ, ಬಜರಂಗ ದಳ ಕ್ಷೇತ್ರೀಯ ಸಂಯೋಜಕ ಜಿಜೇಶ್ ಪಟ್ಟೇರಿ ಅತಿಥಿಗಳಾಗಿದ್ದರು.

ಸಮಾಜೋತ್ಸವ ಸಮಿತಿ ರಕ್ಷಾಧಿಕಾರಿ ಹರಿನಾರಾಯಣ ಶಿರಂತಡ್ಕ, ರಾಮಚಂದ್ರ ಮಾರ್ಪನಡ್ಕ, ಲಾವಣ್ಯ ಗಿರೀಶ್ ಉಪಸ್ಥಿತರಿದ್ದರು. ವಿದ್ಯಾಲಕ್ಷ್ಮಿ ಮೈಲ್ತೊಟ್ಟಿ , ಹರಿಪ್ರಸಾದ್ ಪುತ್ರಕಳ, ರೋಶಿಣಿ ಜನಾರ್ದನ, ರಮೇಶ್ ಕೃಷ್ಣ ಪದ್ಮಾರ್ ಮತ್ತಿತರರಿದ್ದರು.

ಕುಂಜತ್ತೂರು ಶ್ರೀ ಮಾತಾ ಕಲಾ ಮಂದಿರದಲ್ಲಿ ನಡೆದ ಕಾರ್ಯಕ್ರಮ | ಕವಿತೆಗಳ ವಾಚನ

ಮಕ್ಕಳ ಬಹುಭಾಷಾ ಕವಿಗೋಷ್ಠಿ – ಕಬಿತೆ ಪುಟ್ಟುನ ಗುಟ್ಟೆಂಚ ಕಾರ್ಯಕ್ರಮ

ಮಂಜೇಶ್ವರ: ತುಳುವೆರೆ ಜಾಲ್ ಕಣ್ವತೀರ್ಥ ಮಕ್ಕಳ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸೇವಾಕೂಟ ಮತ್ತು ಶ್ರೀ ಮಾತಾ ಕಲಾಮಂದಿರ ವೈಶಾಲಿ ಕುಂಜತ್ತೂರು ಸಹಯೋಗದೊಂದಿಗೆ ಭಾನುವಾರ ಶ್ರೀ ಮಾತಾ ಕಲಾ ಮಂದಿರದಲ್ಲಿ 16 ವರ್ಷದ ಒಳಗಿನ ಮಕ್ಕಳ ಬಹುಭಾಷಾ ಕವಿಗೋಷ್ಠಿ ಮತ್ತು ಕಬಿತೆ ಪುಟ್ಟುನ ಗುಟ್ಟೆಂಚ ಎಂಬ ಕಾರ್ಯಕ್ರಮ ಜರಗಿತು.

ಕಾರ್ಯಕ್ರಮವನ್ನು 2ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸುತ್ತಿರುವ ಧೀರಜ್ ಕಣ್ವತೀರ್ಥ ಮತ್ತು ನಿಶಿತ ಅವರ ಪುತ್ರಿ ಮೈನವಿ ದೀಪ ಬೆಳಗಿಸಿ ಉದ್ಘಾಟಿಸಿದರು. ಕಲೆ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಜಿಲ್ಲಾ ಮಟ್ಟದ ಪ್ರಶಸ್ತಿಯನ್ನು ಪಡೆದ ಕುಮಾರಿ ರಶ್ಮಿತಾ ಕುಲಾಲ್ ತೂಮಿನಾಡು ಅಧ್ಯಕ್ಷತೆ ವಹಿಸಿದ್ದರು.

ಹಿರಿಯ ಸಾಹಿತಿ, ಪತ್ರಕರ್ತ ರಾಧಾಕೃಷ್ಣ ಕೆ.ಉಳಿಯತಡ್ಕ ಕಬಿತೆ ಪುಟ್ಟುನ ಗುಟ್ಟೆಂಚ ಎಂಬ ಕಾರ್ಯಕ್ರಮವನ್ನು ನಡೆಸಿಕೊಟ್ಟರು.



ಮಕ್ಕಳ ಮನಸ್ಸಿನಲ್ಲಿ ಕವಿತೆ ಹುಟ್ಟುವ ದಾರಿ, ವಿಷಯ, ಆ ವಿಷಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಕವಿತೆಯನ್ನು ಹೆಣೆಯುವುದು ಹೇಗೆ ಎಂಬುದನ್ನು ತಿಳಿಸಿಕೊಟ್ಟರು.

> **ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ**
> ತುಳುವೆರೆ ಚಾವಡಿ ಬೆಂಗಳೂರು ಇವರು ಬಿಡುಗಡೆ ಮಾಡಿದ ಜೋಕುಲೆ ಉಜ್ಜಲು ಕೃತಿಯ ಮೇಲೆ ಅಂಗನವಾಡಿ ಮಕ್ಕಳಿಗಾಗಿ ನಡೆದ ತುಳುಪದ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಣೆ ನಡೆಯಿತು.

ತುಳುವೆರೆ ಚಾವಡಿ ಬೆಂಗಳೂರು ಜೋಕುಲೆ ಉಜ್ಜಾಲ್ ಕೃತಿ ಸಂಕಲನ ಕೂಟದ ಸುಧಾ ನಾಗೇಶ್ ಅವರು ತುಳುವೆರೆ ಜಾಲ್ ಕಣ್ವತೀರ್ಥ ಕೂಟವು ಮಕ್ಕಳಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಬೆಳವಣಿಗೆಗಾಗಿ ನೀಡುತ್ತಿರುವ ಸಹಕಾರಕ್ಕೆ ಒತ್ತು ನೀಡುವಂತೆ ಹೇಳಿದರು.

ನಿವೃತ್ತ ಶಿಕ್ಷಕಿ ಮಾತಾ ಕಲಾಮಂದಿರದ ಮುಖ್ಯಸ್ಥೆ ಚಂದ್ರಿಕಾ ಟೀಚರ್ ಮಾತನಾಡಿದರು. ಕುಶಾಲಾಕ್ಷಿ ವಿ.ಕುಲಾಲ್ ಕಣ್ವತೀರ್ಥ ಪ್ರಾಸ್ತಾವಿಕವಾಗಿ ಮಾತನಾಡಿದರು. ಜೈ ತುಳುನಾಡು ಕಾಸರಗೋಡು ಕಾರ್ಯದರ್ಶಿ ಹರಿಕಾಂತ್ ಕಾಸರಗೋಡು, ರಾಮಾಂಜನೇಯ ಸೇವಾ ಸಮಿತಿ ಕಣ್ವತೀರ್ಥ ಅಧ್ಯಕ್ಷೆ ಪ್ರೇಮ ಎಂ. ಪೂಣ್ಣೆ, ಸುನಿಲ್ ರಾಮಾಡಿ, ಚಿತ್ರಕಲಾ ಮಾಡೂರು, ಶೋಭಿತಾ ಕಣ್ವತೀರ್ಥ, ಪ್ರವೀಣ್ ಮಾಡ ಸಹಕರಿಸಿದರು. ಕಾರ್ಯಕ್ರಮದಲ್ಲಿ 10 ಕಿರು ಕವಿತೆಗಳನ್ನು ಪುಟ್ಟ ಮಕ್ಕಳು ವಾಚನಗೈದರು. ನಳಿನಿ ಬೆಂಗಳೂರು ಸ್ವಾಗತಿಸಿ, ನಿಶ್ಚಿತ್ ಕಡಬ ವಂದಿಸಿದರು. ಸ್ಫೂರ್ತಿ ಕುಂಜತೂರು ನಿರೂಪಿಸಿದರು.

ಸುತ್ತಮುತ್ತ

ನಾಳೆ ಗುತ್ತಿಗೆದಾರರ ವಿಶೇಷ ಸಭೆ

ಕೋಟ: ಉಡುಪಿ ಜಿಲ್ಲೆಯ ಗುತ್ತಿಗೆದಾರರ ಹಿತಾಸಕ್ತಿ ಗಳನ್ನು ಕಾಪಾಡುವ ಉದ್ದೇಶದಿಂದ, ಜಿಲ್ಲಾ ಗುತ್ತಿಗೆದಾರರ ಸಂಘದ ಮಹತ್ವದ ಸಭೆಯನ್ನು ಫೆ.25ರಂದು ಮಧ್ಯಾಹ್ನ 3.30ಕ್ಕೆ ಬ್ರಹ್ಮಾವರದ ಸಿಟಿ ಸೆಂಟರ್‌ನಲ್ಲಿ ಏರ್ಪಡಿಸಲಾಗಿದೆ.

ಗುತ್ತಿಗೆದಾರರ ಸಮಸ್ಯೆಗಳು ಗಂಭೀರ ಹಂತ ತಲುಪಿರುವ ಹಿನ್ನೆಲೆಯಲ್ಲಿ ಈಗಾಗಲೇ ಸರಕಾರದಿಂದ ಬಾಕಿ ಉಳಿದಿರುವ ಗುತ್ತಿಗೆದಾರರ ಬಿಲ್ಲುಗಳನ್ನು ಜೇಷ್ಠತೆ ಆಧಾರದ ಮೇಲೆ ತಕ್ಷಣ ಪಾವತಿ ಮಾಡಬೇಕು. ಗುತ್ತಿಗೆದಾರರು ಎದುರಿ ಸುತ್ತಿರುವ ಆರ್ಥಿಕ ಹಾಗೂ ಆಡಳಿತಾತ್ಮಕ ಸಮಸ್ಯೆಗಳನ್ನು ಬಗೆಹರಿಸಿ ಹೊಸ ಕಾಮಗಾರಿಗಳ ಮಂಜೂರು ಹಾಗೂ ಪಾರದರ್ಶಕ ಟೆಂಡರ್ ವ್ಯವಸ್ಥೆಯಾಗ ಬೇಕು. ಇದರೊಂದಿಗೆ ಗುತ್ತಿಗೆದಾರರ ಸುರಕ್ಷತೆ ಮತ್ತು ಹಿತಾಸಕ್ತಿಗಳ ಕುರಿತು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಲುವಾಗಿ ಮುಂದಿನ ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚಿಸುವ ಸಲುವಾಗಿ ಜಿಲ್ಲೆಯ ಎಲ್ಲ ಗುತ್ತಿಗೆದಾರರು ಈ ಸಭೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವಂತೆ ಸಂಘಟನೆ ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಉಡುಪಿ: ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ 1 ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ ಹಾಗೂ ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು https://ssp.postmatric.karnataka.gov.in ನಲ್ಲಿ ಮಾ.5ರ ಒಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ https://bcwd.karnataka.gov.in ವೆಬ್‌ಸೈಟ್ ಗೆ ಭೇಟಿ ನೀಡಬಹುದು ಅಥವಾ ಇಲಾಖಾ ಸಹಾಯವಾಣಿ 8050770004, ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ 1902 ಗೆ ಕರೆ ಮಾಡಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಬೇಕಲ!

ಇದೇ ವೇಳೆ ಜಿಲ್ಲಾ ಪ್ರವಾಸೋದ್ಯಮ ಭದ್ರಿ ಸಮಿತಿಯು ಕೇಂದ್ರ ಪ್ರಾಚ್ಯವಸ್ತು ಇಲಾಖೆಯ ಸಹಕಾರದೊಂದಿಗೆ ಬೇಕಲಕೋಟೆಯಲ್ಲಿ ಪ್ರದರ್ಶನ ಪುನರಾರಂಭಿಸಲು ಪ್ರಾಚ್ಯವಸ್ತು ಇಲಾಖೆಯ ಅನುಮತಿ ಬೇಕಾಗಿದೆ. ಅಂಗೀಕಾರ ದೊರೆತ ಕೂಡಲೇ ದುರಸ್ತಿ ಕಾಮಗಾರಿಗಳಿಗೆ ಅನುದಾನದ ಅಗತ್ಯವಿದೆ. ಪ್ರವಾಸೋದ್ಯಮ ಇಲಾಖೆಯು ಅನುದಾನ ಮಂಜೂರುಗೊಳಿಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಅಗತ್ಯದ ರೂಪುರೇಷೆ ತಯಾರಿಸ ಲಾಗಿದ್ದು, ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಸಾಧ್ಯತಾ ಕ್ರಮ ಜಾರಿಗೊಳಿಸಲು ನಿರ್ಧರಿಸಲಾಗಿದೆ.

ಬ್ಯಾನರ್

ಎಡಪದವು ಪಂಚಾಯತ್ ವ್ಯಾಪ್ತಿಯ ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ಸಿಕ್ಕ ಸಿಕ್ಕ ಕಡೆಯಲ್ಲಿ ಕಸದ ರಾಶಿಯೇ ಇದ್ದು, ವಾಹನಗಳಲ್ಲಿ ಸಾಗುವವರು ಕಸ ಎಸೆಯುತ್ತಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ದುರ್ಗಾ ನಗರದ ಬಳಿಯೂ ಕಸ ಎಸೆಯುವವರಿಗೆ ಎಚ್ಚರಿಕೆ ನೀಡುವ ಬ್ಯಾನರ್ ಅಳವಡಿಸಲಾಗಿದೆ. ಗ್ರಾ.ಪಂ.ಗೆ ಈಗ ಆಡಳಿತಾಧಿ ಕಾರಿಗಳ ನೇಮಕವಾಗಿದ್ದು, ಕಸ ವಿಲೇವಾರಿಗೆ ಮುಂದಾಗಬೇಕಿದೆ. ಹೆಚ್ಚಿನ ಗ್ರಾಮ ಪಂಚಾಯತ್‌ಗಳ ರಸ್ತೆ ಬದಿಯಲ್ಲಿ ಕಸ ಎಸೆಯಲಾಗುತ್ತಿದ್ದು, ಕಸ ಎಸೆಯುವವರ ವಿರುದ್ಧ ಕಠಿನ ಕ್ರಮ ಕೈಗೊಂಡು ತ್ಯಾಜ್ಯ ಎಸೆಯುವುದನ್ನು ನಿಯಂತ್ರಿಸಲು ಸ್ಥಳೀಯ ಆಡಳಿತ ವಿಫಲವಾಗುತ್ತಿರುವುದು ಕಂಡು ಬರುತ್ತಿದೆ.

ಸುತ್ತಾಟ!

ತಿರುವು ಸಮಸ್ಯೆ ಕೇವಲ ಬೋಳಂಗಡಿಗೆ ಮಾತ್ರ ಸೀಮಿತಗೊಳ್ಳದೆ ಪಾಣೆಮಂಗಳೂರು ಸಮೀಪದ ನೆಹರುನಗರ ಎಂಬಲ್ಲಿಯೂ ಇದೇ ರೀತಿಯ ಸಮಸ್ಯೆ ಇದೆ. ಇಲ್ಲಿನ ನಿವಾಸಿಗಳು ಒಂದು ಕಡೆಯಿಂದ ಬಿ ಸಿ ರೋಡು ಮುಖ್ಯ ವೃತ್ತಕ್ಕೆ ಬಂದು ತಿರುವು ಪಡೆಯಬೇಕು. ಇನ್ನೊಂದು ಬದಿಯಲ್ಲಿ ಪಾಣೆಮಂಗಳೂರು ಕಲ್ಲುರ್ಟಿ ಗುಡಿ ಬಳಿಗೆ ಬಂದು ತಿರುವು ಪಡೆಯಬೇಕಾಗಿದೆ. ಇಲ್ಲಿಯೂ ಕಿಮೀ ಅಂತರ ಇದ್ದು ಸ್ಥಳೀಯ ನಿವಾಸಿಗಳು ಸಾಕಷ್ಟು ಸಮಯ ಹಾಗೂ ಹಣ ವ್ಯಯಿಸಬೇಕಾದ ಅನಿವಾರ್ಯತೆ ಇದೆ. ಹೆದ್ದಾರಿ ಕಾಮಗಾರಿಯಿಂದ ಸ್ಥಳೀಯ ನಿವಾಸಿಗಳು ಎದುರಿಸುತ್ತಿರುವ ಇಂತಹ ಗಂಭೀರ ಸಮಸ್ಯೆಗಳ ಬಗ್ಗೆ ಖುದ್ದು ಜನಪ್ರತಿನಿಧಿಗಳು ಹಾಗೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸಮಸ್ಯೆ ಗಳಿಗೆ ಪರಿಹಾರ ಕಲ್ಪಿಸಬೇಕೆಂಬುದು ಎಂದು ಸ್ಥಳೀಯರ ಆಗ್ರಹವಾಗಿದೆ.

ಆರೋಗ್ಯ ಇಲಾಖೆಯ ವಿವಿಧ ಸಮಿತಿ ಸಭೆಯಲ್ಲಿ ಉಡುಪಿ ಜಿಲ್ಲಾಧಿಕಾರಿಯಿಂದ ಸೂಚನೆ

ಗರ್ಭಿಣಿ ಸಾವಿನ ತನಿಖೆ ಹೊಣೆ ವೈದ್ಯಕೀಯ ಮಂಡಳಿಗೆ

ಉಡುಪಿ: ಇತ್ತೀಚೆಗೆ ಕಾರ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಆ ಬಳಿಕ ಉನ್ನತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಗರ್ಭಿಣಿ ಸಾಬಿಸ್ತಾ ಬಾನು ಎಂಬವರು ಚಿಕಿತ್ಸೆ ಫಲಿಸದೇ ಮೃತಪಟ್ಟ ಪ್ರಕರಣದ ಬಗ್ಗೆ ತನಿಖೆಗೆ ವೈದ್ಯಕೀಯ ಮಂಡಳಿಗೆ ವರದಿ ಕಳಿಸಿಕೊಡುವಂತೆ ಅಧಿಕಾರಿಗಳಿಗೆ ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ ನೀಡಿದರು.

ಅವರು ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಆರೋಗ್ಯ ಇಲಾಖೆಯ ವಿವಿಧ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ತಾಯಿ ಕಾರ್ಡ್ ಕಡ್ಡಾಯ

ಜಿಲ್ಲೆಯಲ್ಲಿ ಪ್ರತಿಯೊಬ್ಬ ಗರ್ಭಿಣಿ ಮಹಿಳೆಯರಿಗೆ ತಾಯಿ ಕಾರ್ಡ್‌ಗಳನ್ನು ನೀಡಬೇಕು. ಅವರುಗಳಿಗೆ ಆರೋಗ್ಯ ಶಿಕ್ಷಣ ನೀಡುವುದರ ಜೊತೆಗೆ ಕಾಲಕಾಲಕ್ಕೆ ನಿರಂತರ ವೈದ್ಯಕೀಯ ತಪಾಸಣೆ ನಡೆಸಬೇಕು. ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಗಳಿಗೆ ನಿಮ್ಮ ಹಂತದಲ್ಲಿಯೇ ಸಭೆ ಕರೆದು ಗರ್ಭಿಣಿಯರಿಗೆ ಹಾಗೂ ನವ ಜಾತ ಶಿಶುಗಳಿಗೆ ಅಗತ್ಯ ಚಿಕಿತ್ಸೆ ನೀಡುವುದರ ಜೊತೆಗೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಲು ತಿಳಿಸುವುದರೊಂದಿಗೆ ಜಿಲ್ಲೆಯಲ್ಲಿ ತಾಯಿ ಮರಣ ಸಂಖ್ಯೆಯನ್ನು ಶೂನ್ಯಕ್ಕಿಳಿಸಬೇಕು ಎಂದರು.

ಹೆರಿಗೆ ನಂತರವೂ ನಿಗಾ ವಹಿಸಿ

ಹೆರಿಗೆ ನಂತರವೂ ಸಹ ತಾಯಿ ಮತ್ತು ಮಕ್ಕಳಿಗೆ ಸೂಕ್ತ ಚಿಕಿತ್ಸೆಗಳ ಅವಶ್ಯಕತೆ ಇದ್ದಲ್ಲಿ ನೀಡಬೇಕು. ಒಂದೊಮ್ಮೆ ಇತರೆ ತಜ್ಞರ ಅವಶ್ಯಕತೆ ಇದ್ದಲ್ಲಿ ಅದನ್ನು ಸಹ ನೀಡುವಂತೆ ಶಿಫಾರಸು ಮಾಡಿ ಚಿಕಿತ್ಸೆ ಪಡೆಯುವಂತೆ ನೋಡಿಕೊಳ್ಳಬೇಕು ಎಂದರು.

ಮಕ್ಕಳಿಗೆ ನೀಡುವ ರೋಗ ನಿರೋಧಕ ಚುಚ್ಚು ಮದ್ದುಗಳನ್ನು ತಪ್ಪದೇ ನೀಡಬೇಕು, ಯಾವುದೇ ಒಂದು ಮಗುವು ಸಹ ಲಸಿಕೆಯಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಜಿಲ್ಲೆಯಲ್ಲಿ ಜಂತುಹುಳು ನಿವಾರಣಾ ಮಾತ್ರೆಗಳನ್ನು ಪ್ರತಿಶತಃ ನೂರರಷ್ಟು ವಿತರಣೆ ಮಾಡಲಾಗಿದೆ ಎಂದರು.

ಕ್ಷಯ ರೋಗಗಳ ಪರೀಕ್ಷೆಗಳನ್ನು ಹೆಚ್ಚು ಮಾಡುವುದರೊಂದಿಗೆ ರೋಗಿಗಳನ್ನು ತ್ವರಿತವಾಗಿ ಗುರುತಿಸುವುದರೊಂದಿಗೆ ಅವರುಗಳಿಗೆ ಸೂಕ್ತ ಚಿಕಿತ್ಸೆಯನ್ನು ನೀಡಿ ರೋಗದಿಂದ ಮುಕ್ತವಾಗುವಂತೆ ನೋಡಿಕೊಳ್ಳಬೇಕು ಎಂದ ಅವರು, ಕ್ಷಯ ರೋಗದ ನಿರ್ಮೂಲನೆ ಹಾಗೂ ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿದ ಜಿಲ್ಲೆಯ ಗ್ರಾಮ ಪಂಚಾಯತ್‌ಗೆ ಪ್ರಸಕ್ತ ಸಾಲಿನಲ್ಲಿ 64 ಗ್ರಾಮ ಪಂಚಾಯತ್‌ಗಳು ಆಯ್ಕೆ ಆಗಿರುವುದಾಗಿ ತಿಳಿಸಿದರು.

ಮಾಹಿತಿ ನೀಡಿ

ತುರ್ತು ಆರೈಕೆ ಮತ್ತು ಚೇತರಿಕೆ ಕೇಂದ್ರಗಳಲ್ಲಿ ಮಾನಸಿಕ ಅಸ್ವಸ್ಥರು ತಮ್ಮ ಗುರುತು ಕಳೆದುಕೊಂಡು ರಸ್ತೆಯಲ್ಲಿ ಅಲೆದಾಡುತ್ತಿರುವುದು ಕಂಡು ಬಂದರೆ ಅವರುಗಳನ್ನು ಈ ಕೇಂದ್ರಕ್ಕೆ ಕರೆದು ತಂದು ಸೂಕ್ತ ಚಿಕಿತ್ಸೆ ನೀಡುವುದರ ಜೊತೆಗೆ ಅವರ ಪೋಷಕರಿಗೆ ತಲುಪಿಸುವ ಕಾರ್ಯವನ್ನು ಸೇವಾ ಮನೋಭಾವದಲ್ಲಿ ಕೈಗೊಳ್ಳಬೇಕು. ಇಲ್ಲಿನ ದೂರವಾಣಿ ಸಂಖ್ಯೆ 7795978883 ಬಗ್ಗೆ ಸಾರ್ವಜನಿಕರಿಗೆ ಪ್ರಚಾರ ಪಡಿಸಬೇಕು, ಸಾರ್ವಜನಿಕರು ಇಂಥಹ ವ್ಯಕ್ತಿಗಳು ಕಂಡು ಬಂದಲ್ಲಿ ಮೇಲ್ಕಂಡ ಸಂಖ್ಯೆಗೆ ಮಾಹಿತಿ ನೀಡಬೇಕು ಎಂದು ಸ್ವರೂಪ ಟಿ.ಕೆ. ತಿಳಿಸಿದರು.

ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಮ್ಮ ಕ್ಲಿನಿಕ್‌ಗಳ ಮೂಲ ಸೌಲಭ್ಯ ಕಲ್ಪಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ಸರಕಾರದ ವತಿಯಿಂದ ಈಗಾಗಲೇ ಅನುದಾನ ಬಿಡುಗಡೆ ಮಾಡಲಾಗಿದೆ. ಇವುಗಳ ಅಭಿವೃದ್ಧಿಗೆ ಮಾರ್ಗಸೂಚಿ ಅನ್ವಯ ನಿಯಮಾನುಸಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಪೌರಾಯುಕ್ತ ಮಹಾಂತೇಶ ಹಂಗರಗಿ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ, ಜಿಲ್ಲಾ ರೋಗ ನಿಯಂತ್ರಣಾಧಿಕಾರಿ ಡಾ.ಪ್ರಶಾಂತ್ ಭಟ್, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಚಿದಾನಂದ ಸಂಜು, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ. ನಾಗರತ್ನ, ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿ ಡಾ.ಲತಾ ನಾಯಕ್, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ. ಜ್ಯೋತ್ಸ್ನಾ ಬಿ.ಕೆ, ಕೆಎಂಸಿ ಆಸ್ಪತ್ರೆ ಪ್ರಸೂತಿ ತಜ್ಞೆ ಡಾ. ಶ್ಯಾಮಲಾ, ನವಜಾತಾ ಶಿಶು ತಜ್ಞೆ ಡಾ. ಲೆಸ್ಲಿ ಲೂಯಿಸ್, ತಜ್ಞ ವೈದ್ಯ ಡಾ. ಮುಖ್ಯಪ್ರಾಣ, ವಿವಿಧ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಆವಿಷ್ಕಾರ ಮನೋಭಾವ ಬೆಳೆಸಿಕೊಳ್ಳಲಿ: ಡಾ. ನಾಗರಾಜ್ ಸಲಹೆ



ಶಿರ್ವ: ಶಿರ್ವ ವಿದ್ಯಾವರ್ಧಕ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕೇಂದ್ರ ಸರಕಾರದ ಆರ್ಥಿಕ ನೆರವಿನೊಂದಿಗೆ ಸ್ಥಾಪಿಸಲ್ಪಟ್ಟ ಅಟಲ್ ಟಿಂಕರಿಂಗ್ ಲ್ಯಾಬ್ ವತಿಯಿಂದ ಮಂಗಳೂರಿನ ಟಿಂಕರ್ ಸ್ಪೆಸ್ ಇವರ ಸಹಯೋಗದೊಂದಿಗೆ ವಿಜ್ಞಾನ ಮಾದರಿ ಪ್ರದರ್ಶನ ಟಿಂಕರ್ ಫೆಸ್ಟ್–2026 ಮಂಗಳವಾರ ಶಾಲಾ ಸಭಾಂಗಣದಲ್ಲಿ ಜರಗಿತು.

ಬಂಟಕಲ್ ಶ್ರೀ ಮಧ್ವವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ಅಸೋಸಿಯೇಟ್ ಪ್ರೊಫೆಸರ್ ಡಾ. ನಾಗರಾಜ್ ರಾವ್ ಅವರು ಕ್ಯು.ಆರ್. ಕೋಡ್ ಸ್ಕ್ಯಾನ್ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ, ವಿಜ್ಞಾನ ಮಾದರಿಗಳನ್ನು ತಯಾರಿಸಿದ ಅಭ್ಯರ್ಥಿಗಳನ್ನು ಅಭಿನಂದಿಸಿದರಲ್ಲದೇ ಮಾದರಿಗಳನ್ನು ವೀಕ್ಷಿಸಿದ ವಿದ್ಯಾರ್ಥಿಗಳು ತಮಲ್ಲಿ ಆವಿಷ್ಕಾರ ಮನೋಭಾವ ಬೆಳೆಸಿಕೊಳ್ಳಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ ವಿದ್ಯಾವರ್ಧಕ ಸಂಘದ ಆಡಳಿತಾಧಿಕಾರಿ ಪ್ರೊ.ವೈ. ಭಾಸ್ಕರ ಶೆಟ್ಟಿ ಮಾತನಾಡಿ ಅಟಲ್ ಟಿಂಕರಿಂಗ್ ಪ್ರಯೋಗಾಲಯದಲ್ಲಿ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವ ಹಲವು ವೈಜ್ಞಾನಿಕ ತರಬೇತಿ ನೀಡಲಾಗುತ್ತಿದ್ದು ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದುಕೊಂಡು ಸೃಜನಶೀಲತೆ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕೆಂದರು.

ಮಂಗಳೂರಿನ ಟಿಂಕರ್ ಸ್ಪೆಸ್ ಇದರ ಉಡುಪಿ ರಿಜೀನಲ್ ಮ್ಯಾನೇಜರ್ ಪ್ರಣಾಮ್ ಪಿ. ಆಚಾರ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಲಾ ಪ್ರಾಂಶುಪಾಲೆ ನೀಶಾ ಶೆಟ್ಟಿ, ಮುಖ್ಯಶಿಕ್ಷಕಿ ನಿಮಿತಾ ಶೆಟ್ಟಿ ಶುಭಹಾರೈಸಿದರು. ಸ್ಥಳೀಯ ಶಿಕ್ಷಣ ಸಂಸ್ಥೆಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ವಿಜ್ಞಾನ ಮಾದರಿ ಪ್ರದರ್ಶನವನ್ನು ವೀಕ್ಷಿಸಿ ಸಂಘಟಕರನ್ನು ಅಭಿನಂದಿಸಿದರು. ಶಿಕ್ಷಕಿ ಪ್ರೀತಿ ಡ್ಯಾಫ್ನಿ ಫೆರ್ನಾಂಡೀಸ್ ಅತಿಥಿಗಳನ್ನು ಗೌರವಿಸಿದರು. ಅಮಿತಾ ಶೆಟ್ಟಿ ಸ್ವಾಗತಿಸಿದರು, ರೇಷ್ಮಾ ಶೆಟ್ಟಿ ವಂದಿಸಿದರು. ಪ್ರಾರ್ಥನಾ ಪಿ. ಶೆಟ್ಟಿ ನಿರೂಪಿಸಿದರು.

ಪ್ರತಿಭೆ ಅನಾವರಣಕ್ಕೆ ರಂಗಭೂಮಿ ಸಹಕಾರಿಯಾಗಲಿದೆ: ಜಯಕರ ಶೆಟ್ಟಿ



ಉಡುಪಿ: ಯುವಪೀಳಿಗೆಗಳ ಪ್ರತಿಭೆ ಅರಳಲು, ಯುವಜನರು ಬೆಳೆಯಲು ರಂಗಭೂಮಿ ಸಹಕಾರಿ ಎಂದು ಉಡುಪಿ ತುಳುಕೂಟದ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ ಅಭಿಪ್ರಾಯಪಟ್ಟರು.

ಸುಮನಸಾ ಕೊಡವೂರು ಸಾಂಸ್ಕೃತಿಕ ಸಂಘಟನೆಯ ನಾಟಕೋತ್ಸವ ರಂಗಹಬ್ಬ–14ರ ಮೂರನೇ ದಿನದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸುಮನಸಾ ಸಂಸ್ಥೆಯ ಶಿಸ್ತು, ರಂಗ ಚಟುವಟಿಕೆ, ಸಮಾಜಮುಖಿ ಕಾರ್ಯಕ್ರಮಗಳು ಮಾದರಿಯಾದುದು. ಮಕ್ಕಳನ್ನು ಬೆಳೆಸುವ ಕ್ರಮವನ್ನು ಈ ಸಂಘಟನೆಯಿಂದ ಕಲಿಯಬೇಕು ಎಂದು ಸಲಹೆ ನೀಡಿದರು.

ರಂಗಚಟುವಟಿಕೆಗಳು ನಮ್ಮನ್ನು ಮಾನವೀಯಗೊಳಿಸುತ್ತವೆ. ಜನರನ್ನು ದಾರಿ ತಪ್ಪದಂತೆ ಸರಿದಾರಿಯಲ್ಲಿ ಒಯ್ಯುತ್ತವೆ. ಸಮಾಜದ ಅಂಕುಡೊಂಕುಗಳನ್ನು ರಂಗಭೂಮಿ ಎತ್ತಿ ತೋರಿಸುತ್ತದೆ ಎಂದರು.

ರಂಗಸಾಧಕ ಸನ್ಮಾನ ಸ್ವೀಕರಿಸಿದ ಸಂಗೀತ ಗುರು ರಮೇಶ್ ಕೆ. ಪುತ್ತೂರು ಅವರು ಮಾತನಾಡಿ, ಸಂಗೀತ ಕಲಿಯುವುದು ನಮ್ಮ ಕಾಲದಲ್ಲಿ ಕಷ್ಟದ ಕೆಲಸವಾಗಿತ್ತು. ಈಗ ರೆಕಾರ್ಡ್ ಮಾಡಿಕೊಂಡು ಬಂದು ಹಾಡುತ್ತಾರೆ. ಕರೋಕೆ ಬಂದ ಮೇಲೆ ಹಾಡುಗಾರ ಬಿಟ್ಟರೆ ಬೇರೆ ಯಾವ ಪಕ್ಕವಾದ್ಯಗಳು ಬೇಡವಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಹಾರ್ಮೋನಿಯಂ ಹಿಡಿದುಕೊಂಡು ನಾನು ಸಂಗೀತ ಲೋಕಕ್ಕೆ ಕಾಲಿಟ್ಟೆ. ಹಲವು ನಾಟಕ, ನೃತ್ಯಗಳಿಗೆ ಸಂಗೀತ ಸಂಯೋಜನೆ ನಡೆಸಿದೆ. ಶಾಸ್ತ್ರೀಯ ಸಂಗೀತ ಕಲಿತು, ಕಲಿಸಿಕೊಟ್ಟಿದ್ದೇನೆ. ಇಂದು ಸಂಗೀತ ಸುಲಭವಾಗಿದೆ. ಆದರೆ, ನನಗೆ ರಂಗಭೂಮಿ ಮತ್ತು ಸಂಗೀತ ಬದುಕು ಕಟ್ಟಿಕೊಟ್ಟಿದೆ ಎಂದು ಸ್ಮರಿಸಿದರು.

ಉದ್ಯಮಿ ಸಾಧು ಸಾಲ್ಯಾನ್, ಉದ್ಯಮಿ ಮಹೇಶ್ ಶೆಣೈ, ಹೊಟೇಲ್ ಪಂಚರತ್ನ ಪ್ಯಾರಡೈಸ್ ಮಾಲೀಕ ಸಂತೋಷ್ ಶೆಟ್ಟಿ, ರಾಷ್ಟ್ರೀಯ ಬಿಲ್ಲವ ಈಡಿಗ ಮಹಾ ಮಂಡಳದ ಉಡುಪಿ ಜಿಲ್ಲಾ ಅಧ್ಯಕ್ಷ ಚಂದ್ರಶೇಖರ ಕಾಪು, ಹಿಂದೂ ಯುವಸೇನೆ ಉಡುಪಿ ಜಿಲ್ಲಾಧ್ಯಕ್ಷ ಅಜಿತ್ ಕೊಡವೂರು, ಸುಮನಸಾ ಕೊಡವೂರು ಸಾಂಸ್ಕೃತಿಕ ಸಂಘಟನೆಯ ಅಧ್ಯಕ್ಷ ಪ್ರಕಾಶ್ ಜಿ. ಕೊಡವೂರು ಉಪಸ್ಥಿತರಿದ್ದರು. ಸುಮನಸಾ ಕೊಡವೂರು ಸಾಂಸ್ಕೃತಿಕ ಸಂಘಟನೆಯ ಬಾಲಕೃಷ್ಣ ಶಿಬಾರ್ಲ ಸ್ವಾಗತಿಸಿ, ಶ್ರೀವತ್ಸ ವಂದಿಸಿದರು. ಗಣೇಶ್ ಸಗ್ರಿ ಕಾರ್ಯಕ್ರಮ ನಿರೂಪಿಸಿದರು.

ಬಂಟಕಲ್ಲು ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾ ವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗವು ಐಎಸ್‌ಟಿಇ ವಿದ್ಯಾರ್ಥಿ ಘಟಕ ಮತ್ತು ಪಠ್ಯೇತರ ಚಟುವಟಿಕೆ ವಿಭಾಗದ ಸಹಯೋಗದೊಂದಿಗೆ 'ನವೀನತೆ ಮೂಲಕ ಕಲ್ಪನೆಗಳ ರೂಪಣೆ ಮತ್ತು ಸಮಸ್ಯೆಗಳ ಗುರುತಿಸುವಿಕೆ' ಎಂಬ ವಿಷಯದ ಕುರಿತು ಉಪನ್ಯಾಸ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಸೈಂಟ್ ಜೋಸೆಫ್ ಇಂಜಿನಿಯರಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಆಲ್ಡ್ರಿನ್ ಕ್ಲೇಟಸ್ ವಾಜ್ ಭಾಗವಹಿಸಿ, ವಿದ್ಯಾರ್ಥಿಗಳು ಅಂಕ ಆಧಾರಿತ ಶಿಕ್ಷಣಕ್ಕಿಂತ ನಿರ್ದಿಷ್ಟ ಯೋಜನೆಗಳನ್ನು ಹಮ್ಮಿಕೊಂಡು ಗುರಿಯತ್ತ ಸಾಗಬೇಕು. ಕೌಶಲ್ಯಗಳು ಭವಿಷ್ಯ ರೂಪಿಸುತ್ತವೆ ಎಂದ ಅವರು ವಿವಿಧ ವಿಚಾರಗಳ ಬಗ್ಗೆ ಮಾಹಿತಿಯನ್ನು ನೀಡಿದರು. ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಮುಖ್ಯಸ್ಥರಾದ ಅರುಣ್ ಉಪಧ್ಯಾಯ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದರು. ವಿದ್ಯಾರ್ಥಿನಿ ಶ್ರಾವ್ಯ ತಂತ್ರಿ ನಿರೂಪಿಸಿದರು.

ಸಾಲಿಗ್ರಾಮ ದೇಗುಲಕ್ಕೆ ನಟ ಉಪೇಂದ್ರ ಭೇಟಿ



ಕನ್ನಡ ಚಿತ್ರರಂಗದ ನಟ ಉಪೇಂದ್ರ ಮತ್ತು ಪತ್ನಿ ಪ್ರಿಯಾಂಕಾ ಉಪೇಂದ್ರ ತಮ್ಮ ಕುಟುಂಬದವರೊಂದಿಗೆ ಕುಲದೇವರಾದ ಸಾಲಿಗ್ರಾಮ ಶ್ರೀಗುರು ನರಸಿಂಹ ದೇವಳಕ್ಕೆ ಮಂಗಳವಾರ ಭೇಟಿ ನೀಡಿ ಸೇವೆ ಸಲ್ಲಿಸಿದರು. ದೇಗುಲದ ವತಿಯಿಂದ ಪ್ರಸಾದ ವಿತರಿಸಿ ಶಾಲು ಹೊದಿಸಿ ಗೌರವಿಸಲಾಯಿತು. ಆಡಳಿತ ಮಂಡಳಿಯ ಕಾರ್ಯದರ್ಶಿ ಲಕ್ಷ್ಮೀನಾರಾಯಣ ತುಂಗ, ಸದಸ್ಯರಾದ ಶ್ರೀಧರ ರಾವ್ ಕೇರಳ, ಹಾಗೂ ದೇಗುಲದ ಮ್ಯಾನೇಜರ್ ಗಣೇಶ್ ಭಟ್ಟ ಮತ್ತಿತರರು ಇದ್ದರು.

ವಿದ್ಯಾರ್ಥಿ ಜೀವನ ಕೌಶಲ್ಯ, ಮೌಲ್ಯ ಕಲಿಯುವ ಸಮಯ: ಕುಂದರ್ ಸಲಹೆ



ಕೋಟ: ವಿದ್ಯಾರ್ಥಿ ಜೀವನವು ಕೇವಲ ಓದುವ ಹಂತವಲ್ಲ, ಬದಲಾಗಿ ಜವಾಬ್ದಾರಿ, ಕೌಶಲ್ಯ ಮತ್ತು ಮೌಲ್ಯಗಳನ್ನು ಕಲಿಯುವ ಕಾಲವಾಗಿದೆ. ಈ ಅವಧಿಯಲ್ಲಿ ರೂಢಿಸಿಕೊಳ್ಳುವ ಶಿಸ್ತು, ಸಮಯ ಪರಿಪಾಲನೆ, ಜ್ಞಾನಾರ್ಜನೆ ಮತ್ತು ಸಂಸ್ಕಾರಗಳು ವ್ಯಕ್ತಿಯ ವೃತ್ತಿ ಬದುಕು ಹಾಗೂ ವ್ಯಕ್ತಿತ್ವವನ್ನು ನಿರ್ಧರಿಸುತ್ತವೆ ಎಂದು ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ ಸಿ. ಕುಂದರ್ ಅಭಿಪ್ರಾಯಪಟ್ಟರು.

ಸರ್ಕಾರಿ ಪದವಿಪೂರ್ವ ಕಾಲೇಜು ಮಣೂರು ಪಡುಕರೆ ಇಲ್ಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು.

ಇದೇ ಸಂದರ್ಭ ಗೀತಾನಂದ ಫೌಂಡೇಶನ್ ವತಿಯಿಂದ 16 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು. ವಿದ್ಯಾರ್ಥಿಗಳು ಹಾಗೂ ಸಂಸ್ಥೆಯ ವತಿಯಿಂದ ಆನಂದ ಕುಂದರ್ ಅವರನ್ನು ಸನ್ಮಾನಿಸಲಾಯಿತು. ಪ್ರಥಮ ದರ್ಜೆ ಕಾಲೇಜಿನ ಪ್ರಭಾರ ಪ್ರಾಂಶುಪಾಲ ರಮೇಶ ಆಚಾರ್ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಕರ್ಣಾಟಕ ಬ್ಯಾಂಕ್ ಕೋಟ ಇವರು ಕೊಡುಗೆಯಾಗಿ ನೀಡಿದ 5 ಕಂಪ್ಯೂಟರ್‌ಗಳನ್ನು ಬ್ಯಾಂಕಿನ ಪ್ರಬಂಧಕ ಗುರುರಾಜ ಸರಳಾಯ ಅವರು ಕಾಲೇಜಿಗೆ ಹಸ್ತಾಂತರಿಸಿದರು. ಶ್ರೀ ರಾಮ ಗೆಳೆಯರ ಬಳಗ, ಕೋಡಿ ಕನ್ಯಾಣ ಇವರು ನೀಡಿದ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಕಾಲೇಜಿಗೆ ಪುಸ್ತಕಗಳ ಕಪಾಟೊಂದನ್ನು ಕೊಡುಗೆಯಾಗಿ ನೀಡಿದರು.

ಪ್ರಾಚಾರ್ಯ ಡೆನಿಸ್ ಬಾಂಜಿ ಕೆ. ಪ್ರಾಸ್ತಾವಿಕ ಮಾತುಗಳನ್ನಾಡಿ, ಸ್ವಾಗತ ಕೋರಿದರು. ವಿದ್ಯಾರ್ಥಿ ಪ್ರಜ್ವಲ್ ವಿದ್ಯಾರ್ಥಿ ವೇತನ ವಿಜೇತರ ಪಟ್ಟಿ ವಾಚಿಸಿದರು. ದಿಗಂತ್ ಜಿ ಮತ್ತು ಶ್ರದ್ಧಾ ಕಾರ್ಯಕ್ರಮ ನಿರ್ವಹಿಸಿದರು. ಫಾತಿಮಾತುಲ್ ಸನಾ ಕಾರ್ಯಕ್ರಮ ವಂದಿಸಿದರು.

ಡಾ. ಬಿ. ಬಿ. ಹೆಗ್ಡೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ವೃತ್ತಿಪರ ಕಾರ್ಯಾಗಾರ



ಕುಂದಾಪುರ: ಗುರಿ ತಲುಪಲು ನಿರಂತರ ಅಭ್ಯಾಸವನ್ನು ರೂಢಿಸಿಕೊಳ್ಳಿ, ನಿಮ್ಮ ಗುರಿಯ ಮೇಲೆ ಮಾತ್ರ ಗಮನಹರಿಸಿ ಮತ್ತು ಸ್ಪರ್ಧೆಯು ಇತರರೊಂದಿಗೆ ಅಲ್ಲ, ಬದಲಾಗಿ ನಿಮ್ಮೊಂದಿಗೆ ನೀವೇ ಮಾಡಿಕೊಳ್ಳಬೇಕು ಎಂದು ಫೈನಾನ್ಷಿಯಲ್ ಅನಾಲಿಸ್ಟ್, ಆರ್.ಡಿ.ಟಿ.ಎಂ.ಟಿ. ಸ್ಕಿಲ್ಸ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಸಿಎ ತನುಷ್ ಡಿ. ರಾವ್ ಹೇಳಿದರು.

ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗ ಹಾಗೂ ಪ್ರಾಕ್ತನ ವಿದ್ಯಾರ್ಥಿ ಸಂಘದ ಜಂಟಿ ಆಶ್ರಯದಲ್ಲಿ ವೃತ್ತಿಪರ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಶುಭ ಹಾರೈಸಿದರು. ವಾಣಿಜ್ಯ ವಿಭಾಗದ ಮುಖ್ಯಸ್ಥೆ ವೀಣಾ ವಿ.ಭಟ್ ಹಾಗೂ ಕಾರ್ಯಕ್ರಮ ಸಂಯೋಜಕ ಕಿಶೋರ್ ಕೃಷ್ಣ ಮರಕಾಲ ಮತ್ತು ಸತೀಶ ಕಾಂಚನ್, ಹಾಗೂ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರು ಸಹಿತ ಮೊದಲಾದವರು ಉಪಸ್ಥಿತರಿದ್ದರು. ಕಾಲೇಜಿನ ದ್ವಿತೀಯ ಬಿ.ಕಾಂ. ವಿದ್ಯಾರ್ಥಿನಿ ಲಾವಣ್ಯ ಕಾರ್ಯಕ್ರಮವನ್ನು ನಿರೂಪಿಸಿದರು.

ಏಕಃ ಪವಿತ್ರ ನಾಗಮಂಡಲೋತ್ಸವಕ್ಕೆ ಸಿದ್ಧತೆ



ಕೋಟ ಅಮೃತೇಶ್ವರೀ ಹಲವು ಮಕ್ಕಳ ತಾಯಿ ದೇಗುಲದಲ್ಲಿ ಇದೇ ಮಾ.1ರಂದು ನಡೆಯಲಿರುವ ಏಕಃ ಪವಿತ್ರ ನಾಗಮಂಡಲೋತ್ಸವ ಕಾರ್ಯಕ್ರಮದ ಹಿನ್ನಲೆಯಲ್ಲಿ ದೇಗುಲದ ಆಸುಪಾಸು ಕೋಟ ಪೇಟೆಯ ವಿವಿಧ ಭಾಗಗಳನ್ನು ಕಸಮುಕ್ತಗೊಳಿಸುವ ಕಾರ್ಯ ಮಂಗಳವಾರ ನಡೆಯಿತು. ಕೋಟದ ಕದ್ರಿಕಟ್ಟು, ಕಾಸನಗುಂದು, ಹಾಡಿಕೆರೆಬೆಟ್ಟು, ಹರ್ತಟ್ಟು, ಬಾರಿಕೆರೆ ಸೇರಿದಂತೆ ವಿವಿಧ ಭಾಗಗಳ ಗ್ರಾಮಸ್ಥರು ಈ ಸ್ವಚ್ಛತಾ ಕಾರ್ಯದಲ್ಲಿ ಭಾಗಿಯಾದರು.

ಕನ್ನಡ ಶಿಕ್ಷಕನಿಗೆ ಯಕ್ಷಗಾನ ಕಲಾರಂಗದ 89ನೇಯ ಮನೆ ಹಸ್ತಾಂತರ

ಕಲಾರಂಗದ ಸಮಾಜ ಸೇವೆ ಶ್ಲಾಘನೀಯ: ವೆಂಕಟೇಶ್

ಉಡುಪಿ: ಕಳೆದ ಏಳು ವರ್ಷಗಳಿಂದ ಶ್ರೀ ವಾಣಿ ಪ್ರೌಢಶಾಲೆ, ನಡೂರು ಇಲ್ಲಿ ಕನ್ನಡ ಗೌರವ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಸುರೇಂದ್ರ ನಾಯ್ಕ್ ಅವರಿಗೆ ಕುಂದಾಪುರ ತಾಲೂಕಿನ ಕೊಡ್ಲಾಡಿಯಲ್ಲಿ ನಿರ್ಮಿಸಿದ ನೂತನ ಮನೆ 'ಶ್ರೀ ಬ್ರಹ್ಮಲಿಂಗೇಶ್ವರ'ವನ್ನು ಹಸ್ತಾಂತರಿಸಲಾಯಿತು.

ಬೆಂಗಳೂರಿನ ಎಸ್. ವೆಂಕಟೇಶ್–ನಂದಾ ವೆಂಕಟೇಶ್ ದಂಪತಿಗಳು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು.

ಹಲವು ಚಟುವಟಿಕೆ

ಬಳಿಕ ಮಾತನಾಡಿದ ವೆಂಕಟೇಶ್, ಯಕ್ಷಗಾನ ಕಲಾರಂಗದ ಸಮಾಜಪರ ಕೆಲಸಗಳು ಅನ್ಯರ ಊಹೆಗೂ ನಿಲುಕದು.



ಇಂತಹ ಕಾರ್ಯಗಳನ್ನು ಮಾಡುತ್ತಾ ಅದರಲ್ಲಿ ಎಷ್ಟು ಪರಿಣತರಾಗಿದ್ದಾರೆಂದರೆ ನಿರಂತರ ಹಲವು ಚಟುವಟಿಕೆಗಳೊಂದಿಗೆ ತಿಂಗಳಿಗೆರಡು ಮನೆ ಉದ್ಘಾಟಿಸುವುದು ಪ್ರಶಂಸಾರ್ಹ ಎಂದರು.

ಬೈಂದೂರು ಶಾಸಕ ಗುರುರಾಜ ಗಂಟಿಹೊಳೆ ಅಧ್ಯಕ್ಷತೆ ವಹಿಸಿದ್ದರು. ಶ್ರೀವಾಣಿ ವಿದ್ಯಾಭಿವೃದ್ಧಿ ಸಂಘ ನಡೂರಿನ ಗೌರವ ಮಾರ್ಗದರ್ಶಕರಾದ ಪ್ರೊ. ಸಖಾರಾಮ ಸೋಮಯಾಜಿ, ಶ್ರೀವಾಣಿ ವಿದ್ಯಾಭಿವೃದ್ಧಿ ಸಂಘ ನಡೂರಿನ ಆಡಳಿತಾಕಾರಿ ಎಂ. ವಿಶ್ವನಾಥ ಶೆಟ್ಟಿ, ಹೆಪ್ಪಿ ವರ್ಲ್ಡ್ ಪ್ರವರ್ತಕರಾದ ಸಂತೋಷ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಸ್ಥೆಯ ಸದಸ್ಯರಾದ ಪ್ರೊ. ಕೆ. ಸದಾಶಿವ ರಾವ್, ಯು. ವಿಶ್ವನಾಥ ಶೆಣೈ, ಯು.ಎಸ್. ರಾಜಗೋಪಾಲ ಆಚಾರ್ಯ, ಭುವನ ಪ್ರಸಾದ ಹೆಗ್ಡೆ, ಅನಂತರಾಜ ಉಪಾಧ್ಯಾಯ, ಪ್ರಭಾಕರ ಬಂಡಿ, ಜಯರಾಮ ಪಡಿಯಾರ್, ವಿನೋದಾ ಎಂ., ಯಕ್ಷಗಾನ ಕಲಾವಿದ ಉಮೇಶ್ ನಾಯ್ಕ್, ಸಾಮಾಜಿಕ ಕಾರ್ಯಕರ್ತರಾದ ಪ್ರವೀಣ್ ಶೆಟ್ಟಿ, ವಿದ್ಯಾಧರ ಶೆಟ್ಟಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ನಾರಾಯಣ ಎಂ. ಹೆಗಡೆ ವಂದಿಸಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ಪ್ರಸ್ತಾವನೆಯ ಮಾತುಗಳೊಂದಿಗೆ ಕಾರ್ಯಕ್ರಮ ನಿರೂಪಿಸಿದರು.

ವಿಬಿ ಜಿ ರಾಮ್ ಜಿ ಕಾಯ್ದೆ ಖಂಡಿಸಿ ಉಡುಪಿ ಕಾಂಗ್ರೆಸ್ ಪ್ರತಿಭಟನೆ

ಬಡವರಿಗೆ ಅನ್ಯಾಯ: ಸೊರಕೆ ಆರೋಪ

ಉಡುಪಿ: ಕೇಂದ್ರ ಸರ್ಕಾರ ಮನರೇಗಾ ಯೋಜನೆಯ ಸ್ವರೂಪವನ್ನು ವಿಬಿ ಜಿ ರಾಮ್ ಜಿಯಾಗಿ ಬದಲಾಯಿಸುವ ನೀತಿ ಖಂಡಿಸಿ ಉಡುಪಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಮಣಿಪಾಲದ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ಮಣಿಪಾಲದ ಕಾಯಿನ್ ಸರ್ಕಲ್‌ನಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಕಾರರು ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.



ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ ಕುಮಾರ್ ಸೊರಕೆ ಮಾತನಾಡಿ, ಕೇಂದ್ರ ಸರ್ಕಾರವು ಮನರೇಗಾ ಯೋಜನೆಯ ಸ್ವರೂಪವನ್ನು ಬದಲಾಯಿಸುವ ಮೂಲಕ ಬಡವರಿಗೆ ಅನ್ಯಾಯ ಮಾಡುತ್ತಿದೆ ಎಂದರು.

ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಪ್ರಮುಖರಾದ ಎಂ.ಎ.ಗಫೂರ್, ಉದಯ್ ಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.